START

START

START

MICROFILMED
BY
KARNATAKA STATE
ARCHIVES
BANGALORE
CAMP: DHARWAD.
1991

MICROFILMED
BY
KARNATAKA STATE
ARCHIVES
BANGALORE
CAMP: DHARWAD.
1991

ಕರ್ನಾಟಕ ವಿದ್ಯಾವರ್ಧಕ ಸಂಘ
ಧಾರವಾಡ
ಸಂಸ್ಥೆಯವರ ಐತಿಹಾಸಿಕ
ದಾಖಲೆಗಳು ಮತ್ತು ಪತ್ರಿಕೆಗಳು
FILE NO: ARS 27 APP 89.

ಕರ್ನಾಟಕ ವಿದ್ಯಾವರ್ಧಕ ಸಂಘ
ಧಾರವಾಡ
ಸಂಸ್ಥೆಯವರ ಐತಿಹಾಸಿಕ
ದಾಖಲೆಗಳು ಮತ್ತು ಪತ್ರಿಕೆಗಳು
FILE NO: ARS 27 APP 89.

ದಿನಾಂಕ 29.4.91 ರಂದು ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ, [illegible] ಹೆಸರು ಕಾಲ ಮತ್ತು [illegible]

ಕ್ರಮ ಸಂಖ್ಯೆ	[illegible] ಹೆಸರು	[illegible]	ಒಟ್ಟು ಪುಟಗಳು
1	[illegible]	[illegible] 1866	1 ಪುಟಗಳು
2	[illegible]	1888	2 ಪುಟ
3	[illegible]	13.8.1862	2 ಪುಟ
4	ಲೋಕ ಶಿಕ್ಷಣ	23.12.1929	6 ಪುಟ
5	ಸಂಸ್ಥಾನ ಸ್ವರಾಜ್ಯ	3.7.1946	4 ಪುಟ
6	ದಿ ವಿಭಾಕರ (ಇಂಗ್ಲೀಷ ಮತ್ತು ಕನ್ನಡ ಮಿಶ್ರ ಪತ್ರಿಕೆ)	27.1.1922	8 ಪುಟ
7	ಸಂಪತ್	8.11.1951	4 ಪುಟಗಳು
8	ಸೇವಕ	31.10.1951	2 ಪುಟಗಳು
9	ಸ್ವತಂತ್ರ ಕರ್ನಾಟಕ	20.10.1939	25 ಪುಟಗಳು
10	ಹುಬ್ಬಳ್ಳಿ ಗೆಜೆಟ್	15.2.1941	18 ಪುಟಗಳು
11	ನವಭಾರತ (ಸಮ್ಮೇಳನಾಂಕ)	1944	40 ..
12	ಸಾಪ್ತಾಹಿಕ ಸ್ವರಾಜ್ಯ ವೃತ್ತ	1–10–1973	8 ..

13	ಪ್ರಾರ್ಥನೆ	6 – 4 – 1928	4 ಪುಟಗಳು
14	[illegible]	14 – 9 – 1957	6 ಪುಟಗಳು
15	[illegible]	21–12–1941	10 ಪುಟಗಳು
16	[illegible]	[illegible] 1951	4 ಪುಟಗಳು
17	[illegible]	20–11–1952	16 ಪುಟಗಳು
18	[illegible]	29 – 2 – 1952	2 ಪುಟಗಳು
19	[illegible]	13–12–1952	6 ಪುಟಗಳು
20	[illegible]	25 – 5 – 1952	16 ಪುಟಗಳು
21	[illegible]	22–11–1959	16 ಪುಟಗಳು
22	[illegible]	23–6–1959	4 ಪುಟಗಳು

THE SANDESH
Editor- G. A. Deshpande.
Printed by K. G. Joshi,
at the [illegible] Press,
[illegible] Belgaum
and Published by
G. A. Deshpande
at the same place

ಸಂದೇಶ

SANDESH, BELGAUM.

[illegible] Published Every Monday and Friday.

Regd. No. B 4155

ಚಂದಾದರ
[illegible]

[illegible] Belgaum 17-12-1951

ಸಂಚಿಕೆ [illegible]

KARNATAKA VIDYAVARDHAKA SANGHA
ಧಾರವಾಡ

[illegible]

ಭಾಷಣವನ್ನು ಪ್ರಾರಂಭಿಸಿ, ಮೊದಲಲ್ಲಿ ಕರ್ನಾಟಕ ಸಂಘಗಳ ಕಾರ್ಯ[illegible]

[illegible] ಸಂಸ್ಕೃತಿ ಇರಬೇಕು [illegible] ತಮಗೆ ತಾವೇ ನಿರ್ಬಂಧವನ್ನು ಹಾಕಿಕೊಳ್ಳಬೇಕು ಎಂದರೆ ಶಕ್ತಿ. ವಿದ್ಯಾವಂತಿಕೆ, ಅಭ್ಯಾಸ, ಮತ್ತು ನುರಿತವರೊಂದಿಗೆ ಸಹವಾಸ ಇವು ನಾಲ್ಕು ಜೀವನ ಸ್ಥಿತಿ [illegible] ಬಾಗಿತ್ತು.

ಸದ್ಭಾವನಾ ಸಪ್ತಾಹ

[illegible] ಮತ್ತು [illegible] ಡಿಸೆಂಬರ ೧೭ ರಿಂದ ೨೩ ಪೂರ್ಣ ವಾರ ಭಾರತದಲ್ಲೆಲ್ಲ ಕಳೆದ ವರುಷ ೧೯೫೦ ಅಗಸ್ಟ ತಿಂಗಳಲ್ಲಿ ಆಚರಿಸಿದಂತೆ, ‟ಸದ್ಭಾವನಾ ಸಪ್ತಾಹ" ವನ್ನು ಆಚರಿಸ ಬೇಕೆಂದು ನಿರ್ಧರಿಸಿದೆ.

ಕಾಂಗ್ರೆಸ
ಹುರಿಯಾಳುಗಳಿಗೆ
ಮತಕೊಡಿರಿ



ಈ ಚಿಹ್ನವಿದ್ದ ಪೆಟ್ಟಿಗೆಯಲ್ಲಿಯೇ
ನಿಮ್ಮ ಮತಹಾಕಿರಿ

ಕಾಂಗ್ರೆಸ್ಸಿಗೇ ಮತ ಕೊಡಿರಿ

ಬನ್ನಿರಿ ಬನ್ನಿರಿ
ಮತಗಳ ತನ್ನಿರಿ
ಕಾಂಗ್ರೆಸ ಪಕ್ಷಕೆ
ನಿಮ್ಮಯ ನೆಚ್ಚಿನ ಪಕ್ಷಕೆ

ಕಷ್ಟವ ಸಹಿಸಿದೆ
ದಣಿಯದೆ ದುಡಿದಿದೆ
ನಿಮ್ಮೀ ಕಾಂಗ್ರೆಸು
ಜನಹಿತ ಕಾಂಗ್ರೆಸು

ಸತ್ಯ ಅಹಿಂಸೆಗಳ ತತ್ವವ ಸಾರಿ
ಬ್ರಿಟಿಶರನೋಡಿಸಿತು
ಭಾರತ ವಾಸಿಗಳು ಸ್ವತಂತ್ರರೆಂಬ
ಹಕ್ಕನು ಕೊಟ್ಟಿತು

ಟೀಕೆಗೆ ಅಂಜದೆ
ಬೆದರಿಕೆ ಗಂಜದೆ
ಜನಹಿತ ಬಗೆಯುತಿದೆ
ನಿಮ್ಮಯ ಕಾಂಗ್ರೆಸು

ಅನ್ನದ ಅಡಚಣೆಯನು
ದೂರ ಮಾಡಲೆತ್ನಿಸಿತು ಕಾಂಗ್ರೆಸು
ನಿರಾಶ್ರಿತರ ಕೂಗನು
[illegible] ಕಾಂಗ್ರೆಸು

ಹಗಲಿರುಳೆನದೆ
ದುಡಿಯುವ ಕಾಂಗ್ರೆಸು
ಜನಹಿತ ಒಂದೇ ತನ್ನಯ
ಕರ್ತವ್ಯವೆನ್ನುವ ಕಾಂಗ್ರೆಸು

ಬನ್ನಿರಿ ಬನ್ನಿರಿ
ಮತಗಳ ತನ್ನಿರಿ
ಕಾಂಗ್ರೆಸ ಪಕ್ಷಕೆ
ನಿಮ್ಮಯ ನೆಚ್ಚಿನ ಪಕ್ಷಕೆ.

—ಚೌಗಲೆ ಶಶಿಕುಮಾರ,
ಬೆಳಗಾವಿ.

ಅಝಾದ ಟಾಕೀಜ, ಟಿಳಕವಾಡಿ.
ಶುಕ್ರವಾರ ತಾ. ೧೪ ಡಿಸೆಂಬರದಿಂದ
ಭಯಂಕರ ಜನದಟ್ಟಣೆಯಲ್ಲಿ ನಡೆದಿರುವ ೨ ನೇ ವಾರ
ಆಯನಾ ಪಿಕ್ಚರ್ಸದವರ ಸಂಗೀತದಿಂದ ತುಂಬಿತುಳುಕುವ ಅಪ್ರತಿಮ ಕೌಟುಂಬಿಕ ಹಿಂದೀ ಚಿತ್ರ
गुमास्ता
लिबर्टी प्रकाशन ★
ಗುಮಾಸ್ತಾ
ಅರ್ಥಾತ
ಗೃಹಲಕ್ಷ್ಮಿ
ಸಂಗೀತ—ಕೆ ದತ್ತ
ದಿಗ್ದರ್ಶಕ—ಎಸ್ ಎಮ್. ಯುಸೂಫ
[illegible] ಎಲ್ಲರಿಗೂ [illegible] -
ಶೋಭಾ ಬಿ. ಎ. ಇದ್ದಾಗ್ಯೂ ಓರ್ವ ಆದರ್ಶ ಗೃಹಿಣಿಯು, [illegible] ಎಂದು
[illegible]
ಅದು ಕಾರಣವೇ [illegible] ನೋಡುವ ಚಿತ್ರವಿದು
ಕಲಾಕಾರರು: ನಿಗಾರ, ವಾಸ್ತಿ, ಕುಲದೀಪ, ಹುಸ್ನ ಬಾನು, ಮಿರ್ಝಾ ಮುಶರ್ರಫ

ಚುನಾವಣೆ ಮುನ್ನನಾಡ ಬೇಕಾದ ಸಿದ್ಧತೆಗಳು

([illegible])

[illegible] ಮತದಾರರಲ್ಲಿ ಹಂಚಬೇಕು. ಮತಪೆಟ್ಟಿಗೆಯಲ್ಲಿ ಮತಪತ್ರ ಹೇಗೆ ಹಾಕಬೇಕೆಂಬುದನ್ನು ತಿಳಿಹೇಳಬೇಕು. ದ್ವಿಪ್ರಾತಿನಿಧ್ಯವಿದ್ದ ಮತದಾರ ಸಂಘದಲ್ಲಿ ಪ್ರತಿಯೊಬ್ಬ ಮತದಾರನಿಗೆ ಮತಪತ್ರ ದೊರೆಯುವವು. ಅವನ್ನು ಬೇರೆ ಬೇರೆ ಮತಪೆಟ್ಟಿಗೆಯಲ್ಲಿ ಹಾಕಬೇಕೆಂದು ಕಾಯ್ದೆ ನಿರ್ಬಂಧವಿರುವದರಿಂದ, ಅವುಗಳಲ್ಲಿ ಒಂದು ಸಾಮಾನ್ಯ ಸ್ಥಳದ ಕಾಂಗ್ರೆಸ ಹುರಿಯಾಳಿಗೂ ಮತ್ತೊಂದು ಕಾಯ್ದಿಟ್ಟ ಸ್ಥಳದ ಕಾಂಗ್ರೆಸ ಹುರಿಯಾಳಿಗೂ ಹಾಕಬೇಕು. ಮತದಾರರು ಎರಡೂ ಮತಪತ್ರ ಒಂದರಲ್ಲೇ ಹಾಕಿದರೆ ಒಂದು ರದ್ದಾಗುವದು. ಮತದಾರರು ತಮ್ಮ ಮತಪತ್ರ ಮುದ್ದೆಯಾಗದಂತೆ ಇಟ್ಟುಕೊಳ್ಳಬೇಕು. ಅಂದರೆ ಮತಪೆಟ್ಟಿಗೆ ಮೇಲಿನ ತೂತಿನಲ್ಲಿ ಹಾಕಲು ತೊಂದರೆಯಾಗುವದಿಲ್ಲ. ಮತಪತ್ರವನ್ನು ಹೊರಗೆ ಎಲ್ಲಿಯೂ ಬೀಳದಂತೆ ಮತಪೆಟ್ಟಿಗೆ ಮೇಲೆ [illegible] ಗುರುತ ಮಾಡಿದ ತೂತಿನಲ್ಲಿ [illegible] ದಂತೆ ಮತದಾರನಿಗೆ ತಿಳಿಸಬೇಕು. [illegible] ಪೆಟ್ಟಿಗೆ ಮೇಲೆ [illegible] ಬಿಟ್ಟು ಬಂದರೆ ತಮ್ಮ ವಿರೋಧಿ [illegible] ಬೆಂಬಲಿಗರು ಅವನ್ನು ವಿರೋಧಿ ಪಕ್ಷದ ಹುರಿಯಾಳುವಿಗೆ ಹಾಕಬಹುದು. ಇದರಿಂದ ನಮಗೆ ಎರಡು ಬಗೆ [illegible] ಹಾನಿಯೊದಗುವದು. [illegible] ಅನೇಕ ಮತಗಳು ನಾಶವಾಗುವವು. ಪ್ರತಿಪಕ್ಷದವರಿಗೆ ಅನೇಕ ಮತ ಹೆಚ್ಚಿಗೆ ದೊರೆಯುವದು.

ಸಧ್ಯವಿದ್ದರೆ ಕೆಲವು ಕಟ್ಟಿಗೆಯ ಅಥವಾ ತಗಡಿನ ಮತಪೆಟ್ಟಿಗೆಗಳನ್ನು ತಯಾರಿಸಿ ಪ್ರತಿಯೊಂದು ಪೆಟ್ಟಿಗೆಯ ಮೇಲೆ [illegible]

[illegible]

[illegible]

ಸ್ವೀಕಾರ

ಸಾರ್ಥನಿತ್ಯ ಪಾಠದ ಅಭಂಗಗಳು:

ಲೋಕಸೇವಾ ಗ್ರಂಥಮಾಲಾ ಪುಷ್ಪ ೧. ಮುದ್ರಕರು ಮತ್ತು ಪ್ರಕಾಶಕರು— ಶ್ರೀ. ಪಿ. ಆರ್. ಪವಾರ ಫೋಟೋ ಝಿಂಕೋ ಪ್ರೆಸ್, ಬೆಳಗಾವಿ ಬೆಲೆ ಮೂರಾಣೆ. ಇಪ್ಪತ್ತು ಪುಟಗಳನ್ನು ಧರಿಸಿದ ಈ ಪುಟ್ಟ ಪುಸ್ತಿಕೆಯಲ್ಲಿ ಸಂತತುಕಾರಾಮ ಮಹಾರಾಜರ ಅಭಂಗಗಳನ್ನು ಸಂಗ್ರಹಿಸಿ ಕೊಡಲಾಗಿದೆ. ಮರಾಠಿ ಅಭಂಗಗಳನ್ನು ಕನ್ನಡ ಲಿಪಿಯಲ್ಲಿ ಮುದ್ರಿಸಿ ಅದರ ಕೆಳಗೆ ಕನ್ನಡದಲ್ಲಿ ಅಭಂಗದ ಭಾವಾರ್ಥ ಕೊಡಲಾಗಿದೆ. [illegible]

ಡಾ. ಬೈಲೂರ

ಸ್ಪೆಸಿಫಿಕ್ ಕಂಪನಿ ಬೆಳಗಾಂವ ಇವರ

ಬಾಲಗ್ರಹ ಚೂರ್ಣ

ಅಪಸ್ಮಾರ. ಆಂಕಡಿ ಮತ್ತು ಮಲರೋಗ
ಇವುಗಳ ಮೇಲೆ ರಾಮಬಾಣ

ಮಳೆಬೆಳೆ ವಾರ್ತೆ

ಡಿಸೆಂಬರ ೫ ಕ್ಕೆ ಕೊನೆಗೊಂಡ ವಾರದಲ್ಲಿ ಕರ್ನಾಟಕದ ನಾಲ್ಕೂ ಜಿಲ್ಹೆಗಳಲ್ಲಿ ಎಲ್ಲಿಯೂ ಮಳೆಯಾಗಲಿಲ್ಲ. ಧಾರವಾಡ ಜಿಲ್ಹೆಯಲ್ಲಿ ವಿಶೇಷ ಚಳಿಬಿದ್ದಿದೆ. ನಾಲ್ಕು ಜಿಲ್ಹೆಗಳಲ್ಲಿ ಸಿಂತ ಬೆಳೆಗಳ ಪರಿಸ್ಥಿತಿ ಸರ್ವಸಾಧಾರಣ ನೆಟ್ಟಗಿದ್ದಿತು. ಬೆಳಗಾವಿ ಜಿಲ್ಹೆಯಲ್ಲಿ ತೋಟದ ಪೈರುಗಳು ಉತ್ತಮವಿದ್ದವು. ವಿಜಾಪೂರ ಜಿಲ್ಹೆಯ ಬಾದಾಮಿ, ಜಮಖಂಡಿ ಹಾಗು ಬಾಗೇವಾಡಿ ತಾಲೂಕಿನಲ್ಲಿ ಹಸಿಯಿಲ್ಲದ್ದರಿಂದ ಬೆಳೆಗಳು ಒಣಗತೊಡಗಿದವು. ಬೆಳಗಾವಿ ವಿಜಾಪೂರ ಜಿಲ್ಹೆಗಳಲ್ಲಿ ಹಿಂಗಾರಿ ಬೆಳೆಗೆ ಮಳೆ ಅಗತ್ಯವಿತ್ತು. ವಿಜಾಪೂರ ಜಿಲ್ಹೆಯಲ್ಲಿ ಮುಂಗಾರಿ ಬೆಳೆ [illegible] ಕಾರ್ಯ ಮುಗಿದಿತು. ಧಾರವಾಡ ಜಿಲ್ಹೆಯಲ್ಲಿ ಹತ್ತಿ ಹಾಗು ಮುಂಗಾರಿ ಜೋಳದ ಕೊಯ್ಲು ನಡೆಯಿತು. ಬೆಳಗಾವಿ ಜಿಲ್ಹೆಯಲ್ಲಿ ಶೇಂಗಾ [illegible] ಕಾರ್ಯ ನಡೆಯಿತು. ಉತ್ತರ ಕನ್ನಡ ಜಿಲ್ಹೆಯಲ್ಲಿ [illegible] ಕೊಯ್ಲು [illegible] ಉತ್ತರ ಕನ್ನಡ ಜಿಲ್ಹೆಯಲ್ಲಿ ಹಿಂಗಾರಿ ಬತ್ತದ ಬಿತ್ತಿಗೆ ಮುನ್ನಡೆಯಿತು. ಬೆಳಗಾವಿ ಜಿಲ್ಹೆಯಲ್ಲಿ ಹಿಂಗಾರಿ ಜೋಳದ ಹಾಗು ಹತ್ತಿ ಬೆಳೆಯಲ್ಲಿ ಎಡೆಹೊಡೆಯಲಾಯಿತು ಮಣ್ಣಿನಲ್ಲಿ ಹಸಿ ಇಲ್ಲದುದರಿಂದ ವಿಜಾಪೂರ ಜಿಲ್ಹೆಯಲ್ಲಿ ಎಲ್ಲ ಹಿಂಗಾರಿ ಬೆಳೆಗಳಿಗೂ ಧಕ್ಕೆ ತಗಲಿದೆ. ಕರ್ನಾಟಕ ಜಿಲ್ಹೆಗಳಲ್ಲಿ ಎಲ್ಲಿಯೂ ಕುಡಿಯುವ ನೀರಿನ ಇಲ್ಲವೆ ಮೇವಿನ ಕೊರತೆಯೆನಿಸಲಿಲ್ಲ. ದನಗಳ ಪರಿಸ್ಥಿತಿ ಚನ್ನಾಗಿದೆ. ಸಿದ್ದಾಪೂರ ತಾಲೂಕಿನ ಮೂರು ಹಳ್ಳಿಗಳಲ್ಲಿ ಕಾಲುಬೇನೆ ಬಾಯಿಬೇನೆಯು ೨೨ ದನಗಳನ್ನು ಬಾಧಿಸಿತ್ತು. ಅದರೆ ಎಲ್ಲವೂ ಬದುಕಿದವು.

ಆರೋಗ್ಯವಾರ್ತೆ

ಡಿಸೆಂಬರ ೧೫ ಕ್ಕೆ ಕೊನೆಗೊಂಡ ವಾರದಲ್ಲಿ ಮುಂಬೈ ರಾಜ್ಯದಲ್ಲಿ ಕಾಲರಾ ಹಾವಳಿ ಬಹಳ ಕಡಿಮೆಯಾಯಿತು. ಆ ವಾರ ಮೂವರಿಗೆ ಕಾಲರಾ ಬೇನೆ ತಗಲಿ ಇಬ್ಬರು ಮರಣಹೊಂದಿದರು. ವಿಜಾಪೂರ ಜಿಲ್ಹೆಯ ಅಂಕಿಸಂಖ್ಯೆ ೧ ಇತ್ತು ಕಾಲರಾ ಹಾವಳಿ ಇರುವ ಹಾಗು [illegible] ಪ್ರದೇಶಗಳಲ್ಲಿ ಪ್ರತಿಬಂಧಕೋಪಾಯಗಳನ್ನು ಕೈಕೊಳ್ಳಲಾಗುತ್ತಿದೆ. ಆವಾರ ೨೫ ಜನರಿಗೆ ಮೈಲೀಬೇನೆ ಬಂದು ೮ ಜನರು ಮರಣಹೊಂದಿದರು. ವಿಜಾಪೂರ ಜಿಲ್ಹೆಯಲ್ಲಿ ನಾಲ್ವರು ಮೈಲೀಬೇನೆಯಿಂದ ಬಳಲಿದರು. ರಾಜ್ಯದಲ್ಲಿ ಪ್ಲೇಗಿನ ಸುಳಿವಿಲ್ಲ. ಮುಂಬೈ ಆಹಾರ ಕಲಬೆರಕೆ ಕಾಯ್ದೆಯನ್ವಯ ಆವಾರ ೧೩೧ ಖಟ್ಲೆಗಳಲ್ಲಿ ಅಪಾದಿತರಿಗೆ ಶಿಕ್ಷೆಯಾಗಿ ೭೭೩೫ ರೂ. ದಂಡ ವಸೂಲಾಯಿತು.

ಹುದಲಿ

ದಿ. ೧೨ ರಂದು ಇಲ್ಲಿಯ ವಿವಿಧ ಉದ್ದೇಶಗಳ ಸಹಕಾರಿ ಸಂಘದ ವಖಾರ ಕಟ್ಟಡದ ಅಡಿಗಲ್ಲು ಇಡುವ ಸಮಾರಂಭವು ಶ್ರೀ. ಪಿ. ಜೆ. ಚನ್ನಮುಳುಗುಂದ ಆಯ್. ಸಿ. ಎಸ್. ರಜಿಸ್ಟ್ರಾರ ಸಹಕಾರಿ ಸಂಘ ಮುಂಬೈ ರಾಜ್ಯ ಪುಣೆ ಇವರ ಹಸ್ತದಿಂದ ಜರುಗಿತು. ಈ ಸಮಾರಂಭಕ್ಕೆ ಸುತ್ತಲಿನ ಯಾವತ್ತೂ ಸಹಕಾರಿ ಸಂಘಗಳ ಮೆಂಬರರೂ, ಜಿಲ್ಹೆಯ ಸಹಕಾರಿ ಅಧಿಕಾರಿಗಳೂ ಡಿ. ಸಿ. ಕೋ. ಬ್ಯಾಂಕಿನ ದಿಗ್ದರ್ಶಕ ಮಂಡಳದವರೂ ಆಗಮಿಸಿದ್ದರು,

ಮತದಾನ ಕೈಪಿಡಿ

ಪ್ರತಿಯೊಬ್ಬ ಉಮೇದವಾರ ಮತ್ತು ಪೋಲಿಂಗ ಏಜಂಟನ ಕೈಯಲ್ಲಿ ಅವಶ್ಯವಾಗಿರತಕ್ಕ ಪುಸ್ತಕ ಚುನಾವಣೆಯ ತಂತ್ರದ ಬಗ್ಗೆ ಎಲ್ಲ ವಿವರಗಳನ್ನು ಸಾಧಾರಣವಾಗಿ ವಿವರಗೊಳಿಸಿದೆ,

ಬರೆದವರು—ಆರ್. ಕೆ. ಕುಲಕರ್ಣಿ
ಬಿ. ಎ. ಎಲ್ಎಲ್. ಬಿ.

ಬೆಲೆ ೦—೬—೦

ಮನಿಯಾರ್ಡರನಿಂದ ಮುಂಗಡ ಹಣ ಕಳಿಸಿ ತರಿಸಿಕೊಳ್ಳಿರಿ.

ದೊರೆಯುವ ಸ್ಥಳ—ಭುವನೇಶ್ವರಿ ಪ್ರೆಸ್ ಮಾರುತಿಗಲ್ಲಿ
ಬೆಳಗಾವಿ

ಹಾಗೂ

ಖಾದಿ ಭಾಂಡಾರ, ಗಣಪತಗಲ್ಲಿ- ಬೆಳಗಾವಿ

ವಾರದ ಭವಿಷ್ಯ

[illegible]

ಸಿಂಹ [illegible]

[illegible]

ಕರ್ತೃ ಸಹಾಯ ಅನುಕೂಲ ದೊರೆ ಯುವೇ ಅರ್ಧಮರ್ಧಮಟ್ಟಿಗೆ ಕಾರ್ಯವು ತೋರುವದು. ವಿಶೇಷ ಪರಿಶ್ರಮ ನಡಿಸುವದೇ ಈ ವಾರದ ಸಂದೇಶ.

ತಾ. ೧೯, ೨೧ ೨೨, ಅನುಕೂಲ ಊಟ ದಲ್ಲಿ ಸುಖ. ಸ್ವಲ್ಪ ಭಯ

ಮಿಥುನ— ಈ ರಾಶಿಯವರಿಗೆ ಮುಖ್ಯವಾಗಿ ಪ್ರವಾಸ ನೌಕರಿಗಳಲ್ಲಿ ತೊಂದರೆ ದುಷ್ಟವ್ಯಕ್ತಿಗಳ ಸಹವಾಸದಿಂದ ಮನಸ್ಸಿಗೆ ಅಸಮಾಧಾನ ಯಾವದೇ ಒಂದು ದೊಡ್ಡ ಕೆಲಸ ಮಾಡ ಹೋದರೆ, ಶತ್ರುಭಯ, ಕಲಹ, ಅಪಘಾತ ಮುಂತಾದ ಭಯಾನಕಗಳು ಚುನಾವಣೆಯ ಪ್ರಚಾರದಲ್ಲಿ ತೋರಬಹುದಾಗಿದೆ. ಜಾಗ್ರತೆಯಾಗಿರುವದೇ ಈ ವಾರದ ಸಂದೇಶ.

ತಾ. ೧೯ ಉತ್ತಮ. ೨೦, ೨೧, ೨೨ ಮಧ್ಯಮ ಭೀತಿಯೋಗ

ಕರ್ಕ— ಈ ರಾಶಿಯವರಿಗೆ ಉದ್ಯೋಗ ನೌಕರಿ ದಂಧೆಗಳಲ್ಲಿ ಪ್ರಗತಿ ಕೋರ್ಟ ಕಚೇರಿ ಕಾರ್ಯಗಳಲ್ಲಿ ವಿಜಯ ತೋರಿದರೂ ಶತ್ರುಗಳು ಮಿತ್ರರಂತೆ ತೋರಬಹುದಾಗಿದೆ. ಪಂಡಿತ ನೆಹರೂರವರ ರಾಶಿ ಜನ್ಮರಾಶಿ ಇದೇ. ಪ್ರವಾಸ ಉದ್ಯೋಗದ ಕಾರ್ಯಗಳು ಕರ್ನಾಟಕದಲ್ಲಿ ಉಂಟಾಗಿ ಈ ರಾಶಿಯವರು ಈ ಚುನಾವಣೆಯ ಕಾರ್ಯದಲ್ಲಿ ತೊಡಗಿದವರಿಗೆ ನೆಹರೂರವರ ಸಂದೇಶವೇ ಮುಖ್ಯ ಸಂದೇಶ,

ತಾ. ೨೧, ೨೨ ನೆಟ್ಟಗೆ ಕಾರ್ಯಾನುಕೂಲ. ಗೌರವ.

ಸಿಂಹ- ಈ ವಾರ ನೂತನ ಉದ್ಯೋಗ ಜವಾಬ್ದಾರೀ ಕೆಲಸಕ್ಕೆ ತೊಂದರೆ ಶತ್ರುಗಳವೃದ್ಧಿ ಅಧಿಕವಸ್ತ್ರೀಪುತ್ರಾದಿ ಅನೇಕ ಖರ್ಚಿನ ಪ್ರಸಂಗದಿಂದ [illegible]

[illegible]

ತುಲಾ— ಈ ರಾಶಿಯವರಿಗೆ ಕೋರ್ಟ ಕಚೇರಿ ಕಾರ್ಯಗಳಲ್ಲಿ ಸಂಶಯವಾಗಿ ವೇಳೆ ಸರಿಯಲ್ಲ. ಪ್ರಾಪಂಚಿಕ ಸುಖ ದೊರೆಯದೇ ಸ್ತ್ರೀಪುತ್ರಾದಿಕರಿಗೆ ರೋಗ ಭಯ ಆರ್ಥಿಕ ಅಡಚಣಿ ಮುಗ್ಗಟ್ಟುವದು. ಅಧಿಕಾರ ನೌಕರೀ ವರ್ಗದಲ್ಲಿ ಭಯಾನಕಗಳು ತೋರುವವು ಆದರೆ ಈ ರಾಶಿಯಿಂದ ಶೋಭಿಸಿ ಚುನಾವಣಿ ರಂಗದಲ್ಲಿ ಆಹಾರ ನಿದ್ರೆ ಮರಿವೆಗಳಿಲ್ಲದೇ ವೇಳೆ ಕಳೆಯುವ ಪ್ರಸಂಗ ಬರುವದು. ಆದರೆ ಶ್ರೀಶನಿದೇವನ ಆರಾಧನೆ ಕೈಕೊಂಡು ವಿಜಯ ಸಂಪಾದಿಸುವದೆ ಈ ವಾರದ ಸಂದೇಶ

ತಾ. ೧೮, ೧೯ ಅನುಕೂಲ ೨೦, ೨೧ ೨೨ ಸರ್ವಾನುಕೂಲಕ್ಕೆ ತೊಂದರೆ.

ವೃಶ್ಚಿಕ— ಈ ವಾರ ಸತ್ಪುರುಷರ ದರ್ಶನ ಪ್ರಯತ್ನ ಕಾರ್ಯ ಸಿದ್ಧಿ ಸ್ತ್ರೀ ಪುತ್ರಾದಿಕರಿಗೆ ಸೌಖ್ಯವಧುವರರ ವಿವಾಹ ಯೋಗ ಮನಸ್ಸು ಆನಂದ ಉದ್ಯೋಗ ವ್ಯಾಪಾರದಲ್ಲಿ ಲಾಭ ಸರಿಯಾಗಿದ್ದು [illegible] ಕಾರ್ಯಗಳ ವಿಜಯವಿರುವದು [illegible] ಚುನಾವಣೆಯ ಕಾರ್ಯದಲ್ಲಿ ನೀವು ಅವಶ್ಯವಾಗಿ ಬೆಂಬಲ ಸಹಾಯ ನೀಡುವದೇ ನಿಜವಾದ ಸಂದೇಶವಾಗಿದೆ.

ತಾ. ೧೭, ೧೮ ನೆಟ್ಟಗೆ ೨೦, ೨೧ ಮಧ್ಯಮ ೨೨ ತೊಂದರೆ.

ಧನು— ಈ ರಾಶಿಯವರಿಗೆ ಕೋರ್ಟ ಕಚೇರಿ ಕೆಲಸದಲ್ಲಿ ತಕ್ಕಮಟ್ಟಿಗೆ ಫಲ ಪ್ರಾಪ್ತಿ ಉದ್ಯೋಗ ವ್ಯವಹಾರ ದಂಧೆಗಳಲ್ಲಿ ಲಾಭ ಆದರೆ ಹಿಂದಿನ ಕಷ್ಟಕಾಲವನ್ನು ಮರೆಯಬೇಡಿರಿ. ನಿಮಗೆ ಸರಿಯಾಗಿ ಉದ್ಯೋಗದಲ್ಲಿ ಯಶವಿರುವದರಿಂದ [illegible]

ಮಕರ— ಈ ವಾರ ದುರ್ಜನರ ಸಹವಾಸ ಚಿತ್ತ ಚಂಚಲ ಮನೋವಿಕಾರ ಅಸಮಾಧಾನ ಮುಂತಾದವುಗಳು ಜರಗುವವು ಕೋರ್ಟ ಕಚೇರಿ ಕಾರ್ಯಗಳ [illegible] ಸರದಾರರು [illegible] ವಣೆಯರಂಗ ಪ್ರತಿಯೊಂದು ಗ್ರಾಮ ಗ್ರಾಮಗಳಲ್ಲಿ ಆಷ್ಟೊಂದು ಪ್ರಜ್ವಲಿಸದೇ ಇದ್ದರೂ 'ಸ್ವಾತ್ಮಂತೆ ಪರಮೇಶ್ವರ" ಎಂಬ ವಾಕ್ಯವನ್ನು ಪರಿಪಾಲನೆಮಾಡುವದೇ ಈ ವಾರದ ಸಂದೇಶ.

ತಾ. ೧೮, ೧೯ ಧನವ್ಯಯ ೨೦, ೨೧ ಗೌರವ ೨೨. ೨೩ ಭೀತಿ.

ಕುಂಭ— ಈ ರಾಶಿಯವರಿಗೆ ಬುದ್ಧಿ ವಿಕಾಶವಾಗದೇ ನೂತನ ವ್ಯವಹಾರ ಉದ್ಯೋಗದಲ್ಲಿ ಎಚ್ಚರಿಕೆ ಯತ್ನಕಾರ್ಯ ಸಿದ್ಧಿ ಪುಣ್ಯಕ್ಷೇತ್ರ ದರ್ಶನ ಗುರುದೇವತಾಪೂಜೆ ಮೊದಲಾದ ಸತ್ಕಾರ್ಯಗಳನ್ನು ಮಾಡಿ ಚುನಾವಣೆಯ ಕಾರ್ಯದಲ್ಲಿ ಮನಸ್ಸುಂಟು ಮಾಡಬೇಕು ಅಸ್ವಾತಂತ್ರ್ಯ [illegible] ಬೀಳುವ ಜನರಿಗೆ ಸದ್ಬುದ್ಧಿ ಕೊಡುವ ಗುರುವಿನ ಕೃಪೆಯೇ ಈ ವಾರದ ಸಂದೇಶ.

ತಾ. ೧೮, ೧೯. ೨೦ ನೆಟ್ಟಗೆ ೨೧, ೨೨, ೨೩ ಚಿಂತೆ ಸ್ವಲ್ಪ ಶಾಂತಿ.

ಮೀನ— ಈ ವಾರ ಉದ್ಯೋಗ ದಂಧೆ ಪ್ರವಾಸದಲ್ಲಿ ಜಾಗ್ರತೆ ಆರ್ಥಿಕ ಅಡಚಣೆ ಇದ್ದೇ ಇರುವದು ಸ್ತ್ರೀಪುತ್ರಾದಿಕರಿಗೆ ಪೀಡೆ ಶತ್ರುಗಳ ಭಾತೃವರ್ಗದ ಭಯ ತೋರಬಹುದಾಗಿದೆ. ಹುಷಾರಿ ಆದರೆ ನೀವು ಈ ಚುನಾವಣೆಯಲ್ಲಿ ಭಾಗವಹಿಸಿದ್ದರೆ ಮುಖ್ಯ ಪ್ರಚಾರ ಕಾರ್ಯವನ್ನು ಜಾಗ್ರತೆ ಚಿತ್ತಶುದ್ಧಿಯಿಂದ ಕೈಕೊಂಡು ವಿಜಯಸಂಪಾದಿಸುವದೇ ಭಾರತ ಮಾತೆಯ ಸಂದೇಶ

ತಾ ೧೯, ೨೦ ನೆಟ್ಟಗೆ ೧೮ ಭಯ. ೨೧, ೨೨, ೨೩ ಪ್ರತಿಕೂಲ ಸ್ವಲ್ಪಅನುಕೂಲ.

— —

ಶ್ರೀಕೃಷ್ಣದಲ್ಲಿ

ಬಾದಲ

ಬಾದಲ್ ಚಿತ್ರವು ಶ್ರೀಕೃಷ್ಣ ಟಾಕೀ [illegible]

[illegible]

ಸದಾಗಿದೆ. ಇಂತಹ ಉತ್ತಮ ಚಿತ್ರಗಳು ಇತ್ತೀಚೆಗೆ ತಯಾರಾಗುತ್ತಿರುವದರಿಂದ ಭಾರತದ ಚಲನಚಿತ್ರೋದ್ಯಮವು ವಿಶ್ವದಲ್ಲೇ ಖ್ಯಾತಿಪಡೆಯಲು ಸಹಾಯಕವಾಗಿದೆ ಎಂದು ಹೇಳಬಹುದು

ಬಾದಲ್ ಚಿತ್ರವು ರಾಬಿನ್ ಹುಡ್ ಕಥೆಯ ಆಧಾರದ ಮೇಲೆ ರಚಿಸಲ್ಪಟ್ಟದ್ದು ಆ ಕಥೆ ನಮ್ಮ ದೇಶದ ಸನ್ನಿವೇಶಗಳಿಗೆ ಹೋಲುವಂತಹದಾಗಿದೆ ದಬ್ಬಾಳಿಕೆಯ ವಿರುದ್ಧ ನಡೆಸುವಂತಹ ಎಲ್ಲ ಹೋರಾಟಗಳಿಗೂ ಸ್ಫೂರ್ತಿಕೊಡುವಂತಹದಾಗಿದೆ ಈ ಚಿತ್ರದ ಕಥೆಯು, ನಮ್ಮ ದೇಶದಲ್ಲಿ ರಾಜಮಹಾರಾಜರುಗಳ ಮತ್ತು ನವಾಬರುಗಳ ದಬ್ಬಾಳಿಕೆಯ ವಿರುದ್ಧ ನಡೆಸಿದ ಹೋರಾಟಗಳಿಗೆ ಹೋಲುತ್ತದೆ.

ಯಾವ ಕಥೆಯೇ ಆಗಲಿ ಸಮಾಜದ ಪ್ರತಿಬಿಂಬವಾಗುವಂತೆ ಇದ್ದರೆ ಅದು [illegible]

ಕಥೆಯ ಜೊತೆಗೆ ಮನರಂಜನೆಯ ಅಂಶವೂಸಹ ಈ ಚಿತ್ರದಲ್ಲಿ ಬಹಳ ಪ್ರಶಂಸಿಸ ತಕ್ಕದ್ದಾಗಿದೆ. ಲತಾಮಂಗೇಶಕರಳ ಇಂಪಾದ ಹಾಡುಗಳು, ಆಗಾನ ಹಾಸ್ಯಮಯವಾದ ಅಭಿನಯ, ಶಂಕರ ಜೈಕಿಶನರ ಸಂಗೀತ ದಿಗ್ದರ್ಶನ, ಇವೆಲ್ಲವೂ ಚಿತ್ರದಲ್ಲಿ ಬಹಳ ಸೊಗಸಾದ ಮನರಂಜನೆಯನ್ನುಂಟು ಮಾಡುತ್ತವೆ. ಛಾಯಾಗ್ರಹಣವಂತೂ ಬಹಳ ಉತ್ತಮಮಟ್ಟದಲ್ಲಿದೆ ಮಧುಬಾಲ, ಪೂರ್ಣಿಮಾ ಪ್ರೇಮನಾಥ, ಹಿರಾಲಾಲ್ ಮತ್ತು ಆಗಾ ಎಲ್ಲರೂ ಸಹ ಉತ್ತಮ ಅಭಿನಯವನ್ನು ಬೀರಿದ್ದಾರೆ. ಪೂರ್ಣಿಮಾಳಂತೂ ಬಹಳ ಮುದ್ದಾಗಿ ಅಭಿನಯಿಸಿರುತ್ತಾಳೆ. ಕೊನೆಯಲ್ಲಿ ಆಕೆಯು ಗುಂಡಿನ ಹೊಡೆತದಿಂದ ಪ್ರಾಣಬಿಡುವ ಸನ್ನಿವೇಶ ಕರುಣಾಜನಕವಾಗಿದೆ

ಎಲ್ಲಕ್ಕಿಂತಲೂ ಹೆಚ್ಚಾಗಿ ಈ ಚಿತ್ರದ ಯಶಸ್ಸಿಗೆ ಕಥೆ ಮತ್ತು ದಿಗ್ದರ್ಶನ ಕಾರ್ಯವನ್ನು ಕೈಕೊಂಡಿರುವ ಅಮಿಯ ಚಕ್ರವರ್ತಿಯವರೇ ಕಾರಣರು ಎಂದು ಹೇಳಿದರೆ ತಪ್ಪಾಗಲಾರದು. ಈ ಚಿತ್ರವು ಎಲ್ಲ ಅಭಿರುಚಿಯ ಜನರಿಗೂ ಹಿಡಿಸುವಂತಹದಾಗಿರುವುದರಿಂದ ಎಲ್ಲರೂ ನೋಡಬಹುದಾಗಿದೆ.

— —

ಸಂದೇಶಕ್ಕೆ

ಚಂದಾದಾರರಾಗಿರಿ

ಸಂದೇಶ

[illegible]

ನಮ್ಮ ಜಿಲ್ಲೆಯ ಮತದಾರರಲ್ಲೊಂದು ಮನವಿ.

[illegible]

[illegible] ಇನ್ನು ಕೆಲವರು ತಾವು ಸೇರಿಕೊಂಡಿದ್ದ ಪಕ್ಷದಿಂದ ಕಾರ್ಯಸಾಧನೆಯಾಗಲಾರದೆಂದು ತಿಳಿದು, ಪಕ್ಷದ ಶಿಸ್ತನ್ನೆ ತೊರೆದು ತಮಗೆ ಇಚ್ಛೆ ಬಂದಂತೆ ವರ್ತಿಸಹತ್ತಿದ್ದಾರೆ. ತಾವು ಯಾವ ಪಕ್ಷದವರೂ ಅಲ್ಲವೆಂದೂ, ಸ್ವತಂತ್ರ ಉಮೇದುವಾರರೆಂದು ಹೇಳಿಕೊಳ್ಳುತ್ತ ದಿನಕ್ಕೊಂದು ಬಣ್ಣ ಬದಲಾಯಿಸುತ್ತಿದ್ದಾರೆ. ಇಂತಹ ನೀತಿಯಿಂದ ಜನರನ್ನು ಮೋಸಗೊಳಿಸಬಹುದೆಂದು ಅವರು ತಿಳಿದಿದ್ದರೆ ಅದು ಮೂಢತನವೇ ಸರಿ. ತಾನು ಸೇರಿಕೊಂಡ ಪಕ್ಷಕ್ಕೆ ನಾಲ್ಕು ದಿನಗಳಲ್ಲಿಯೇ ದ್ರೋಹ ಬಗೆಯುವಂತಹ ವ್ಯಕ್ತಿಗಳು ಆರಿಸಿ ಬಂದಮೇಲೆ ಜನತೆಗೆ ದ್ರೋಹ ಮಾಡದೆ ಬಿಡುವರೆ? ಅಂತಹವರು ಆಡಳಿತ ಸೂತ್ರವನ್ನು ಎಷ್ಟುಮಟ್ಟಿಗೆ ನಡೆಸುವರು? ಇಂತಹ ವ್ಯಕ್ತಿಗಳ ರಾಜಕೀಯವೆಲ್ಲವೂ ಸ್ವಾರ್ಥಕ್ಕಾಗಿಯೇ ಎಂಬುದನ್ನು ಮತದಾರರು ತಿಳಿದುಕೊಂಡಿದ್ದಾರೆ.

ಒಂದು ಪಕ್ಷಕ್ಕೆ ಅಂಟಿಕೊಂಡಿರುವಾಗ್ಯೂ ಸ್ವತಂತ್ರವಾಗಿ ಚುನಾವಣೆಗೆ ನಿಂತಿರುವೆನೆಂದು ಹುಯಿಲೆಬ್ಬಿಸಿ ಜನತೆಯನ್ನು ಮೋಸಗೊಳಿಸುವದು ಎಡೆಬಿಡದೆ ಸಾಗಿದೆ. ಕಾಂಗ್ರೆಸ ವಿರೋಧಿ ಪಕ್ಷದವರೆಂದು ಹೆಸರುಪಟ್ಟುಕೊಳ್ಳುವ, ಮೊನ್ನೆ ಮೊನ್ನೆ ಕಾಂಗ್ರೆಸಿನಿಂದ ಸಿಡಿದುಹೋಗಿ ಚುನಾವಣೆಯ [illegible]

[illegible] ಗೊಂದಲಮಯವಾದ ಮಾರ್ಗ ಅನುಸರಿಸಿ ಎಷ್ಟೋ ವ್ಯಕ್ತಿಗಳು ಬಹಳ ತುಚ್ಛವಾದ ರೀತಿಯಲ್ಲಿ, ಕಾಂಗ್ರೆಸ್ಸಿನ ಮೇಲೆ ಇಲ್ಲದಸಲ್ಲದ ಅಪಪ್ರಚಾರಗಳನ್ನು ಕೈಕೊಂಡಿರುತ್ತಾರೆ. ಇಂತಹ ವ್ಯಕ್ತಿಗಳ ಕುಯುಕ್ತಿಯು ಜನರಿಗೆ ತಿಳಿದ ಮೇಲೆ ಇವರುಗಳು ಏರ್ಪಡಿಸಿದ ಸಭೆಗಳಿಗೆ ಜನರು ಸೇರುವುದೇ ದುರ್ಲಭವಾಗಿದೆ. ಬಲಾತ್ಕಾರದಿಂಡ ದಮ್ಮಯ್ಯಾ ಎಂದು ಹತ್ತಾರು ಜನರನ್ನ ಸೇರಿಸಬೇಕಾದ ಪರಿಸ್ಥಿತಿಯುಂಟಾಗಿದೆ. ಆಸಭೆಗಳಲ್ಲಿಯಾದರು ಎಷ್ಟೋ ಜನ ಎದ್ದು, ಕಾಂಗ್ರೆಸ್ಸಿನವರಾದರೋ ತಮ್ಮ ಪಕ್ಷವು ಇದುವರೆಗೆ ಸಾಧಿಸಿದ ಮಹಾತ್ಕಾರ್ಯಗಳನ್ನು ಕುರಿತು ಹೇಳುತ್ತಾರೆ. ಆದರೆ ನಿಮ್ಮ ಜನರಿಗಾಗಿ ಏನುಮಾಡಿದೆ ಎಂಬುದನ್ನು ನೀವೇಕೆ ಹೇಳುವದಿಲ್ಲ ಎಂಬ ಪ್ರಶ್ನೆಗಳ ಸುರಿಮಳೆಯನ್ನು ಕರೆಯುತ್ತಾರೆ. ಅಂತಹ ಪ್ರಶ್ನೆಗಳನ್ನು ಕೇಳುವುದಕ್ಕೆ ಮತದಾರರಿಗೆ ಹಕ್ಕಿದೆ. ಅವರ ಪ್ರಶ್ನೆಗಳಿಗೆ ಉತ್ತರ ಕೊಡುವುದು ಪಕ್ಷಗಳ ಕರ್ತರ ಚುನಾವಣೆಗಾಗಿಯೇ ಹುಟ್ಟಿಕೊಂಡಿರುವ ಪಕ್ಷಗಳು ಎಷ್ಟುಮಟ್ಟಿಗೆ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ಕೊಡಬಲ್ಲವು? ಅಂತಹ ಪಕ್ಷಗಳಿಂದ ಏನಾದರೂ ಕಾರ್ಯ ಸಾಧಿಸಿದ್ದರೆ ತಾನೆ ಹೇಳಿಕೊಳ್ಳುವುದಕ್ಕೆ ಇರುವುದು. ತಾವೊಬ್ಬರು ಹೇಗಾದರೂ ಮಾಡಿ ಆರಿಸಿಬಂದರೆ ಸಾಕು. ಎಂದು ಕೆಲವರು ತಮ್ಮನ್ನು ತಾವೇ ಹೊಗಳಿಕೊಳ್ಳುವುದಲ್ಲದೆ. ಪ್ರತಿಸ್ಪರ್ಧಿಯ ವೈಯಕ್ತಿಕ ನಿಂದೆಯನ್ನು ಸಹ ಮಾಡುತ್ತಾರೆ. ಆ ಪ್ರಯತ್ನಗಳ ಜೊತೆಗೆ ಜಾತಿಜಾತಿಗಳಲ್ಲಿಯೆ ಭೇದ ಹುಟ್ಟಿಸಿ ತಮ್ಮ ಸ್ವಾರ್ಥ ಸಾಧಿಸಿಕೊ [illegible]

[illegible] ಈ ಮಹಾಸಂಸ್ಥೆಯು ನಮಗೆಲ್ಲ ಸ್ವಾತಂತ್ರ್ಯ ತಂದು ಕೊಟ್ಟದ್ದರಿಂದ ಕೃಷಿಕರ ಕೂಲಿಕಾರರ ಬೆಂಬಲಪಡೆದಿರುವುದರಿಂದ [illegible] ನಿರ್ಮೂಲ [illegible] ತತ್ವ ಪರಿಪಾಲಿಸುತ್ತಿರುವುದರಿಂದ ಕುಡಿತವನ್ನು ನಿಷೇಧಿಸುತ್ತಿರುವದರಿಂದ, ವಿಶ್ವಶಾಂತಿಗಾಗಿ ಶ್ರಮಿಸುತ್ತಿರುವದರಿಂದ ಜಾತೀಯತೆಯನು ಬಡಿದೋಡಿಸಲು ಪಣ ತೊಟ್ಟಿರುವದರಿಂದ ಇನ್ನೂ ಇಂತಹ ಎಷ್ಟೋ ಮಹತ್ತರವಾದಂತಹ ತತ್ವಗಳನ್ನು ಕಾಂಗೆಸ್ಸು ಇಟ್ಟುಕೊಂಡಿರುವದರಿಂದ ಭಾರತದ ಜನತೆ ಕಾಂಗ್ರೆಸ್ಸೇ ಪುನಃ ಅಧಿಕಾರಕ್ಕೆ ಬರಬೇಕೆಂಬ ಆಶಯವನ್ನು ಇಟ್ಟುಕೊಂಡಿರುವದರಲ್ಲಿ ಆಶ್ಚರ್ಯವೇನೂ ಇಲ್ಲ. ಹಿಮಾಚಲ ಪ್ರದೇಶದಲ್ಲಿ ದೊರೆತ ಪ್ರಚಂಡ ವಿಜಯವೇ ಇದಕ್ಕೆ ನಿದರ್ಶನವಾಗಿದೆ. ಈಗ ತಿರುವಾಂಕೂರು ಕೊಚ್ಚಿ ರಾಜ್ಯದಲ್ಲಿ ಮತದಾನ ಪ್ರಾರಂಭವಾಗಿದೆ. ಈಗಾಗಲೆ ಒಂದು ಸ್ಥಾನದ ಫಲಿತಾಂಶ ಹೊರಬಿದ್ದಿದ್ದು, ಅಲ್ಲಿಂದ ಕಾಂಗ್ರೆಸ ಹುರಿಯಾಳು, ಪ್ರತಿಸ್ಪರ್ಧಿಗಳಾದ ಸಂಯುಕ್ತರಂಗದ ಮತ್ತು ಸಾಮ್ಯವಾದಿ ಹುರಿಯಾಳುಗಳನ್ನು ಸೋಲಿಸಿ ಪ್ರಚಂಡ ಬಹುಮತದಿಂದ ಆರಿಸಿ ಬಂದಿರುವನು. ಎಲ್ಲಿ ನೋಡಿದರೂ ಕಾಂಗ್ರೆಸ್ಸಿಗೇ ವಿಜಯ ಕಾಣಿಸಿಕೊಳ್ಳುತ್ತಿದೆ. ತಿರುವಾಂಕೂರು ಕೊಚ್ಚಿನಗಳ ಕೆಲವು ಮತಕ್ಷೇತ್ರಗಳಲ್ಲಿ ನೂರಕ್ಕೆ ನೂರು ಮತದಾರರು ಭಾಗವಹಿಸಿ ತಮ್ಮ ಹಕ್ಕಿನ ಸದುಪಯೋಗ ಮಾಡಿಕೊಂಡಿರುವುದನ್ನು ನೋಡಿದರೆ ಅಲ್ಲಿಯ ಜನ ಎಷ್ಟರಮಟ್ಟಿಗೆ ರಾಜಕೀಯ ಜಾಗೃತಿಯನ್ನು ಹೊಂದಿದ್ದಾರೆ ಎಂಬುದು ವ್ಯಕ್ತವಾಗುತ್ತದೆ. ನಮ್ಮ ಜಿಲ್ಲೆಯಲ್ಲಿಯೂ ಸಹ ಚುನಾವಣೆಗಳು ಸಮೀಪಿಸುತ್ತಿವೆ. ಪ್ರತಿಯೊಬ್ಬ ಮತದಾರನೂ ತಪ್ಪದೆ ಮತಗಟ್ಟೆಗಳಿಗೆ ಬಂದು ಕಾಂಗ್ರೆಸ ಹುರಿಯಾಳುಗಳಿಗೆ ಮತನೀಡಿ ಪ್ರಚಂಡ ವಿಜಯ ದೊರಕಿಸಿ ಕೊಟ್ಟು ನಮ್ಮ ಜಿಲ್ಲೆಯ ಕೀರ್ತಿಯು ಬೆಳೆಯುವಂತೆ ಮಾಡುತ್ತಾರೆಂಬುವದರಲ್ಲಿ ನಮಗೆ ಯಾವ ಸಂಶಯವೂ ಇರುವದಿಲ್ಲ.

ಬಿಚ್ಚು ಮಾತು

ಕಾಂಗ್ರೆಸಿನಿಂದಲೇ ಸುಧಾರಣೆ

ಕಾಂಗ್ರೆಸು ಸ್ವಾತಂತ್ರ್ಯ ಪ್ರಾಪ್ತಿಯ ನಂತರದಲ್ಲಿ ಉಂಡೇಳುವ ಮಹಾಮಹಾ ವಿಪತ್ತುಗಳನ್ನು ಸದೆಬಡೆದು ಅಧಿಕಾರ ಸೂತ್ರಗಳನ್ನು ವಹಿಸಿಕೊಂಡು ರಾಜ್ಯಶಕಟ ಸಾಗಿಸುತ್ತಲಿದೆ. ಕೇವಲ ಅಲ್ಪಾವಧಿಯಲ್ಲೇ ಇಂತಹ ಅಮೋಘ ಕಾರ್ಯ ಸಾಧಿಸುವದು ಭಾರತದ ಮತ್ತಾವುದೇ ಪಕ್ಷಗಳಿಂದ ಸಾಧ್ಯವಾಗದ ಮಾತೆಂಬುದು ನಿಚ್ಚಳವಿದೆ. ಯಾಕೆಂದರೆ ಇಂದಿನ ಚುನಾವಣೆ ಪ್ರಚಾರದಲ್ಲಿ ತಮ್ಮ ಅಸಾಮರ್ಥ್ಯದ ಪ್ರದರ್ಶನವನ್ನು ತಾವೇ ಮಾಡಿಕೊಳ್ಳುತ್ತಿರುವದೇ ಇದಕ್ಕೆ ನಿದರ್ಶನ. ಸಮಾಜವಾದಿ ಮುಖಂಡರಾದ ಜಯಪ್ರಕಾಶರು ಒಂದು ಸಂದರ್ಭದಲ್ಲಿ ಮಾತಾಡುತ್ತ, ಕಾಂಗ್ರೆಸು ೫೦ ವರುಷವಾಳಿದರೂ ಪರಿಸ್ಥಿತಿ ಸುಧಾರಿಸದೆಂದು ಹೇಳಿದ್ದು ನೋಡಿದರೆ ಇದೆಂತಹ ಚುನಾವಣೆ ಸ್ಟಂಟೋ ಎಂದು ಎಲ್ಲರಿಗೂ ಭಾಸವಾಗದಿರದು. ಸಮಾಜವಾದಿ ಪಕ್ಷವು, ತಾನು ಹುಟ್ಟಿದಾರಭ್ಯ ಅದಾವ ಮಹತ್ಕಾರ್ಯವನ್ನು ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಸಾಧಿಸಿದೆ? ಅದಾವಬಗೆಯಲ್ಲಿ ಜನಜೀವನವನ್ನು ಎತ್ತರಿಸಿದೆ? ಮೊದಲು ತಾನು ಒಳ್ಳೆಯವನಿದ್ದು ಪರರನ್ನು ದೂಷಣೆಗೆ ಗುರಿಮಾಡಿದರೆ ಯೋಗ್ಯವಾದರೂ ಕಂಡೀತು. ಜನತೆಯಾದರೂ ಒಪ್ಪೀತು. ವರ್ಗ ರಹಿತ ಸಮಾಜರಚನೆಯಾಗಬೇಕೆಂಬ ಅಂಶವನ್ನು ಸಮಾಜವಾದದಂತೆ ಕಾಂಗ್ರೆಸ್ಸೂ ಎತ್ತಿಹಿಡಿದಿದೆ. ಮೊನ್ನೆ ಮೊನ್ನೆ ಜವಾಹರರೇ ಅಲ್ಹಾಬಾದಿನಲ್ಲಿ ಸಮಾಜ ರಚನೆಯ ಬಗ್ಗೆ ಸ್ಪಷ್ಟವಾಗಿ ಹೇಳಿಬಿಟ್ಟಿದ್ದಾರೆ. ಭಾರತದಲ್ಲಿ ಸಮಾಜವಾದಿ ಪಕ್ಷವು ಎಷ್ಟುಮಟ್ಟಿಗೆ ಸಮರ್ಥನೀಯವಿದೆ. ಆಡಳಿತೆಯ ಗಂಧವನ್ನು ಎಷ್ಟರಮಟ್ಟಿಗೆ ಮೂಸಿ ನೋಡಿಸಬಲ್ಲದು ಎಂಬ ಮಾತನ್ನು ಭಾರತದ ನಾಗರೀಕರು ಅರಿಯದೆ ಇಲ್ಲಾ. ಕಾಂಗ್ರೆಸ್ಸಿನಿಂದಲೇ ಸರ್ವತೋಮುಖ ಏಳ್ಗೆಯಾಗಿ ಸರ್ವವಿಷಯಗಳಲ್ಲೂ ಸುಧಾರಣೆಯಾಗಿ ಜನಜೀವನ ಸಮಾಜಜೀವನ ಉನ್ನತಮಟ್ಟವೇರಬಲ್ಲುದೆಂಬ ಸಿದ್ಧಾಂತಕ್ಕೆ ಜನಗಳು ಬಂದಲ್ಲೇ ಕಾಂಗ್ರೆಸಿನ ವಿಜಯೋತ್ಸವದ ಕೂಗು ಎಲ್ಲೆಡೆಯಿಂದಲೂ ಕೇಳಬರುತ್ತಲಿದೆ. ಜಯಪ್ರಕಾಶರು ಇದನ್ನು ಗಮನಿಸದೆ ಇಲ್ಲಾ. ಆದಾಗ್ಯೂ ತಮ್ಮದೊಂದು ಚುನಾವಣೆ ಬಾಣವೆಂದು ಎಸೆಯುತ್ತಲಿದ್ದಾರೆ. ಸ್ವತಂತ್ರ ನಾಡಿನ ಸರ್ವರೂ ರಾಷ್ಟ್ರದ ಉದ್ಧಾರಕ್ಕಾಗಿ ಟೊಂಕಕಟ್ಟಿ ಏಕೋಭಾವದಿಂದ

೫ ನೇ ಪುಟ ನೋಡಿರಿ.

ಪೀಟರ ಇಂಜಿನ್ಸ



- [illegible] ಪೀಟರ, ಕಿರ್ಲೋಸ್ಕರ ಪೀಟರ, ಮತ್ತು ಫೀಲ್ಡಿಂಗ ಇಂಜಿನ್ಸ [illegible] ಪಾವರದ ವರೆಗೆ ಕಿರ್ಲೋಸ್ಕರ [illegible]
- [illegible]
- [illegible]

ಬೆಳಗಾವಿ, ಧಾರವಾಡ, ವಿಜಾಪೂರ, ನಾರ್ಥ ಕ್ಯಾನರಾ ಹಾಗು ಕೊಲ್ಹಾಪೂರ

ಈ ಜಿಲ್ಹೆಗಳ ಒಬ್ಬರೇ ಒಬ್ಬ ಮಾರಾಟಗಾರರು

ವಿಜಯ ಇಂಜಿನಿಯರಿಂಗ ಮತ್ತು ಮಶಿನರಿ ಕಂಪನಿ

ರಾಮದೇವಗಲ್ಲಿ, ಬೆಳಗಾವಿ.

[illegible]

ಶಾಖಾ—
ಮಂಗಳವಾರ ಪೇಠ, ಕೊಲ್ಹಾಪೂರ
ಕಿರ್ಲೋಸ್ಕರ ರೋಡ, ವಿಜಾಪೂರ.
ಕೊಪ್ಪೀಕರ ರೋಡ, ಹುಬ್ಬಳ್ಳಿ.

ಕಾಂಗ್ರೆಸ ಚುನಾವಣೆ ಪ್ರಚಾರ

ಶ್ರೀ ದಾತಾರ ಮೊದಲಾದವರ ಸಂಚಾರ

(ನಮ್ಮ ಕುಡ್ಚಿ [illegible])

[illegible]

ಇವೇ ಮೇರೆಗೆ ಕಳೆದವಾರ ೩ ದಿನ ಶ್ರೀ ದಾತಾರರು ರಾಯಬಾಗ ಮಹಾಲಿನಲ್ಲಿ ಅಸೆಂಬ್ಲಿ ಉಮೇದವಾರ ದಳವಾಯಿ ಅವರೊಡನೆ ಸಂಚರಿಸಿದರು. ಇವರ ಜೊತೆಯಲ್ಲಿ ಶ್ರೀಗಳಾದ ಅಣ್ಣಾ ಗುರೂಜಿ, ಅರವಿಂದ ಜೋಶಿ, ಯಮುನಪ್ಪಾ ಅರಭಾವಿ, ಇಮಾಮ ಸಾಹೇಬ, ಹಿಡಕಲ್ಲ ಮುಂತಾದವರಿದ್ದರು ಮತ್ತು ಧ್ವನಿವಾಹಕ ಯಂತ್ರದ ಪ್ರಚಾರ ವಾಹನವಿತ್ತು. ಈ ಸಂಚಾರದಲ್ಲಿ ರಾಯಬಾಗ, ಚಿಂಚಲಿ ಕುಡಚಿ, ಪರಮಾನಂದವಾಡಿ ಕಿರಗೂರ ಭಿರಡಿ, ಜಲಾಲಪೂರ, ಹಾರೂಗೇರಿ, ಮುಗಳಖೋಡ, ಹಿಡಕಲ್' ಭಂಡಿವಾಡ, ಕಬ್ಬೂರ, ನಾಗರ ಮುನವಳ್ಳಿ, ಕಂಕನವಾಡಿ, ನಿಪ್ಪನಾಳ ಮತ್ತು ಇನ್ನೂ ಅನೇಕ ಗ್ರಾಮಗಳಿಗೆ ಭೆಟ್ಟಿಯಿತ್ತು ಜಾಹೀರ ಸಭೆಗಳನ್ನೇರ್ಪಡಿಸಲಾಗಿತ್ತು. ಅಣ್ಣಾ ಗುರೂಜಿಯವರ ಸ್ಫೂರ್ತಿಯುತ ಭಾಷಣ ಮಾಡಿದರು. ಜನರಲ್ಲೆಲ್ಲ ಕಾಂಗ್ರೆಸ್ಸಿನ ಬಗ್ಗೆ ಪ್ರೀತಿ ವಿಶ್ವಾಸಗಳಿದ್ದು ಅವರು ಕಾಂಗ್ರೆಸ್ಸಿಗೇ ಮತಕೊಡಲು ಪ್ರತಿಜ್ಞಾ ಪೂರ್ವಕವಾಗಿ ಆಶ್ವಾಸನವನ್ನಿತ್ತಿದ್ದಾರೆ.

ಶ್ರೀ ದಾತಾರರು ಕಾಗವಾಡ ಭಾಗದ ವಿಧಾನ ಸಭೆಯ ಹುರಿಯಾಳು ಶ್ರೀ. ಪಿ. ಎಚ್. ಗುಂಜಾಳರೊಡನೆ ಐನಾಪೂರ, ಕೇಡಬಾಳ ಮತ್ತು ಕಾಗವಾಡಗಳಿಗೆ ಭೆಟ್ಟಿಕೊಟ್ಟರು. ಜೊತೆಯಲ್ಲಿ ಐನಾಪೂರದ ಶ್ರೀ [illegible] ಮಾಸ್ತರ, ಶ್ರೀ ಅರವಿಂದ ಜೋಶಿ, ಶ್ರೀ ಕಾಗವಾಡೆ [illegible] ಕಾಂಗ್ರೆಸ್ಸಿಗೆ [illegible]

ವಿವಿಧ ವಿಷಯ

ಸರದಾರರ ಸ್ಮರಣೆ



ಕಳೆದ ಡಿಶೆಂಬರ ದಿ ೧೫ ರಂದು ಘಟಿಸಿದ ಭಾರತದ ಉಪಪ್ರಧಾನರೂ ಗೃಹಮಂತ್ರಿಗಳೂ ಆಗಿದ್ದ ಸರದಾರ ವಲ್ಲಭಭಾಯಿ ಪಟೇಲರ ನಿಧನ ವಾರ್ತೆ ಭಾರತವನ್ನೇ ವಜ್ರಾಘಾತದ [illegible] ಪೆಟ್ಟಿಗೆ ಸಿಲುಕಿಸಿತು. ಭಾರತ ರಾಷ್ಟ್ರದ ಸರ್ವತೋಮುಖ ಏಳ್ಗೆಗೆ ಕಾರಣ ಕರ್ತರಲ್ಲೊಬ್ಬರಾದ ಪಟೇಲರು ಕಳೆದೊಂದು ವರುಷದ ಪೂರ್ವದಲ್ಲಿ ನಮ್ಮಿಂದ [illegible] ಭಾರತೀಯರ [illegible] ಕೊಂಡು [illegible] ಕಾರ್ಯವನ್ನೇ ನೆರವೇರಿಸಿದರು. ಅದೇ ಭಾರತದಲ್ಲಿ [illegible] ಸಂಸ್ಥಾನಗಳನ್ನು ಭಾರತ ಒಕ್ಕೂಟದಲ್ಲಿ [illegible] ನಡೆದು ಅದನ್ನೇ [illegible] ಮಹಾ ವ್ಯಕ್ತಿತ್ವ ಇವರದು. ಇವರು [illegible] ಅವರ [illegible] ತಕ್ಕೆಯನ್ನೇರಿದವರಿಗೆ [illegible] ಗಾಂಧೀಜಿಯವರ [illegible] ಕಾಂಗ್ರೆಸ [illegible] ತಕ್ಕಷ್ಟು [illegible] ಸ್ವಾತಂತ್ರ್ಯ ಯೋಧರೆಂದು [illegible] ಅಲ್ಲ ಅಖಂಡ ಭಾರತದ ಜನಗಳನ್ನು ಸ್ವಾತಂತ್ರ್ಯದ ಸವಿಗನಸು ಕಾಣಿಸಲು ಕಾರಣಭೂತರಾದರು. ಸರದಾರರು ಇನ್ನೂ ನಮ್ಮ ಮಧ್ಯೆ ಇರಬಹುದಾಗಿದ್ದರೆ ಇಂದು ನಡೆಯುವ ಚುನಾವಣೆಗೆ ಎಷ್ಟೋ ಕಳೆಯೇರುತ್ತಿತ್ತು. ಜವಾಹರರಿಗೆ ಬೀಳುವ ಭಾರವು ತುಸುಮಟ್ಟಿಗೆ ಕಡಿಮೆಯಾಗುತ್ತಿತ್ತು. ಇದಕ್ಕಿಂತಲೂ ಹೆಚ್ಚಿನ ಉತ್ಸಾಹದಿಂದ ಚುನಾವಣೆ ರಂಗ ಜಯಭೇರಿ ಹೊಡೆಯುತ್ತಿತ್ತೆಂದು ಅನ್ನಬಹುದು. ನಮ್ಮ ದುರ್ದೈವ! ಪವಿತ್ರಾತ್ಮನನ್ನು ಪವಿತ್ರ ಹೃದಯಿಗಳಾದ ನಾವೆಲ್ಲರೂ ಅವರು ಮಾಯವಾಗಿ ಹೋದ ದಿನದ ಈ ಸಂದರ್ಭದಲ್ಲಿ ನೆನೆದು ಅವರ ಆತ್ಮಕ್ಕೆ ಶಾಂತಿಯನ್ನು ಕೋರುವದು ಪ್ರತಿಯೊಬ್ಬ ಭಾರತೀಯನ ಆದ್ಯಕರ್ತವ್ಯ.

ಜಿಲ್ಹಾ ಲೋಕಲ್ ಬೋರ್ಡದವರು ಬೆಳಗಾವಿ ಮುನಸಿಪಾಲಿಟಿ ಕಿತ್ತೆಯನ್ನೇ ತೀಡುವದೇ?

ಬೆಳಗಾವಿ ಜಿಲ್ಹಾ ಲೋಕಲ್ ಬೋರ್ಡದವರು ಕಳೆದೆರಡು ತಿಂಗಳ ಹಿಂದೆ ಆಡಿಟ್ ನೋಟನ್ನು ಮರಾಠಿ ಪತ್ರಿಕೆಯೊಂದರಲ್ಲಿ ಮರಾಠಿ ಭಾಷೆಯಲ್ಲಿ ಪ್ರಸಿದ್ಧ ಪಡಿಸಿದ್ದನ್ನು ನೋಡಿ ನನಗೆ [illegible] ವಾಗಿದೆ. ಯಾಕಂದರೆ ಲೋಕಲ್ ಬೋರ್ಡದವರು ಆಡಿಟ್ ನೋಟನ್ನು ಕನ್ನಡದಲ್ಲಿಯೂ ಪ್ರಸಿದ್ಧ ಪಡಿಸುತ್ತಲೆ ಬಂದುದನ್ನು ನಾನು ನೋಡುತ್ತ ಬಂದಿರುವೆ. ಈಗ ಮಾತ್ರ ಹೀಗೇಕೆ ತಮ್ಮ ನಿಲುಮೆಯನ್ನು ಬದಲಿಸುವರೋ ನನಗೆ [illegible] ವದು. ಕನ್ನಡ ನಾಡಿನಲ್ಲಿ ತಲೆಎತ್ತಿ ಮೆರೆದ ಬೆಳಗಾಂವಿಯು ಇಂತಹ ಅಸಹನೀಯವಾದ ಕೃತಿಯನ್ನು ಕಂಡು ಕ್ಷಮ್ಯವೆನ್ನಲಾರದು. ಹೀಗಿದ್ದರೂ ಬೆಳಗಾವಿ ಮುನಿಸಿಪಾಲ್ಟಿಯವರು ತಮ್ಮ ಪ್ರತಿಯೊಂದು ಕಾರ್ಯಕಲಾಪಗಳನ್ನು ಮರಾಠಿಯಲ್ಲೇ ಮಾಡುತ್ತಿರುವದನ್ನು ಕಂಡೋ ಅಥವಾ ಅದರ ಸೆರಗು ಬಡಿಸಿಕೊಂಡೋ ಇಂತು ಲೋಕಲ್ ಬೋರ್ಡದವರು ಕನ್ನಡಕ್ಕಾಗಿ ಅನಾದರ ತೋರಿಸುವದು ಎಳ್ಳಷ್ಟು ಕ್ಷೇಮಕರವಲ್ಲವು. ಇದರಮೇಲಿಂದ ನೋಡಲಾಗಿ ಲೋಕಲ್ ಬೋರ್ಡದವರು ಬೆಳಗಾವಿ ಮುನಿಸಿಪಾಲ್ಟಿಯ ಕಿತ್ತೆಯನ್ನೇ ತೀಡುತ್ತಲಿದ್ದಾರೆಂದು ಅನ್ನಲು ಅಡಾವಸಂಕೋಚ?

—ಲೋಕಲ್ ಫಂಡ ತೆತ್ತುವ
ಓರ್ವ ನಾಗರಿಕ.

ಕರ್ನಾಟಕ ಮ್ಯುಜಿಕ್ ಸರ್ಕಲ್, ಬೆಳಗಾವಿ

ಈ ಸಂಘದ ವತಿಯಿಂದ ಸಂಗೀತ ವಿಶಾರದ ಶ್ರೀ ಭೀಮಸೇನ ಜೋಶಿ ಅವರ ಸಂಗೀತ ಗಾಯನದ ಕಾರ್ಯಕ್ರಮವು ಶನಿವಾರ ದಿ. ೨೨—೧೨—೫೧ ಕ್ಕೆ ರಾತ್ರಿ ೧೦ ಗಂಟೆಗೆ [illegible] ಇಲ್ಲಿ ಜರುಗತಕ್ಕದ್ದಿದೆ. ಎಲ್ಲ ಸಭಾಸದರು ವೇಳೆಗೆ ಸರಿಯಾಗಿ ಬರಬೇಕೆಂದು ಸಂಘದ ಸಂಚಾಲಕರು ತಿಳಿಸುತ್ತಾರೆ.

(೩ನೇ ಪುಟದಿಂದ ಸಾಗಿದ್ದು)

ಕೂಡಿದವರಾದರೆ ಇಂದೇ ಆದರ್ಶ ರಾಷ್ಟ್ರವಾಗಬಲ್ಲುದು. ಅದೆಲ್ಲ ಬದಿಗಿರಿಸಿ ಕಾಂಗ್ರೆಸಿನಿಂದ ಏನೂ ಆಗುವದಿಲ್ಲೆಂದು ಉಸುರಿದರೆ ಯಾರೂ ನಂಬಲಾರರೆಂಬುದನ್ನು ಕಾಂಗ್ರೆಸ ವಿರೋಧಕರು ಅರಿಯಲಿ.

ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ

ಬಿ. ಕೆ. ಮಾಡೆಲ್ ಹಾಯಸ್ಕೂಲ ಬೆಳಗಾವಿ

ವಿದ್ಯಾರ್ಥಿನಿಯರ ಶಿಬಿರ ನರಸಿಂಹಪೂರ

[illegible] ಸರೋಜಿನಿ ನಾಯಡು ಹಾಗು ಭಾರತಿ ಎಂದು ಹೆಸರಿಡಲಾಯಿತು.

ರವಿವಾರ ದಿ. ೯-೧೨-೫೧ ನೇ ದಿನ ಮುಂಜಾನೆ ೫ ಗಂಟೆಗೆ ಪ್ರಾರ್ಥನೆಯಿಂದ ಶಿಬಿರವು ಪ್ರಾರಂಭವಾಯಿತು. ಆಮೇಲೆ ಶಾರೀರಿಕಶಿಕ್ಷಣ ಹಾಗು ಧ್ವಜ ವಂದನೆಯಾದಮೇಲೆ ಕ್ಯಾ. ಲಕ್ಷ್ಮಿಗುಂಪು ಅಡಿಗೆ ಮೊದಲಾದ ಕೆಲಸದಲ್ಲಿ ತೊಡಗಿತು. ಸರೋಜಿನಿ ಹಾಗು ಭಾರತಿ ಈ ಎರಡು ಗುಂಪುಗಳು ನರಸಿಂಹಪೂರದಿಂದ ಒಂದು ಮೈಲಿನ ಮೇಲಿರುವ ಬೆನಕನಹೊಳಿಯ ಜನರ ಜೀವನ ನಿರೀಕ್ಷಣೆಗಾಗಿ ಹೋದೆವು. ಅಲ್ಲಿ ವಿಶೇಷವಾಗಿ ಹೆಣ್ಣುಮಕ್ಕಳ ಜೀವನ ಕ್ರಮವನ್ನು ನಿರೀಕ್ಷಿಸಲಾಯಿತು. ಆ ಹಳ್ಳಿಯಲ್ಲಿ ನಾವೆಲ್ಲರು ಮನೆಮನೆಗೆ ಹೋಗಿ ಮನೆಯ ಮುಖ್ಯಸ್ಥರ ಹೆಸರು, ಉದ್ಯೋಗ, ಗಳಿಕೆ ವೆಚ್ಚ, ಕಲಿಯುತ್ತಿರುವ ಹುಡುಗರು ಆರೋಗ್ಯ ಹಾಗು ಸರ್ವೋದಯ ಯೋಜನೆಯಿಂದ ಆದ ಲಾಭಹಾನಿಗಳ ಬಗ್ಗೆ ಸಂಗತಿಗಳನ್ನು ಕೂಡಹಾಕಿದೆವು. ಪಟ್ಟಣದ ಶಾಲೆಯಲ್ಲಿ ಕಲಿಯುವ ನಮಗೆ ಅವರ ಜೀವನವನ್ನು ನೋಡಿ ಕನಿಕರ ಹಾಗು ಆಶ್ಚರ್ಯಗಳು ಏಕ ಕಾಲಕ್ಕೆ ಆದವು. [illegible] ಗುಡಿಸಲು ಅದರಲ್ಲಿಯೇ ದನಕರು, ಕುರಿಕೋಳಿ, ಮಕ್ಕಳುಮರಿ ಎಲ್ಲರೂ [illegible]

[illegible] ಕ್ಕೆ ಬಂದಿದ್ದರು. ಶ್ರೀಯುತ ಕಾಮತರು "ಸರ್ವೋದಯ"ದ ಉಗಮ ಹಾಗು ನಮ್ಮ ಜಿಲ್ಲೆಯಲ್ಲಿ ನಡೆದ ಸರ್ವೋದಯ ಯೋಜನೆಯ ಕಾರ್ಯದ ಬಗ್ಗೆ ಕಿರಿಯ ಚಿಕ್ಕ ವಿದ್ಯಾರ್ಥಿನಿಗೂ ತಿಳಿಯುವಂತೆ ಸುಲಭವಾದ ಭಾಷೆಯಲ್ಲಿ ಒಂದೂವರೆ ತಾಸಿನ ವರೆಗೆ ಹೇಳಿದರು. ನಾವು ಇಲ್ಲಿಯ ತನಕ ಏನೋ ಸರ್ವೋದಯ ಯೋಜನೆಯೊಂದು ನಡೆದಿವೆಯೆಂದು ಅನ್ನುತ್ತಿದ್ದೆವು. ಇಂಗ್ಲಂಡದ ಇತಿಹಾಸ ಓದುವ, ಅಮೇರಿಕೆಯ ಭೂಗೋಲದ ಅಭ್ಯಾಸ ಮಾಡುವ ನಮ್ಮಲ್ಲಿ ಎಷ್ಟೋ ಹುಡಿಗೆಯರಿಗೆ ನಮ್ಮ ಜಿಲೆಯಲ್ಲಿಯೇ ನಡೆದ ಈ ಮಹತ್ವದ ಕಾರ್ಯದ ರೂಪರೇಷೆಗಳು ಕೂಡ ಗೊತ್ತಿರಲಿಲ್ಲ ಈಗ ಅದರ ಸ್ಪಷ್ಟ ಕಲ್ಪನೆಯಾಯಿತು. ಅಂದು ಆಟಪಾಟಗಳ ಮೇಲಾಟ ಹಾಗು ಶಿಬಿರಾಗ್ನಿ (Camp fire) ಯ ಕಾರ್ಯಕ್ರಮಗಳೂ ಒಳ್ಳೇ ಯಶಸ್ವಿಯಾದವು. ಮಕ್ಕಳ ಮನಸಿನಲ್ಲಿ ಹುದುಗಿಕೊಂಡ ಹಲವು ಕಲೆಗಳ ಸಂಕಲನವೇ ಆ ರಾತ್ರಿ ಬೆಳದಿಂಗಳಲ್ಲಿ ಬೆಳಗುತ್ತಿತ್ತು. ಪ್ರತಿಯೊಂದು ಮಗು ತನ್ನ ಕಲೆಯನ್ನು ಪ್ರದರ್ಶಿಸಲು ಹಾತೊರೆಯುತ್ತಿತ್ತು.

ಸೋಮವಾರ ದಿ. ೧೦-೧೨-೫೧ ನೇ ದಿನ ಶಿಬಿರದ ಎಲ್ಲ ಕಾರ್ಯಕ್ರಮದೊಂದಿಗೆ ನರಸಿಂಹಪೂರದಿಂದ ಮೂರು ಮೈಲು ದೂರಿರುವ ಯಮಕನಮರಡಿಯ ಅರಗಿನ ಬಣ್ಣದ ಪ್ರಯೋಗಶಾಲೆಗೆ ಭೆಟ್ಟಿ ಕೊಡುವದು. ನಾವೆಲ್ಲರು ಸರಿಯಾಗಿ ಎರಡು ಗಂಟೆಗೆ ಹೊರಟು ೩॥ ಗಂಟೆಗೆ ಶಾಲೆಗೆ ತಲುಪಿದೆವು. ಅದು ಸರಕಾರಿ ಶಾಲೆ ಇನ್ನೂ ಪ್ರಯೋಗಾವಸ್ಥೆಯಲ್ಲಿದೆ. ಚಿಕ್ಕ ಚಿಕ್ಕ ಹುಡುಗರು ಅಲ್ಲಿ ಕಟ್ಟಿಗೆಯ ಆಟಿಗೆಯ ಸಾಮಾನುಗಳನ್ನು ತಾವೇ ತಯಾರಿಸುತ್ತಿದ್ದರು. [illegible] ನಮ್ಮ ಕೆಲವರು ಜವನ್ನು ಕೊಂಡು ಕೊಳ್ಳಲಿಕ್ಕೆ ಹಾತೊರೆಯ ತೊಡಗಿದ್ದರು. ಅವರು ಸ್ವತಃ ತಯಾರಿಸಿದ್ದನ್ನು ತಾವು ಬೆಲೆ ಕೊಟ್ಟಾದರೂ ತಮ್ಮದನ್ನಾಗಿ ಮಾಡಿಕೊಳ್ಳಲು ಅವರ ಹವಣಿಕೆ ಹುಡುಗರು, ಅದರಲ್ಲಿ ಹೆಣ್ಣು ಹುಡಿಗಿಯರು ಅಂದಮೇಲೆ ಕೇಳುವದೇನು? ಆಟಿಗೆಗಳನ್ನು ಕೊಂಡು ತಿರುಗಿ ಬರುವಾಗ ತಮ್ಮ ಆಟವನ್ನು ಆರಂಭಿಸಿಯೇ ಬಿಟ್ಟರು.

ಅಂದು ಹತ್ತರಗಿಯ ಸಿದ್ದೇಶ್ವರ ಮಠದ ಹತ್ತಿರಿರುವ ಒಂದು ಚಿಕ್ಕ ಆಣೆಕಟ್ಟೆನ್ನು ನೋಡಿದೆವು. ಭೂಗೋಲನ್ನು ಕಲಿಯುವಾಗ ಗುರುಗಳು ಆಣೆಕಟ್ಟಿನ ಸಲುವಾಗಿ ಎಷ್ಟೇ ವರ್ಣಿಸಿದರೂ ಸರಿಯಾಗಿ ಬಾರದ ಕಲ್ಪನೆಯು ಅಂದು ಪ್ರತ್ಯಕ್ಷವಾಗಿ ನೋಡಿದ್ದರಿಂದ ಒಂದು ಕ್ಷಣದಲ್ಲಿಯೇ ಆಯಿತು. ಅಲ್ಲಿಯೇ ಬೆಳದಿಂಗಳೂಟವನ್ನು ಮುಗಿಸಿಕೊಂಡು ಹಾಡುತ್ತ, ನಗುತ್ತ ಕೆಲಿಯುತ್ತ ನಮ್ಮ ನಿವಾಸಸ್ಥಾನಕ್ಕೆ ಬಂದೆವು. ಸುಮಾರು ಏಳು ಮೈಲು ನಡೆದಿದ್ದರೂ ಒಬ್ಬರೂ ದಣಿಯದೆ ಕುಣಿಯುತ್ತ ಬಂದೆವು.

ಮಂಗಳವಾರ ದಿ. ೧೧-೧೨-೫೧ ಶಿಬಿರ ಸಮಾಪ್ತಿಯ ದಿನ. ಎಂದಿನಂತೆ ೫ ಗಂಟೆಗೆ ಪ್ರಾರ್ಥನೆ, ಶಾರೀರಿಕ ಶಿಕ್ಷಣ ಹಾಗು ನಾಷ್ಟಾ ಆದವು. ಅಂದು ಶಿಬಿರ [illegible] ಎಲ್ಲ ಗುಂಪಿನ ನಾಲ್ಕು ನಾಲ್ಕು ಹುಡಿಗೆಯರು ಕೂಡಿ ಅಡಿಗೆ ಮಾಡಿದೆವು. ಊಟವಾದಮೇಲೆ ಒಂದು ಗಂಟೆಗೆ ಸಮಾರೋಪ ಭಾಷಣ ಹಾಗು ಪಾರಿತೋಷಕ ಸಮಾರಂಭಕ್ಕಾಗಿ ನಾವೆಲ್ಲರು ಲಕ್ಷ್ಮಿ ಶಾಲೆಗೆ ಬಂದೆವು. ಸರ್ವೋದಯ ಯೋಜನೆಯ ಸಂಚಾಲಕರ ಶಿಬಿರವು ಪ್ರಾರಂಭವಾಗಿತ್ತು. ಉಪಸಂಚಾಲಕರ ಹಸ್ತದಿಂದ ಮುಕ್ತಾಯ ಗೊಂಡಿತು. ವಿವಿಧ ಕಾರ್ಯಕ್ರಮಗಳಲ್ಲಿ ಭಾಗ ವಹಿಸಿ ಯಶಸ್ವಿಯಾದ ವಿದ್ಯಾರ್ಥಿನಿಯರಿಗೆ ಶ್ರೀ. ಜಯದೇವರಾವ ಕುಲಕರ್ಣಿಯವರು ಪಾರಿತೋಷಕಗಳನ್ನು ಕೊಟ್ಟು ವಿದ್ಯಾರ್ಥಿನಿಯರ ಮನಸ್ಸನ್ನು ಹಿಡಿಯುವ ಅವರ ಮುಂದಿನ ಜೀವನದಲ್ಲಿ ಮಾರ್ಗದರ್ಶಿಯಾಗುವ ಕೆಲವು ಉಪದೇಶದ ಮಾತುಗಳನ್ನು ಹೇಳಿದರು. ಆ ಮೇಲೆ ನಮ್ಮ ಶಿಬಿರಾಧಿಪತಿಯಾದ ಶ್ರೀಯುತ ವ್ಹಿ. ಡಿ. ಜೋಶಿಯವರು ಆಭಾರ ಮನ್ನಿಸಿ ಕೇವಲ ಶಾಬ್ದಿಕ ಆಭಾರಮನ್ನಣೆಯಿಂದ ನಮ್ಮ ಕೆಲಸ ಮುಗಿಯಲಿಲ್ಲೆಂದೂ, ಸರ್ವೋದಯ ಯೋಜನೆಯ ಐದು ಕಾರ್ಯಕ್ರಮಗಳಲ್ಲಿ ಒಂದನ್ನಾದರೂ ನಾವು ನಮ್ಮ ನಿತ್ಯ ಜೀವನದಲ್ಲಿ ಆಚರಿಸಬೇಕೆಂದೂ ಹೇಳಿದರು. ಆಮೇಲೆ ಕು. ಪಾಳಪೇಕರ ಇವರು ಮರಾಠಿಯಲ್ಲಿ ಹೇಳಿದರು. ಕೆಲವು ವಿದ್ಯಾರ್ಥಿನಿಯರು ಈ ಮೂರು ದಿನದ ಶಿಬಿರದಲ್ಲಿಯ ತಮ್ಮ ಅನುಭವಗಳನ್ನು ಹೇಳುತ್ತ ಇಂಥ ಶಿಬಿರಗಳು ವರ್ಷಕ್ಕೊಂದು ಸಲವಾದರೂ ಜರುಗಬೇಕೆಂಬು ಬಯಸಿದರು. ಥೋಟೋದ ಕಾರ್ಯಕ್ರಮವಾಗಿ ಶಿಬಿರವು ಕೊನೆಗಂಡಿತು.

ಕು. ಕಮಲಾ ಜಯದೇವ ಕುಲಕರ್ಣಿ
ಶಿಬಿರದಲ್ಲಿಯ ಓರ್ವ ವಿದ್ಯಾರ್ಥಿನಿ.

ಸ್ಕೂಲಬೋರ್ಡಿಗೊಂದು ಮಾತು

ಕರವೀರ ಸ್ಟೇಟ ಪೈಕಿ ಗುಟಗುಂದಿ ಊರು ಬೇಡರ ವಸ್ತಿಯ ಗ್ರಾಮವು. ಇಲ್ಲಿ ಮರಾಠಿ ಶಾಲೆಯು ತಲೆತಲಾಂತರಗಳಿಂದಲೂ ನಡೆದು ಬಂದಿತ್ತು ಕನ್ನಡ ಶಾಲೆ ಆಗಬೇಕೆಂದು ಬಹುದಿನಗಳಿಂದಲು ಊರ ಜನರ ಬೇಡಿಕೆ ಇದ್ದೇ ಇತ್ತು ಇದೀಗ ಹದಿನೈದು ದಿನಗಳ ಪೂರ್ವದಲ್ಲಿ ಈ ಗ್ರಾಮದಲ್ಲಿ ಕನ್ನಡ ಶಾಲೆಯ ಸ್ಥಾಪನೆಯನ್ನು ಸ್ಕೂಲಬೋರ್ಡು ಮಾಡಿದೆಯೆಂದು ಕೇಳುತ್ತೇವೆ ಇದು ಆನಂದದ ಸಂಗತಿ

ಈ ಭಾಗದಲ್ಲಿ ಇನ್ನೆರಡು ಊರುಗಳಾದ ಹಗೆದಾಳ ಮತ್ತು ಶಿರೂರ ಇವುಗಳೂ ಕನ್ನಡ ಶಾಲೆಗಾಗಿ ಹಾತೊರೆದು ತಮ್ಮ ಆಶೆ ಆಕಾಂಕ್ಷೆ ತ್ಯಜಿಸಿಬಿಟ್ಟಂತಾಗಿವೆ. ಈ ಗ್ರಾಮಗಳಾದರೂ ಬೇಡರ ಜನವಸ್ತಿಯನ್ನು ಹೆಚ್ಚಾಗಿ ಪಡೆದಿವೆ. ಮರಾಠಿ ಭಾಷೆಯ ಗಂಧಕೂಡ ಇರದಲ್ಲಿ ಮರಾಠಿ ಶಾಲೆ ಮಾಡಿದ್ದಾದರೆ ಮಕ್ಕಳು ಎಷ್ಟರಮಟ್ಟಿಗೆ ಕಲಿಯುವತ್ತ ಲಕ್ಷ್ಯ ವಹಿಸಿಯಾವು?

ಈ ಊರುಗಳ ಜನರು ಮಾಸ್ತರರು ಎಷ್ಟೇ ಪ್ರಯತ್ನ ಪಟ್ಟಿರುವಾಗ್ಯೂ ಸ್ಕೂಲಬೋರ್ಡು ನಿದ್ರೆಯಲ್ಲಿರುವದು ಕಂಡು ಸೋಜಿಗವೆನಿಸುವದು. ಸ್ಕೂಲಬೋರ್ಡು ತನ್ನ ಕಾರ್ಯ ಕ್ಷೇತ್ರದಲ್ಲಿ ಇವೆರಡು ಗ್ರಾಮಗಳನ್ನು ಮರೆತು ಬಿಟ್ಟಿದೆಯೆಂಬ ಕೂಗು ಎದ್ದುದ್ದು ಕೇಳಿದ್ದೇವೆ. ಹಾಗೆ ಮಾಡದೆ ಸ್ಕೂಲಬೋರ್ಡು ಎಚ್ಚತ್ತು ಅಲ್ಲಿ ಕನ್ನಡ ಶಾಲೆಗಳನ್ನು ಸ್ಥಾಪಿಸಿ ಶೈಕ್ಷಣಿಕ ವಿಷಯಬಗ್ಗೆ ಮಕ್ಕಳಿಗೆ ಸದುಪಯೋಗವಾಗುವಂತೆ ಯೋಜಿಸಬೇಕು.

ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ

ಬಿ. ಕೆ. ಮಾಡೆಲ್ ಹಾಯಸ್ಕೂಲ ಬೆಳಗಾವಿ

ವಿದ್ಯಾರ್ಥಿನಿಯರ ಶಿಬಿರ ನರಸಿಂಹಪೂರ

[illegible]

[illegible] ಕ್ಯಾಪ್ಟನ್ ಲಕ್ಷ್ಮಿ, ಸರೋಜಿನಿ ನಾಯುಡು ಹಾಗು ಭಾರತಿ ಎಂದು ಹೆಸರಿಡಲಾಯಿತು.

ರವಿವಾರ ದಿ. ೯-೧೨-೫೧ ನೇ ದಿನ ಮುಂಜಾನೆ ೫ ಗಂಟೆಗೆ ಪ್ರಾರ್ಥನೆಯಿಂದ ಶಿಬಿರವು ಪ್ರಾರಂಭವಾಯಿತು. ಆಮೇಲೆ ಶಾರೀರಿಕಶಿಕ್ಷಣ ಹಾಗು ಧ್ವಜವಂದನೆಯಾದಮೇಲೆ ಕ್ಯಾ. ಲಕ್ಷ್ಮಿಗುಂಪು ಅಡಿಗೆ ಮೊದಲಾದ ಕೆಲಸದಲ್ಲಿ ತೊಡಗಿತು. ಸರೋಜಿನಿ ಹಾಗು ಭಾರತಿ ಈ ಎರಡು ಗುಂಪುಗಳು ನರಸಿಂಹಪೂರದಿಂದ ಒಂದು ಮೈಲಿನ ಮೇಲಿರುವ ಬೆನಕನಹೊಳಿಯ ಜನರ ಜೀವನ ನಿರೀಕ್ಷಣೆಗಾಗಿ ಹೋದವು. ಅಲ್ಲಿ ವಿಶೇಷವಾಗಿ ಹೆಣ್ಣುಮಕ್ಕಳ ಜೀವನ ಕ್ರಮವನ್ನು ನಿರೀಕ್ಷಿಸಲಾಯಿತು. ಆ ಹಳ್ಳಿಯಲ್ಲಿ ನಾವೆಲ್ಲರು ಮನೆಮನೆಗೆ ಹೋಗಿ ಮನೆಯ ಮುಖ್ಯಸ್ಥರ ಹೆಸರು, ಉದ್ಯೋಗ, ಗಳಿಕೆ ವೆಚ್ಚ ಕಲಿಯುತ್ತಿರುವ ಹುಡುಗರು ಆರೋಗ್ಯ ಹಾಗು ಸರ್ವೋದಯ ಯೋಜನೆಯಿಂದ ಆದ ಲಾಭಹಾನಿಗಳ ಬಗ್ಗೆ ಸಂಗತಿಗಳನ್ನು ಕೂಡಹಾಕಿದೆವು. ಪಟ್ಟಣದ ಶಾಲೆಯಲ್ಲಿ ಕಲಿಯುವ ನಮಗೆ ಅವರ ಜೀವನವನ್ನು ನೋಡಿ ಕನಿಕರ ಹಾಗು ಆಶ್ಚರ್ಯಗಳು ಏಕ ಕಾಲಕ್ಕೆ ಆದವು. [illegible] ಗುಡಿಸಲು ಅದರಲ್ಲಿಯೇ ದನಕರು, ಕುರಿಕೋಳಿ, ಮಕ್ಕಳುಮರಿ ಎಲ್ಲರೂ [illegible]

[illegible]

[illegible] ಸಂಚಾಲಕರಾದ ಶ್ರೀಯುತ ಶ್ರೀರಂಗ ಕಾಮತ ಮೊದಲಿನ ಬೌದ್ಧಿಕವಿದ್ದಿತು. ಇದೇ ದಿನ ನಮ್ಮ ಮುಖ್ಯಾಧ್ಯಾಪಕರು ಬಳಗದ ಹಲವು ಶಿಕ್ಷಕರು ನಮ್ಮ ಶಿಬಿರಕ್ಕೆ ಬಂದಿದ್ದರು. ಶ್ರೀಯುತ ಕಾಮತರು "ಸರ್ವೋದಯ" ದ ಉಗಮ ಹಾಗು ನಮ್ಮ ಜಿಲ್ಲೆಯಲ್ಲಿ ನಡೆದ ಸರ್ವೋದಯ ಯೋಜನೆಯ ಕಾರ್ಯದ ಬಗ್ಗೆ ತೀರ ಚಿಕ್ಕ ವಿದ್ಯಾರ್ಥಿನಿಗೂ ತಿಳಿಯುವಂತೆ ಸುಲಭವಾದ ಭಾಷೆಯಲ್ಲಿ ಒಂದೂವರೆ ತಾಸಿನ ವರೆಗೆ ಹೇಳಿದರು. ನಾವು ಇಲ್ಲಿಯ ತನಕ ಏನೋ ಸರ್ವೋದಯ ಯೋಜನೆಯೊಂದು ನಡೆದಿವೆಯೆಂದು ಅನ್ನುತ್ತಿದ್ದೆವು. ಇಂಗ್ಲಂಡದ ಇತಿಹಾಸ ಓದುವ, ಅಮೇರಿಕೆಯ ಭೂಗೋಲದ ಅಭ್ಯಾಸ ಮಾಡುವ ನಮ್ಮಲ್ಲಿ ಎಷ್ಟೋ ಹುಡಿಗೆಯರಿಗೆ ನಮ್ಮ ಜಿಲೆಯಲ್ಲಿಯೇ ನಡೆದ ಈ ಮಹತ್ವದ ಕಾರ್ಯದ ರೂಪರೇಷೆಗಳು ಕೂಡ ಗೊತ್ತಿರಲಿಲ್ಲ ಈಗ ಅದರ ಸ್ಪಷ್ಟ ಕಲ್ಪನೆಯಾಯಿತು. ಅಂದು ಆಟಪಾಟಗಳ ಮೇಲಾಟ ಹಾಗು ಶಿಬಿರಾಗ್ನಿ (Camp fire) ಯ ಕಾರ್ಯಕ್ರಮಗಳೂ ಒಳ್ಳೇ ಯಶಸ್ವಿಯಾದವು. ಮಕ್ಕಳ ಮನಸಿನಲ್ಲಿ ಹುದುಗಿಕೊಂಡ ಹಲವು ಕಲೆಗಳ ಸಂಕಲನವೇ ಆ ರಾತ್ರಿ ಬೆಳದಿಂಗಳಲ್ಲಿ ಬೆಳಗುತ್ತಿತ್ತು. ಪ್ರತಿಯೊಂದು ಮಗು ತನ್ನ ಕಲೆಯನ್ನು ಪ್ರದರ್ಶಿಸಲು ಹಾತೊರೆಯುತ್ತಿತ್ತು.

ಸೋಮವಾರ ದಿ. ೧೦-೧೨-೫೧ ನೇ ದಿನ ಶಿಬಿರದ ಎಲ್ಲ ಕಾರ್ಯಕ್ರಮದೊಂದಿಗೆ ನರಸಿಂಹಪುರದಿಂದ ಮೂರು ಮೈಲು ದೂರಿರುವ ಯಮಕನಮರಡಿಯ ಆರಗಿನ ಬಣ್ಣದ ಪ್ರಯೋಗಶಾಲೆಗೆ ಭೆಟ್ಟಿ ಕೊಡುವದು. ನಾವೆಲ್ಲರು ಸರಿಯಾಗಿ ಎರಡು ಗಂಟೆಗೆ ಹೊರಟು ೩॥ ಗಂಟೆಗೆ ಶಾಲೆಗೆ ತಲುಪಿದೆವು. ಅದು ಸರಕಾರಿ ಶಾಲೆ ಇನ್ನೂ ಪ್ರಯೋಗಾವಸ್ಥೆಯಲ್ಲಿದೆ. ಚಿಕ್ಕ ಚಿಕ್ಕ ಹುಡುಗರು ಅಲ್ಲಿ ಕಟ್ಟಿಗೆಯ ಆಟಿಗೆಯ ಸಾಮಾನುಗಳನ್ನು ತಾವೇ ತಯಾರಿಸುತ್ತಿದ್ದರು. ಅವುಗಳಿಗೆ ಬಣ್ಣ ಕೊಡುವ ಅವರ ಕೈ ಚಳಕವು ನೋಡುವದಾಗಿತ್ತು. [illegible] ಬೆರಗುಗೊಳಿಸಿದರು. ನಮ್ಮಲ್ಲಿ ಕೆಲವರು ಅವನ್ನು ಕೊಂಡು ಕೊಳ್ಳಲಿಕ್ಕೆ ಹಾತೊರೆಯ ತೊಡಗಿದ್ದರು. ಅವರು ಸ್ವತಃ ತಯಾರಿಸಿದ್ದನ್ನು ತಾವು ಬೆಲೆ ಕೊಟ್ಟಾದರೂ ತಮ್ಮದನ್ನಾಗಿ ಮಾಡಿಕೊಳ್ಳಲು ಅವರ ಹವಣಿಕೆ ಹುಡುಗರು, ಅದರಲ್ಲಿ ಹೆಣ್ಣುಹುಡಿಗಿಯರು ಅಂದಮೇಲೆ ಕೇಳುವದೇನು? ಆಟಿಗೆಗಳನ್ನು ಕೊಂಡು ತಿರುಗಿ ಬರುವಾಗ ತಮ್ಮ ಆಟವನ್ನು ಆರಂಭಿಸಿಯೇ ಬಿಟ್ಟರು.

ಅಂದು ಹತ್ತರಗಿಯ ಸಿದ್ದೇಶ್ವರ ಮಠದ ಹತ್ತಿರಿರುವ ಒಂದು ಚಿಕ್ಕ ಆಣೆಕಟ್ಟನ್ನು ನೋಡಿದೆವು. ಭೂಗೋಲನ್ನು ಕಲಿಯುವಾಗ ಗುರುಗಳು ಆಣೆಕಟ್ಟಿನ ಸಲುವಾಗಿ ಎಷ್ಟೇ ವರ್ಣಿಸಿದರೂ ಸರಿಯಾಗಿ ಬಾರದ ಕಲ್ಪನೆಯು ಅಂದು ಪ್ರತ್ಯಕ್ಷವಾಗಿ ನೋಡಿದ್ದರಿಂದ ಒಂದು ಕ್ಷಣದಲ್ಲಿಯೇ ಆಯಿತು. ಅಲ್ಲಿಯೇ ಬೆಳದಿಂಗಳೂಟವನ್ನು ಮುಗಿಸಿಕೊಂಡು ಹಾಡುತ್ತ, ನಗುತ್ತ ಕೆಲೆಯುತ್ತ ನಮ್ಮ ನಿವಾಸಸ್ಥಾನಕ್ಕೆ ಬಂದೆವು. ಸುಮಾರು ಏಳು ಮೈಲು ನಡೆದಿದ್ದರೂ ಒಬ್ಬರೂ ದಣಿಯದೆ ಕುಣಿಯುತ್ತ ಬಂದೆವು.

ಮಂಗಳವಾರ ದಿ. ೧೧-೧೨-೫೧ ಶಿಬಿರ ಸಮಾಪ್ತಿಯ ದಿನ. ಎಂದಿನಂತೆ ೫ ಗಂಟೆಗೆ ಪ್ರಾರ್ಥನೆ, ಶಾರೀರಿಕ ಶಿಕ್ಷಣ ಹಾಗು ನಾಸ್ತಾ ಆದವು. ಅಂದು ಸಿಹಿಯೂಟವಿತ್ತು. ಆ ದಿನ ಎಲ್ಲ ಗುಂಪಿನ ನಾಲ್ಕು ನಾಲ್ಕು ಹುಡಿಗೆಯರು ಕೂಡಿ ಅಡಿಗೆ ಮಾಡಿದೆವು. ಊಟವಾದಮೇಲೆ ಒಂದು ಗಂಟೆಗೆ ಸಮಾರೋಪ ಭಾಷಣ ಹಾಗು ಪಾರಿತೋಷಕ ಸಮಾರಂಭಕ್ಕಾಗಿ ನಾವೆಲ್ಲರು ಲೆಕ್ಚರ ಹಾಲಿಗೆ ಬಂದೆವು. ಸರ್ವೋದಯ ಯೋಜನೆಯ ಸಂಚಾಲಕರ ಶಿಬಿರವು ಪ್ರಾರಂಭವಾಗಿತ್ತು. ಉಪಸಂಚಾಲಕರ ಹಸ್ತದಿಂದ ಮುಕ್ತಾಯ ಗೊಂಡಿತು. ವಿವಿಧ ಕಾರ್ಯಕ್ರಮಗಳಲ್ಲಿ ಭಾಗ ವಹಿಸಿ ಯಶಸ್ವಿಯಾದ ವಿದ್ಯಾರ್ಥಿನಿಯರಿಗೆ ಶ್ರೀ. ಜಯದೇವರಾವ ಕುಲಕರ್ಣಿಯವರು ಪಾರಿತೋಷಕಗಳನ್ನು ಕೊಟ್ಟು ವಿದ್ಯಾರ್ಥಿನಿಯರ ಮನಸ್ಸನ್ನು ಹಿಡಿಯುವ ಅವರ ಮುಂದಿನ ಜೀವನದಲ್ಲಿ ಮಾರ್ಗದರ್ಶಿಯಾಗುವ ಕೆಲವು ಉಪದೇಶದ ಮಾತುಗಳನ್ನು ಹೇಳಿದರು. ಆ ಮೇಲೆ ನಮ್ಮ ಶಿಬಿರಾಧಿಕಾರಿಯಾದ ಶ್ರೀಯುತ ವ್ಹಿ. ಡಿ. ಜೋಶಿಯವರು ಆಭಾರ ಮನ್ನಿಸಿ ಕೇವಲ ಶಾಬ್ದಿಕ ಆಭಾರಮನ್ನಣೆಯಿಂದ ನಮ್ಮ ಕೆಲಸ ಮುಗಿಯಲಿಲ್ಲೆಂದೂ, ಸರ್ವೋದಯ ಯೋಜನೆಯ ಐದು ಕಾರ್ಯಕ್ರಮಗಳಲ್ಲಿ ಒಂದನ್ನಾದರೂ ನಾವು ನಮ್ಮ ನಿತ್ಯ ಜೀವನದಲ್ಲಿ ಆಚರಿಸಬೇಕೆಂದೂ ಹೇಳಿದರು. ಆಮೇಲೆ ಕು. ಪಾಳವೇಕರ ಇವರು ಮರಾಠಿಯಲ್ಲಿ ಹೇಳಿದರು ಕೆಲವು ವಿದ್ಯಾರ್ಥಿನಿಯರು ಈ ಮೂರು ದಿನದ ಶಿಬಿರದಲ್ಲಿಯ ತಮ್ಮ ಅನುಭವಗಳನ್ನು ಹೇಳುತ್ತ ಇಂಥ ಶಿಬಿರಗಳು ವರ್ಷಕ್ಕೊಂದು. ಸಲವಾದರೂ ಜರುಗಬೇಕೆಂಬ ಬಯಸಿದರು. ಫೋಟೋದ ಕಾರ್ಯಕ್ರಮವಾಗಿ ಶಿಬಿರವು ಕೊನೆಗಂಡಿತು.

ಕು. ಕಮಲಾ ಜಯದೇವ ಕುಲಕರ್ಣಿ
ಶಿಬಿರದಲ್ಲಿಯ ಓರ್ವ ವಿದ್ಯಾರ್ಥಿನಿ.

ಸ್ಕೂಲಬೋರ್ಡಿಗೊಂದು ಮಾತು

ಕರವೀರ ಸ್ಟೇಟ ಪೈಕಿ ಗುಟಗುಂದಿ ಊರು ಬೇಡರ ವಸ್ತಿಯ ಗ್ರಾಮವು. ಇಲ್ಲಿ ಮರಾಠಿ ಶಾಲೆಯು ತಲೆತಲಾಂತರಗಳಿಂದಲೂ ನಡೆದು ಬಂದಿತ್ತು ಕನ್ನಡ ಶಾಲೆ ಆಗಬೇಕೆಂದು ಬಹುದಿನಗಳಿಂದಲು ಊರ ಜನರ ಬೇಡಿಕೆ ಇದ್ದೇ ಇತ್ತು ಇದೀಗ ಹದಿನೈದು ದಿನಗಳ ಪೂರ್ವದಲ್ಲಿ ಈ ಗ್ರಾಮದಲ್ಲಿ ಕನ್ನಡ ಶಾಲೆಯ ಸ್ಥಾಪನೆಯನ್ನು ಸ್ಕೂಲಬೋರ್ಡ ಮಾಡಿದೆಯೆಂದು ಕೇಳುತ್ತೇವೆ ಇದು ಆನಂದದ ಸಂಗತಿ

ಈ ಭಾಗದಲ್ಲಿ ಇನ್ನೆರಡು ಊರುಗಳಾದ ಹಗೆದಾಳ ಮತ್ತು ಶಿರೂರ ಇವುಗಳೂ ಕನ್ನಡ ಶಾಲೆಗಾಗಿ ಹಾತೊರೆದು ತಮ್ಮ ಆಶೆ ಆಕಾಂಕ್ಷೆ ತ್ಯಜಿಸಿಬಿಟ್ಟಂತಾಗಿವೆ. ಈ ಗ್ರಾಮಗಳಾದರೂ ಬೇಡರ ಜನವಸ್ತಿಯನ್ನು ಹೆಚ್ಚಾಗಿಪಡೆದಿವೆ. ಮರಾಠಿ ಭಾಷೆಯ ಗಂಧಕೂಡವಿರದಲ್ಲಿ ಮರಾಠಿ ಶಾಲೆ ಮಾಡಿದ್ದಾದರೆ ಮಕ್ಕಳುಎಷ್ಟರಮಟ್ಟಿಗೆ ಕಲಿಯುವತ್ತ ಆಸ್ಥೆ ವಹಿಸಿಯಾವು?

ಈ ಊರುಗಳ ಜನರು ಮಾಸ್ತರರು ಎಷ್ಟೇ ಪ್ರಯತ್ನ ಪಟ್ಟಿರುವಾಗ್ಯೂ ಸ್ಕೂಲಬೋರ್ಡ ನಿದ್ರೆಯಲ್ಲಿರುವದು ಕಂಡು ಸೋಜಿಗವೆನಿಸುವದು. ಸ್ಕೂಲಬೋರ್ಡ ತನ್ನ ಕಾರ್ಯ ಕ್ಷೇತ್ರದಲ್ಲಿ ಇವೆರಡು ಗ್ರಾಮಗಳನ್ನು ಮರೆತು ಬಿಟ್ಟಿದೆಯೆಂಬ ಕೂಗು ಎದ್ದದ್ದು ಕೇಳಿದ್ದೇವೆ. ಹಾಗೆ ಮಾಡದೆ ಸ್ಕೂಲಬೋರ್ಡ ಎಚ್ಚತ್ತು ಅಲ್ಲಿ ಕನ್ನಡ ಶಾಲೆಗಳನ್ನು ಸ್ಥಾಪಿಸಿ ಶೈಕ್ಷಣಿಕ ವಿಷಯಬಗ್ಗೆ ಮಕ್ಕಳಿಗೆ ಸದುಪಯೋಗವಾಗುವಂತೆ ಯೋಜಿಸಬೇಕು.

CHITRAGUPTA

ಚಿತ್ರಗುಪ್ತ

ಭಾನುವಾರ 25, ಮೇ '52



ವಿದ್ಯಾವರ್ಧಕ ಸಂಘ
(3೧)
ಧಾರವಾಡ.



ಸಂಪುಟ ೩
ಸಂಚಿಕೆ ೪

ಕರ್ನಾಟಕ ಏಕೀಕರಣ ಆಗಬೇಕು

ಯಾವೊಂದು ದೃಷ್ಟಿಯಿಂದಲೇ ಆಗಲಿ ಅತ್ಯಾವಶ್ಯಕವೆಂದು ಡಾ. ನಂದೀಮಠ್‌ರವರ ಅಭಿಪ್ರಾಯ

ಬೆಲೆ 2 ಆಣೆ

ಚಿತ್ರಗುಪ್ತ

ಜನಪ್ರಿಯ ವಾರಪತ್ರಿಕೆ

ಭಾನುವಾರ, ೨೫ ಮೇ ೧೯೫೨

ಸಂಪುಟ ೪ ಸಂಚಿಕೆ ೪

[illegible]

[illegible]

ವಾಚಕರಲ್ಲಿ ವಿನಂತಿ

ಪತ್ರಿಕೆಯಲ್ಲಿ ಕಂಡು ಬರಬಹುದಾದ ಲೋಪದೋಷಗಳು, ಜನಪ್ರಿಯವಾಗಿರುವ ವಿಭಾಗಗಳು, ಇನ್ನೂ ಅಪೇಕ್ಷಿಸುವ ವಿಭಾಗಗಳು ಇತ್ಯಾದಿಗಳ ಬಗ್ಗೆ ವಾಚಕರು ಸಂಪಾದಕರಿಗೆ ಪತ್ರ ಬರೆದು ಸಹಕರಿಸುವುವಾದರೆ ತುಂಬಾ ಉಪಕಾರವಾಗುವುದು.

ಲೇಖಕರಿಗೆ ಸೂಚನೆ

ಒಮ್ಮೆ ಪ್ರಕಟವಾಗಿರುವ ಲೇಖನಗಳನ್ನು "ಚಿತ್ರಗುಪ್ತ" ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ. ಪ್ರಕಟಣೆಗೆ ಲೇಖನವನ್ನು ಕಳುಹಿಸುವವರು ತಮ್ಮಲ್ಲಿ ದ್ವಿಪ್ರತಿಯನ್ನಿಟ್ಟುಕೊಂಡು ಕಳುಹಿಸಬೇಕು.

ಚಂದಾ ವಿವರ

ಒಂದು ವರ್ಷಕ್ಕೆ	ರೂ. ೬—೦—೦
ಅಂಚೆ ಮೂಲಕ	ರೂ. ೬—೧೨—೦
೬ ತಿಂಗಳಿಗೆ	ರೂ. ೩—೮—೦
ಅಂಚೆ ಮೂಲಕ	ರೂ. ೪—೦—೦

ಜಾಹಿರಾತು ದರ

ವಾಣಿಜ್ಯ	ಕಾಲಂ ಇಂಚ್ ಒಕ್ಕೆ
[illegible]	ರೂ. ೨—೮—೦
ಕಂಟ್ರ್ಯಾಕ್ಟ್	ರೂ. ೨—೦—೦

[ಹೆಚ್ಚಿನ ವಿವರಗಳಿಗೆ ಬರೆದುಕೇಳಿ]

ಅಂದಿನ ಒಂದು ನೆನಪು

—ಶ್ರೀ ಪಂಚ, ಚನ್ನಗಿರಿ

ಮಹಮದ್ ಬಿನ್ ತೊಗಲಕ್‌ನ ಐಲು - ನಮಗೂ ಅಂಟಿತು!

ಮಹಮದ್ ಬಿನ್ ತೊಗಲಕ್ [illegible]

[illegible]

ನಾನು, ಮೂರ್ತಿ, ರಾಜ, ಶಿವು [illegible] ಒಂದೇ ಮನೆಯಲ್ಲಿದ್ದೆವು. ನಮ್ಮ ಮನೆ [illegible] ಕಾಲದ ಒಂದು ಕಲ್ಲು ಬಿದ್ದಿತ್ತು. ಅದರ ಮೇಲೆ ಯಾವುದೋ ಆಕೃತಿಯನ್ನು ಕೆತ್ತಿದ್ದ ಹಾಗೆ ಕಾಣಿಸ್ತಾ ಇತ್ತು. ಆ ಕಲ್ಲು ಯಾವ ಕಾಲದಿಂದ ಅಲ್ಲಿತ್ತೋ ಏನೋ. ನಾವು ಆ ಮನೆಯನ್ನು ಬಾಡಿಗೆಗೆ ತಕೊಂಡಾಗಲೂ ಅಲ್ಲಿತ್ತು. ಕೆಲವು ತಿಂಗಳು ಆ ಮನೆಯಲ್ಲಿದ್ದರೂ ಕಲ್ಲಿನ ಹತ್ತಿರ ಹೋಗಿ, ಅದಾವ ಕಲ್ಲು, ಅದು ಎಷ್ಟುದ್ದ ಇದೆ, ಎಷ್ಟಗಲ ಇದೆ, ಎಷ್ಟ್ದಪ್ಪ ಇದೆ, ಏಕೆ ಅನ್ನೋದನ್ನ ಯಾರೊಬ್ಬರೂ ನೋಡಿರಲಿಲ್ಲ.

ಒಂದು ದಿನ ಮೂರ್ತಿ ಯಾತಕ್ಕೋ ಅದರ ಹತ್ತಿರ ಹೋದ. ಕಲ್ಲನ್ನೆಲ್ಲಾ ಸರಿಯಾಗಿ ನೋಡಿದ. ಅಳತೆ ಮಾಡಿ ನೋಡಿದ. ಅಲ್ಲಾಡಿಸಿ ನೋಡಿದ. ನನಗ ಇವನ್ಯಾಕೆ ಇಷ್ಟು ಪರೀಕ್ಷೆ ಮಾಡಿ ಆ ಕಲ್ಲ ನೋಡ್ತಿದಾನೆಂಬ ಕುತೂಹಲ ಬಂದು,

"ಯಾಕೋ ಮೂರ್ತಿ, ಕಲ್ಲ ಅಷ್ಟು ಪರೀಕ್ಷೆ ಮಾಡ್ತೀಯ" ಅಂತ ಕೇಳಿದೆ.

"ಈ ಕಲ್ಲು ಮನೆ ಮುಂದ್ಗಡೆ ಮೆಟ್ಟಲಿಗೆ ಬಹಳ ಚನ್ನಾಗಾಗುತ್ತೆ. ಅಲ್ಲಿಗಿಡೋಣ" ಅಂದ, ಮೂರ್ತಿ.

"ಅದ್ಯಾಕೆ ಬಿಡಪ್ಪಾ. ಅದು ಮೇಲೆ ಯಾವುದೋ ದೇವರ್ದ್ದೋ ಏನೊ ಕೆತ್ತಿರೋ ಹಾಗಿದೆ. ಅದನ್ಯಾಕೆ ಕಾಲಲ್ಲಿ ತುಳೀಬೇಕು."

"ಅಯ್ಯೋ ದೇವರು! 'ನೀರ ಕಂಡಲ್ಲಿ ಮುಳುಗುವರಯ್ಯಾ ಮರನ ಕಂಡಲ್ಲಿ ಸುತ್ತುವರಯ್ಯಾ' ಹಂಗಾತು ನೋಡು ನಿನಾದೊ ಮಾತು."

ಅಷ್ಟರಲ್ಲಿ ರಾಜ, ಶಿವು ಅಲ್ಲಿಗೆ ಬಂದರು. ರಾಜ ಸಂಗತಿ ತಿಳಿದು ಕಲ್ಲನ್ನು ಮೆಟ್ಟಲಿಗೆ ಹಾಕಲು "ಹು" ಅಂದ. ಶಿವು ಕೂಡ "ಹೂ" ಅಂದ. ನಾನೊಬ್ಬ ಯಾಕ್ಬೇಡ ಅನ್ನಲಿ ಅಂತ ನಾನೂ "ಹೂ" ಅಂದೆ.

ಕಲ್ಲು ಬಹಳ ಭಾರವಾಗಿಯೇ ಇತ್ತು. [illegible] "ಶೂರರು ನಾವು, ಧೀರರು ನಾವು, ಹುಲಿಗಳು ನಾವು" ಎಂದು [illegible]

[illegible]

"ಯಾರ್ರೀ ಒಳಗೇದೋರು" ಅಂದರು ಗಡುಸು ಧ್ವನಿಯಿಂದ.

ಕೊನೆಗೆ ಎಲ್ಲರೂ ಹೊರಗಡೆ ಬಂದೆವು. ನಾವು ಬರುತ್ತಿದ್ದ ಹಾಗೆಯೇ "ಏನ್ರಿ, ನಿಮಗೆ ಯಾರ್ರೀ ಹೇಳಿದರು. ಆ ಕಲ್ಲನ್ನ ಇಲ್ಲಿಗೆ ತಂದ್ಹಾಕಿ ಅಂತ. ನಮ್ಮಪ್ಪನ ಕಾಲದಿಂದ ಆ ಕಲ್ಲನ್ನು ವರ್ಷಕ್ಕೊಂದು ಸಾರಿ ಪೂಜೆ ಮಾಡ್ತಾ ಇದೀವಿ. ಅದ್ಯಾವುದೋ ದೇವರು ಅಂತ ನಾನು ಪೂಜೆ ಮಾಡಿಸ್ತಾ ಇದೀನಿ. ಆ ದೇವರ್ನ ಕಾಲಲ್ಲಿ ತುಳಿತಾರೇನ್ರಿ, ನಿಮಗೆ ಬುದ್ಧಿ ಗಿದ್ಧಿ ಇಲ್ಲವೇನ್ರೀ. ದೇವರು ದಿಂಡ್ರು ಅಂತ ಸ್ವಲ್ಪವಾದ್ರೂ ಭಯಭಕ್ತಿ ಬೇಡವೇನು ನಿಮಗೆ ತಗೆದಿದ್ರಿ ಕಲ್ಲು, ಮೊದಲೆಲ್ಲಿತ್ತೋ ಅಲ್ಲಿಗೇ" ಎಂದು ಗುಡು ಗುಡು ಗುಡುಗಿ ಭರ ಭರ ವಾಪಸು ಹೋಗೇಬಿಟ್ರು.

ನಾವು ಒಬ್ಬರ ಮುಖ ಒಬ್ಬರು ನೋಡಿಕೊಂಡೆವು "ಶೂರರು ನಾವು, ಧೀರರು ನಾವು, ಹುಲಿಗಳು ನಾವು" ಎಂದಿದವರು ಇಲಿಯ ಹಾಗಾಗಿದ್ದರು. ನನಗೆ ಅವರ ಮುಖ ನೋಡಿ ನಗು ಬಂದರೂ ಬಹಳ ಕಷ್ಟದಿಂದ ತಡೆದುಕೊಂಡು "ಬನ್ನಿ ಮಾರಾಯ್ರಾ, ಬನ್ನಿ ಎತ್ತಿ ಇಡೋಣ" ಅಂದೆ. ಪುನಃ ಎಲ್ಲರೂ ಸೇರಿ ಎತ್ತಿಕೊಂಡು ಹೋಗಿ ಆ ಕಲ್ಲು ಮೊದಲು ಎಲ್ಲಿತ್ತೋ ಅಲ್ಲಿಗಿಟ್ಟೆವು. ಪಾಪ ಪರಿಹಾರವಾಗಲಿ ಅಂತ ಬಗ್ಗಿ ಬಗ್ಗಿ ನಮಸ್ಕಾರ ಮಾಡಿದೆವು. "ನೀರು ಕಂಡಲ್ಲಿ ಮುಳುಗುವರಯ್ಯ ...." ಅಂದವರೂ ಕೂಡ ಬಗ್ಗಿ ಸಲಾಮು ಮಾಡಿದರು ಕಲ್ಲಿಗೆ.

ಅದುವರೆಗೆ ಯಾರೂ ಮಾತಾಡ್ಲೇ ಇಲ್ಲ. ಮೌನವಾಗಿಯೇ ಇದ್ದರು. ಆ ಮೇಲೆ ನಾನು "ಮಹಮ್ಮದ್ ಬಿನ್ ತೊಗಲಕ್ ಮಾಡ್ದಂಗಾಯಿತು" ಅಂದೆ. ಆಗ ಹಿಹಿಹಿ ಅಂತ ಎಲ್ಲರೂ ನಕ್ಕರು. ಶಿವು "ಆ ತೊಗಲಕ್‌ನಂತಹ ಐಲು ಜನ ಈಗಲೂ ನಮ್ಮಲ್ಲಿದ್ದಾರೆ, ಅನ್ನಲಿಕ್ಕೆ ಇದೇ [illegible] ಅಂದಕೂಡಲೆ ಇನ್ನೂ ಜೋರಾಗಿ [illegible] ಅಂತ ನಕ್ಕೆವು. ಆದರೆ ಮೂರ್ತಿ ಯಾಕೋ ಏನೋ ನಗಲೇ ಇಲ್ಲ.

ಕಾವ್ಯೋದ್ಯಾನ

ಚೂತವಾಯ್ತು "ಸ್ವಾರ್ಥ - ಬಿತ್ತು"

ಬಳಲಿರ್ದೆ; ತಂಪ ಬಯಸುತ ಹೋದೆನೊಂದು ಕೊಳಕೆ :
    ನೆಲದ ಉಸಿರೇ ಅಲ್ಲಿ ಹಸುರಾಗಿ ಉಣ್ಮಿತ್ತು
    ತೆಂಗು ಗರಿಗಳ ನಿನದ ರಾಗ ಮಿಡಿಯುತಲಿತ್ತು
ನೈದಿಲೆಯ ನಗುತಿತ್ತು ಕೊಳದ ಜೇನೆದೆ ತುಳುಕಿ.
ಕಂಪುಗುವ ಕಾನನದ ಮಲ್ಲಿಗೆಯ ಚೆಲು–ವಲ್ಲಿ
    ಬಂಬಲಾಗಿಯೆ ಸುಳಿವ ಆರಡಿಯ ಕರಿಯ ಬಳ್ಳಿ
    ತಂಪುಗುವ ತಳಿರ ಹೊತ್ತಾಡುತಿಹ ಚೂತವಲ್ಲಿ.
ಬಯಸಿ ಹಾಸಿದೆ ತನುವ ಹಸುರು ತಲ್ಪದೊಳಲ್ಲಿ.
ಕೊಳದ ನೈದಿಲೆಯೆನ್ನ ಎದೆಯ ಕೊರಳಿಗೆ ಗಾನ.
    ಸುಳಿವ ತಂಗಾಳಿಯೊಳೆ ಅಮೃತ ಸುಖ ಒಲಿದುಂಡೆ
    ಪಾರ್ದೆ ನಿಲ್ಲವು ನಾನು ಸ್ವಾರ್ಥದಲಿ ಏನೊಂದ
"ಎದೆಯ ಚೇತನಕಿನಿತು ಸಾಕು ತಂಪಿನ ಪವನ"
    ಇರಲಿಂತುಟೆರಿಯರರಿ ಯೆನಗೆ ಮಾಂಬಳವಿತ್ತು
    ಚೂತವಾಯಿತು ನನ್ನ ಎದೆಗೆ ಸ್ವಾರ್ಥದ ಬಿತ್ತು.

—"ಮರುಳುಸಿದ್ಧ"
ಫಿಲೋಮಿನಾ ಕಾಲೇಜು, ಮೈಸೂರು.

★ ಮೈಸೂರಿನ ತಾವರೆ ಸಂಸ್ಥೆಯವರು ಏರ್ಪಡಿಸಿದ್ದ ಅಂತರ್ ಕಾಲೇಜು ಕವಿತಾ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪಡೆದಿದೆ.

ಕನ್ನಡ ಭಾಷೆ ಮತ್ತು ಸಾಹಿತ್ಯ

ಕಳೆದ ವಾರ ಬೆಳಗಾವಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷ ಡಾ॥ ನಂದೀಮಠ್‌ರವರು [illegible] ಭಾಷಣದಿಂದ ಕನ್ನಡ ಸಾಹಿತ್ಯದ ಹಿರಿಮೆ ಹಾಗೂ [illegible] ಭಾಗವನ್ನು ಆರಿಸಿ ಇಲ್ಲಿ ಪ್ರಕಟಿಸಲಾಗಿದೆ. ಇದೇ ವಿಚಾರ [illegible] ಡಾ॥ ನಂದೀಮಠ್‌ರವರು [illegible] ಕರ್ನಾಟಕ ಏಕೀಕರಣದ ಅಗತ್ಯವನ್ನು [illegible] ಕನ್ನಡಿಗರನ್ನು ಎಚ್ಚರಿಸು[illegible]

ಮೂವತ್ತೈದನೆಯ ಕನ್ನಡ ಸಾಹಿತ್ಯ ಸಮ್ಮೇಳನ

[illegible]

[illegible]

[illegible]

ಧ[illegible]-
ಯುಲ್ಲಸದೋನ್ !
[illegible] ನೆರೆಯುತ್ಕರ್ಷ-
ಮನಿಂದ್ಯಗುಣನ್॥
ಪ್ರಣಯಿ ಜನಕ್ಕೆ ಕಾಮನಸಿತೋತ್ಪ-
ಲವರ್ಣ್ಣನವನ್ ।
ಗುಣಮಧುರಾಜ್ಞ ದಿವ್ಯಪುರುಷ ಪ್ರವರನ್॥
ಸುರಚಾಪಂ ಬೋಲೆ ವಿದ್ಯುಲ್ಲತೆಗಳ ತೆಳವೋ-
-ಲ್ ಮಂಜುವೋಲ್ ತೋಳಬೇಗಂ ।
ಪಿರಿಗುಂ ಶ್ರೀರೂಪ ಲೀಲಾಧನ ವಿಭವ
ಮಹಾರಾಶಿಗಳ್ ನಿಲ್ಲವಾರ್ಗ್ಗಂ॥
ಪರಮಾರ್ತ್ಥಂ ಮೆಚ್ಚೆನಾನೀ ಧರಿಣಿಯುಳಿರವಾ-
ನೆಂದು ಸನ್ಯಾಸನಂಗೆ ।
ಯ್ದುರು ಸತ್ವನ್ ನನ್ದಿಸೇನ ಪ್ರವರ
ಮುನಿವರನ್ ದೇವ ಲೋಕಕ್ಕೆ ಸನ್ದಾನ್॥
(ಶ್ರ. ಬೆ. ಶಾ. ನಂ. ೮೮)
ಮಾಸೇನರ್ ಪರಮ ಪ್ರಭಾವ ಋಷಿಯರ್
ಕಳ್ಬಪ್ಪಿನಾಪೆಟ್ಟದುಳ್ ।
ಶ್ರೀ ಸಂಗಂಗಳ ಪೇಳ್ದ ಸಿದ್ಧ ಸಮಯಂ
ತಪ್ಪಾದೆ ನೋಂತ್ಸಿದ್ಧಿಸಿನ್ ।
ಪ್ರಾಸಾದಾನ್ತರ ಮಾನ್ ವಿಚಿತ್ರ ಕನಕ
[illegible]ದಿನ್ ಮಿಕ್ಕುದಾನ್ ।
ಸಾಸಿರ್ವ್ವರ್ ಪರ ಪೂಜೆವನ್ನುಯೆ ಅವರ್
ಸ್ವರ್ಗ್ಗಾಗ್ರಮಾನೇ ಏದಾರ್ ।
(ಶ್ರ. ಬೆ. ಶಾ. ನಂ. ೨೭)

ಇಂತಹ ಸುಂದರವಾದ ಪದ್ಯಗಳು ಆ ಕಾಲದ ಶಾಸನಗಳಲ್ಲಿ ಹೇರಳವಾಗಿ ದೊರೆಯುವುವು. ಆ ಕಾಲದ ಕನ್ನಡ ನುಡಿಯ ಪ್ರೌಢಾವಸ್ಥೆಗೆ ಇವು ಕನ್ನಡಿಯಾಗಿವೆ.

ಬಾದಾಮಿಯ ಮಂಗಳೀಶನ ಶಾಸನ ಮತ್ತು ಹಲ್ಮಿಡಿಯ ಶಾಸನ ಇವು ಕನ್ನಡದ ಪ್ರಾಚೀನತೆಯನ್ನು ನೂರಿನ್ನೂರು ವರ್ಷ ಹಿಂದೆ ಒಯ್ಯುತ್ತವೆ. ಕೇ[illegible]

[illegible]

[illegible] ಸಾಹಿತ್ಯ

[illegible] ಚಂಪೂ ಕಾವ್ಯಗಳನ್ನು ಬರೆದ ಪಂಪ, ರನ್ನ, ನಾಗಚಂದ್ರ—ಈ ಕವಿಗಳು ಮಹಾಭಾರತ, ರಾಮಾಯಣಗಳನ್ನು ಜೈನ ಸಂಪ್ರದಾಯಕ್ಕನುಸರಿಸಿ ವೈದಿಕ ಮತದಿಂದ ಭಿನ್ನವಾಗುವಂತೆ ಬರೆದಿರುವರು. ಪಂಪ ರನ್ನರ ದುರ್ಯೋಧನ, ನಾಗಚಂದ್ರನ ರಾವಣ ಈ ಪಾತ್ರಗಳನ್ನು ಪರಿಶೀಲಿಸಿದರೆ ಈ ಮಾತಿನ ಸತ್ಯತೆ ಮನವರಿಕೆಯಾಗದಿರದು.

ಬಸವಯುಗದಲ್ಲಿ ಅಂದರೆ ೧೨ನೆಯ ಶತಮಾನದಲ್ಲಿ ತಲೆದೋರಿದ ವಚನ ಸಾಹಿತ್ಯಕ್ಕೆ ವಿಶ್ವಸಾಹಿತ್ಯದಲ್ಲಿಯೇ ಶಾಶ್ವತವಾದ ಸ್ಥಾನವಿದೆಯೆಂದು ಹೇಳಬಹುದು. ಇದು ಸತ್ಯ ಶರಣರ ಅನುಭವ ಸಾಹಿತ್ಯ. ಧರ್ಮ, ತತ್ವಜ್ಞಾನ, ಸಮಾಜ ರಚನೆ ಮೊದಲಾದ ವಿಷಯಗಳಲ್ಲಿ ವಚನಕಾರರು ಹೊಸ ಬೆಳಕನ್ನು ಕಂಡು, ಆ ಅನುಭವವನ್ನು ಲೋಕೋಪಕಾರಕ್ಕಾಗಿ ತಿಳಿಗನ್ನಡದಲ್ಲಿ ನುಡಿದು, ನುಡಿದಂತೆ ನಡೆದು ತೋರಿಸಿದರು. ಅಂತೆಯೇ ಅವರ ಸಂದೇಶ ಅಮರವಾದುದು; ಸಾಹಿತ್ಯ ಶ್ರೇಷ್ಠವಾದುದು. ಈ ವಚನ ವಾಙ್ಮಯದ ಪ್ರಭಾವ ಮುಂದಿನ ಕನ್ನಡ ಸಾಹಿತ್ಯದಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ.

ಕನ್ನಡ ಕಾವ್ಯ ಪ್ರಪಂಚದಲ್ಲಿ ಕ್ರಾಂತಿಯನ್ನೆಸಗಿದ ಕವಿಗಳೆಂದರೆ ಹರಿಹರ,ರಾಘವಾಂಕ ಮೊದಲಾದವರು.ಇವರು ಕಾವ್ಯದ ವಸ್ತು ರೂಪಗಳಲ್ಲಿ ಹೊಸ ಹಾದಿಯನ್ನು ಕಂಡು ಹಿಡಿದರು. ಅವರ ಕಾವ್ಯ ಧ್ಯೇಯ ರಾಘವಾಂಕನು ಹೇಳುವಂತೆ,

[illegible]

[illegible]

ರಾಜಾಶ್ರಯದಲ್ಲಿ ಕನ್ನಡ ಸಾಹಿತ್ಯದ ಬೆಳವಣಿಗೆ

ಕನ್ನಡ ಸಾಹಿತ್ಯದ [illegible] ಈ ಶತಮಾನದಲ್ಲಿ [illegible] ಪ್ರೋತ್ಸಾಹದಿಂದ ಕನ್ನಡ ಸಾಹಿತ್ಯವು ನಾನಾ ಮುಖವಾಗಿ ಬೆಳೆಯಿತು. ಚಾಮರಸ ಕುಮಾರವ್ಯಾಸಾದಿ ಕವಿಗಳೂ, ನೂರೊಂದು ವಿರಕ್ತರೂ, ತೋಂಟದ ಸಿದ್ಧಲಿಂಗ, ನಿಜಗುಣ ಶಿವಯೋಗಿಗಳಂತಹ ಯತಿಗಳೂ, ವ್ಯಾಸರಾಯ, ಶ್ರೀಪಾದರಾಯ, ಪುರಂದರದಾಸ, ಕನಕದಾಸರಂತಹ ದಾಸಕೂಟದವರೂ ೧೫–೧೭ನೆಯ ಶತಮಾನಗಳಲ್ಲಿ ಬಾಳಿ ಕನ್ನಡ ಸಾಹಿತ್ಯಕ್ಕೆ ಅಪಾರ ಸೇವೆ ಸಲ್ಲಿಸಿರುವರು.

ಷಡಕ್ಷರದೇವ, ಲಕ್ಷ್ಮೀಶ, ಸರ್ವಜ್ಞರೇ ಮೊದಲಾದ ಕವಿಗಳು ಕನ್ನಡ ಸಾಹಿತ್ಯ ನಭೋಮಂಡಲದಲ್ಲಿ ಬೆಳಗುವ ತೇಜಃಪುಂಜ ತಾರೆಗಳಂತಿರುವರು. ೧೭ನೆಯ ಶತಮಾನದಲ್ಲಿ ಕನ್ನಡ ಸಾಹಿತ್ಯಕ್ಕೆ ಆಶ್ರಯ ಕೊಟ್ಟವರೆಂದರೆ ಮೈಸೂರು ದೊರೆ ಚಿಕ್ಕದೇವರಾಜರು. ಶ್ರೀ ವೈಷ್ಣವ ಮತದ ಕವಿಗಳಿಗೆ ಆಶ್ರಯವಿತ್ತು, ಈ ದೊರೆ ಕನ್ನಡದಲ್ಲಿ ಅವರ ಸಾಹಿತ್ಯ ಉಳಿಯುವಂತೆ ಮಾಡಿರುವರು. ೧೯ನೆಯ ಶತಮಾನದಲ್ಲಿ ನಂದಳಿಕೆ ಲಕ್ಷ್ಮೀನಾರಣಪ್ಪ, ಬಸವಪ್ಪ ಶಾಸ್ತ್ರಿಗಳಂತಹ ಪ್ರತಿಭಾಶಾಲಿಗಳು ಉದಿಸಿ ಕನ್ನಡ ಸಾಹಿತ್ಯವಾಹಿನಿಯನ್ನು ಮುಂದುವರಿಸಿದರು.

ಪಾಶ್ಚಾತ್ಯರಿಂದಾದ ಪ್ರಭಾವ

೨೦ನೆಯ ಶತಮಾನದಲ್ಲಿ ಪಾಶ್ಚಾತ್ಯರ ಸಂಪರ್ಕದಿಂದ ಕನ್ನಡ ಸಾಹಿತ್ಯದ ಸ್ವರೂಪವು ಬಹಳವಾಗಿ ಬದಲಾಯಿತು. ಆಂಗ್ಲ ಭಾಷೆಯಲ್ಲಿ ವಿದ್ಯಾಪ್ರಸಾರವಾಗತೊಡಗಿದಂದಿನಿಂದ ಜನರ ಆಚಾರ ವಿಚಾರಗಳು ಬದಲಾಗತೊಡಗಿದುವು. ಆಂಗ್ಲ ವಿದ್ಯಾವಂತರಾದ ಉತ್ಸಾಹಿ ಬಂಗಾಲಿ ತರುಣರು ತಮ್ಮ ಮಾತೃಭಾಷೆಯಲ್ಲಿ ಹೊಸಬಗೆಯ ಸಾಹಿತ್ಯವನ್ನು ನಿರ್ಮಿಸಹತ್ತಿದರು. ಅವರ ಅನುಕರಣವನ್ನು ಉಳಿದ ಪ್ರಾಂತದವರೂ ಮಾಡಲಾರಂಭಿಸಿದರು. ಪ್ರತಿಭಾಶಾಲಿಗಳಾದ ಕ್ರಿಶ್ಚಿಯನ್ ಧರ್ಮೋಪದೇಶಕರು ದೇಶಿಯ ಭಾಷೆಗಳನ್ನೂ ಅವುಗಳ ಸಾಹಿತ್ಯವನ್ನೂ ಅಭ್ಯಸಿಸಿ ಅವುಗಳ ಬಗೆಗೆ ವಿಮರ್ಶಾತ್ಮಕ ಲೇಖನ, ಗ್ರಂಥಗಳನ್ನು ಪ್ರಕಟಿಸಿದರು. ಇದರಿಂದ ದೇಶೀಯ ಭಾಷೆಗಳಿಗೆ ಪ್ರೋತ್ಸಾಹ ದೊರೆಯಿತು. ಕನ್ನಡದ ಮೇಲೆಯೂ ಈ ಪ್ರಭಾವ ಸಾಕಷ್ಟಾಯಿತು. ಮೊದಮೊದಲು ಬಂಗಾಲಿ, ಮರಾಠಿ ಭಾಷೆಗಳಲ್ಲಿ ಪ್ರಖ್ಯಾತರಾದ ಸಾಹಿತಿಗಳ ಕೃತಿಗಳನ್ನು ಕನ್ನಡಕ್ಕೆ ಪರಿವರ್ತಿಸುವ ಕಾರ್ಯ ನಡೆಯಿತು. ಆ ಮೇಲೆ ಸಾಹಿತ್ಯದ ವಿವಿಧ ರೂಪಗಳಲ್ಲಿ ಸ್ವತಂತ್ರ ಗ್ರಂಥಗಳು ಹೊರಬೀಳಹತ್ತಿದುವು. ಆಧುನಿಕ ಸಾಹಿತ್ಯದ ಮುಖ್ಯ ಅಂಗಗಳಾದ ಕವನ, ಕಥೆ, ನಾಟಕ, ಕಾದಂಬರಿ, ವಿಮರ್ಶೆ ಮೊದಲಾದುವುಗಳಲ್ಲಿ ಕೆಲಮಟ್ಟಿಗೆ ಪ್ರಗತಿಯಾಗಿದೆ. ಇನ್ನೂ ಆಗಬೇಕಾದುದು ಬಹಳವಿದೆ.

ಕರ್ನಾಟಕ ಏಕೀಕರಣ

ಸ್ವಾತಂತ್ರ್ಯ ದೊರೆಯುವುದಕ್ಕಿಂತ ಮೊದಲು ಕನ್ನಡನಾಡು ಸುಮಾರು ೨೦ ಆಡಳಿತಗಳಿಗೆ ಒಳಪಟ್ಟಿದ್ದಿತು. ಈಗ ಮುಂಬಯಿ, ಮದ್ರಾಸ್, ಹೈದರಾಬಾದ್ ಕೊಡಗು, ಮೈಸೂರು—ಹೀಗೆ ೫ ಆಡಳಿತಗಳಿಗೆ ಒಳಪಟ್ಟಿದೆ.

ಬಹುಕಾಲದಿಂದಲೂ ಗೋವಾ ಪ್ರಾಂತವು ಕನ್ನಡನಾಡಿನ ಅಂಗವಾಗಿದೆ. ಕದಂಬರು, ಚಾಲುಕ್ಯರು, ವಿಜಯನಗರದವರೇ ಮೊದಲಾದ ಕನ್ನಡ ಅರಸುಮನೆತನದವರು ಇಲ್ಲಿ ರಾಜ್ಯವಾಳಿರುವರು. ಆಗ ಅಲ್ಲಿಯ ಜನರ ಭಾಷೆ ಕನ್ನಡವೇ ಆಗಿದ್ದಿತು. ಅಲ್ಲಿಯ ಶಿಲಾ ಲಿಪಿಗಳು, ಪುರಾತನ ಗ್ರಂಥಗಳು, ಸಾರಸ್ವತ ಬ್ರಾಹ್ಮಣರ ಕುಲದೇವತೆಗಳ ದೇವಾಲಯಗಳಲ್ಲಿ ಇಟ್ಟ ೪–೫ ನೂರು ವರ್ಷಗಳ ಹಿಂದಿನ ಲೆಕ್ಕಪತ್ರಗಳು—ಇವೆಲ್ಲ ಕನ್ನಡ ಭಾಷೆ, ಕನ್ನಡ ಲಿಪಿಗಳಲ್ಲಿವೆ. ಮೊನ್ನೆ ಮೊನ್ನೆಯವರೆಗೆ ಕೊಂಕಣಿ ಭಾಷೆಯ ಲಿಪಿಯು ಕನ್ನಡವೇ ಆಗಿದ್ದಿತು. ಈಗಲೂ ಗೋವೆಯಲ್ಲಿ ಕನ್ನಡ ಮಾತನಾಡುವವರ ಸಂಖ್ಯೆ ಸಾಕಷ್ಟಿರುವುದು. ಆದುದರಿಂದ ಗೋವೆಯು ಕನ್ನಡನಾಡಿನ ಭಾಗವೆಂದು ತಿಳಿಯಲು ಅಭ್ಯಂತರವಿಲ್ಲ. ಐತಿಹಾಸಿಕ, ಭಾಗೋಲಿಕ ದೃಷ್ಟಿಯಿಂದ ಪರಿಶೀಲಿಸಿದರೆ ಇದರ ಸತ್ಯಾಂಶವು ಒಡೆದು ಕಾಣುವುದು.

ಇವೆಲ್ಲ ಕನ್ನಡ ಪ್ರದೇಶಗಳನ್ನೂ ಒಟ್ಟುಗೂಡಿಸಿದರೆ ಅದರ ಕ್ಷೇತ್ರ ೭೪, ೫೦೦ ಚೌರಸ ಮೈಲಾಗುವುದು. ಜನಸಂಖ್ಯೆ ಸುಮಾರು ೨ ಕೋಟಿಯಾಗುವುದು. ಇಂತಹ ವಿಸ್ತೃತ ಪ್ರದೇಶವನ್ನು ಒಂದುಗೂಡಿಸಿ ಆಡಳಿತೆಯ ಮತ್ತು ಸಾಂಸ್ಕೃತಿಕ ಸೌಕರ್ಯವನ್ನುಂಟುಮಾಡಿ ಕೊಡುವುದು ತೀರ ಅಗತ್ಯವಾಗಿದೆ. ಸ್ವಲ್ಪ ದಿವಸಗಳ

(೧೦ನೇ ಪುಟ ನೋಡಿ)

ಅಮೃತವಾಣಿ

ಅರ್ಧ ಜ್ಞಾನದಿಂದ ಮನುಷ್ಯ ನಾಸ್ತಿಕನಾಗುತ್ತಾನೆ. ಅಧಿಕ ಜ್ಞಾನವು ಅವನನ್ನು ಪುನಃ ಆಸ್ತಿಕತೆಯ ಕಡೆಗೆ ಒಯ್ಯುತ್ತದೆ! —ಬೇಕನ್

ಚಿತ್ರಗುಪ್ತ

[illegible]

[illegible]

[illegible]

[illegible] ನೋಡಿಕೊಳ್ಳುವ ಹೊಣೆಗಾರಿಕೆ ಸರ್ಕಾರದು. ಹಿಂದೆ ಕಲೆ ಸಾಹಿತ್ಯ ಇವುಗಳಿಗೆ ರಾಜಾಶ್ರಯವಿತ್ತು. ನಾವಿಂದು ಬಾಳುತ್ತಿರುವುದು ಪ್ರಜಾ ರಾಜ್ಯದಲ್ಲಿ, ರಾಜಾಶ್ರಯದಲ್ಲಲ್ಲ. ಅಂದಮೇಲೆ ರಾಜರ ಮೇಲೆ ಇದ್ದ ಒಂದು ಹೊಣೆಗಾರಿಕೆ ಇಂದು ಪ್ರಜಾ ಸರ್ಕಾರಕ್ಕೆ ವರ್ಗವಾಗಿದೆ. ಈ ಹೊಣೆಗಾರಿಕೆಯನ್ನು ಆದಷ್ಟು ದಕ್ಷ ರೀತಿಯಲ್ಲಿ ನಿರ್ವಹಿಸುವುದಕ್ಕಾಗಿ ಒಂದು ತಕ್ಕ ವ್ಯವಸ್ಥೆಯಾಗಬೇಕಾದ ಅಗತ್ಯವಿದೆ.

ಕೇಂದ್ರ ಸರ್ಕಾರ ಮೊನ್ನೆ ಮೊನ್ನೆ ನಾಡ ಹಿರಿಯ ಸಂಗೀತಗಾರರನ್ನು ಗೌರವಿಸುವ ಯೋಗ್ಯ ಕಾರ್ಯ ಮಾಡಿತು. ಮದರಾಸು ಸರ್ಕಾರವಂತೂ ಸಾಹಿತಿಗಳು ಮತ್ತು ಸಂಗೀತಗಾರರನ್ನು ಗೌರವಿಸುವ ಕಾರ್ಯದಲ್ಲಿ ಈ ಮೊದಲೇ ಇತರರಿಗೆ ಮಾದರಿಯಾಗಿದೆ. ಮದರಾಸ್ ಸರ್ಕಾರ ನಮ್ಮ ಕನ್ನಡ ಕವಿ ಗೋವಿಂದ ಪೈಯವರನ್ನು ರಾಷ್ಟ್ರಕವಿಯೆಂದು ಕರೆದು ಗೌರವಿಸಿತು. ಕಲೆ, ಸಾಹಿತ್ಯ ಇವುಗಳಿಗೆ ತವರೂರೆನಿಸಿಕೊಂಡಿದ್ದ ಮೈಸೂರಿನಲ್ಲಿ ಇಂದು ಇವುಗಳಿಗೆ ಸಾಕಷ್ಟು ಪ್ರೋತ್ಸಾಹವಿಲ್ಲದೆ ಹೋಗಿದೆ. ಶ್ರೀ ಹನುಮಂತಯ್ಯನವರ ಮಂತ್ರಿ ಮಂಡಲ ಅಧಿಕಾರಕ್ಕೆ ಬಂದಮೇಲಾದರೂ ಈ ವಿಷಯದತ್ತ ಗಮನ ಕೊಡಲು ನಿರ್ಧರಿಸಿರುವುದು ಸ್ವಾಗತಾರ್ಹ. ಸಾಹಿತಿಗಳು, ಕಲಾವಿದರು, ಸಂಗೀತಗಾರರು, ಕಲಾಪೂರ್ಣ ಗುಡಿಕೈಗಾರಿಕೆಗಳಿಗೆ ಆಧಾರ ಸ್ತಂಭಗಳಂತಿರುವ ಕುಟುಂಬಗಳು-ಇವರೇ ಮೊದಲಾದವರ ಸ್ಥಿತಿಗತಿಗಳನ್ನು ಸುಧಾರಿಸುವ ಹಾಗೂ ಅವರನ್ನು ಗೌರವಿಸುವ ಕಾರ್ಯಕ್ಕೆ ಮೈಸೂರಿನ ಆಳಿತ ವರ್ಗ ಎಷ್ಟು ಬೇಗ ಕೈಹಾಕುತ್ತದೋ ಅಷ್ಟು ಒಳ್ಳೆಯದು. ಇದರಿಂದ ಮೈಸೂರು ಮೊದಲೇ ಮಾಡಬೇಕಿದ್ದ ಕಾರ್ಯವನ್ನು ಈಗಲಾದರೂ ಮಾಡಿದಂತಾಗುವುದು.

ದಿವಂಗತ ಸರ್ ಟಿ. ತಂಬೂಚೆಟ್ಟಿ

[illegible]

[illegible]

ಸರ್ ತಂಬೂಚೆಟ್ಟಿಯವರ ಮರಣ ಕಾಲದಲ್ಲಿ ಅವರ ಪತ್ನಿ [illegible] ಲೇಡಿ ತಂಬೂಚೆಟ್ಟಿಯವರೂ ಮತ್ತು [illegible] ಸಂಬಂಧಿಗಳೂ ಹತ್ತಿರದಲ್ಲೇ ಇದ್ದರೆಂದೂ ಹೇಳಲಾಗಿದೆ.

ಸರ್ ತಂಬೂಚೆಟ್ಟಿಯವರಿಗೆ ಗಂಡು ಮಕ್ಕಳಿಲ್ಲ. ಇಬ್ಬರು ಹೆಣ್ಣುಮಕ್ಕಳಿದ್ದಾರೆ. ಒಬ್ಬರು ಪ್ರಖ್ಯಾತ ಪಿಟೀಲು ವಾದನಕಾರರಾದ ಫಿಲೋಮಿನಾ ತಂಬೂಚೆಟ್ಟಿಯವರು.

ಜೀವನ ಪರಿಚಯ

ಸರ್ ತಂಬೂಚೆಟ್ಟಿಯವರು ದಿವಂಗತ ಶ್ರೀ ವಾಣೀವಿಲಾಸ ಸನ್ನಿಧಾನದವರ ರೀಜೆನ್ಸಿ ಕಾಲದಲ್ಲಿ ಮತ್ತು ಸರ್ ಕೆ. ಶೇಷಾದ್ರಿಐಯರ್‌ರವರ ದಿವಾನಗಿರಿಯಲ್ಲಿ ಮಂತ್ರಿಮಂಡಳದ ಸದಸ್ಯರಾಗಿದ್ದ ಮತ್ತು ಸಂಸ್ಥಾನದ ಚೀಫ್ ಜಸ್ಟಿಸರೂ ಆಗಿದ್ದ ಶ್ರೀ ಟಿ. ಆರ್. ಎ. ತಂಬೂಚೆಟ್ಟರ ಪುತ್ರರು. ಅವರು ೧೮೭೭ರ ಆಗಸ್ಟ್‌ನಲ್ಲಿ ಜನಿಸಿದರು. ಸರ್ ತಂಬೂಚೆಟ್ಟರನ್ನು ನಾಲ್ವಡಿ ಕೃಷ್ಣರಾಜ ಒಡೆಯರವರು ೧೯೦೪ರಲ್ಲಿ ಮೈಸೂರು ಸಿವಿಲ್ ಸರ್ವಿಸಿಗೆ ನಾಮಕರಣ ಮಾಡಿದ್ದರು. ಅವರು ೧೯೦೪ರ ನವೆಂಬರ್ ೧೬ರಲ್ಲಿ ಸೆಕ್ರೆಟೇರಿಯಟ್‌ನಲ್ಲಿ ಪ್ರೊಬೇಷನರ್ ಅಸಿಸ್ಟೆಂಟ್ ಕಮಿಷನರಾಗಿ ಸೇರಿದರು. ೧೯೦೫ರ ಏಪ್ರಿಲ್ ೧೪ರಿಂದ ಚಿತ್ರದುರ್ಗದ ಟ್ರೆಜರಿ ಚಾರ್ಜನ್ನು ವಹಿಸಿ, ೧೯೦೫ರ ಜೂನ್ ೨೬ರಲ್ಲಿ ಬೆಂಗಳೂರಿಗೆ [illegible]

ಅರಮನೆಯಲ್ಲಿ ಸೇವೆ

[illegible] ಶ್ರೀಮನ್ಮಹಾರಾಜರವರ ಸೇವೆ ಮಾಡಿದ್ದಾರೆ. ೧೯೪೦ರ ಮಾರ್ಚಿ ೩ರಿಂದ ಶ್ರೀಮನ್ಮಹಾರಾಜರ ಆಪ್ತ ಕಾರ್ಯದರ್ಶಿಯಾಗಿ ಸೇವೆ ಮಾಡುತ್ತಿದ್ದು ೧೯೪೮ರ ಮಾರ್ಚಿ ತಿಂಗಳಲ್ಲಿ ಕೆಲಸದಿಂದ ನಿವೃತ್ತರಾದರು.

ಯೂರೋಪಿನಲ್ಲಿ ಪ್ರವಾಸ

ದಿವಂಗತ ತಂಬೂಚೆಟ್ಟಿಯವರು ಎರಡು ಬಾರಿ ಐರೋಪ್ಯ ಪ್ರವಾಸ ಮಾಡಿದ್ದಾರೆ. ಒಂದು ಬಾರಿ ತಮ್ಮ ಪತ್ನಿ ಮತ್ತು ಪುತ್ರಿಯೊಡನೆಯೂ ಎರಡನೆ ಬಾರಿ ೧೯೩೬ರಲ್ಲಿ ದಿವಂಗತ ಶ್ರೀಮನ್ಮಹಾರಾಜರವರೊಡನೆಯೂ ಯೂರೋಪಿನಲ್ಲಿ ಪ್ರವಾಸ ಮಾಡಿದ್ದರು.

ದಿವಂಗತ ತಂಬೂಚೆಟ್ಟರು ಪ್ರಮುಖ ಕ್ಯಾಥಲಿಕ್‌ರಾಗಿದ್ದು ವಿಶೇಷ ಪೂಜ್ಯತೆಯನ್ನು ಪಡೆದಿದ್ದರು. ಮೃತರ ನಿಧನದಿಂದ ಆಗಿರುವ ಅಪಾರ ನಷ್ಟವನ್ನೂ ದುಃಖವನ್ನೂ ಭರಿಸುವ ಶಕ್ತಿಯನ್ನು ಲೇಡಿ ತಂಬೂಚೆಟ್ಟರಿಗೂ ಇತರ ಬಂಧುವರ್ಗದವರಿಗೂ ಭಗವಂತನು ಕರುಣಿಸಲೆಂದೂ ಮೃತರ ಆತ್ಮಕ್ಕೆ ಶಾಂತಿ ದೊರಕಲೆಂದೂ ಪ್ರಾರ್ಥಿಸುತ್ತೇವೆ.

ವೀರರತ್ನ ನಂ. 1.
ಸಮುದ್ರ ವಿಧದ ಧಾತು ನಷ್ಟದಿಂದ ಉಂಟಾಗುವ ಭಯಂಕರ ವ್ಯಾಧಿಗಳಿಗೆಲ್ಲಾ [illegible] ವೀರರತ್ನ ನಂ. 2:- [illegible]
ವೀರರತ್ನ ಫಾರ್ಮಸಿ,
Z-118. ಗ್ರೈನ್ ಬಜಾರ್
ನ್ಯೂ ಮಾರ್ಕೆಟ್, :: ಬೆಂಗಳೂರು ಸಿಟಿ.

ಬರ್ನಾರ್ಡ್‌ಷ ರವರ ಭಾರಿ ಸೋ

ಮಾರ್ಕ್‌ಟ್ವೇನ್ ಅಮೇರಿಕದ ಸುಪ್ರಸಿದ್ಧ ಸಾಹಿತಿ. ಒಮ್ಮೆ ಲಂಡನ್ನಿನ ಹೈಡ್ ಪಾರ್ಕಿನಲ್ಲಿ ಒಂದು ಭಾರಿ ಸಮಾರಂಭನೇರ್ಪಟ್ಟಿದ್ದಿತು. ಈ ಸಮಾರಂಭದಲ್ಲಿ ಭಾಷಣ ಮಾಡಲು ಹಿರಿಯ ಸಾಹಿತಿ ಮಾರ್ಕ್‌ಟ್ವೇನ್ ಮತ್ತು ತರುಣಸಾಹಿತಿ ಬರ್ನಾರ್ಡ್‌ಷಾ ಇಬ್ಬರೂ ಆಹ್ವಾನಿತರಾಗಿದ್ದರು. ಮಾರ್ಕ್‌ಟ್ವೇನ್ ಮೊದಲು ಭಾಷಣ ಮಾಡಿದರು. ಒಂದೆರಡು ಗಂಟೆ ಕಾಲ ಭಾಷಣ ನಡೆಯಿತು. ಅವರ ತರುವಾಯ ಭಾಷಣ ಮಾಡಲು ಷಾ ವೇದಿಕೆಗೆ ಬಂದರು. ಟ್ವೇನ್ ತಮ್ಮ ಭಾಷಣ ಕೇಳಬೇಕು, ತನ್ನನ್ನು ವಿಮರ್ಶಿಸುವಂತಹ ಒಬ್ಬ ಸಾಹಿತಿ ಇದ್ದಾನೆಂಬುದನ್ನು ಅವರ ತಿಳಿಯುವಂತೆ ಮಾಡಬೇಕೆಂಬುದು ಷಾರವರ ತೀವ್ರಾಕಾಂಕ್ಷೆಯಾಗಿತ್ತು. ಆದರೆ ಷಾ ತಮ್ಮ ಭಾಷಣವನ್ನು ಆರಂಭಿಸುವ ಸಮಯಕ್ಕೆ ಸರಿಯಾಗಿ ಮಾರ್ಕ್ ಟ್ವೇನ್ ತಮ್ಮ ಕಾರಿನಲ್ಲಿ ಕುಳಿತು ಹೋಗುತ್ತಿದ್ದುದು ಕಂಡುಬಂತು. ಷಾರವಂಗೆ ತುಂಬಾ ನಿರಾಶೆಯಾಯಿತು.

ಹದಿನೈದು ಇಪ್ಪತ್ತು ವರ್ಷಗಳ ತರುವಾಯ ಷಾರವಂಗೆ ಮತ್ತೊಂದು ಅವಕಾಶ ಲಭಿಸಿತು. ಈ ಸಲ ಮಾರ್ಕ್‌ಟ್ವೇನ್ ಭಾಷಣಕ್ಕೆ ಮೊದಲೇ ತಾವು ಭಾಷಣ ಮಾಡಿಬಿಡಬೇಕೆಂದು ಅವರು [illegible] ಕೊಂಡರು. ಅವರ ಇಚ್ಛೆಯಂತೆಯೇ ಮೊದಲು ಭಾಷಣ ಮಾಡುವ ಅವಕಾಶ ಅವರಿಗೇ ಲಭಿಸಿತು. ಇದರಿಂದ ಸುಪ್ರೀತರಾದ ಷಾ ತಮ್ಮ ಭಾಷಣವನ್ನು ವಿಶೇಷ ಆಸಕ್ತಿಯಿಂದ ಮಾಡಿದರು. ಭಾಷಣ ಮುಗಿದಮೇಲೆ ಏನನ್ನೋ ಸಾಧಿಸಿದವರಂತೆ ತುಂಬು ಅಭಿಮಾನದಿಂದ ಟ್ವೇನ್‌ರವರ ಬಳಿಗೆ ಬಂದು "ನನ್ನ ಭಾಷಣ ಹೇಗೆ ಹಿಡಿಸಿತು" ಎಂದು ಕೇಳಿದರು. ಆದರೆ ೧೫-೨೦ ವರ್ಷಗಳಿಂದ ಮಾರ್ಕ್ ಟ್ವೇನ್ ನಡೆಸಿದ್ದ ಸತತ ಸಾಹಿತ್ಯ ಸೇವೆಯ ಪ್ರತಿಫಲವಾಗಿಯೋ ಏನೋ, ಅವರು ಸಂಪೂರ್ಣ ಕಿವುಡರಾಗಿಹೋಗಿದ್ದರು. ಷಾರವರ ಭಾಷಣದ ಒಂದು ವಾಕ್ಯವನ್ನೂ ಅವರು ಕೇಳಲು ಆಗಿರಲಿಲ್ಲ. ಷಾರವರಿಗೆ ಇದರಿಂದಾದ ನಿರಾಶೆ ಅಷ್ಟಿಷ್ಟಲ್ಲ. ಅವರು ತಮ್ಮ ಜೀವನ ಪರ್ಯಂತ ಅದನ್ನು ಮರೆಯಲಾಗಲಿಲ್ಲ.

ಮುಫತ್ತಾಗಿ ಕಣ್ಣುಗಳನ್ನು
ಪರೀಕ್ಷಿಸಲಾಗುತ್ತೆ
ನವೀನ ಮಾದರಿಯ
ಕನ್ನಡಕಗಳನ್ನು
ನಿಮ್ಮ ದೃಷ್ಟಿಗೆ ಒಗ್ಗುವಂತೆ ತಯಾರಿಸಿ
ಸಂಬರಾಜು ಮಾಡಲಾಗುತ್ತೆ.
ಬೆಂಗಳೂರು
ಸ್ಪೆಕ್ಟ್ಸ್ ಹೌಸ್,
492, ಅವೆನ್ಯೂರೋಡ್,
ಬೆಂಗಳೂರು-2.
R. O. 1145 ads

ಸೋವಿಯೆಟ್ ರಷ್ಯಾದಲ್ಲಿ

ಮಾಸ್ಕೋ ಆರ್ಥಿಕ ಸಮ್ಮೇಳನದಲ್ಲಿ ಭಾಗವಹಿಸಲು ಸೋವಿಯೆಟ್ ರಷ್ಯಾದೇಶಕ್ಕೆ ತೆರಳಿದ್ದ ಡಾ. ಜೆ. ಸಿ. ಕುಮಾರಪ್ಪನವರು ಅಲ್ಲಿ ಕಂಡ ನೂತನ ಸಮಾಜದ ಕುರಿತಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಜೆ. ಸಿ. ಕುಮಾರಪ್ಪನವರು ಈ ಹಿಂದೆ ಚೀನಾ ದೇಶಕ್ಕೆ ಭೇಟಿ ಇತ್ತು ಅಲ್ಲಿ ಹೇಗೆ ಸರ್ವೋದಯ ಸಮಾಜದ ರಚನೆಯಾಗುತ್ತಿದೆಯೆಂಬುದನ್ನು ಕಂಡುಕೊಂಡು ಬಂದರು. ಮತ್ತು ಅದನ್ನು ಪ್ರಾಮಾಣಿಕತೆಯಿಂದ ತಮ್ಮ ಜನರಿಗೆ ವಿವರಿಸಿದರು. ಇದೀಗ ಅವರು ರಷ್ಯಾ ದೇಶಕ್ಕೆ ಹೋಗಿ ಬಂದು ಅಲ್ಲಿಯ ಒಂದು ಉನ್ನತ ಮಟ್ಟದ ಸಮಾಜ ಜೀವನವನ್ನು ವಿವರಿಸತೊಡಗಿದ್ದಾರೆ. ಪಾಶ್ಚಾತ್ಯ ರಾಷ್ಟ್ರಗಳು ಸೋವಿಯೆಟ್ ರಷ್ಯಾದ ಬಗ್ಗೆ ಸಾಕಷ್ಟು ಅಪಪ್ರಚಾರ ಮಾಡಿವೆಯೆಂಬುದು ಕುಮಾರಪ್ಪನವರ ಅಭಿಪ್ರಾಯಗಳಿಂದ ವ್ಯಕ್ತವಾಗುತ್ತದೆ.

ಡಾ. ಕುಮಾರಪ್ಪ ಮಹಾತ್ಮಾ ಗಾಂಧಿಯವರ ಧ್ಯೇಯಪೂರ್ಣ ಅನುಯಾಯಿಗಳಲ್ಲೊಬ್ಬರು. ಮತ್ತು ಗಾಂಧೀಜಿಯವರ ತತ್ವಗಳ ಆಧಾರದ ಮೇಲೆ ಆದರ್ಶ ಸರ್ವೋದಯ ಸಮಾಜವನ್ನು ಕಟ್ಟಬೇಕೆನ್ನುವ ಆರ್ಥಿಕ-ಪ್ರವೀಣರು. ಅಂತೆಯೇ ಇವರ ಅಭಿಪ್ರಾಯಗಳು ಗಮನಾರ್ಹವಾಗಿದೆ.

ಬೊಂಬಾಯಿಯ ಬ್ಲಿಟ್ಸ್ ಪತ್ರಿಕೆ ಸಂಪಾದಕರು ತಮ್ಮ ಓದುಗರಿಂದ ಸೋವಿಯೆಟ್ ರಷ್ಯಾದ ಕುರಿತಾಗಿ ಬಂದಿದ್ದ ಹಲವು ಪ್ರಾತಿನಿಧಿಕ ಪ್ರಶ್ನೆಗಳನ್ನು ಡಾ. ಕುಮಾರಪ್ಪನವರಲ್ಲಿಗೆ ಕಳುಹಿಸಿದ್ದರು. ಅವುಗಳಿಗೆ ಶ್ರೀಯುತರು ಇತ್ತಿರುವ ಉತ್ತರಗಳನ್ನು ಕಳೆದ ವಾರ ಬ್ಲಿಟ್ಸ್ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ. ಅವುಗಳ ಪೈಕಿ ಕೆಲವನ್ನು ಆರಿಸಿ ಇಲ್ಲಿ ಪ್ರಕಟಿಸಲಾಗಿದೆ—ಸಂ.

ಜೆ. ಸಿ. ಕುಮಾರಪ್ಪನವರು ಕಂಡದ್ದೇನು ?

[illegible]

[illegible] ಅಮೆರಿಕಕ್ಕೆ ಹೆಚ್ಚಿನ ಆಸಕ್ತಿ ಇರುವುದು ಯುದ್ಧಕ್ಕೆ ಸಂಬಂಧಿಸಿ.

‘ಕಬ್ಬಿಣದ ತೆರೆ’

ರಷ್ಯಾದಲ್ಲಿ “ಕಬ್ಬಿಣದ ತೆರೆ” ಏನಾದರೂ ಉಂಟೆ ?

ಅದು ದೃಷ್ಟಿ ಕೋನದ ಮೇಲೆ ಅವಲಂಬಿಸಿದೆ. ಸಿಂಹ ಮತ್ತು ಕುರಿಮರಿಗಳ ಮಧ್ಯೆ ಕಬ್ಬಿಣದ ಸರಳುಗಳಿದ್ದರೆ, ಸಿಂಹ ಆಕ್ಷೇಪಿಸಬಹುದು, ಆದರೆ ಕುರಿಮರಿಗೆ ರಕ್ಷಣೆ ಸಿಗುವುದು. ಅಮೆರಿಕ ಮತ್ತು ಬ್ರಿಟಿಷ್ ಸಿಂಹಗಳನ್ನು ತಮ್ಮ ದೇಶದಿಂದ ಹೊರಗಿಟ್ಟು ರಷ್ಯಾ ನಿಜಕ್ಕೂ ಒಳ್ಳೆಯ ಕೆಲಸವನ್ನು ಮಾಡಿದೆ. ಪಾಶ್ಚಾತ್ಯ ಸಿಂಹಗಳನ್ನು ನಮ್ಮ ದೇಶದಿಂದ ದೂರವಿಡಲು ಭಾರತಕ್ಕೂ ಇಂಥ ಒಂದು ತೆರೆ ಬೇಕಾಗಿದೆ. ಸೋವಿಯಟ್ ಯೂನಿಯನು, ಸಾಹಸದ ಕ್ರಾಂತಿಕಾರಕವಾದ ಸಾಮಾಜಿಕ-ಆರ್ಥಿಕ ಪ್ರಯೋಗಗಳನ್ನು ಮಾಡುತ್ತಿದೆ. ಹೀಗಿರುತ್ತ ಪಾಶ್ಚಾತ್ಯ ಸುಲಿಗೆಗಾರರ ಧಾಳಿಗಳಿಂದ ತನ್ನನ್ನು ರಕ್ಷಿಸಿಕೊಳ್ಳಲು ಸೋವಿಯಟ್ ಯೂನಿಯನ್ ಬೇಲಿಕಟ್ಟುವುದು ನ್ಯಾಯವಾಗಿದೆ.

ಸಂಪಾದನೆಯ ವ್ಯತ್ಯಾಸ

ಸೋವಿಯಟ್ ಯೂನಿಯನ್‌ನಲ್ಲಿ ವೇತನಗಳಲ್ಲಿರುವ ವ್ಯತ್ಯಾಸವೆಷ್ಟು ?

[illegible]

[illegible] ಅವಶ್ಯಕ ಸಾಮಗ್ರಿಗಳು ಹೇರಳವಾಗಿ ದೊರೆಯುತ್ತವೆ. ಉತ್ಪನ್ನದಲ್ಲಿ ಆ ಸಾಮಗ್ರಿಗಳನ್ನು ಕೊಂಡುಕೊಳ್ಳುವುದಷ್ಟೇ ಅಲ್ಲದೆ, ಸಾಂಸ್ಕೃತಿಕ ಮೂಲ್ಯವಿರುವ ಪುಸ್ತಕಗಳು, ಚಿತ್ರಗಳು, ಪಿಂಗಾಣಿ ಪಾತ್ರಗಳು, ಸಂಗೀತ ರಿಕಾರ್ಡ್‌ಗಳು, ರೇಡಿಯೋ ಕ್ಯಾಮರಾ ಮತ್ತಿತರ ಸಾಮಗ್ರಿಗಳನ್ನು ಕೊಂಡುಕೊಳ್ಳುತ್ತಾರೆ. ಅವರಿಗೆ ಬೇಕಾದ ವೈದ್ಯಕೀಯ ಮತ್ತಿತರ ಸಹಾಯವೆಲ್ಲ ಉಚಿತವಾಗಿ ದೊರೆಯುವುದರಿಂದ ಹೀಗೆ ಅವರು ಕೊಂಡುಕೊಳ್ಳುವುದು ಸಾಧ್ಯವಾಗಿದೆ. ಅಂದರೆ ಆ ಉಚಿತ ಸಹಾಯದಿಂದ ಶೇಕಡ ೪೦ರಷ್ಟು ಹಣವನ್ನು ಮೂಲಭೂತ ಉತ್ಪನ್ನಕ್ಕೆ ಸೇರಿಸಿದಹಾಗಾಗುತ್ತದೆ.

ನೈತಿಕ ಅಧಃಪತನ ?

ಕಮ್ಯೂನಿಸ್ಟ ಸಮಾಜನಲ್ಲಿ ಇರುತ್ತದೆಂದು ಹೇಳಲಾಗುವ ನೈತಿಕ ಅಧಃಪತನವನ್ನು ಅಲ್ಲಿ ಕಂಡಿರಾ ?

ಕ್ರಾಂತಿಯ ಆರಂಭದ ದಿನಗಳಲ್ಲಿ ಅನಿವಾರ್ಯವಾಗಿ ಹಾಗೆ ಆಗಿರಬಹುದು. ಆದರೆ ಈ ದಿನ ಕೌಟುಂಬಿಕ ಸಂಬಂಧಗಳು ಹೆಚ್ಚು ಭದ್ರವಾಗಿವೆ. ಮೇ ದಿನದಂಥ ಉತ್ಸವದ ಕಾಲದಲ್ಲಿ ಹುಡುಗ ಹುಡುಗಿಯರು ಜತೆಯಾಗಿ ಉದ್ಯಾನಗಳಲ್ಲಿ ಕುಣಿದಾಡುತ್ತಾರಾದರೂ, ನ್ಯೂಯಾರ್ಕ್-ಲಂಡನ್‌ಗಳ ಉದ್ಯಾನಗಳಲ್ಲಿರುವಂತೆ ಸ್ವೈರವೃತ್ತಿ [illegible]ಯುವುದಿಲ್ಲ. [illegible] ಬ್ರಹ್ಮಚಾರಿಗಳು ಅಲ್ಲಿ [illegible] ಬೇಕಾಗಿದೆ ?

ಭಿಕ್ಷುಕರ ಸಮಸ್ಯೆ

ರಷ್ಯಾದಲ್ಲಿ ಭಿಕ್ಷುಕರಿರುವರೆ ?

ಭಾರತದಲ್ಲಿ ಇಲ್ಲವೆ ಪಶ್ಚಿಮ ದೇಶಗಳಲ್ಲಿ ಇರುವಂಥ ಭಿಕ್ಷುಕ ವೃತ್ತಿಯನ್ನು ನಾನು ರಷ್ಯಾದಲ್ಲಿ ಕಾಣಲಿಲ್ಲ. ಮಾಸ್ಕೋ ಮತ್ತು ಲೆನಿನ್‌ಗ್ರಾಡುಗಳಲ್ಲಿ ಇಬ್ಬರು ಇಳಿವಯಸ್ಸಿನ ಮುದುಕಿಯರು ಸಾರ್ವಜನಿಕರಿಂದ ಪುಡಿಕಾಸು ಪಡೆಯುತಿದ್ದುದನ್ನು ಕಂಡೆ. ಅವರು ನಿರಾಶ್ರಿತರಾದ್ದರಿಂದ ಹೀಗೆ ಮಾಡುತ್ತಿಲ್ಲ. ಅವರಿಗೆ ದೊರೆಯುವ ಕಡಿಮೆ ನಿವೃತ್ತಿ-ವೇತನಕ್ಕೆ ಸಹಾಯವಾಗಲೆಂದು ಹಾಗ ಮಾಡುತ್ತಾರೆ.

ದುಡಿಮೆಯ ಸ್ಥಿತಿಗತಿ

ರಷ್ಯದ ಕಾರ್ಖಾನೆಗಳಲ್ಲಿ ಕೆಲಸದ ಸ್ಥಿತಿಗತಿಗಳು ಹೇಗಿವೆ ?

ಬಲು ಚೆನ್ನಾಗಿವೆ. ಅಮೆರಿಕ ಬ್ರಿಟನುಗಳಲ್ಲಿ ತೀಕ್ಷ್ಣ ಒತ್ತಡದಿಂದ ಕೆಲಸ ಮಾಡುತ್ತಾರೆ. ರಷ್ಯಾದಲ್ಲಿ ಏನೇನೂ ಪ್ರಯಾಸವಿಲ್ಲದೆ ಸುಲಲಿತವಾಗಿ ಕೆಲಸ ಮಾಡುತ್ತಾರೆ. ಹೀಗಿದ್ದರೂ ರಷ್ಯದ ಉತ್ಪನ್ನಗಳು ಗುಣದಲ್ಲೂ ಪ್ರಮಾಣದಲ್ಲೂ ಅಮೆರಿಕದ ಉತ್ಪನ್ನದಷ್ಟೇ ಚೆನ್ನಾಗಿವೆ. ರಷ್ಯದ ಕಾರ್ಖಾನೆಗಳಲ್ಲಿ ಉತ್ಪಾದನ ಶಕ್ತಿಗಿಂತಲೂ ಮನುಷ್ಯ ಮುಖ್ಯ. ಒಬ್ಬ ಕೆಲಸಗಾರ ಒಂದು ಕೆಲಸದಲ್ಲಿ ತೃಪ್ತಿಕರವಾಗಿ ಕಾಣದಿದ್ದರೆ ಅವನನ್ನು ಕಾರ್ಮಿಕರ ಸಾಂಸ್ಕೃತಿಕ ಕೇಂದ್ರಕ್ಕೆ ಕಳಿಸುತ್ತಾರೆ. ಅದು ಯಾಕೆ ಹಾಗೆ ? ಹಾಗಾದರೆ ಅವನಿಗೆ ಯೋಗ್ಯವಾದ ಕೆಲಸ ಯಾವುದು ? ಎಂದು ಅಲ್ಲಿ ಶೋಧಿಸುತ್ತಾರೆ. ಪಾಶ್ಚಾತ್ಯ ದೇಶದಲ್ಲಿ ಅಂಥವನನ್ನು ಅಯೋಗ್ಯನೆಂದು ಹೇಳಿ ವಜಾ ಮಾಡುತ್ತಾರೆ.

ಕೇಂದ್ರದಲ್ಲಿ ಉತ್ಪನ್ನ ಖಾತೆಯ ಸಚಿವರಾಗಿ ನೇಮಕವಾಗಿರುವ ಮೈಸೂರಿನ ಮಾಜಿ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಮೊನ್ನೆ ಬೆಂಗಳೂರಿಗೆ ಆಗಮಿಸಿದಾಗ ಅವರಿಗೆ ಅಭೂತಪೂರ್ವ ಸ್ವಾಗತ ದೊರೆಯಿತು. ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಅಭಿಮಾನಪೂರ್ವಕವಾಗಿ ಅವರೊಡನೆ ಕುಶಲಪ್ರಶ್ನೆ ಮಾಡುತ್ತಿರುವಾಗ ತೆಗೆದ ಚಿತ್ರ.

ಚಿತ್ರಗುಪ್ತ

ಬಾಳ ರಹಸ್ಯ

'ಜೀವನದ ಅಳತೆಗೋಲು'

ಲೇಖಕರು: ಕ. ಮ. ಶಿ. ಚಂದ್ರಶೇಖರಯ್ಯ

ಸುಂದರವಾಗಿ ಬೆಳೆದು ಅರಳಿರುವ ಗುಲಾಬಿ ಹೂವೊಂದನ್ನು ನಾವು ನೋಡಿದಾಗ ನಮ್ಮ ಮನಸ್ಸಿನಲ್ಲಿ ಮೂಡುವ [illegible] ವಿಚಾರತರಂಗಗಳನ್ನು ಪರಿಶೀಲಿಸಿದರೆ ಮೊದಲಿಗೆ ನಮಗೆ ಹೊಳೆಯು [illegible]

[illegible]

[illegible] ಜೀವನದ ಅಳತೆಗೋಲು ಯಾವುದು ಎಂದು ನಾವು ನಿರ್ಧರಿಸುವ ಮೊದಲು ಈ ಪದಪುಂಜದ ಅರ್ಥವನ್ನು ವಿವರವಾಗಿ ತಿಳಿದುಕೊಂಡಲ್ಲಿ ನಮ್ಮ ಉದ್ದೇಶದ ದಾರಿ ಸುಗಮವಾಗಿ ಗೋಚರಿಸೀತು. ಆದ್ದರಿಂದ ಮೊದಲು ಜೀವನವೆಂದರೇನು ? ಎಂದು ನಮ್ಮನ್ನು ನಾವೇ ಪ್ರಶ್ನಿಸಿಕೊಂಡರೆ ತಟ್ಟನೆ ತಿಳಿಯಾದ ಉತ್ತರ ದೊರೆಯಲಾರದು. ಸೂಕ್ಷ್ಮವಾಗಿ ಹೇಳುವುದಾದರೆ ನಾವು ನಿತ್ಯ ಮಾಡುವ ನಡೆನುಡಿಗಳೂ, ಅನುಸರಿಸುತ್ತಿರುವ ಮಾರ್ಗ ನೀತಿಗಳೂ ಅಥವಾ ನಾವು ಇಟ್ಟುಕೊಂಡಿರುವ ಯಾವುದೋ ಒಂದು ಗುರಿಯೂ ಇವೆಲ್ಲವೂ ಸೇರಿ ಜೀವನವೆಂದು ಹೇಳಬಹುದು.

ಮಹಾಪುರುಷರು ಏನು ಹೇಳುತ್ತಾರೆ!

ಇದಕ್ಕೆ ಮೊದಲು ನಾಡಿನ ಮಹಾಪುರುಷರು ಜೀವನದ ಬಗ್ಗೆ ಆಡಿರುವ ಕೆಲವು ಅಮೂಲ್ಯ ಮಾತುಗಳನ್ನು ನಾವು ಅವಲೋಕಿಸಿದಲ್ಲಿ ನಮಗೆ ಅದರ ಸ್ಪಷ್ಟ ರೂಪರೇಷೆ ಗೊತ್ತಾಗುತ್ತದೆ. ಭಾರತದ ಆಧ್ಯಾತ್ಮ ಶಕ್ತಿಯಾದ ಶ್ರೀ ಸ್ವಾಮಿ ವಿವೇಕಾನಂದರು, "life is a series of fights and disillution ment... the secret of life is not enjoyment but education through experience...." ಎಂದಿದ್ದಾರೆ. ಅಂತೆಯೇ ಸುಪ್ರಸಿದ್ಧ ಕಥೆಗಾರನಾದ ಓ ಹೆನ್ರಿ ಒಂದು ಕಡೆ life is made up of sobs, sniffles and smiles with sniffles predominating ಎಂದಿದ್ದಾನೆ.

ಸುಪ್ರಸಿದ್ಧ ನಾಟಕಕಾರನಾದ ವಿಶ್ವ ಮಾನ್ಯ ಷೇಕ್ಸ್‌ಪಿಯರ್ ಕೂಡ ತನ್ನ [illegible] ನಾಟಕದಲ್ಲಿ 'life's but a walking shadow....' ([illegible]

[illegible]

ಅಂತಿಮವಾಗಿ ಈ ನೋವು ನಲಿವುಗಳ, ಸುಖ-ದುಃಖಗಳ ಸಮ್ಮಿಳನ ಕೇಂದ್ರವಾದ ಈ ಜೀವನದ ಉದ್ದೇಶವೇನು ? ಅದರ ಅಳತೆಗೋಲಾವುದು ? ಎಂಬುದನ್ನು ಪರಿಶೀಲಿಸಬೇಕಾಗಿದೆ. ಈ ಜೀವನ ಹೀಗೆ ಆ ಜೀವನ ಹಾಗೆ ಎಂದು ನಿರ್ಧರಿಸಬಹುದಾದ ಮಾನದಂಡ ಯಾವುದು ಎಂಬ ವಿಷಯವನ್ನು ನಾವು ಇಲ್ಲಿ ಚರ್ಚಿಸಿದಲ್ಲಿ ನಮ್ಮ ವಿಷಯವನ್ನು ನಾವಿಲ್ಲಿ ಪ್ರತಿಪಾದಿಸಿದಂತಾಗುತ್ತೆ.

ಜೀವನದ ಹೋರಾಟವೇ ಮಾನದಂಡ

ಒಂದು ಸುಂದರ ಪುಷ್ಪಕ್ಕೆ ಅದರ ಆಕರ್ಷಕ ಬಣ್ಣ, ಅದಕ್ಕೂ ಮಿಗಿಲಾದ ಅದರ ಸೌರಭ, ಇವೆರಡರ ಸದುಪಯೋಗ ಹೇಗೆ ಆ ಪುಷ್ಪದ ಅಳತೆಗೋಲಾಗುತ್ತವೆಯೋ ಹಾಗೆಯೇ ಮಾನವನ ಜೀವನದ ಮಾನದಂಡ ಅವನ ಹೋರಾಟ. ಅವನು ಪ್ರಪಂಚದಲ್ಲಿ ನಡೆಸುವ ವಾಸ್ತವಿಕ ಹೋರಾಟ, ಅನ್ಯಾಯ ಅಧರ್ಮಗಳ ಎದುರಿಗೆ ನಿಂತು ಸೆಣಸಾಡುವ ಸಾಹಸವೆಂದು ಹೇಳಬಹುದು.

ಮಾನವನ ಜೀವನದ ಯೋಗ್ಯತೆಯನ್ನು ನಿರ್ಧರಿಸಲು ಅವನ ಅಧಿಕಾರವಾಗಲೀ, ಅವನ ಐಶ್ವರ್ಯವಾಗಲೀ ಇಲ್ಲಿ ಅನುಕೂಲವಾಗಲಾರವು ಎನ್ನಬೇಕಾಗುತ್ತೆ ಅವನ ಜೀವನ ಉತ್ತಮವಾದುದು, ಮಾದರಿಯಾದದು ಅನುಕರಿಸಲು ಯೋಗ್ಯವಾದುದು ಎಂದು ಹೇಳಬೇಕಾದರೆ ಅವನು ತನ್ನ ನಿತ್ಯಜೀವನದಲ್ಲಿ ನಡೆಸುವ ವಾಸ್ತವಿಕ ಹೋರಾಟ, ಅವನು ಪ್ರತಿಪಾದಿಸುವ ಒಂದು ತತ್ವ, ಅವನ ನಡೆ-ನುಡಿ, ಅವನಿಂದ ಮಾನವನ ನಿತ್ಯಸರ್ಗಕ್ಕೆ ಆಗಿರುವ ಅನುಕೂಲ ಇವನ್ನು ಪರಿಶೀಲಿಸಬೇಕಾಗುತ್ತೆ.

ಅದಕ್ಕೆಂದೇ ಶ್ರೀ ಸ್ವಾಮಿ ವಿವೇಕಾನಂದರು ಒಮ್ಮೆ 'The greater benefactor of life is struggle' ಎಂದು ಹೇಳಿದ್ದಾರೆ. [illegible]

[illegible]

ಜಗತ್ತಿನ ಮಹಾವ್ಯಕ್ತಿಗಳು ಸಾಧಿಸಿದುದೇನು ?

ಪೂಜ್ಯ ಬಾಪೂಜಿಯವರ ಜೀವನ ಸತ್ಯಕ್ಕಾಗಿ, ಜನಗಳ ಅಭ್ಯುದಯಕ್ಕಾಗಿ ಹೋರಾಡಿದ ಒಂದು ರಂಗಸ್ಥಳ. ಅವರ ಉದ್ದೇಶ ಸಾಧನೆಗಾಗಿ ಅವರು ತುಳಿದ ಹಾದಿ, ಹೋರಾಡಿದ ಮಾರ್ಗ ಜೀವನದ ಅಂತ್ಯದವರೆಗೂ ಶ್ರಮಿಸಿದ ಅವರ ತತ್ವಗಳೇ ಅವರ ಜೀವನದ ಪರಮಪವಿತ್ರ ಸಂಕೇತಗಳಾಗಿವೆ. ಅದಕ್ಕಾಗಿಯೇ ಇಂದು ಅವರ ಹಾದಿ, ಅನುಸರಿಸಿದ ನೀತಿ, ಹೋರಾಡಿದ ಉದ್ದೇಶ ನಾಡಿಗೇ ಏಕೆ ಇಡೀ ವಿಶ್ವಕ್ಕೇ ಮಾರ್ಗದರ್ಶಕಗಳಾಗಿ ನಿಂತಿರುವುದು.

ಅಂದಮೇಲೆ ಅವರ ಈ ಎಲ್ಲಾ ತತ್ವಗಳೂ ವಾಸ್ತವಿಕ ಪಥದಲ್ಲಿ ಹೋರಾಟ ನಡೆಸಿ ಜಯಶೀಲರಾಗಿರುವುದರಿಂದ ಅವರ ನಿತ್ಯ ಸತ್ಯವಾದ ಹೋರಾಟವೇ ಅವರ ಜೀವನದ ಅಳತೆಗೋಲಾಗಿ ನಿಂತಿದೆ ಎನ್ನಬಹುದು.

ಅವರಂತೆಯೇ ಜಗತ್ತಿನ ಇತರ ಭಾಗಗಳಲ್ಲಿ ಭಾರತದ ಬಗ್ಗೆ ಇದ್ದ ಅಂಧಾಭಿಪ್ರಾಯವನ್ನು, ಅವರ ತಪ್ಪು ತಿಳುವಳಿಕೆಯನ್ನು ವಾಸ್ತವವಾದದಿಂದ ದೂರ ಮಾಡಿ ಭಾರತದ ಘನತೆಯನ್ನು ಹೆಚ್ಚಿಸಿದ ಶ್ರೀ ವಿವೇಕಾನಂದರೂ ಅವರ ಜೀವನವೂ ಈ ವಿಷಯಕ್ಕೆ ಇನ್ನೊಂದು ಉದಾಹರಣೆ. ಅವರು ತುಳಿದ ಹಾದಿ ಆಧ್ಯಾತ್ಮಿಕವಾದುದು. ಅವರ ಗುರು ಆಧ್ಯಾತ್ಮ ಯೋಗಿ ಪರಮ ಹಂಸರು. ಅವರು ತಮ್ಮ ಜೀವನದಲ್ಲಿ ಆಧ್ಯಾತ್ಮ ತತ್ವಗಳ ವಿಮರ್ಶೆ ಹೋರಾಟ ನಡೆಸಿ ಅವು ಮಾನವ ವರ್ಗದ ಉತ್ಕರ್ಷೆಗೆ ಅನುಕೂಲವಾಗುವಂತೆ ತಿಳಿಯ ಹೇಳಿದರು. ಅದರಂತೆ ನಡೆದು ತೋರಿಸಿದರು. ಇಂದು ಅವರ ವ್ಯಕ್ತಿತ್ವ ಜಗತ್ತಿನ ಆಧ್ಯಾತ್ಮ ರಂಗದಲ್ಲಿ ಅಜರಾಮರಾಗಿ ನಿಂತಿರುವುದಕ್ಕೆ ಅವರು ನಡೆಸಿದ ಹೋರಾಟ — ಆಧ್ಯಾತ್ಮಿಕ ಹೋರಾಟ —ಅದರ ಉಪಯೋಗ ಮಾನವ ಕುಲಕ್ಕಾಗಲು ಅವರು ಶ್ರಮಿಸಿದ ರೀತಿ ಅವರ ಜೀವನದ ಮೈಲಿಗಲ್ಲುಗಳಾಗಿವೆ, ಜೀವನದ ಅಳತೆಗೋಲಾಗಿದೆ.

ಜೀವನವನ್ನು ಬರೀ ಓದಿನಿಂದ,–ಉಪಯೋಗವಿಲ್ಲದ ಡಿಗ್ರಿಗಳಿಂದ ನಿರ್ಧರಿಸುವವರಿಗೊಂದು ಮಾತು. ಶ್ರೀ ರಾಮಕೃಷ್ಣ ಪರಮ ಹಂಸರು ಯಾವ ವಿಶ್ವವಿದ್ಯಾನಿಲಯದ ಪದವೀಧರರು? ಯಾವ ಉದ್ಗ್ರಂಥವನ್ನು ಅವರು ಓದಿದ್ದರು ? ಆದರೆ ಅವರ ಜೀವನದ ಪರಮ ಪವಿತ್ರತೆ ಯಾವ ನೂರು ಡಿಗ್ರಿ ಪಡೆದವನಿಗೂ ಬರಲು ಸಾಧ್ಯ ?

ಇವರಂತೆಯೇ ವಿಶ್ವದ ಮಹಾ ವ್ಯಕ್ತಿಗಳಾದ ಏಸು, ಬುದ್ಧ, ಮಹಮ್ಮದ್ ಪೈಗಂಬರ್, ಗುರುದೇವ ಟಾಗೋರರು ಇವರೆಲ್ಲರ ಜೀವನ ಜನ ಜೀವನಕ್ಕಾಗಿ, ಸತ್ಯಕ್ಕಾಗಿ ಹೋರಾಡಿದ ರಂಗಸ್ಥಳಗಳೇ!

ಐಶ್ವರ್ಯ, ಪದವಿ ಇವು ಮುಖ್ಯವಲ್ಲ

ಇಂದು ನಾಡಿನ ಜನ ಜೀವನವನ್ನು ಕೇವಲ ಅಧಿಕಾರ, ಪದವಿ, ಐಶ್ವರ್ಯ ಮುಂತಾದ ಕ್ಷಣಿಕ ವಸ್ತುಗಳಿಂದ ಅಳೆಯುತ್ತಿದ್ದಾರೆ. ಇದು ಶುದ್ಧ ತಪ್ಪು ಮಾರ್ಗವೆನ್ನಬೇಕಾಗುತ್ತೆ. ಇಂದು ನಾಡಿನಲ್ಲಿ ಉನ್ನತ ಪದವಿಯಲ್ಲಿದ್ದು, ಕುಬೇರನಿಗೆ ಸಮವಾಗುವಷ್ಟು ಐಶ್ವರ್ಯವಂತನಾಗಿದ್ದರೂ ಕೂಡ ಅವನ ಜೀವನ ಉನ್ನತವಾದುದು, ಒಳ್ಳೆಯದು ಎಂದು ಹೇಳಲಾಗುವುದಿಲ್ಲ. ಏಕೆಂದರೆ ಅವನು ಗಳಿಸಿರುವ ಆ ಅಧಿಕಾರ, ಆ ಸಂಪತ್ತು ಆ ಭೋಗ ಭಾಗ್ಯ ಎಲ್ಲವೂ ಕ್ಷಣಿಕವಾದವಲ್ಲದೆ ಅವನ್ನು ಗಳಿಸಿರುವ ರೀತಿ, ಮಾರ್ಗ ಪವಿತ್ರವಾಗಿರದಿದ್ದಲ್ಲಿ ಅವನ ಜೀವನ ಒಂದು ಪವಿತ್ರತೆ ಪಡೆಯಲಾರದು ಆದ್ದರಿಂದ ಇವುಗಳಿಂದ ಅವನ ಜೀವನ ಪವಿತ್ರವಾದುದು ಎಂದು ನಿರ್ಧರಿಸುವುದು ಹೇಗೆ ? ಅವೇ ಅವನ ಜೀವನದ ಮಾನದಂಡಗಳು ಎನ್ನಲಾಗುವುದೇ ? ಆದರೆ ಯಾವುದೋ ಒಂದು ಮೂಲೆಯಲ್ಲಿ ಅಜ್ಞಾತವಾಗಿ ಗುಡಿಸಲೊಂದರಲ್ಲಿ ಜೀವಿಸುತ್ತಿರುವ ಮಾನವನೊಬ್ಬ, ಅವನು ಅನುಸರಿಸುತ್ತಿರುವ ರೀತಿ ನೀತಿ, ನಡೆ ನುಡಿಗಳು ಪವಿತ್ರವಾಗಿದ್ದಲ್ಲಿ, ಅವನಿಂದ ಅವನ ನೆರೆಯವರಿಗೆ, ಜೀವಿಗಳಿಗೆ ಅಲ್ಪವಾದರೂ ಅನುಕೂಲವಾಗಿದ್ದರೆ ಅವನ ಜೀವನ ಪವಿತ್ರ, ಉತ್ತಮವಾಗಿದೆ ಎಂದು ಧಾರಾಳವಾಗಿ ಹೇಳಬಹುದು.

ಆದ್ದರಿಂದ ನಾವು ಅಧಿಕಾರವನ್ನಾಗಲೀ, ಪದವಿಯನ್ನಾಗಲೀ, ಸಂಪತ್ತನ್ನಾಗಲೀ ಜೀವನದ ಅಳತೆಗೋಲುಗಳಾಗಿ, ಮಾನದಂಡಗಳಾಗಿ ನಿರ್ಧರಿಸಲಾಗುವ

(೧೩ನೇ ಪುಟ ನೋಡಿ)

ವಾರದ ಕಥೆ

ಹೆಣ್ಣು ಬಾಳಿನ ತೊಡಕು

★ ಹೆಣ್ಣಿನ ಬಾಳು ಕಣ್ಣೀರೇನೇ-ಎಂದು ಸಹಸ್ರ ಸಾರಿ ಕೇಳಿದ್ದೇವೆ. ಸಾವಿರದ ಒಂದನೆಯ ಬಾರಿಗೆ ಇಲ್ಲಿ ಮತ್ತೆ ಆ ಕರುಳು ಕೊರೆಯುವ ಆಕ್ರಂದನವಿದೆ. [illegible]

[illegible]

[illegible] ಎಲ್ಲರಿಗೂ ಆ ಹುಡುಗಿ ಸಮಾಧಾನ ಹೇಳಿ— [illegible] ಸಾಕು ಸಾಕಾಯ್ತು. ಎಂಥ ಹೀನ ಜನ, ಇವರೆಂದು ಮನದಲ್ಲಿ ಬಹುವಾಗಿ ಮರುಗಿದೆ. ಕಣ್ಣಿಗೆ ಸುಶಿಕ್ಷಿತರೆಂದು ಸಾಮಾನ್ಯರಿಗೂ ತಿಳಿದು ಬರುವಂತಿದ್ದರು.

ಸ್ಥಳೀಕ ವಿಷಯಗಳು.

(ಶ್ರೀ — [illegible])

[illegible] ಗಿರಬೇಕೆಂಬುದೇ ಬಹಳ ಉಳಿತಾಯದ ಯೋಜನೆಗಳ ಪ್ರಚಾರದ ಮುಖ್ಯೋದ್ದೇಶವಾಗಿರುತ್ತದೆ. ನಮ್ಮ ಜನರು ಮಿತವ್ಯಯ ಕಲಿಯಬೇಕೆಂಬ ಮಾತಿಗೆ ಯಾರೂ ವಿರೋಧ ಮಾಡುವಂತಿಲ್ಲ. ಮಿತವ್ಯಯದಿಂದ ಉಳಿತಾಯವಾಗುವ ಹಣವನ್ನು ಸರಕಾರಕ್ಕೆ ಸಾಲವಾಗಿ ಕೊಟ್ಟು ರಾಷ್ಟ್ರಾಭಿವೃದ್ಧಿಯ ಮಹಾಕಾರ್ಯಕ್ಕೆ ಪ್ರತಿಯೊಬ್ಬರೂ ಶಕ್ತ್ಯಾನುಸಾರ ನೆರವನ್ನೀಯಬೇಕೆಂಬುದಕ್ಕೂ ಯಾರೂ ಆಕ್ಷೇಪ ತಕ್ಕೊಳ್ಳುವಂತಿಲ್ಲ. ಆದರೆ ಈಗಿನ ಮಹರ್ಗತೆಯ ಕಾಲದಲ್ಲಿ ಹೊಟ್ಟೆ ತುಂಬ ಉಣ್ಣಲಾಗದ, ಮೈತುಂಬ ಬಟ್ಟೆ ತೊಟ್ಟು ಚಳಿ ಮಳೆ-ಗಾಳಿಗಳಿಂದ ಪೂರ್ಣ ಆತ್ಮರಕ್ಷಣೆ ಮಾಡಿಕೊಳ್ಳಲಾಗದ ಜನರಿಗೆ ಸರಕಾರಿ ಅಧಿಕಾರಿಗಳೂ ಅವರ ಬಾಲಬಡಕ ಹಸ್ತಕರೂ ಮಿತವ್ಯಯದ ಉಪದೇಶ ಮಾಡುತ್ತಿರುವದನ್ನು ಕಂಡು ಕೇಳಿ ವಿಚಾರವಂತರಾರೂ ಸುಮ್ಮನಿರಲಾರರು. "ಸ್ವಾಮಿ ಅಮಿತ ವ್ಯಯವಾಗುವಲ್ಲಿ ಹೋಗಿ ನಿಮ್ಮ ಈ ಉಪದೇಶ ಮಾಡಿರಿ! ಸಮಂಜಸ ಮಿತವ್ಯಯದಿಂದ ಉಳಿಯಲಿಕ್ಕೂ ಕೂಡ ಸಾಕಷ್ಟು ಉತ್ಪನ್ನವಿಲ್ಲದ್ದರಿಂದ ನಿರುಪಾಯವಾಗಿ ಅಸಮಂಜಸ ಮಿತವ್ಯಯ ಮಾಡಬೇಕಾಗಿರುವ ಮತ್ತು ಮಾಡುತ್ತಿರುವ ಜನರ ಮುಂದೆ ಈ ನಿಮ್ಮ ಮಿತವ್ಯಯದ ಪುರಾಣ ಬೇಡ!" ಎಂದು ಈ ಬಗ್ಗೆ ಉಳಿತಾಯದ ಯೋಜನೆಗಳ ಪ್ರಚಾರಕರಿಗೆ ಪ್ರಜೆಗಳು ಹೇಳದಿರಲಾರರು.

∴

ಮಿತವ್ಯಯದ ಪ್ರಚಾರಮಾಡಿ ಮುಗ್ಧ ಪ್ರಜೆಗಳಿಂದ ಸಾಲವಾಗಿ ಹಣ ಎತ್ತುವ ಮಾಡುವ ಸರಕಾರವು ಸ್ವತಃ ಮೊದಲು ಮಿತವ್ಯಯ ಮಾಡಬೇಕು. ಅನಾವಶ್ಯಕವಾಗಿ ಒಂದು ಪೈ ಸಹ ಖರ್ಚಾಗದಂತೆ ಸರಕಾರವು ನೋಡಿಕೊಳ್ಳಬೇಕು. ಆದರೆ ನಮ್ಮ ಇಂದಿನ ಮಂತ್ರಿ-ಉಪಮಂತ್ರಿಗಳೂ, ಹೊಣೆಗಾರ ಸರಕಾರಿ ಅಧಿಕಾರಿಗಳೂ ಮಿತವ್ಯಯದಿಂದ ಸರಕಾರದ ಹಣವನ್ನು ಉಳಿತಾಯ ಮಾಡುವ ಪ್ರಯತ್ನವನ್ನು ಎಲ್ಲೂ ಮಾಡುವದಿಲ್ಲ! ಅನಾವಶ್ಯಕ ಸಂಚಾರಗಳನ್ನು ಕೈಕೊಂಡು ಲಕ್ಷಾವಧಿ ರೂಪಾಯಿ ಹಣವನ್ನು ಈ ಮಹಾನುಭಾವರು "ದುಂದು ಮಾಡುತ್ತಾರೆ. ತಮ್ಮನ್ನು ಸತ್ಕರಿಸ ಸ್ವಾಗತ ಸಮಾರಂಭಗಳ ಜನರ ಕಡೆಯಿಂದಲೂ ಸಾವಿರಾರು ಹಣ ಖರ್ಚು ಮಾಡಿಸುತ್ತಾರೆ! ಮಂತ್ರಿ-ಉಪಮಂತ್ರಿ-[illegible]

[illegible] ಅನಾವಶ್ಯಕ ಕಾಮಗಾರಿಗಳನ್ನು ಮಾಡಿಸಿ ಹಣ ದುಂದು ಮಾಡುತ್ತಿದ್ದಾರೆ! ಶಾಶ್ವತ ಕಾಮಗಾರಿಗಳನ್ನು ಮಾಡಿಸಿದರೆ ಮಿತವ್ಯಯವಾಗಬಹುದಾದ ಕಡೆಯಲ್ಲಿ ಹಂಗಾಮಿ ಕಾಮಗಾರಿಗಳನ್ನು ಮಾಡಿಸಿ ಹಣದ ದುರ್ವ್ಯಯ ಮಾಡುತ್ತಿದ್ದಾರೆ. ಹತ್ತಿರದ ಪೇಟೆಯಲ್ಲಿ ಬೇಕಾದ ಸರಕು ದೊರಕಿಸಿ ಮಿತವ್ಯಯ ಮಾಡಬರುವಲ್ಲಿ ಕೂಡ ದೂರದ ಪೇಟೆಗಳಿಂದ ಸರಕು ತರಿಸಿ ಹಣ ಹಾಳು ಮಾಡುತ್ತಿದ್ದಾರೆ! ಈ ಮಾತಿನ ಕೆಲವು ದೃಷ್ಟಾಂತಗಳನ್ನು ಕೊಡಬಹುದು. ಕುಮಟೆಯೊಳಗಿನ ಸರಕಾರಿ ಟ್ರೇನಿಂಗ ಕೊಲೇಜಿನ ಸ್ಥಳದ ಸುತ್ತು ಹಾಕಿರುವ ಭವ್ಯ ಸಿಮೆಂಟಿನ ಗೋಡೆಯನ್ನು ನೋಡಿರಿ. ನೂರಾರು ಮಾರುದ್ದ ಈ ಗೋಡೆಯ ಅವಶ್ಯಕತೆ ಏನಿದೆ? ಈ ಆವಾರದ ಸುತ್ತ ಸದ್ಯಕ್ಕೆ ಬೇರೆ ಅತ್ಯವಶ್ಯ ಮಾಡಬೇಕಾಗಿರುವ ಕೆಲಸಗಳಿಗಾಗಿ ವಿನಿಯೋಗಿಸಲು ಸರಕಾರದ ಹತ್ತಿರ ಹಣವಿಲ್ಲದಿದ್ದಾಗ—ಸಾವಿರಗಟ್ಟಲೆ ರೂಪಾಯಿ ಖರ್ಚುಮಾಡಿ, ಸಾವಿರಾರು ಚೀಲ ಸಿಮೆಂಟು ಬಳಸಿ ಈ ಅಲಂಕಾರದ ಗೋಡೆ ಯಾಕೆ ಹಾಕಿಸಬೇಕು? ಗೋಡೆ ಹಾಕಿದ ಸ್ಥಳದಲ್ಲಿ ಒಂದು ಸಾದಾ ಬೇಲಿಯನ್ನು ಹಾಕಿಸಿದರೆ ಅಥವಾ ಅಷ್ಟು ಅವಶ್ಯವಿದ್ದರೆ ಮುಳ್ಳಿನ ತಂತಿಯ ಬೇಲಿ ಹಾಕಿಸಿದರೆ ಆಗುತ್ತಿದ್ದಿಲ್ಲವೇ? ಮಿತವ್ಯಯದ ಪ್ರಚಾರಮಾಡುವ ಮಂತ್ರಿಗಳು ಒಮ್ಮೆ ಈ ಸಿಮೆಂಟ ಗೋಡೆಯನ್ನು ನೋಡಿಕೊಳ್ಳಬೇಕು. ಈ ಗೋಡೆಯನ್ನು ಹಿಂದಿನಿಂದ ಹಣದ [illegible] ಹಾಕಿಸಲಾಗುತ್ತಿದ್ದಿಲ್ಲವೇ?

∴

ಇನ್ನೊಂದು ಉದಾಹರಣೆ ಯಲ್ಲಾಪುರ ತಾಲೂಕಿನ ಬೇಡ್ತಿ ಹಳ್ಳದ ಸಂಕವು. ಯಲ್ಲಾಪುರ-ಶಿರಸಿ ಮಾರ್ಗದಲ್ಲಿ ಯಲ್ಲಾಪುರದಿಂದ ೮ ಮೈಲು ಅಂತರದಲ್ಲಿ ಈ ಸಂಕವುಂಟು. ಯಲ್ಲಾಪುರ ಶಿರಸಿ ಮಾರ್ಗ ಮೈಸೂರ ರಾಜ್ಯದ ಮುಖ್ಯ ಮಾರ್ಗಗಳಲ್ಲೊಂದೆಂದು ಗಣಿಸಲ್ಪಡುತ್ತದೆ. ಈ ಮಾರ್ಗವನ್ನು ಯಾವಾಗಲೂ ಸುಸ್ಥಿತಿಯಲ್ಲಿಡಬೇಕೆಂದೂ, ಅದರ ಮೇಲಿರುವ ಸಂಕ-ಸೇತುವೆಗಳನ್ನು ಸುಭದ್ರವಾಗಿ ಇಡಬೇಕೆಂದೂ ಸರಕಾರದವರ ಆದೇಶವುಂಟು. ಆದರೆ ಮೇಲೆ ಹೇಳಿದ ಬೇಡ್ತಿ ಹಳ್ಳದ ಸಂಕ ೫-೬ ವರ್ಷಗಳಿಂದ "ಹಾಸುಗಿಸ್ತ" ಉಂಟು. ಅದರ ಮೇಲಿಂದ ಸರಕು ಹೇರಿದ ಮೋಟಾರ-ಗಾಡಿಗಳನ್ನು; ಪ್ರಯಾಣಿಕರಿಂದ ತುಂಬಿದ ಮೋಟಾರ ಬಂಡಿಗಳನ್ನೂ ನಡೆಸಬಾರದೆಂದು ಜಿಲ್ಲಾಧಿಕಾರಿಗಳು ಘೋಷಿಸಿ ಮಾಡಿರುತ್ತಾರೆ. ಈ ಸಂಕ ಸುಮಾರು ೨೦೦. ೨೨೫ ಅಡಿ ಉದ್ದವಿದೆ. ಸಂಕವನ್ನು ಕಟ್ಟುವದಕ್ಕಾಗಿ ಕಲ್ಲಿನಲ್ಲಿ ಕಟ್ಟಿದ ೧೦ ಕಂಬಗಳಿವೆ. ಈ ಕಂಬಗಳ ಮೇಲೆ ಗಟ್ಟಿಮುಟ್ಟಾದ ಕಬ್ಬಿಣದ ತೊಲೆಗಳನ್ನು ಕೂಡ್ರಿಸಿದ್ದಾರೆ. ಈ ತೊಲೆಗಳ ಮೇಲೆ ಕಟ್ಟಿಗೆಯ ತುಂಡುಗಳನ್ನು (ಸ್ಲೀಪರ್) ಇಟ್ಟು ಮೇಲೆ ಕಲ್ಲು-ಮಣ್ಣು ಹಾಕಿದ್ದಾರೆ. ಸಂಕದ ದೊಡ್ಡ ಕಂಬಗಳು ಕರೇ ಕಲ್ಲಿನವಿರುತ್ತವೆ. ಅವು ಗಟ್ಟಿಮುಟ್ಟ ಇವೆ ಎಂದು ತಜ್ಞರೂ ಒಪ್ಪುತ್ತಾರೆ. ಅವುಗಳ ಮೇಲೆ ಕೂಡ್ರಿಸಿದ ಕಬ್ಬಿಣದ ತೊಲೆಗಳೂ ಸುಸ್ಥಿತಿಯಲ್ಲಿವೆಯಂತೆ. ಈ ತೊಲೆಗಳ ಮೇಲೆ ಹಾಸಿದ ಕಟ್ಟಿಗೆಯ ತುಂಡುಗಳು ಮಾತ್ರ ಬೇಗನೇ ಹಾಳಾಗುತ್ತಿವೆ. ಅವು ಹಾಳಾಗುವದರಿಂದಲೇ ಸಂಕವು ಈಗ ಅಸುರಕ್ಷಿತವೆಂದು ಎಣಿಸಲ್ಪಟ್ಟಿದೆ. ಈ ಕಟ್ಟಿಗೆಯ ತುಂಡುಗಳನ್ನು ತೆಗೆದು ಕಬ್ಬಿಣದ ತೊಲೆಗಳ ಮೇಲೆ ಸಿಮೆಂಟಿನ ಹಲಗೆ (ಸ್ಲ್ಯಾಬ್) ಗಳನ್ನು ಕೂಡ್ರಿಸಿದರೆ ಸಂಕವು ಭದ್ರವಾಗುವದೆಂದು ತಜ್ಞರ ಅಭಿಪ್ರಾಯವಾದಂತೆ, ಸರಕಾರವು ಸಂಕದ ಮೇಲೆ ಸಿಮೆಂಟಿನ ಹಲಿಗೆಗಳನ್ನು ಕೂಡ್ರಿಸುವ ಯೋಜನೆಯನ್ನು ಮಂಜೂರ ಮಾಡಿ, ಆ ಬಗ್ಗೆ ಹಣ ಸಹ ಮಂಜೂರ ಮಾಡಿದ್ದುಂಟು. ಈ ಸಿಮೆಂಟ ಹಲಿಗೆಗಳನ್ನು ಹಾಕಿಸಿದರೆ ಸಂಕವು ಇನ್ನೂ ೫೦-೭೫ ವರ್ಷ ಸುಸ್ಥಿತಿಯಲ್ಲುಳಿಯುವದೆಂದು ತಜ್ಞರ ಅಭಿಪ್ರಾಯವಿದೆ. ಈ ಕೆಲಸಕ್ಕೆ ೪೦ ಸಾವಿರ ರೂ. ಖರ್ಚು ಬರುವದೆಂದೂ ತಜ್ಞರು ಲೆಕ್ಕ ಹಾಕಿದ್ದಾರೆ. ಸರಕಾರವು ಈ ಯೋಜನೆನೆಯನ್ನು ಮಂಜೂರ ಮಾಡಿ ಈಗ ೩ ವರ್ಷಗಳಾದವು ಆದರೂ ನಮ್ಮ ಜಿಲ್ಹೆಯ ಸ್ಥಾಪತ್ಯ ಇಲಾಖೆಯ ಮುಖ್ಯಾಧಿಕಾರಿ ಶ್ರೀ|| ಹೊನ್ನತ್ತಿಯವರು ಈ ಯೋಜನೆಯನ್ನು ಕಾರ್ಯರೂಪಕ್ಕೆ ಇಳಿಸಿಲ್ಲ. ಅವರು ಈ ಸಂಕದೊಳಗಿನ ಲಡ್ಡಾದ ಕಟ್ಟಿಗೆಯ ತೊಲೆಗಳನ್ನು ಪ್ರತಿವರ್ಷ ತೆಗೆಯಿಸಿ ಹೊಸ ತೊಲೆಗಳನ್ನು ಹಾಕಿಸಿಕೊಳ್ಳುತ್ತಾರೆ. ಈ ಬಗ್ಗೆ ಅವರು ಪ್ರತಿವರ್ಷ ೨-೩ ಸಾವಿರ ರೂಪಾಯಿ ಖರ್ಚು ಹಾಕುತ್ತಾರೆ! ಸಿಮೆಂಟ ಹಲಗೆಗಳನ್ನು ಹಾಕಿಸುವ ಏರ್ಪಾಡು ಮಾಡದೆ ಹೀಗೆ ವರ್ಷಾನುವರ್ಷ ೨-೩ ಸಾವಿರ ರೂ. ಖರ್ಚುಮಾಡಿ ಕಟ್ಟಿಗೆಯ ತೊಲೆಗಳನ್ನು ಹಾಕಿಸುವದೂ ಸಂಕವನ್ನು ಅಭದ್ರ ಸ್ಥಿತಿಯಲ್ಲಿಡುವದೂ ಸರಿಯಲ್ಲೆಂದು ವಿಚಾರವಂತರು ಮಂತ್ರಿಗಳ ಮುಂದೆ ಶ್ರೀ|| ಹೊನ್ನತ್ತಿಯವರಿಗೆ ಹೇಳಿ ನೋಡಿದರು. ಆಗ ಹೊನ್ನತ್ತಿಯವರು "ಈ ಕಾಮಗಾರಿಗೆ ಟೆಂಡರ ಕರೆಯಲಾಗಿದೆ" ಎಂದು ಮುಂತಾಗಿ ಏನಾದರೂ ಹೇಳಿ ಪಾರಾಗುತ್ತಾರೆ! ಕಳೆದ ತಾ. ೬ [illegible]ಕ್ಕೆ ಲೋಕೋಪಯೋಗಿ ಕಾಮಗಾರಿಗಳ ಖಾತೆಯ ಉಪಮಂತ್ರಿ ಶ್ರೀ|| ನಾಗನಗೌಡರು ಮುಂಡಗೋಡಿಗೆ ಬಂದಾಗ ಯಲ್ಲಾಪುರದವರೊಬ್ಬರು ಉಪಮಂತ್ರಿಗಳನ್ನು ಬೇಡ್ತಿ ಹಳ್ಳದವರೆಗೆ ಕರೆದೊಯ್ದು ಸಂಕದ ದುಸ್ಥಿತಿಯನ್ನು ತೋರಿಸಿದರು. ಮತ್ತು ಸಿಮೆಂಟಿನ ಹಲಿಗೆಗಳನ್ನು ಹಾಕಿಸುವ ಯೋಜನೆಯನ್ನು ಇಂಜನೀರ ಇಲಾಖೆಯವರು ಯಾಕೆ ಕೃತಿಯಲ್ಲಿ ಇಳಿಸಿಲ್ಲೆಂಬುದರ ವಿಚಾರವಾಗಬೇಕೆಂದು ಹೇಳಿಕೊಂಡರು. ಶ್ರೀ|| ಹೊನ್ನತ್ತಿಯವರು ಆಗ ಅಲ್ಲೇ ಇದ್ದರು. ಸಿಮೆಂಟ ಹಲಿಗೆಗಳನ್ನು ಯಾಕೆ ಹಾಕಿಸಿಲ್ಲೆಂದು ಮಂತ್ರಿಗಳು ಅವರಿಗೆ ಕೇಳಲಾಗಿ, ತಾವು ಟೆಂಡರ ಕರೆದರೂ ಯಾರೂ ಟೆಂಡರ ಮುಂದೆ ಬಂದು ಟೆಂಡರ ಕೊಟ್ಟಿಲ್ಲೆಂದು ಹೊನ್ನತ್ತಿಯವರು ಉತ್ತರ ಕೊಟ್ಟರು! ಟೆಂಡರ ಬರದಿದ್ದರೆ ಖಾತೆಯವರೇ ಆ ಕೆಲಸ ಮಾಡಿಸಬಹುದಿತ್ತು, ಎಂದು ಅಲ್ಲಿ ಉಪಸ್ಥಿತರಿದ್ದ ಗೃಹಸ್ಥರೊಬ್ಬರು ನುಡಿಯಲಾಗಿ, ಈಗಿರುವ ಕಲ್ಲಿನ ಕಂಬಗಳ ಅಗಲ [illegible] ಅಡಿ ಇರುತ್ತದೆಂತಲೂ, ಅವುಗಳ ಮೇಲೆ ೨೪ ಅಡಿ ಅಗಲದ ಸ್ಲ್ಯಾಬುಗಳನ್ನು ಕೂಡ್ರಿಸಬರುವದಿಲ್ಲೆಂದೂ ಹೊಸ ಆಕ್ಷೇಪ ಮುಂದೊಡ್ಡಿದರು. ಸಿಮೆಂಟ ಹಲಿಗೆಗಳನ್ನು ಹಾಕಿಸುವದಾದರೆ ಹೊಸ ಸೇತುವೆಗಳನ್ನು ಕಟ್ಟಿಸಬೇಕಾಗುವದೆಂದೂ, ಅದಕ್ಕೆ ೪-೪|| ಲಕ್ಷ ರೂ. ಖರ್ಚು ಬರುವದೆಂದೂ ಒಂದು ಸೂಚನ ಮಾಡಿದರು. [illegible] ವರು, ಮಂತ್ರಿಗಳೂ ಸುಮ್ಮನಾಗುವರು ಎಂತು

[illegible]

* * *

[illegible] ಬೇ ಖಚಿತವಾಗುತ್ತದೆ. ಕಳೆದ ಮಾರ್ಚ ತಿಂಗಳ ಸುಮಾರಿಗೆ ಸದರಿ ಸಂಕದ ಒಂದು ಭಾಗದಲ್ಲಿ — ಎರಡು ಕಂಬಗಳ ಮೇಲಿನ ಒಂದು "ಗಾಲೆ"ಯಲ್ಲಿ — ಹಾಸಿದ ಕಟ್ಟಿಗೆ ತೊಲೆಗಳಿಗೆ ಯಾರೋ ಕಿಡಿಗೇಡಿಗಳು ಬೆಂಕಿ ಹಾಕಿದರು. (ಕಾಮಗಾರಿಯನ್ನು ಉಪಸ್ಥಿತ ಮಾಡುವದಕ್ಕಾಗಿ ಇಂಜನೇರ ಇಲಾಖೆಯವರೇ ಈ ಕಿಡಿಗೇಡಿತನ ಮಾಡಿಸಿದ್ದರೆಂದು ಒಂದು ವಾಹಿನಿಯುಂಟು). ಈ ಭಾಗದ ದುರುಸ್ತಿಗಾಗಿ ಉಪಯೋಗಿಸಿದ "ಜಂಗಲ" ಕಟ್ಟಿಗೆ ಬೆಡ್ತಿ ಹಳ್ಳದ ದಂಡೆಯ ಮೇಲೆ ಇಲ್ಲವೆ ಅದರ ಹತ್ತಿರ ಸಿಗುವಂತಿದ್ದರೂ ಇಂಜನೇರ ಇಲಾಖೆಯವರು ದುರುಸ್ತಿಗೆ ಬೇಕಾದ ಜಂಗಲ ಕಟ್ಟಿಗೆಯ ಸ್ಲೀಪರುಗಳನ್ನು ೬೦-೭೦ ಮೈಲು ದೂರದಿಂದ ತರಿಸಿಕೊಂಡರೆಂದು ತಿಳಿಯುತ್ತದೆ! ಈ ಹಂಗಾಮಿ ಸ್ವರೂಪದ ದುರುಸ್ತಿಗೆ ಪುನಃ ನಾಲ್ಕೋ ಐದೋ ಸಾವಿರ ರೂ. ಖರ್ಚು ಬಂತಂತೆ! ಶ್ರೀ|| ಹೊನ್ನತ್ತಿಯವರು ನಮ್ಮ ಜಿಲ್ಲೆಯ ಇಂಜನೇರರಾಗಿ ಬಂದಂದಿನಿಂದ ಸರಕಾರದಿಂದ ಬರುವ ಹಣ "ಲೆಪ್ಸ್" ಆಗುವದಿಲ್ಲ! ಏನಾದರೊಂದು ಕಾಮಗಾರಿಗಳನ್ನು ಮಾಡಿ — ಬೇರೆ ಏನೂ ಇಲ್ಲದಿದ್ದರೆ ವಾಯುಖಾನೆಗಳನ್ನು ಇಲ್ಲವೆ ಆವಾರದ ಗೋಡೆಗಳನ್ನು ಕಟ್ಟಿಸಿ — ಮಂಜೂರಾದ ಎಲ್ಲ ಹಣವನ್ನು ವರ್ಷಾಂತ್ಯದೊಳಗೆ ಖರ್ಚು ಮಾಡಿಸುತ್ತಾರೆ. ಸರಕಾರದ ಆರ್ಥಿಕಸ್ಥಿತಿ ಹೀಗಿದ್ದು [illegible] ಬಡ ಪ್ರಜೆಗಳಿಗೆ ಮಿತವ್ಯಯದ ಉಪದೇಶಮಾಡಲು ಅಧಿಕಾರಿಗಳಿಗೆ [illegible] ಹೇಗೆ ನಾಚಿಕೆಯಾಗುವದಿಲ್ಲವೋ ತಿಳಿಯದು.

* * *

ಬೆಳಗಾಂವಿಯ ಶ್ರೀ|| ದೊಡ್ಡಣ್ಣನವರ ಬಂಧುಗಳು ಕಟ್ಟಿಗೆಯ ಬಲು ದೊಡ್ಡ ವ್ಯಾಪಾರ ಮಾಡುತ್ತಾರೆ. ಬೆಳಗಾಂವಿಯಲ್ಲಿ ಅವರ ಕಟ್ಟಿಗೆ ಕೊರೆಯುವ ಕಾರಖಾನೆಯುಂಟು. ಅದರಲ್ಲಿ ೨-೩ ಕಟ್ಟಿಗೆ ಕೊರೆಯುವ [illegible] ([illegible])ಗಳಿವೆ. ಈ ಕಾರಖಾನೆಗೆ ಕಟ್ಟಿಗೆಯ [illegible] ದೊಡ್ಡಣ್ಣನವರ ಬಂಧುಗಳ ಸ್ವಂತ ಮೋಟಾರ ಬಂಡಿಗಳಿವೆ. ನಮ್ಮ ಜಿಲ್ಲೆಯಲ್ಲಿ ನಡೆಯುವ ಸರಕಾರ ಲಿಲಾಂವುಗಳಲ್ಲಿ ದೊಡ್ಡಣ್ಣನವರ ಬಂಧುಗಳು [illegible] ಕಟ್ಟಿಗೆ ಖರೀ

[illegible]

ಇಲಾಖೆಯ ಕಚೇರಿಗಳಲ್ಲಿ ದೊಡ್ಡಣ್ಣನವರ ಬಂಧುಗಳ ಕ್ಕೆ ದೊಡ್ಡದು. ವರಿಷ್ಠ ಜಂಗಲ ಅಧಿಕಾರಿಗಳು ದೊಡ್ಡಣ್ಣನವರಿಗೆ ದೊಡ್ಡ ಮರ್ಯಾದೆಕೊಟ್ಟು ನಡಿಸುತ್ತಿರುವದರಿಂದ ರೇಂಜರ, ಫಾರೆಸ್ಟರ, ಗಾರ್ಡ, ಕಾರಕೂನ ವಗೈರೆ ಕೆಳವರ್ಗದವರು ದೊಡ್ಡಣ್ಣನವರ ಬಂಧುಗಳ ಕಟ್ಟಿಗೆಯ ಗಾಡಿಗಳ ತಪಾಸಣೆಯನ್ನು ವಿಶೇಷ ಲಕ್ಷ್ಯದಿಂದ ಮಾಡಲು ಅಥವಾ ಅವರ ಕಳ್ಳಾಟಿಕೆಯನ್ನು ಹಿಡಿಯಲು ಧೈರ್ಯ ಪಡುವದಿಲ್ಲ. ದೊಡ್ಡಣ್ಣನವರ ರೋಷಕ್ಕೆ ತಾವು ಎಲ್ಲಾದರೂ ಗುರಿಯಾದರೆ ಹಿರಿಯ ಅಧಿಕಾರಿಗಳ ರೋಷಕ್ಕೂ ಗುರಿಯಾಗಬೇಕಾದೀತೆಂದು ಅವರು ಬೆದರುತ್ತಾರೆ. ಹೀಗಾಗಿ ಮುಲ್ಲಾಪುರ-ಬೆಳಗಾಂವ ಮಾರ್ಗದಲ್ಲಿರುವ ಜಂಗಲ ನಾಕೆಗಳಲ್ಲಿನ ತಪಾಸಣೆ-ಅಧಿಕಾರಿಗಳು ದೊಡ್ಡಣ್ಣನವರ ಬಂಧುಗಳ ಗಾಡಿಗಳ ಹೆಚ್ಚಿನ ತಪಾಸಣೆಯನ್ನು ಮಾಡದೆ ಆ ಗಾಡಿಗಳ ಸಂಗಡ ಇರುವ ರಪ್ತಿಯ ಚೀಟಿಗಳಲ್ಲಿ ಕಣ್ಮುಚ್ಚಿ "ಆಲ ಬೇಲ" ಶರಾ ಮಾಡಿ ಕೊಡುತ್ತಿದ್ದರೆಂಬುದುದನ್ನು ಎಷ್ಟೋ ಜನ ನೋಡಿದ್ದಾರೆ ಅದರಿಂದ ದೊಡ್ಡಣ್ಣನವರ ಬಂಧುಗಳ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ ಲಿಮಿಟೆಡ್,

ಭಟಕಳ.

ಜಾಹೀರ ಲಿಲಾಂವಿನ ನೋಟೀಸು.

ಈ ಕೆಳಗೆ ಕಾಣಿಸಿದವರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಈ ಕೆಳಗೆ ಕಾಣಿಸಿದ ಸಾಲಗಳನ್ನು ರಿಜಿಸ್ಟ್ರಿ ನೋಟೀಸು ಕೊಟ್ಟರೂ ಸಹ, ಅಸಲು, ಬಡ್ಡಿ ಮುಂತಾದವುಗಳನ್ನು ಬೇಂಕಿಗೆ ಪಾವತಿ ಮಾಡಿ ಈಡಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದುದರಿಂದ ಸದರಿಯವರಿಗೂ ಅವರಿಗೆ ಸಂಬಂಧ ಪಟ್ಟವರಿಗೂ ಈ ಮೂಲಕ ತಿಳಿಯಪಡಿಸುವದೇನೆಂದರೆ:— ಸದರಿ ಸಾಲಗಳ ಹಾಗೂ ಅವುಗಳ ಬಡ್ಡಿ ವಗೈರೆಗಳನ್ನು ಬೇಂಕಿಗೆ ಪಾವತಿ ಮಾಡಿ ಸದರಿ ಸಾಲಗಳನ್ನು ಈ ನೋಟೀಸಿನ ತಾರೀಖಿನಿಂದ ಒಂದು ವಾರದೊಳಗಾಗಿ ಚುಕ್ತಾ ಪಡಿಸದೆ ಇದ್ದಲ್ಲಿ, ಆ ಬಗ್ಗೆ ಈಡಿಟ್ಟ ನಗಗಳನ್ನು ತಾ. 15-7-1959ನೇ **ಬುಧವಾರ ಅಪರಾಹ್ನ 3½ ಘಂಟೆಗೆ** ಅಥವಾ ಸಮಗೆ ಯುಕ್ತ ಕಂಡ ಇನ್ನಾವದೇ ದಿವಸ, ಸದರಿಯವರಿಗೆ ಪುನಃ ಇನ್ನಾವ ತರದ ನೋಟೀಸು ಕೊಡದೆ, ಈ ಆಫೀಸಿನಲ್ಲಿ ಜಾಹೀರ ಲಿಲಾಂವಿನಿಂದ ವಿಕ್ರಯಿಸಿ, ಬಂದ ರಕಮನ್ನು ಆಯಾ ಸಾಲಗಳಿಗೆ, ಅವುಗಳ ಅಸಲು-ಬಡ್ಡಿ ವಗೈರೆಗಳ ಬಗ್ಗೆ ಜಮಾಗೊಂಡು ಇನ್ನೂ ಸಾಲದೆ ಹೋದಲ್ಲಿ ಆಯಾ ಸಾಲಗಾರರ ಮೇಲೆ ಬಾಕಿಯಾಗುವ ರಕಮುಗಳ ಬಗ್ಗೆ ಮುಂದಿನ ಕ್ರಮ ನಡಿಸಲಾಗುವದು. ತಿಳಿದಿರಲ್ಲಿ.

ಅ. ನಂಬ್ರ	ಸಾಲದ ನಂಬ್ರ	ಸಾಲಗಾರರ ಹೆಸರು ಹಾಗೂ ವಿಳಾಸ.	ಸಾಲಗಳರಖಂ ರೂ- ನ.ಪೈ.
1	569/56	ಮಿ|| ಮೊಹಮ್ಮದ ಗೌಸ ಶೇಕ್ ಹಸನ್ ಕಲ್ಲೈವಾಲಾ, ಸುಲ್ತಾನೀ ಸ್ಟ್ರೀಟ್, ಭಟ್ಕಳ.	Rs. 25/-
2	702/56	ಮಿ|| ಮೆಡಿಕಲ್ ಮೊಹಮ್ಮದ S/o ಅಬೂಬಕರ ಸ್ಯಾಬ ಸಿದ್ದೀಕ ಸ್ಟ್ರೀಟ್, ಭಟ್ಕಳ	Rs. 100/-
3	748/56	ಮಿ|| ಅಹಮ್ಮದಖಾನ ಇಬ್ರಾಹಿಮಖಾನ, ಉರ್ದುಸ್ಕೂಲ ಮಾಸ್ತರ, ಭಟ್ಕಳ	Rs. 60/-
4	103/57	ಶ್ರೀ|| ವಿಷ್ಣು ಗೋಪಾಳ ತುಳಸಕರ, ಪೋಲೀಸ ಡಿಪಾರ್ಟಮೆಂಟ, ಬಕಲ್ ನಂಬ್ರ 173, ಭಟ್ಕಳ.	Rs. 89/-
5	580/57	ಮಿ|| ಎಸ್. ಎಮ್. ಸೈಯದ ಫಜಲ್ S/o ಎಸ್. ಎಮ್. ಸೈಯದ ಮೀರಾನ ಸ್ಯಾಬ, ಸುಲ್ತಾನಿ ಸ್ಟ್ರೀಟ್, ಭಟ್ಕಳ	Rs. 175/-
6	723/57	ಮಿ|| ಬರ್ನ್ಯಾವರ ಸೈಯದ ಮೈದಿನ್ S/o ಸೈಯದ ಫಜಲ್, ಸುಲ್ತಾನೀ ಸ್ಟ್ರೀಟ್, ಭಟ್ಕಳ.	Rs. 20/-
7	4/58	——— ಡಿ ———	Rs. 90/-
8	139/58	——— ಡಿ ———	Bs. 15/-

ಭಟ್ಕಳ.
22-6-1959

C. D. PAI.
ಏಜಂಟ, ಭಟ್ಕಳ ಬ್ರೆಂಚ್.

ಕರ್ನಾಟಕ ವಿದ್ಯಾವ

[illegible]

* * *

[illegible]

* * *

[illegible] ಈ ದೊಡ್ಡ ಕಳವಿನ ಪ್ರಕರಣ [illegible] ಮುಚ್ಚಿಹಾಕಲು ದೊಡ್ಡಣ್ಣನವರು ಸ್ಥಳಿಕ ಸರಕಾರಿ ಕಚೇರಿಗಳಲ್ಲಿ ಧನಪ್ರಯೋಗ ಪ್ರಯತ್ನ ಮಾಡಿದರು. ಆದರೆ ಅವರಿಗೆ ಯಶಸ್ಸು ಸಿಗಲಿಲ್ಲ. ದೊಡ್ಡಣ್ಣನವರ ಬಗ್ಗೆ ಮಮತ್ವವುಳ್ಳ ಅಧಿಕಾರಿಗಳು ಈಗ ಬೆಂಗಳೂರಿಗೆ ವರ್ಗವಾಗಿ ಹೋಗಿದ್ದಾರೆ. ಹೊಸ ಅಧಿಕಾರಿಗಳು ದೊಡ್ಡಣ್ಣನವರನ್ನು ಕ್ಷಮಿಸಲು ಅಥವಾ ಕಾಯಲು ಒಪ್ಪುವದಿಲ್ಲ. ಆದರಿಂದ ದೊಡ್ಡಣ್ಣನವರ ಬಂಧುಗಳಲ್ಲೋರ್ವರಾಗಿರುವ ಶ್ರೀ|| ಕೋಮಲರಾಯರು ವಿಧಾನ ಸೌಧದೊಳಗಿನ ಸಚಿವಾಲಯದಲ್ಲೇ ತಮ್ಮ ಬೇಳೆ ಬೇಯಿಸಲು ಪ್ರಯತ್ನಿಸುತ್ತಿದ್ದಾರೆಂದು ವಿಶ್ವಸನೀಯವಾದ ವಾರ್ತೆಯುಂಟು. ಈ ತಿಂಗಳ ಮೊದಲಿನ ವಾರದಲ್ಲಿ ಕೋಮಲರಾಯರು ದಿನವಿಡೀ ಬೆಂಗಳೂರಿನ ಸಚಿವಾಲಯದಲ್ಲೇ ಸುಳಿದಾಡುತ್ತಿದ್ದರೆಂದು ಚಿತ್ರಗುಪ್ತರು ನಮೂದಿಸಿಟ್ಟಿದ್ದಾರೆ.

ವಾರ್ತೆಗಳು.

—ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀಮತಿ ಇಂದಿರಾ ಗಾಂಧಿಯವರ ಆದೇಶಕ್ಕನುಸಾರವಾಗಿ ಕಳೆದವಾರ ಕಾಂಗ್ರೆಸ್ಸಿನ ಹಿಂದಿನ ಅಧ್ಯಕ್ಷ ಶ್ರೀ|| ಢೇಬರರು ಕೇರಳದಲ್ಲಿ ಸಂಚಾರ ಮಾಡಿ ಅಲ್ಲಿಯ ಸಮಗ್ರ ಪರಿಸ್ಥಿತಿಯ ಅಭ್ಯಾಸಮಾಡಿ ಮರಳಿ ದಿಲ್ಲಿಗೆ ಹೋಗಿದ್ದಾರೆ. ಕೇರಳದ ಅಶಾಂತ ಪರಿಸ್ಥಿತಿಗೆ ಅಲ್ಲಿಯ ಕಮ್ಯುನಿಸ್ಟ ಸರಕಾರವೇ ಮುಖ್ಯ ಹೊಣೆಗಾರವಿರುತ್ತದೆಂದು ಶ್ರೀ|| ಢೇಬರರ ಅಭಿಪ್ರಾಯವಾಗಿದೆ.

—ಅವರಿವರ ವರದಿಗಳನ್ನು ನಂಬದೆ ಸ್ವತಃ [illegible] ಕೇರಳಕ್ಕೆ ಬಂದು ಅಲ್ಲಿಯ ಪರಿಸ್ಥಿತಿಯನ್ನು [illegible]

[illegible] ನಾಳೆಯವರೆಗೂ ಅವರು ಅಲ್ಲಿ ಸಂಚಾರದಲ್ಲಿರುವರು. [illegible] ಅವರು ಕೇರಳದ ಮುಖ್ಯಮಂತ್ರಿಗಳನ್ನು [illegible]

—[illegible] "ಹಿಂದು" [illegible]

[illegible] ರಂಗ ಅಯ್ಯಂಗಾರರು ನಿರ್ಯಾಣ ಹೊಂದುತ್ತಲೇ ಪತ್ರಿಕೆಯ ಪ್ರಧಾನ ಸಂಪಾದಕರಾಗಿದ್ದರು. ಪತ್ರಿಕಾ ಸ್ವಾತಂತ್ರ್ಯದ ಬಗ್ಗಾಗಿ ಹೋರಾಡಿದ ಭಾರತೀಯ [illegible] ವೀರರಲ್ಲಿ ಶ್ರೀನಿವಾಸನ್ನರು ಅಗ್ರಗಣ್ಯರಿರುತ್ತಾರೆ. "ಹಿಂದು" ಪತ್ರಿಕೆಯ ಪ್ರತಿಷ್ಠೆಯನ್ನೂ ಅವರು ಬೆಳಸಿದ್ದಾರಲ್ಲದೆ ಪಕ್ಷಾತೀತ ಸ್ವತಂತ್ರ ಪತ್ರಿಕೆಯನ್ನಾಗಿ ಮಾಡಿದ್ದಾರೆ.

—ಕಳೆದ [illegible] ಶ್ರೀಲಂಕೆಗೆ ಹೋಗಿದ್ದ ರಾಷ್ಟ್ರಪತಿ ಡಾ|| ರಾಜೇಂದ್ರ ಪ್ರಸಾದರು ನಿನ್ನೆ ಬೆಂಗಳೂರಿಗೆ ಮರಳಿ ಬಂದಿದ್ದಾರೆ. ಲಂಕೆಯಲ್ಲಿ ನಮ್ಮ ರಾಷ್ಟ್ರಪತಿಗಳಿಗೆ ಎಲ್ಲೆಡೆ ಹಾರ್ದಿಕ ಸ್ವಾಗತ ದೊರೆಯಿತು.

—ಕೇರಳದ ಪರಿಸ್ಥಿತಿ ಕೆಡುತ್ತಾ ನಡೆದಿದೆಂದೂ ರಾಷ್ಟ್ರಪತಿಗಳು ಆ ರಾಜ್ಯದಲ್ಲಿ ರಾಷ್ಟ್ರಪತಿಗಳ ಆಳಿಕೆಯನ್ನು ಜಾರಿಯಲ್ಲಿ ತರುವದು ಒಳಿತು ಎಂದು [illegible] ಶ್ರೀ|| ಕನ್ಹಯ್ಯಾಲಾಲ ಮುನಶಿ ಇವರ ಅಭಿಪ್ರಾಯವಾಗಿದೆ.

ನಿಮ್ಮ
ಜೀವ ವಿಮಾ
ಪಾಲಿಸಿ

- ● ಪಾಲಿಸಿಯ ಶರತ್ತುಗಳನ್ನು ಧ್ಯಾನಪೂರ್ವಕವಾಗಿ ಓದಿರಿ
- ● ಪ್ರೀಮಿಯಮ್ ಕೊಡುವ ತಾರೀಖುಗಳನ್ನು ಬರೆದಿಟ್ಟುಕೊಳ್ಳಿರಿ.
- ● ಪ್ರಾಯದ ರುಜುವಾತು (ಪ್ರಮಾಣ) ಒಪ್ಪಿಸುವುದು, ನೋಮಿನೇಶನ್ (ಹಕ್ಕುದಾರನನ್ನು ನೇಮಿಸುವುದು) ಅಥವಾ ಅಸೈನ್‌ಮೆಂಟ್ (ಹಕ್ಕನ್ನು ಮತ್ತೊಬ್ಬರಿಗೆ ಬರೆದು ಕೊಡುವುದು) ಇತ್ಯಾದಿ ಮಾಡತಕ್ಕ ಎಲ್ಲ ಕೆಲಸಗಳನ್ನು ಈ ಮೊದಲೇ ಮಾಡಿರದಿದ್ದರೆ ಅವುಗಳನ್ನು ಕೂಡಲೇ ಪೂರ್ತಿಗೊಳಿಸಿರಿ
- ● ನಿಮ್ಮ ಪಾಲಿಸಿಯನ್ನೂ ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನೂ ಸುರಕ್ಷಿತವಾಗಿಟ್ಟುಕೊಳ್ಳಿರಿ

ಈ ವಿಷಯಗಳಲ್ಲಿ ನಿಮಗೇನಾದರೂ ಸಲಹೆ ಬೇಕಾದರೆ ನಿಮ್ಮ ಎಲ್.ಐ.ಸಿ. ಏಜಂಟರನ್ನು ಅಥವಾ ಫೀಲ್ಡ್ ಆಫೀಸರರನ್ನು ವಿಚಾರಿಸಿರಿ

*

ಲೈಫ್ ಇನ್‌ಷೂರನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

ಹಳೆಯ ಪತ್ರಿಕೆಗಳ ಹೆಸರು

ಅ.ನಂ.	ಪತ್ರಿಕೆ ಹೆಸರು	ಅವಧಿ	ಸಂಪುಟ	ಸಂಚಿಕೆ	ವರ್ಷ
1.	[illegible]	ಮಾಸ ಪತ್ರಿಕೆ	17	2	1904
2.	[illegible]	ಮಾಸ ಪತ್ರಿಕೆ	1	6	1925
3.	[illegible]		1	2–3	1849
4.	[illegible]		92	5	1952
5.	[illegible]		1	5	1946
6.	[illegible]	ಮಾಸ ಪತ್ರಿಕೆ	2	6	1
7.	[illegible]		1	2	1956
8.	[illegible]	ಮಾಸ ಪತ್ರಿಕೆ	5	3	1947
9.	[illegible]	ಮಾಸ ಪತ್ರಿಕೆ	2	8	1929
10.	[illegible]	ಮಾಸಪತ್ರಿಕೆ	3	2	1950
11.	[illegible]	ಮಾಸಪತ್ರಿಕೆ	1	1	1842
12.	[illegible]	ಮಾಸಪತ್ರಿಕೆ	1	4	1908
13.	[illegible]	ತ್ರೈಮಾಸಿಕ	1	2	1927
14.	[illegible]	ಮಾಸ ಪತ್ರಿಕೆ	4	3	1952
15.	ಕರ್ನಾಟಕ ಚಂದ್ರಿಕೆ	ಮಾಸ ಪತ್ರಿಕೆ	11	10–11–12	
16.	ಕರ್ನಾಟಕ [illegible]		1		1921
17.	ಕನ್ನಡ ಕೋಗಿಲೆ	ಮಾಸ ಪತ್ರಿಕೆ	3	4	1918
18.	ಕನ್ನಡ [illegible]		1	4	1916
19.	ಒಕ್ಕಲಿಗ	ಮಾಸ ಪತ್ರಿಕೆ	5	3	1952
20.	ರೈತ ಬಂಧು	ಮಾಸ ಪತ್ರಿಕೆ	1	2	1845
21.	ವೀರಶೈವ ಧರ್ಮಪ್ರಕಾಶಿಕೆ		8	8	1923
22.	ವೀರಶೈವ ಚಂದ್ರಿಕೆ		1	8	1934
23.	ಕರ್ನಾಟಕ ಶಿಕ್ಷಕ	ದ್ವೈಮಾಸಿಕ ಪತ್ರಿಕೆ	3	4	
24.	ಕರ್ನಾಟಕ ಚಂದ್ರಿಕೆ	,,	10	2–3	
25.	ಕರ್ನಾಟಕ ಬಂಧು	ಮಾಸ ಪತ್ರಿಕೆ	1	2	
26.	ವಿವೇಕ	ವಾರ ಪತ್ರಿಕೆ	1	1	1951
27.	ಯುಗಪುರುಷ	ಮಾಸ ಪತ್ರಿಕೆ	3	1	1949
28.	ಜ್ಞಾನಾಂಜನ	ಮಾಸ ಪತ್ರಿಕೆ	1	6	1919
29.	ವಿವೇಕಾಭ್ಯುದಯ	ದ್ವಿಮಾಸಿಕ ಪತ್ರಿಕೆ	1	1–2	1933
30.	ಸುಬೋಧ	,,	1	2	1924
31.	ಪ್ರೇಮ	ತ್ರೈಮಾಸಿಕ ಪತ್ರಿಕೆ	3	2	1926
32.	ವಾಣಿ	—	4	3	1946
33.	ಸವಿನುಡಿ	ಮಾಸ ಪತ್ರಿಕೆ	16	1	—
34.	ಭಾವನ್ಸ ಜರ್ನಲ್	—	5	9	1958
35.	ಮಾಡರ್ನ [illegible] ಬುಲೆಟಿನ	—	1	2	1939
36.	ಮೈಸೂರ ವಾಣಿ	ಮಾಸ ಪತ್ರಿಕೆ	2	7	1913

1.	2	3	4	5	6
37.	ಶರಣ ಸಾಹಿತ್ಯ		3	4	1862
38.	[illegible]	ಮಾಸ ಪತ್ರಿಕೆ	13	5	1948
39.	[illegible]	ಮಾಸಪತ್ರಿಕೆ	1	3	1930
40.	[illegible]		3	2	1042
41.	[illegible]				1949
42.	[illegible]		2	12	1950
43.	[illegible]		3	9	1942
44.	[illegible]		66	7	1929
45.	[illegible]	ಮಾಸ ಪತ್ರಿಕೆ	[illegible]	2	1923
46.	[illegible]	ಮಾಸ ಪತ್ರಿಕೆ	2	3	1909
47.	[illegible]	ಮಾಸ ಪತ್ರಿಕೆ	1	1	
48.	[illegible]		5	23	1938
49.	[illegible]	[illegible]	3	12	1951
50.	[illegible]		1	7	1913
51.	[illegible]	ಮಾಸ ಪತ್ರಿಕೆ	1	10	1988
52.	[illegible]		1	1	1940
53.	[illegible]	ಮಾಸ ಪತ್ರಿಕೆ	1	3	
54.	ಕಿರಣ	ಮಾಸ ಪತ್ರಿಕೆ	1	11–12	1952
55.	ಸಂಗ್ರಾಮ	ಮಾಸ ಪತ್ರಿಕೆ	1	1	1953
56.	ಸದ್ವಿದ್ಯ	ಮಾಸ ಪತ್ರಿಕ	1	4	1931
57.	ಬಾಲಚಿತ್ರ		1	2	1921
58.	ನವಿ	ಪಾಕ್ಷಿಕ ಪತ್ರಿಕೆ	1	2	1951
59.	ದೇವಭೂರಾಜ	ಮಾಸಪತ್ರಿಕೆ			1928
60.	ಪುರಾಣ		1	2	1927
61.	ಕನ್ನಡ ಪ್ರಾಥಮಿಕ ಶಿಕ್ಷಣ		82	7–8–9	1943
62.	ಸುಧಾಕರ		1	1	1849
63.	ಗ್ರಾಮ ಜೀವನ	ಮಾಸಪತ್ರಿಕೆ	4	4	1958
64.	ಅಂತರ್ವೈದ್ಯ		7	12	1953
65.	ವೀರ ಸಂದೇಶ		1	2	1928
66.	ಸರ್ವೋದಯ	ಮಾಸ ಪತ್ರಿಕೆ	2	11	1952
67.	ಜೈನ ಹಿತೈಷಿ	ಮಾಸಿಕ	1	3	
68.	ವಿಜ್ಞಾನ	ಮಾಸ ಪತ್ರಿಕೆ	2	2	
69.	ಪರಮಾರ್ಥ	ಮಾಸ ಪತ್ರಿಕೆ	2	9	
70.	ಅಖಂಡ ಕರ್ನಾಟಕ	ಮಾಸ ಪತ್ರಿಕೆ	1	2	1850
71.	ಆರ್ಯಕಂಕಣ		1	8	1939
72.	ಆತ್ಮ ವಿಚಾರ		1	2	1950
73.	ಸಾಹಿತ್ಯ	ತ್ರೈಮಾಸಿಕ	1	1	1929
74.	ಶಿವಾನುಭವ	ತ್ರೈಮಾಸಿಕ	3	9	1928
75.	ನಮ್ಮ ಪುಸ್ತಕ		2	3	1937
76.	ಶರಣ ಸಾಹಿತ್ಯ		3	1	1859
77.	ಸುವಾಸಿನಿ		5	3	1927
78.	ಮಕ್ಕಳ ಪುಸ್ತಕ		14	3	1940
79.	ಸಮಾಜ	ಮಾಸಿಕ	7	9	1941
80.	ವಿದ್ಯಾದಾಯಿನಿ		13	8	1905

(ಪು. ತಿ. ನೋ –3–)

1.	2	3	4	5	6
81	[illegible]	ಮಾಸಪತ್ರಿಕೆ	1	1	1924
82	[illegible]	ಮಾಸಪತ್ರಿಕೆ	2	11	1934
83	[illegible]		1	1	1953
84	[illegible]	ಮಾಸಿಕ	1	2	1950
85	[illegible]	ಮಾಸಿಕ	5	7	1947
86	[illegible]	ಮಾಸಪತ್ರಿಕೆ	1	9	1848
87	[illegible]	ಮಾಸಪತ್ರಿಕೆ	1	10	1931
88	[illegible]	ತ್ರೈಮಾಸಿಕ	2	7	1941
89	[illegible]	ತ್ರೈಮಾಸಿಕ	1	1	1948
90	[illegible]	ಮಾಸಿಕ	3	10–11	
91	[illegible]		4	2	1952
92	[illegible]	ಮಾಸ ಪತ್ರಿಕೆ	1	1	1924
93	[illegible]	ಮಾಸಪತ್ರಿಕೆ	3	2	1926
94	[illegible]	ಮಾಸಪತ್ರಿಕೆ	2	7	1927
95	[illegible]		1	1	1849
96	[illegible]		30	11	1952
97	[illegible]		1	12	1950
98	ಆಧ್ಯಾತ್ಮ ಪ್ರಕಾಶ		13	4	1941
99	[illegible]	ಮಾಸಪತ್ರಿಕೆ	1	1	1849
100	ವಿಶ್ವಬಂಧು		1	20	1951
101	[illegible]	ಮಾಸಿಕ	4	5	1953
102	ಬನಶಂಕರೀ	ಮಾಸಪತ್ರಿಕೆ	1	1	1927
103	ಪರಿವಾರ ಪತ್ರಿಕೆ	ಮಾಸಪತ್ರಿಕೆ	1	1	1927
104.	ಕರ್ನಾಟಕ ಸಹಕಾರಿ ಮಿತ್ರ	ಮಾಸಪತ್ರಿಕೆ	1	2	1922
105.	ಆಧ್ಯಾತ್ಮ ಪ್ರಕಾಶ		11	9	1940
106.	ವಿಶ್ವಲಿಗರೂ ಒಕ್ಕಲುತನವೂ	ಮಾಸಪತ್ರಿಕೆ	20	1–2	1930
108.	ಕನ್ನಡ ಸಾಹಿತ್ಯಪರಿಷತ್ಪತ್ರಿಕೆ		26	1	1941
109.	ಚಂದ್ರೋದಯ	ಮಾಸಿಕ	3	1	1916
110	ಜ್ಞಾನೋದಯ		1	9	1897
111.	ಜೀವನ ಕಲಾ	ಮಾಸಿಕ	93	3	1957
112	ಸರಸ್ವತಿ		2	4	1923
113.	ಶಿಕ್ಷಕ ಬಂಧು	ಮಾಸಪತ್ರಿಕೆ	1		1934
114.	ಸದ್ಬೋಧ ಚಂದ್ರಿಕೆ	ಮಾಸಪತ್ರಿಕೆ	4	10	1912
115.	ಸುಧಾಕರ	ತ್ರೈಮಾಸಿಕ	5	2	1927
116	ಶ್ರೀ ಜಿನವಿಜಯ	ಮಾಸಿಕ	7	6	1912
117.	ಸ್ವಧರ್ಮ	ಮಾಸಿಕ	1	2	1846
118.	ವಸಂತ	ಮಾಸಿಕ	1	2	
119.	ಸರಸ್ವತಿ	ಮಾಸಿಕ	20	11–12	1950
120	ಕಾವ್ಯಾಮೃತ	ಕನ್ನಡ ಸಾಹಿತ್ಯ ಸಮ್ಮೇಳನಾಂಕ			1953
121.	ಮಹಿಳಾ ಜ್ಞಾನೋತ್ಕರ್ಷ ಮಾಲಾ	ತ್ರೈಮಾಸಿಕ	1	3	1917
122.	ಬೋಧಕ ಬೋಧಿನಿ	ಮಾಸಪತ್ರಿಕೆ	22	5	1926
123.	ಜಗದ್ಗುರು		2	9	
124.	ಜಯ ಹಿಂದ	ವಾರ ಪತ್ರಿಕೆ			1947
125.					

ಸ.ಪ.
ಕರ್ನಾಟಕ ವಿದ್ಯಾವರ್ಧಕ ಸಂಘ
ಧಾರವಾಡ.

ಸವಿನುಡಿ.

ಕನ್ನಡನುಡಿಯ ಮಾಸಪತ್ರಿಕೆ.

ಯಾಂತಿನ್ಯಾಯ ಪ್ರವೃತ್ತಸ್ಯ ತಿರ್ಯಂಚೋಪಿ ಸಹಾಯತಾಂ।

ಸಂಪುಟ ೧೬.] ಆನಂದ ಸಂ॥ ಆಶ್ವಿಯುಜ ಮಾಸ. [ಸಂಚಿಕೆ ೧.

ರಾಜಾ ಸರ್ ಟಿ. ಮಾಧವರಾಯರು.

ಭಾರತ ಮಾತೆಯ ಗರ್ಭದಲ್ಲಿ ಉದಯಿಸಿದ ಉತ್ತಮೋತ್ತಮರಾದ ಪುರುಷಪುಂಗವರಲ್ಲಿ ರಾಜಾ ಸರ್ ಟಿ. ಮಾಧವರಾಯನೊಬ್ಬಾತನು. ರಾಜ್ಯತಂತ್ರಪರಿಜ್ಞಾನದಲ್ಲಿ ಈತನು ಅದ್ವಿತೀಯ ಸಮರ್ಥನು. ಅಕ್ರಮ ಪರಿಪಾಲನೆಯ ದೆಸೆಯಿಂದ ಅಲ್ಲಕಲ್ಲೋಲವಾಗಿದ್ದ ಮೂರು ಸ್ವದೇಶ ಸಂಸ್ಥಾನಗಳಿಗೆ ಈತನು ಮುಖ್ಯ ಮಂತ್ರಿಯಾಗಿದ್ದು ಅವುಗಳಲ್ಲಿ ಸತ್ಪರಿಪಾಲನೆಯನ್ನು ಸ್ಥಾಪಿಸಿದನು.

ಈ ಮಹಾಪುರುಷನು ಕಾವೇರೀ ತೀರದ ಕುಂಭಕೋಣವೆಂಬ ಪಟ್ಟಣದಲ್ಲಿ ಕ್ರಿಸ್ತ ೧೮೨೮ನೆಯ ವರುಷದಲ್ಲಿ ಜನಿಸಿದನು. ಇವರ ವಂಶವು ಕೇವಲ ಗೌರವನೀಯವಾದುದು. ಮಹಾರಾಷ್ಟ್ರ ಬ್ರಾಹ್ಮಣರು. ಮಾಧವರಾಯರ ತಂದೆಯು ರಂಗರಾವೆಂಬುನವರು. ತಿರುವಾಂಕೂರಲ್ಲಿ ದಿವಾನನಾಗಿದ್ದಾತನು. ಆತನ ಚಿಕ್ಕತಂದೆಯಾದ ರಾಯರಾಯರಾಯ ವೆಂಕಟರಾಯರುಕೂಡ ಆ ಸಂಸ್ಥಾನದಲ್ಲಿಯೆ ಮಂತ್ರಿಯಾಗಿದ್ದಾತನು. ಮಾಧವರಾಯನಿಗೆ ಗಣಿತಶಾಸ್ತ್ರವೂ, ಪ್ರಕೃತಿಶಾಸ್ತ್ರವೂ ಪ್ರಿಯತಮವಾದುವು. ಜ್ಯೋತಿಶ್ಶಾಸ್ತ್ರ ಪರಿಶೋಧನೆಯಲ್ಲಿಯು ಈತನಿಗೆ ಅತಿಕುತೂಹಲವು. ಆತನು ೧೮೪೬ನೆಯ ವರುಷದಲ್ಲಿ ಪಟ್ಟಪರೀಕ್ಷೆ (ಬಿ. ಎ.) ಯಲ್ಲಿ ಕೃತಾರ್ಥನಾದನು. ನಂತರ ಆತನು ತಾವು ವಿದ್ಯೆಯನ್ನೋದಿದಂತಹುದೂ, ತನ್ನ ವಿಶ್ವಾಸಪಾತ್ರನಾದ ಗುರು ಪವೆಲ್ ದೊರೆಯು ಪ್ರಧಾನೋಪಾಧ್ಯಾಯನಾಗಿರುವಂತಹುದೂ ಆದ ಪಾಠಶಾಲೆಯಲ್ಲಿ ಬೋಧಕನಾಗಿ ಪ್ರವರ್ತಿಸಿದನು. ಅದರೂ ಈ ಅಧಿಕಾರದಲ್ಲಿ ಆತನು ಬಹುಕಾಲವಿರಲಿಲ್ಲ, ಸ್ವಲ್ಪ ದಿನಗಳಲ್ಲಿಯೆ ತಿರುವಾಂಕೂರ ಯುವರಾಜನಿಗೆ ಇಂಗ್ಲಿಷ್ ಭಾಷೆಯನ್ನು ಕಲಿಸುವ ಉಪಾಧ್ಯಾಯನಾಗ

ಸವಿನುಡಿ—ಕನ್ನಡದ ಮಾಸಿಕ ಪತ್ರಿಕೆ. ಪ್ರತಿತಿಂಗಳೂ ಮೊದಲ
ನೆಯ ವಾರದಲ್ಲಿ ಪ್ರಕಟವಾಗುವುದು.

ಕೇರಳದ [illegible]. ರಾಜಾ ರಾಮವರ್ಮನೇ ಮೊದಲಾದ ಅರಸು ಮಕ್ಕಳಿಗೆಲ್ಲರು ಆತನಿಂದ ಈ [illegible] ವಿದ್ಯಾಭ್ಯಾಸ ಮಾಡಿದರು.

[illegible] ಈ ಉಪಾಧ್ಯಾಯ [illegible] ನಂತರ ಆತನು [illegible] ಕೊಂಡನು, [illegible] ಎಲ್ಲ [illegible]! [illegible] ಅಂತಹ [illegible]

[illegible]

[illegible]

ಪ್ರಶ್ನೋತ್ತರ ಲೇಖ್ಯಬೋಧಿನಿ. ಐದನೆಯ ಮುದ್ರಣ. ಅಂಚೆಯುವೆಚ್ಚ

ದುರ್ಬಲನು. ಆತನ ಮಂತ್ರಿಯೂ ಆತನಂತೆಯೇ ಅಸಮರ್ಥನು. ಹೀಗಿರುವಾಗ ದೇಶದ ಸ್ಥಿತಿಗತಿಗಳನ್ನು ಬೇರೆ ಹೇಳಬೇಕಾದುದೇನು? ಅಧರ್ಮವೂ ಅಕ್ರಮವೂ ರಾಜ್ಯದಲ್ಲಿ ಸ್ವೇಚ್ಛೆಯಾಗಿ ಅಧಿಕಾರ ಮಾಡುತಿದ್ದಿತು. ಈಸಂಸ್ಥಾನವನ್ನು ಕೂಡ ಆಂಗ್ಲೇಯ ರಾಜ್ಯದಲ್ಲಿ ಕಲೆಸುವುದಕ್ಕೆ ತಕ್ಕಷ್ಟು ಅವಕಾಶವು ಆಳ್ವರೆಯುವರಿಗೆ ಕಾಣ್ಬಾಂದಿತು. ಈ ಸಂಗತಿಯನ್ನು ಕುರಿತು ಡಾಲ್ಹೌಸೀ ಪ್ರಭುವಿಗೂ ಮದರಾಸಿನ ಸ್ಥಾನಿಕ ಪ್ರಭುತ್ವದವರಿಗೂ ಆಲೋಚನೆಗಳು ನಡೆಯುತಿದ್ದುವು. ಆಗ ಮಹಾರಾಜನು ತನ್ನ ದೀರ್ಘನಿದ್ರೆಯಿಂದೆಚ್ಚತ್ತು ಕಣ್ತೆರೆದು ನೋಡಿದನು. ದೇಶದ ದುರ್ದೆಸೆಯನ್ನು ಕುರಿತು ಬಲು ಮರುಗಿದನು. ರಾಜ್ಯಕ್ಕೆ ಉಂಟಾಗಬಹುದಾದ ಉಪದ್ರವವನ್ನು ಕುರಿತು ಮತ್ತಷ್ಟು ಅಂಗಲಾಚಿಕೊಂಡನು. ತನ್ನ ದೇಶವನ್ನು ಅಂತಹ ದುಸ್ಥಿತಿಯಿಂದ ತಪ್ಪಿಸಿ, ಅದನ್ನು ಬ್ರಿಟಿಷಿನವರ ಪಾಲಾಗದಂತೆ ನೆಲೆಗೆ ನಿಲಿಸುವಂತಹ ಬುದ್ಧಿಶಾಲಿಯೂ, ನೀತಿವಂತನೂ, ರಾಜ್ಯತಂತ್ರವಿಶಾರದನೂ , ಆದ ಮಂತ್ರಿಪುಂಗವನಾರಾದರೂ ದೊರೆತರೆ ಚೆನ್ನಾಗಿದ್ದೀತೆಂದು ಯೋಚಿಸಿ ಅಂತಹಾತನನ್ನಾರಿಸಲು ಮೊದಲಿಟ್ಟನು. ರಾಜ್ಯಪಾಲನಾದಿ ವ್ಯಾಪಾರಗಳಲ್ಲಿ ಅತ್ಯಂತ ದಕ್ಷನಾಗಿ, ಆ ಮಹತ್ಪದವಿಗೆ ಎಲ್ಲ ಬಗೆಗಳಿಂದಲೂ ತಕ್ಕವನಾಗಿದ್ದ ಪುರುಷನಾದ ಮಾಧವರಾಯನಿಗಿಂತಲೂ ಬೇರೆ ಯಾರೂ ಇಲ್ಲವಾದರು.

ಆದುದರಿಂದ ಮಾಧವರಾಯನಿಗೆ ತಿರುವಾಂಕೂರು ರಾಜ್ಯದ ಮಂತ್ರಿ ಪದವಿಯು ೧೮೫೭ನೆಯ ವರುಷದಲ್ಲಿ ಕೊಡಲ್ಪಟ್ಟಿತು. ಆತನು ರಾಜ್ಯಭಾರವನ್ನು ಸ್ವೀಕರಿಸಿದ ಏಳು ವರ್ಷಗಳಲ್ಲಿ ದೇಶವೆಲ್ಲವೂ ಕ್ರಮವಾದ ಪರಿಪಾಲನೆಗೆ ತರುವಂತೆ ಬ್ರಿಟಿಷ್ ಪ್ರಭುತ್ವದವರೊಡನೆ ಒಡಂಬಡಿಕೆ ಮಾಡಿಕೊಂಡನು. ಪ್ರಜೆಗಳಿಗೆ ಅನಿಷ್ಟಕರಗಳಾಗಿದ್ದ ಸಂದರ್ಭಗಳೆಲ್ಲವನ್ನೂ ಸರಿಪಡಿಸಿ ದುರ್ಭರಗಳಾದ ತೆರಿಗೆಗಳನ್ನು ತಗ್ಗಿಸಿ, ಒಡಂಬಡಿಕೆಯಂತೆ ದೇಶದಲ್ಲಿ ಸತ್ಪರಿಪಾಲನೆಯನ್ನು ನೆಲೆಗೊಳಿಸಿದನು. ತಿರುವಾಂಕೂರು ರಾಜ್ಯಕ್ಕೆ ಆತನು ಮಾಡಿದ ಮಹೋಪಕಾರಕ್ಕೆ ಮೆಚ್ಚಿ ಬ್ರಿಟಿಷ್ ಪ್ರಭುತ್ವದವರು ಆತನಿಗೆ ಸಿ. ಎಸ್. ಐ. ಯೆಂಬ ಬಿರುದನ್ನಿತ್ತರು. ಮಾಧವರಾಯನ ಪಕ್ಷವಾಗಿ ಕ್ರೋಧಿಗಳಾದ ಕೆಲವರು ತಮ್ಮ ಕುತಂತ್ರದಿಂದ ಆತನ ವಿಷಯವಾಗಿ ಅರಸಿಗೆ ಅಸೂಯೆ ಹುಟ್ಟುವಂತೆ ಮಾಡಿದರು.

ಆಗಿನಿಂದ ಮಹಾರಾಜನಿಗೆ ಆತನಬಳಿ ಅನುಮಾನ ಹುಟ್ಟಲಾರಂಭವಾಯ್ತು.

ಸೇರಿ ೧—೩—೦ ಲೋಕವ್ಯವಹಾರವನ್ನು ತಿಳಿಸುವುದಕ್ಕೆ ಇದಕ್ಕೆ
ಸಮವಾದ ಬೇರೆ ಯಾವ ಪುಸ್ತಕವೂ ಇಲ್ಲ.

The self English study. ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ. ಆಂಗ್ಲ ಬಾಷಾಪ್ರವೇಶದಾಯಿನಿ—ಬೋಧಕರ ಸಹಾಯವಿಲ್ಲದೆ ಇಂಗ್ಲೀಷ್ ಕಲಿ

ಅದರ ದೆಸೆಯಿಂದ ಆತನು [illegible] ವರುಷದಲ್ಲಿ ತನ್ನ ಉದ್ಯೋಗವನ್ನು [illegible]

[illegible]

[illegible]

The self English study. ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ.—ಆಂಗ್ಲ

ಅರಸನಿಗೂ ಕೆಲವು ಮನಸ್ಪರ್ಧೆಗಳು ಹುಟ್ಟಲಾರಂಭವಾಯಿತು. ಅದರಿಂದ ಆತನು ತನ್ನ ಮಂತ್ರಿತ್ವವನ್ನು ಸಾಕುಮಾಡಿಕೊಂಡನು.

ಅನಂತರದಲ್ಲಿ ಆತನು ರಾಜ್ಯವ್ಯವಹಾರ ಸಂಬಂಧಗಳಿಂದ ಮನೋವ್ಯಾಕುಲಗಳೊಂದೂ ಇಲ್ಲದೆ ಮದರಾಸು ಪಟ್ಟಣದಲ್ಲಿ ವಾಸವಾಗಿರುತ ಸುಖವಾಗಿ ಕಾಲಯಾಪನ ಮಾಡುತಿದ್ದನು. ಆ ಕಾಲದಲ್ಲಿ ಆತನಿಗೆ ಜನೋಪಯೋಗಿಯಾದ ಸಂಸ್ಕರಣಾದಿ ವಿಷಯಗಳಲ್ಲಿ ಮನಸ್ಸು ನುಗ್ಗಿತು. ಆಗ ಮದರಾಸಿನಲ್ಲಿ ನಡೆದ ದೇಶೀಯ ಮಹಾಜನಸಭೆಯ ಸನ್ಮಾನ ಸಭಾಧ್ಯಕ್ಷತೆಯನ್ನು ಕೈಗೊಂಡನು. ಅಷ್ಟರಮಟ್ಟಿಗೇ ಅಲ್ಲದೆ ಆ ಮಹಾಸಭೆಯಲ್ಲಿ ನಿರ್ಧರಿಸಲ್ಪಟ್ಟ ತೀರ್ಮಾನಗಳನ್ನು ಆಚರಣೆಗೆ ತರಲು ಆತನು ಸ್ಥಾನಿಕ ಪರಿಪಾಲಕರೊಡನೆಯೂ, ರಾಜಪ್ರತಿನಿಧಿಯೊಡನೆಯೂ, ಹೋರಾಡಿದನು. ಪೂರ್ವಾಚಾರ ಪದ್ಧತಿಗಳಿಗೆ ವಿರೋಧವಿಲ್ಲದಂತೆ ಸಂಘಸಂಸ್ಕರಣಾವಾಗಬೇಕೆಂಬುದು ಆತನ ಉದ್ದೇಶವು. ಅತಿ ಬಾಲ್ಯವಿವಾಹಗಳನ್ನು ಆತನು ಅಂಗೀಕರಿಸುತಿರಲಿ. ಪ್ರತಿ ವಿಷಯಗಳಲ್ಲಿಯು ಶಾಸ್ತ್ರಗಳನ್ನು ಪ್ರಮಾಣಗಳಾಗಿ ತೆಗೆದುಕೊಳುವಿಕೆಯು ಆತನಿಗೆ ಇಷ್ಟವಿಲ್ಲ. ಶಾಸ್ತ್ರಗಳು ಕೂಡ ಕಾಲಾನುಸಾರವಾಗಿ ಮಾರ್ಪುಗುವಿಕೆಯು ಆತನ ಅಭಿಮತವು.

ಮಾಧವರಾಯನ ಮೇಧಾವಿಶೇಷತೆಯು ಯೆಣಿಸಲಸದಳವು. ಗಣಿತಶಾಸ್ತ್ರವಿಷಯದಲ್ಲಿ ಮಟ್ಟಿಗಲ್ಲದೆ ಮಹಾರಾಷ್ಟ್ರಭಾಷೆಯಲ್ಲಿಯು ಕೂಡ ಆತನು ಅತ್ಯಂತ ಪ್ರಜ್ಞಾಶಾಲಿಯು. ಸ್ತ್ರೀಯರಿಗೂ ಹುಡುಗರಿಗೂ ಅನುಕೂಲಿಸುವಂತೆ ಬೋಧಕವಾದ ಮಹಾರಾಷ್ಟ್ರ ಭಾಷೆಯಲ್ಲಿ ಕೆಲವು ಪದ್ಯ ಗ್ರಂಥಗಳನ್ನಾತನು ಬರೆದಿರುವನು. ಜರ್ಮನೀ ದೇಶಸ್ಥರ ಆಫ್ರಿಕಾ ಖಂಡಾಕ್ರಮಣ ವಿಷಯವನ್ನು ಕುರಿತು ಜರ್ಮನೀ ರಾಜ್ಯದ ಮಂತ್ರಿಯಾದ ಬಿಸ್ಮಾರ್ಕ್ಕ ಪ್ರಭುವಿಗೆ ಶ್ರೇಷ್ಠವಾದ ಪತ್ರಿಕೆಯೊಂದನ್ನು ಬರೆದು ಆ ಮಹಾಮಂತ್ರಿಯ ಮೆಚ್ಚುಗೆಗೆ ಪಾತ್ರನಾದನು. ರಾಜಕೀಯ ವ್ಯಾಪಾರಗಳಲ್ಲಿ ಮಾಧವರಾಯನ ಆಲೋಚನಾಶಕ್ತಿಯು ಅಮೋಘವಾದದ್ದಲ್ಲವೆ!

ಬಹುಕಾಲ ಮಾನಸಿಕಶ್ರಮೆಯಿಂದ ದೇಹಸ್ವಾಸ್ಥ್ಯತೆಯನ್ನು ಕಳೆದುಕೊಂಡು, ಪಕ್ಷವಾತಬಾಧ್ಯದ ದೆಸೆಯಿಂದ ೧೮೯೧ ನೆಯ ಏಪ್ರಿಲ್ ನಾಲ್ಕನೆಯ ತೇದಿಯಲ್ಲಿ ಮಾಧವರಾಯನು ಕೀರ್ತಿಶೇಷನಾದನು.

ಬಾಷಾಪ್ರವೇಶದಾಯಿನಿ—ಎರಡನೆಯ ಪುಸ್ತಕ. ಮೊದಲಿನ ಕ್ರಯ ೧-೪-೦. ಈಗಿನ ಕ್ರಯ ೧-೦-೦.

The self English study. ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ. ಆಂಗ್ಲ

ವ್ಯಾಪಾರದ ಏಳಿಗೆ.

ಪ್ರಪಂಚದಲ್ಲಿ ಅನೇಕ ದೇಶಗಳುಂಟು. ಎಲ್ಲ ದೇಶಗಳಲ್ಲಿಯೂ ಗಾಳಿ, ನೀರು, [illegible]

[illegible]

[illegible]

ಕಥಾಸರಿತ್ಸಾಗರ (ಪೂರ್ವಭಾಗ) ದಿವ್ಯವಾದ ಕತೆಗಳು. ಎಲ್ಲರೂ ಓದತಕ್ಕದು, ಮೊದಲು ಕ್ರಯ ೩-೦-೦. ಈಗಿನ ಕ್ರಯ ೧-೧೨-೦.

ಯೋಗವಿಲ್ಲ. ಪ್ರಪಂಚದ ಸಮಸ್ತ ದಾರಿಗಳನ್ನೂ ಸಾಕಾದಷ್ಟು ಅರಿತವನಾಗಿರಬೇಕು. ಪ್ರಕೃತದಲ್ಲಿ ಯಾವ ಪದಾರ್ಥವು ಎಲ್ಲಿ ಅಗ್ಗವಾಗಿ ಮಾರುತ್ತದೋ, ಎಲ್ಲಿ ತಗ್ಗಾಗಿ ಮಾರುತಿರುವುದೋ, ಯಾವ ದಾರಿಯಿಂದ ಹೇಗೆ ತರಿಸಿದರೆ ವೆಚ್ಚಗಳು ಕಡಮೆಯಾದೀತೋ, ಅವೆಲ್ಲವೂ ಎಷ್ಟುಕಾಲದಲ್ಲಿ ತನ್ನ ಬಳಿಗೆ ಬಂದು ಸೇರುವುದೋ, ಇವೆಲ್ಲವನ್ನೂ ಆತನು ಚೆನ್ನಾಗಿ ಅರಿತಿರಬೇಕು. ವ್ಯಾಪಾರಸ್ಥನಿಗೆ ಇಷ್ಟು ತಿಳಿವಿಕೆ ಇದ್ದಿತಾದರೆ ಅವನ ವ್ಯಾಪಾರದಲ್ಲಿ ಅವನಿಗೆ ಆದಾಯವುಂಟು. ವ್ಯಾಪಾರಸ್ತನಿಗೆ ಯಾವಾಗ್ಲೂ ಸೋಮಾರಿತನ ಉದಾಸೀನಗಳು ಲೇಶವಾದರೂ ಇರಬಾರದು. ತಿಳಿವಿಕೆ ಇಲ್ಲದೆಯೋ, ಸ್ವಭಾವಸಿದ್ಧವಾದ ಅಲಕ್ಷ್ಯದಿಂದಲೋ, ಇವುಗಳಲ್ಲಿ ಯಾವುದಾದರೂ ಲೋಪವಾಯ್ತೆಂದರೆ ನಷ್ಟವಾಗದಿಟ್ಟಿತು ! ಅದನ್ನು ಮಟ್ಟಿಗೆ ತಪ್ಪಿಸುವುದಾಗದು.

ವ್ಯಾಪಾರದ ಏಳಿಗೆಗೆ ಮೊತ್ತಮೊದಲಿನ ಬಂಡವಾಳವು ನಿಯ್ಯತ್ತು ಅಥವ ನಿಜಸ್ಥಿತಿಯು, ಇದರ ಬೆಲೆಯು ಬಂಡವಾಳಕ್ಕಿಂತಲು ಬಲು ಹೆಚ್ಚಿನದು. ನಿಯ್ಯತ್ತಿನಿಂದ ಬಂಡವಾಳವು ದೊರೆಯುತ್ತದೆ. ಬಂಡವಾಳದಿಂದ ನಿಯ್ಯತ್ತೂ, ನಿಜಸ್ಥಿತಿಯೂ, ದೊರೆಯಲಾರದು. ತನ್ನ ನಿಜಸ್ಥಿತಿಯ ನಾಲಗೆಯನ್ನು ಕಾಪಾಡಿಕೊಳ್ಳುವುದಕ್ಕೆ ಮೊತ್ತಮೊದಲನೆಯ ಸಾಧನವು. ತನ್ನ ಅನುಕೂಲಗಳನ್ನು ಯೋಚಿಸಿ ವ್ಯಾಪಾರ ಮಾಡಬೇಕು "ಹಾಸಿಗೆಯುಷ್ಟು ಕಾಲು ಚಾಚಬೇಕು " ಎರಡನೆಯ ಸಾಧನವಾದರೋ, ಲೆಕ್ಕ, ಮತ್ತು ಕಾಗದಪತ್ರಗಳ ವ್ಯವಹಾರಗಳನ್ನು ಒಳ್ಳೆಯ ಸ್ಥಿತಿಯಲ್ಲಿಡುವಿಕೆಯು. ಲೆಕ್ಕವನ್ನು ಆಗಿಂದಾಗ ಕೂಡಲೆ ಬರೆದಿಡತಕ್ಕದು, ತೆಗೆದುಕೊಂಡು ಬರೆಯಬೇಕು. ಬರೆದುಕೊಡಬೇಕು, ಅದರಿಂದ ತಪ್ಪು ಬೀಳಲಾರದು. ಸ್ವಲ್ಪ ತಾಳುವುದೆಂದರೆ ಮರೆತುಹೋಗುವುದು. ಗಿರಾಕಿಗಳಿಗೆ ಬರೆಯಬೇಕಾದ ಕಾಗದಗಳನ್ನು ಕೂಡ ಆಗಿನದಾಗಲೆ ಬರೆದು ಮುಗಿಸತಕ್ಕದು. ಇಂದಿನದನ್ನು ನಾಳೆಗೆಂದು ದಾಟಿಸಬಾರದು. ಬರೆವಣಿಗೆಯಲ್ಲಿ ಯಾವಾಗ್ಲೂ ಅನುಮಾನಾಸ್ಪದವೂ, ಅಸಂಬದ್ಧವೂ ಆದ ಅಭಿಪ್ರಾಯಗಳಿರಬಾರದು. ಇದರಿಂದ ಕೆಲಸಗಳು ಸರಿಯಾಗಿಯೂ ಚಟುವಟಿಕೆಯಾಗಿಯೂ ತಪ್ಪಿಲ್ಲದೆಯು ನಡೆಯುವುದಲ್ಲದೆ ವ್ಯಾಪಾರಸ್ಥನ ಗೌರವವನ್ನು ಕಾಪಾಡುತ್ತದೆ. ಇದಿರುಬಿದ್ದ 'ಮನುಷ್ಯನ ಸ್ವಭಾವವರಿತು ಅವನಂತೆ ನಡೆಯುತಕ್ಕದೆಂದು ಸಾಧಾರಣವಾಗಿ ಅನೇಕರು ಎಣಿಸುವರು. ಕಳ್ಳರು ಮನೆಮುರುಕರು ಸಹ ಸಜ್ಜನರ ಸಂಗಡ ನಿಶ್ಚಯಸ್ಥಿತಿಯಲ್ಲಿ ನಡೆದ ಉದಾಹರಣೆ

ಶ್ರೀ ವಿವೇಕಾನಂದಸ್ವಾಮಿ ಸಚಿತ್ರ ಚರಿತ್ರೆ ೦-೮-೦.

ಗಳು [illegible] ವಿದ್ಯತ್ಪ್ರಚಾರವೂ ಗೌರವಸ್ಥನೂ ಆದ [illegible] ಕೂಡ ಪ್ರಾಯಿಕವಾಗಿ [illegible] ಪ್ರಯತ್ನ ಮಾಡುವನು.

[illegible] ಬರಗಾಲದಂತಿಹ [illegible] ಪದಾರ್ಥಗಳನ್ನು ಇಲ್ಲಿಂದಲ್ಲಿಗೂ ಅಲ್ಲಿಂ [illegible] ರಕ್ಷಿಸಬೇಕಾಗುವುದು. ಇಂತ [illegible] ಅಂತವರಲ್ಲಿ ಎಲ್ಲರೂ [illegible] ಇರುವರು. [illegible] ಕಠಿಣವಾಗುವದಾದರೂ [illegible] ಎಲ್ಲವೂ [illegible] ದೊರಕೆಯೂ, [illegible] ಬಂದಿತೆಂದರೆ [illegible] ನಡೆ [illegible]

ವಂತರ ಸಂಖ್ಯೆಯು ಎಲ್ಲಕ್ಕಿಂತಲೂ ವ್ಯಾಪಾರಸ್ಥರಲ್ಲಿಯೆ ಬಲು ಹೆಚ್ಚಾಗಿರುತ್ತದೆಯಲ್ಲದೆ ಪ್ರಪಂಚದಲ್ಲಿ ಬಲುಮಂದಿಯ ಜೀವನವು ವ್ಯಾಪಾರದಿಂದಲೆ ನಡೆಯುತಿದೆ. ಎಷ್ಟಾದರೂ ವ್ಯಾಪಾರಸ್ಥರಲ್ಲ ಏನೊಂದು ಕೆಲಸವೂ ಇಲ್ಲೆಂಬ ಮನುಷ್ಯನು ಕಾಣುವಂತಿಲ್ಲ. ಒಂದು ಬೆಂಕಿಯಪೆಟ್ಟಿಗೆಯನ್ನೋ, ಒಂದು ಕಟ್ಟು ನೂಲನ್ನೋ, ಚಿಲ್ಲರೆ ಅಂಗಡಿಯಲ್ಲಿ ಕೊಂಡು ಸ್ವಲ್ಪಸ್ವಲ್ಪವಾಗಿ ಮಾರುತಿರಲಿ; ಲಕ್ಷಾಂತರ ರೂಪಾಯಿಗಳ ಬೆಲೆಯುಳ್ಳ ಪದಾರ್ಥಗಳು ತುಂಬಿರುವ ಹಡಗುಹಡಗುಗಳನ್ನೇ ಕೊಂಡು ವಿಕ್ರಯಿಸಲಿ, ಅಂತವರೆಲ್ಲರೂ ಈ ವರ್ತಕರೆಂಬ ಸದರಿನಲ್ಲಿ ಸೇರತಕ್ಕವರು. ಇಂತಹ ವ್ಯಾಪಾರವು ಒಂದುಬಗೆಯ ವ್ಯಾಪಕವಾದ ದೊಡ್ಡವಿದ್ಯೆಯಾಗಿರುತ್ತದೆ. ಆದರೆ ಈ ವಿದ್ಯೆಯನ್ನು ಕಲಿಸುವುದಕ್ಕೆ ಇತರವಿದ್ಯೆಗಳಂತೆ ಬೇರೆ ಗುರು ದೊರೆಯುವುದಿಲ್ಲ. ಮತ್ತು ಅದನ್ನು ಕಲಿಸುವುದಕ್ಕೆ ಬೇರೆ ಪಾಠಶಾಲೆಯೂ ಇಲ್ಲ. ಎಷ್ಟುಮಂದಿ ವರ್ತಕರಿರುವರೋ, ಅಷ್ಟುಮಂದಿಯೂ ತಮ್ಮಷ್ಟಕ್ಕೆ ತಾವು ತಮಗಿಂತಲು ಶ್ರೇಷ್ಠವಾಗಿ ಹೆಚ್ಚು ವ್ಯಾಪಾರ ಮಾಡುವವರೆಲ್ಲರಿಗೂ ಶಿಷ್ಯರಾಗಿದಾರೆ, ತಮಗಿಂತಲು ಕಡಮೆ ವ್ಯಾಪಾರಮಾಡುವವರೆಲ್ಲರಿಗೂ ಗುರುವಾಗಿದಾರೆ, ಮತ್ತು ಯಾವ ಸ್ಥಳದಲ್ಲಿ ಕೊಡುವುದೂ, ತೆಗೆದುಕೊಳ್ಳುವುದೂ ನಡೆಯುತಿರುವುದೋ, ಆ ಸ್ಥಳವು, ಮನೆಯಾಗಿರಲಿ, ಕೋಟೆಯಾಗಿರಲಿ, ಅಡವಿಯಾಗಿರಲಿ, ಊರಾಗಲಿ, ಅಂಗಡಿಯಾಗಿರಲಿ, ಹೊಲವಾಗಿರಲಿ, ಗುಡಿಯಾಗಿರಲಿ, ಆ ಸ್ಥಳವೇ ವ್ಯಾಪಾರ ವಿದ್ಯೆಯನ್ನು ಕಲಿಸುವ ಪಾಠಶಾಲೆಯಾಗಿರುತ್ತದೆ. ಈ ಶಾಲೆಯಲ್ಲಿ ಕಾಲಪಟ್ಟಿಕೆ (Time table) ಇಲ್ಲ. ವಿರಾಮ (ರಜಾ) ದಿನಗಳೇ ಮುಂತಾದುವಾವುದೂ ಇಲ್ಲ. ಈ ಶಾಲೆಯು ಪ್ರಪಂಚದ ಆದಿಯಿಂದಲೂ ವೃದ್ಧಿಯಾಗುತಿದೆ. ಮತ್ತು ವಿದ್ಯಾಚಾರ ಸಂಪನ್ನತೆಯು ಹೇಗೆಹೇಗೆ ಹೆಚ್ಚುತಿರುವುದೋ, ಹಾಗೆಹಾಗೆಲ್ಲ ವ್ಯಾಪಾರವು ತಾನೇತಾನಾಗಿ ಬೆಳೆಯುತ ಹೋಗತಕ್ಕದಾಗಿದೆ. ಅದರ ಪ್ರಸಾರಕ್ಕೋಸ್ಕರ ಪ್ರಯತ್ನಮಾಡುವುದರಿಂದ ಪ್ರಯೋಜನವಿಲ್ಲ.

ಈ ವ್ಯಾಪಾರವಿದ್ಯೆಯಲ್ಲಿ ಇನ್ನೊಂದು ಚಮತ್ಕಾರವುಂಟು. ಇತರ ವಿದ್ಯೆಗಳಂತೆ ಇದನ್ನು ಪುಸ್ತಕದಲ್ಲಿ ಸಂಗ್ರಹಮಾಡಿಡುವುದಾಗುವದಿಲ್ಲ. ಅದೇಕೆಂದರೆ :— ಇತರ ವಿದ್ಯೆಗಳೆಲ್ಲವೂ ಪರಿಮಾಣವುಳ್ಳುದು. ವ್ಯಾಪಾರವಾದರೋ ಪರಿಮಾಣರಹಿತವಾದುದಾದುದರಿಂದ ಅದು ಬರೆದಿಡುವುದು ಸಾಧ್ಯವಾದುದಲ್ಲವೆಂದರೂ ಸರಿಯೆ; ಅದು ಅಷ್ಟೊಅಷ್ಟು ಸುಲಭವೂ ಸ್ವಲ್ಪವೂ ಆಗಿರುವುದರಿಂದ ಅದನ್ನು ಬರೆದಿಡುವುದು ಅವಶ್ಯಕವಿಲ್ಲವೆಂದರೂ ಸರಿಯೆ. ಅದೇಕೆಂಬಿರೋ! ಸಾಧಾರಣವಾಗಿ ಪದಾರ್ಥಗಳನ್ನು

ತಾರಾನಾಥ, ವಂಗದೇಶದ ಮಹಾಪುರುಷನ ದಿವ್ಯಚರಿತ್ರೆ. ೦-೮-೦.

ಅಗ್ಗವಾಗಿ ಕೊಂಡು ತಗ್ಗಾಗಿ ಮಾರುವುದು ಅಥವ ದುಡ್ಡಿಗೆ ಕೊಂಡು ಅರ್ಧಾಣೆಗೆ ಮಾರುವುದು ; ಇದೀಗ ಮುಖ್ಯವಾದ ವ್ಯಾಪಾರದ ಸ್ವರೂಪವಾಗಿರುತ್ತದೆ. ಪರಂತು, ವ್ಯಾಪಾರವಿದ್ಯೆಯು ಕೇವಲ ಸಹವಾಸದಿಂದ ಅಂದರೆ ಉಮೇದುವಾರಿಯಿಂದ [illegible] ಬಳಿ ಇದ್ದು ಕೆಲಸ ಮಾಡುತ್ತಿದ್ದ ಮಾತ್ರಕ್ಕೇ ಕಲಿಯಬಹುದು. ಅದು ಹೇಗೆ ಅನುಭವಕ್ಕೆ ಬರುವುದೆಂಬುದು ಮಾತ್ರಕ್ಕೆ ಪರೀಕ್ಷೆಯಿಂದ ತಿಳಿಯಬರುವುದಿಲ್ಲ. ವ್ಯಾಪಾರಮಾಡುವುದಕ್ಕೆ ಬಂಡವಾಳ, ದುಡ್ಡನ್ನು ಎರಡು ದುಡ್ಡುಮಾಡುವುದು [illegible], ಅಂದರೆ ವಿದ್ಯೆಯು [illegible] ಅದೇ ಗುರುತು. ಇದಕ್ಕೆ [illegible] ಕಾಣುತಿದೆ.

[illegible]

[illegible]

[illegible]

[illegible]

ಗಿರಾಕಿಗೆ ಸುಳ್ಳು ಹೇಳುವ ಪಾತಕಕ್ಕೆ ಜಾಣನಾದವನೇಕೆ ಬೀಳುವನು ? ಅನೇಕ ಮಂದಿ ಅರಿತ ಹಿರಿಯರು ಕೂಡ ರಾಜ್ಯಕಾರುಬಾರುಗಳಲ್ಲಿ ಸುಳ್ಳು ಹೇಳದಲ್ಲದೆ ಕಾರ್ಯಾಂಗವಾಗಿ ನಡೆಯುವುದಿಲ್ಲೆಂದು ತಿಳಿದಿರುವರು. ಇದರಿಂದಲೇ ಸುಳ್ಳು ದಿಟಗಳ ಬೆರಕೆಗೆ ತೌರೂರು ರಾಜಸ್ಥಾನವೆಂಬ ರೂಢಿವಾಚಕವು ವಾಡಿಕೆಯಲ್ಲಿರುವುದು. ಪ್ರಿನ್ಸ್ ಬಿಸ್ಮಾರ್ಕೆಂಬ ತತ್ವವಿದನು, ಒಂದಾನೊಂದುವೇಳೆ ರಾಜಕೀಯ ವಿದ್ಯಮಾನದಲ್ಲಿ ಸ್ವಮುಖದಿಂದ ಚಕ್ರವರ್ತಿಯೊಡನೆ ಸುಳ್ಳನುಡಿಯಬೇಕಾದುದಕ್ಕೆ ತನ್ನ ಬಾಯಿ ತಪ್ಪಬೇಕಾಯಿತೆಂದು ತಾನೇ ಒಪ್ಪಿಕೊಂಡಿರುವನು. ಪರಂತು ಗ್ಲಾಡ್ಸ್ಟನ್ ಪ್ರಭುವು ಏಕಪ್ರಕಾರವಾಗಿ ನಡೆಸಿದ ಆತನ ಮಂತ್ರಿಪದವಿಯ ಆಡಳಿತಗಳಲ್ಲಿ ಆ ಮಹಾಪುರುಷರ ಬಾಯಿಂದೊಂದು ಸುಳ್ಳುಮಾತಾದರೂ ಹೊರಡಲಿಲ್ಲೆಂದೂ, ಯಾವಾಗಲೂ ಅಸತ್ಯಾಚರಣೆಯಾಗಲಿಲ್ಲೆಂದೂ, ಆ ಮಹಾಮನುಜನ ಮಿತ್ರಮಂಡಲಿಯು ಹೇಳುವುದೊಂದಲ್ಲದೆ ಶತೃಪಕ್ಷದವರು ಕೂಡ ಒಪ್ಪಿಕೊಳ್ಳುವರು. ಆಗ ಸತ್ಯಮಾತ್ರವನ್ನು ಹಿಡಿದು ಯಾವಾಗಲೂ ನಡೆಯುವುದು ಯೋಗ್ಯವೂ ಅವಶ್ಯಕವೂ ಅಹುದು ಆದರೆ ತಮ್ಮ ಸಮಸ್ತ ಮನೋಗತಾರ್ಥವನ್ನು ಎರಡನೆಯವರಿಗೆ ಹೇಳಿ ಮುಗಿಯಬೇಕೆಂಬ ಕಟ್ಟಳೆಯು ಯಾರಿಗೂ ಇರುವುದಿಲ್ಲ. ಗಿರಾಕಿಗಳಿಗೆ ಪದಾರ್ಥದ ಕ್ರಯವನ್ನು ಹೇಳುವುದರಲ್ಲಿ ಯಾರೇ ಆದರೂ ಯಾವಾಗಲೂ ಒಡಂಬಡಿಕೆ ಮಾಡಿಕೊಂಡಿರುವುದಿಲ್ಲ. ಆದುದರಿಂದ ಈ ಆಕ್ಷೇಪಣೆಯು ನಿರಾಧಾರವಾದುದೂ ಅಜ್ಞಾತೆಯಿಂದೊಡಗೂಡಿದುದೂ ಅಹುದು.

ವ್ಯಾಪಾರದಲ್ಲಿ ಸ್ವಲ್ಪ ಲಾಭಕ್ಕೋಸ್ಕರ ಅತ್ಯಂತ ಶ್ರಮಪಡಬೇಕಾಗುತ್ತದೆ. ಮತ್ತು ನೀಚರೊಡನೆ ಸಂಬಂಧವಿಡಬೇಕಾಗುತ್ತದೆ. ಇವು ಅತ್ಯಂತ ಲೋಭಲಕ್ಷಣವಾಗಿ ತೋರುತ್ತದೆ. ಇದರಿಂದ ಸಂಕೋಚತೋರುವುದೇನೋ ನಿಶ್ಚಯವೇ ! ಆದರೆ ಇದಿಲ್ಲದೆ ವ್ಯಾಪಾರ ನಡೆಯುವುದಿಲ್ಲವಾದುದರಿಂದ ಅದನ್ನು ಲಕ್ಷ್ಯವಿಟ್ಟು ಅಂತಹ ನಿಷ್ಕಳಂಕ ವರ್ತನವನ್ನು ತಾನಿಟ್ಟುಕೊಳ್ಳುವ ಅಭ್ಯಾಸಮಾಡಬೇಕು. ಅದೊಂದುಬಾರಿ ಮನಸಿಗೆ ಹತ್ತಿತೆಂದರೆ ಬೇರೆ ಅನುಮಾನಕ್ಕೆ ಆಸ್ಪದವಿಲ್ಲದಂತಾಗುವುದು.

ಪ್ರಭು—ಪ್ರಜೆಗಳು.

ದವಡೆ ತುಟಿ, ಹಲ್ಲು, ನಾಲಗೆ ಮುಂತಾದ ಅನೇಕ ಅವಯವಗಳು ಸೇರಿದರೆ ಬಾಯಾಗುತಿದೆ. ಅದರಂತೆ ಪ್ರಭು ಮತ್ತು ಪ್ರಜೆಗಳು ಸೇರಿ ರಾಜ್ಯವಾಗು

“ಶಕ್ತಿ” ಬಂಗಾಳಿಯಿಂದ ಕನ್ನಡಕ್ಕೆ ಪರಿವರ್ತನವಾದ ನಾವಲು. ೦-೧-೨-೦.

ತ್ತಿದೆ. ಏಕಶರೀರಿಯೊಂದೇ ಬಾಯಾಗದು ಹೇಗೋ ಹಾಗೆ ರಾಜನೊಬ್ಬನೇ ಇದ್ದಾಗ ರಾಷ್ಟ್ರವಾಗದು. ಏಕವ್ಯಕ್ತಿಯಲ್ಲಿ ಪ್ರಜೆ-ಪ್ರಭು ಎಂಬುದು ಬೇರೆಬೇರೆಯಲ್ಲ. ಪ್ರಜೆ ಇಲ್ಲದಿದ್ದಾಗ ಪ್ರಭುವಾರಿಗೆ ? ಪ್ರಭುವಿಲ್ಲದಿದ್ದಾಗ ಪ್ರಜೆಯಾರಿಗೆ ? ಇವೆರಡರಲ್ಲಿ ಯಾವುದಾದರೊಂದೇ ಪಕ್ಷವನ್ನು ಹಿಡಿದಿದ್ದಾಗ ಅದರಲ್ಲಿ ಅರ್ಥವೇ ಇಲ್ಲ. ಆದುದರಿಂದ ಇವೆರಡೂ ಒಂದೇ.

[illegible]

ಳಿಂದೂ ಸಮಸ್ತರಿಗೂ ತೋರುವಂತಾಗಿಬಿಟ್ಟಿತು. ಹೀಗಾಗುವುದಕ್ಕೆ ಕಾರಣವೇನೆಂಬುದನ್ನು ಸ್ವಲ್ಪ ವಿಚಾರಮಾಡೋಣ. ಪ್ರಜಾಜನರಲ್ಲಿ ನೆಲೆಗೊಂಡಿರುವ ಸಾಮರ್ಥ್ಯವು ಯಾವುದುಂಟೋ, ಅದು ಅವರುಗಳಲ್ಲಿ ಸ್ವಲ್ಪಸ್ವಲ್ಪವಾಗಿ ಹಂಚಿಕೆಯಿಂದಿರುತ್ತದೆ. ಆಗ ಆ ಹಂಚಿಕೆಯಿಂದಿರುವ ಸಾಮರ್ಥ್ಯಕಣಗಳಿಗೆ ಸಹಜವಾಗಿಯೆ ಬಲ ಕಡಮೆಯಾಗಿರುತ್ತದೆ. ಪ್ರಭು ಸಾಮರ್ಥ್ಯವಾವುದಿರುವುದೋ, ಅದಾದರೋ, ಎಲ್ಲವೂ ಒಂದೇ ಒಂದೆಡೆಯಲ್ಲಿರುತ್ತದೆ, ಅದರ ಬಲವು ಸಹಜವಾಗಿಯೆ ಹೆಚ್ಚಾಗಿರುತ್ತದೆ. ಆಗ ಪ್ರಜಾಜನವು ಪ್ರಭುವಿಗೆ ಹೆದರುವುದು ಸಹಜವಾಗಿ ಬಿಟ್ಟಿತು. ಈಗ ಇದಕ್ಕೆ ಸಣ್ಣದೊಂದು ಉದಾಹರಣೆಯು ತೋರುವುದು. ದೊಡ್ಡ ಕುಂಬಳಕಾಯೊಂದನ್ನು ಕಿತ್ತು ಅದರೊಳು ಸಮಾರ್ಧವನ್ನು ಒಬ್ಬನಿಗೆ ಕೊಡಬೇಕು. ಉಳಿದ ಅರ್ಧದಲ್ಲಿ ಸಣ್ಣಸಣ್ಣ ತುಂಡುಗಳಾಗಿ ಕೊಯ್ದು ಬಲುಮಂದಿಗೆ ಕೊಡಬೇಕು. ಹೀಗೆ ಮಾಡಿದಾಗ ಎಲ್ಲಮಂದಿಯಬಳಿ ಇರುವ ತುಂಡು ಕಾಯಿಗಳಿಗಿಂತಲೂ ಅರ್ಧ ಕಾಯಿನತೂಕ ಹೆಚ್ಚಾಗಿರುವುದೂ, ಬೆಲೆಯುಳ್ಳುದೆಂಬುದೂ ನಿರ್ವಿವಾದಾಂಶವು.

ಇದೊಂದೇನೋ ಸರಿಯೆ ; ಈತೆರನಾಗಿ ಪ್ರಜೆಗಳಿಂದ ಕೊಡಲ್ಪಟ್ಟ ಸಾಮರ್ಥ್ಯವನ್ನು ಅರಸನು ಪ್ರಜೆಗಳ ಹಿತದಲ್ಲಿಯೇ ವಿನಿಯೋಗಿಸಬೇಕೇ ಅಲ್ಲದೆ ಸ್ವಸುಖಕ್ಕೋಸ್ಕರ ಸ್ವಲ್ಪಮಟ್ಟಿಗಾದರೂ ಉಪಯೋಗಿಸತಕ್ಕದ್ದಲ್ಲವೆಂಬುದು ವಿಹಿತವು. ಇದನ್ನೆಲ್ಲರೂ ಒಪ್ಪುವರು. ಆದರೆ ಇದು ಮಾನವವೃತ್ತಿಯನ್ನು ಪೆಚ್ಚಾಗಿಸುತ್ತದೆ. ಸ್ವಹಿತಬುದ್ಧಿಯು ನ್ಯಾಯವನ್ನು ಒಂದು ಮೂಲೆಗೆ ತಳ್ಳಿಬಿಟ್ಟು ಮಾನವನನ್ನು ದುರಾಚಾರದಲ್ಲಿ ಪ್ರವರ್ತಿಸುವಂತೆ ಮಾಡುತ್ತದೆ. ಆಗ ಅವನಿಗೆ ವಿಚಾರಶಕ್ತಿ ಲೇಶಮಾತ್ರವೂ ಇಲ್ಲದೆ ಅವಿಚಾರಗ್ರಸ್ತನಾಗಿ ಬಿಡುತ್ತಾನೆ. ಹೀಗೆ ವಿಚಾರವಿಹೀನನಾದಾಗ ವ್ಯಸನಪರಂಪರೆಯೊದಗಿ ಬಿಡುವುದು ? ಇತಿಹಾಸಗಳಲ್ಲಿ ದೃಗ್ಗೋಚರವಾಗುವ ಹೆಬ್ಬೆಟ್ಟಗಳಿಗೆ ಸಮನಾದ ಇಂತಹ ದುಃಖರಾಶಿಯೆಲ್ಲವೂ ಇಂತಹ ಉದಾಹರಣೆಗಳಿಂದಲೆ ತುಂಬಿರುತ್ತವೆಂದು ಶೋಧನೆಯಿಂದ ಗೊತ್ತಾಗುವುದು.

ಕುಟುಂಬದಲ್ಲಾದರೇನು ? ರಾಷ್ಟ್ರದಲ್ಲಾದರೆ ತಾನೆ ಏನು ? ಸ್ವಾರ್ಥವಿಷಯದ ಆಸಕ್ತಿಯು ಏಕಪಕ್ಷವಾಗಿ ಪ್ರಬಲವಾಗುವುದಕ್ಕೆ ಮೊದಲಾಯಿತೋ ; ಆಗಲೆ ಅದು ನಾಶನಕ್ಕೆ ಮೊದಲು. ಈ ಅಂಶವನ್ನು ಗಮನಿಸಿ ಕೂಡಿದಮಟ್ಟಿಗೂ ಅದನ್ನು ತೊಲಗಿಸುವುದಕ್ಕೆ ಸಮಸ್ತರೂ ಎಚ್ಚರಗೊಳಬೇಕು. ಅದರಲ್ಲಿಯೂ ಈ ಎಚ್ಚರಿಕೆಯು ಶ್ರೇಷ್ಠರು ಅಥವ ವರಿಷ್ಠಪಕ್ಷದವರ ಕಡೆಯಿಂದ ಹೆಚ್ಚಾಗಿ ನಡೆಯಬೇಕು.

ಗೀತಾಸಾರಸರ್ವಸ್ವ. ಸುಲಭಶೈಲಿಯ ವಚನ ಭಗವದ್ಗೀತೆ. ೦-೭-೦

ಕುಟುಂಬದಲ್ಲಿ ಹುಡುಗನು ಚಿಕ್ಕವನಾಗಿರುವವರೆಗೆ ತಂದೆಯು ಮನದಲ್ಲಿ [illegible] ಇರುವು [illegible] ಹುಡುಗನಿಗೆ ಹರೆಯ [illegible] ತನ್ನ [illegible] ಇಚ್ಛೆಯಂತೆ ನಡೆಯುವನು. ತನ್ನ [illegible] ಸ್ವಾತಂತ್ರ್ಯವನ್ನು ವಹಿಸುವನು [illegible] ಲೋಪವಿಲ್ಲ [illegible] ಪ್ರಾಯದೆಸೆಯಲ್ಲಿ [illegible] ತಂದೆಯು ಕಾಲೋಚಿತವಾಗಿ [illegible] ಮಗನಮೇಲೆ ದೋ [illegible] ತನ್ನ ಮಗನ [illegible] ಪಿರಿತನವೆಂಬ [illegible] ಮಗನು ಸ್ವಪ್ರ [illegible] ಸಹಜವಾಗಿ [illegible] ಪ್ರತಿಭಾವಂತ [illegible]

[illegible]

ಚ್ಛಾಗಿ ಜ್ಞಾನಾರ್ಜನೆ ಮಾಡುತ ತನ್ನ ಸಮವಾಗುತ್ತಿರುವರಾದುದರಿಂದ ತನಗೆಷ್ಟು ತಿಳಿವಿಕೆಯುಂಟೋ ಅವರಿಗೂ ಅಷ್ಟು ತಿಳಿವಿಕೆ ಉಂಟಾಗುವುದೆಂದೂಹಿಸಬೇಕು. ಆಗ ಅವರು ಹೇಳುವುದೆಲ್ಲವನ್ನೂ ಕಿವಿಗೊಟ್ಟು ಕೇಳಬೇಕು. ಅದನ್ನು ಪುರಸ್ಕರಿಸಬೇಕು. ಅವರಿಗೋಸ್ಕರ ಸ್ವಸುಖದಲ್ಲಿ ಪರಾಮರ್ಶೆಯನ್ನು ಬಿಟ್ಟು ಮಣಿಯಬೇಕು. ಹೀಗಾದಾಗ ತಾನು ತನ್ನ ದೊಡ್ಡಸ್ತಿಕೆಯನ್ನಿಳಿಸಿಕೊಂಡಂತಾಗುವುದು. ಅದಿಲ್ಲವಾದರೆ ಸರಿಯಾದ ಸಮಯವೊದಗಿ ಶ್ರೇಷ್ಠತೆಯು ಹೋಗಿ ಸಮಯಾನುಸಾರವಾಗಿ ಕನಿಷ್ಠತೆಯನ್ನೂ ದೈನ್ಯತೆಯನ್ನೂ, ಒಪ್ಪಿಕೊಳ್ಳಬೇಕಾದ ಸಮಯ ಸಂಧಿಸಿ ಎಲ್ಲವೂ ತಲೆಕೆಳಗಾಗಿ ಬಿಡುವುದು. ಇದಕ್ಕೆ ಪ್ರಪಂಚದ ಇತಿಹಾಸದಲ್ಲಿ ಅನೇಕ ಉದಾಹರಣೆಗಳಿವೆ. ಅದರಿಂದ ಗೊತ್ತಾಗುವ ಮುಖ್ಯಾಂಶವಾವುದೆಂದರೆ:—ರಾಷ್ಟ್ರದಲ್ಲಿ ಪ್ರಭು ಮತ್ತು ಪ್ರಜೆಗಳ ಜೀವವು ಒಂದಾಗಿಯೇ ಇದ್ದು ಪ್ರಭುವಿಗೆ ಯಾವುದು ಸುಖವೋ, ಅದೇ ತಮ್ಮ ಸುಖವೆಂದು ಪ್ರಜೆಗಳಿಗೆ ತೋರುತ್ತಿದ್ದರೂ, ರಾಷ್ಟ್ರದಲ್ಲಿ ಋದ್ಧಿಸಿದ್ಧಿಗಳೂ ತಾನಾಗಿ ಅವತರಿಸಿ, ಯಾವಬಗೆಯಿಂದಲೂ ಲೋಪವಿಲ್ಲದಂತಾಗುವುದು. ಅಂತಹ ರಾಷ್ಟ್ರವು ಸುಖಕ್ಕೆ ಜನ್ಮಸ್ಥಳವಾಗುವುದು. ರಾಮನು ವನವಾಸಕ್ಕೆ ಹೊರಟಾಗ ಆತನ ಸಮಸ್ತ ಪ್ರಜೆಗಳೂ ಆತನ ಹಿಂದೆ ಅಡವಿಗೆ ಹೊರಟರು. ಪಾಠಕರಿಗಿದನ್ನು ಹೊಸದಾಗಿ ಹೇಳಬೇಕಾಗಿಲ್ಲ. ಅದರಂತೆಯೇ ಒಬ್ಬ ಅರಸನು ಸಂಪಾದಿಸಿದ ಪುಣ್ಯವಿಶೇಷದಿಂದ ಆತನ ಸಮಸ್ತ ಪ್ರಜೆಗಳೂ ಭೇದವಿಲ್ಲದೆ ಸ್ವರ್ಗಸುಖವನ್ನು ಅನುಭವಿಸುವರು. ಇದಕ್ಕೆ ನಮ್ಮ ಪುರಾಣಗಳಲ್ಲಿ ಹರಿಶ್ಚಂದ್ರಮಹಾರಾಯನ ಉದಾಹರಣೆಯೊಂದೇ ಸಾಕಾಗಿದೆ. ಈ ಅರಸನು ಸತ್ಯಚ್ಯುತನಾಗಲಿಲ್ಲ. ಅದಕ್ಕೋಸ್ಕರ ದೇವೇಂದ್ರನು ಸಂತುಷ್ಟನಾಗಿ ಆತನನ್ನು ಸ್ವರ್ಗಕ್ಕೆ ಕರೆಯಲು ವಿಮಾನದೊಡನೆ ಬಂದನು. ಆ ಸಮಯದಲ್ಲಿ ದೇವೇಂದ್ರನಿಗೂ ಹರಿಶ್ಚಂದ್ರಮಹಾರಾಯನಿಗೂ ನಡೆದ ಸಂಭಾಷಣೆಯಿಂದ ಪ್ರಭುವಿಗೆ ಪ್ರಜೆಗಳಲ್ಲಿ ಯಾವಬಗೆಯ ಅನುರಾಗವಿದ್ದಿತೆಂಬುದು ಪ್ರಕಟವಾಗುತ್ತದೆ. ಹರಿಶ್ಚಂದ್ರಮಹಾರಾಯನು ದೇವೇಂದ್ರನೊಡನೆ "ಅರಸನು ತನ್ನ ರಾಜ್ಯವನ್ನು ಕೇವಲ ತನ್ನ ಪರಾಕ್ರಮದಿಂದಲೇ ಆಳುತ್ತ ಅದನ್ನು ಉಪಭೋಗಿಸುವುದಿಲ್ಲ. ಆದರೆ ಆತನ ರಾಜ್ಯದಲ್ಲಿರುವ ಕುಟುಂಬಗಳಲ್ಲಿ ಸಂಪಾದಿಸಲ್ಪಡುವ ಪುಣ್ಯಪರಿಪಕ್ವದ ದೆಸೆಯಿಂದಲೆ ರಾಜ್ಯಭಾರನಿರ್ವಾಹಮಾಡುವನು." ಎಂದು ಹೇಳಿರುವನು. ಇದೀಗ ಪ್ರಭುಪ್ರಜೆಗಳ ಆತ್ಮೈಕ್ಯತೆಗೆ ಮುಖ್ಯ ಲಕ್ಷಣವಾಗಿರುತ್ತದೆ. ಪ್ರಭುವಿನ ಮತ್ತು ಪ್ರಜೆಗಳ ಅಂತಃಕರಣಗಳ ಐಕ್ಯತೆಯೇ ರಾಷ್ಟ್ರದ ನಿಶ್ಚಯವಾದ ವಿಭವವಾಗಿರು

ಕನ್ನಡ ಪಂಚತಂತ್ರಕಥೆಗಳು ಬಲು. ಮುದ್ದಾಗಿದೆ, ೦-೬-೦.

ತ್ತದೆ. ಇದೊಂದಕ್ಕು ಬಂಡವಾಳವಿರುವ ಕೆಲವು ಪ್ರಭುಗಳಿಗೂ ಸಮಾಧಾನವಾಗುತ್ತದೆ. ಆದರೆ ಬುದ್ಧಿಶಕ್ತಿಯಿಂದಲೂ, ಅಧಿಕಾರದಿಂದಲೂ, ಬಲದಿಂದಲೂ, ಅದರ [illegible] ಅಭಿವೃದ್ಧಿಗೆ ತರಬೇಕು.

ಅದನ್ನು ಅಭಿವೃದ್ಧಿಗೆ ತರುವುದೆಂದರೆ ತನ್ನ [illegible] [illegible]

[illegible]

ಹೆಚ್ಚಾಗಿ ಅಭ್ಯುದಯವು ರುಚಿಸಲೆಂದೂ ಅಧಿಕವಾಗಲೆಂದೂ ಮಟ್ಟಿಗೆ ನಾವು ಪರಮೇಶ್ವರನ ಬಳಿ ಭಕ್ತಿಭಾವದಿಂದ ಪ್ರಾರ್ಥಿಸುತಿರುವೆವು.

ವಿದ್ಯುದ್ಯುಗವು.

ಸೃಷ್ಟಿಯ ಆದಿಯಲ್ಲಿ ಜನರು ಪಶುಗಳಸ್ಥಿತಿಯಲ್ಲಿದ್ದಾಗ ಆಯುಧಗಳಿಗೆ ಬದುಲಾಗಿ ಕಲ್ಲುಗಳನ್ನು ಉಪಯೋಗಿಸುತಿದ್ದರು. ಆಕಾಲವನ್ನು ಇತಿಹಾಸದಲ್ಲಿ ಪಾಷಾಣಯುಗವೆಂದು ಹೇಳಲ್ಪಡುತ್ತದೆ. ಅನಂತರ ಲೋಹದ ಆಯುಧಗಳನ್ನು ಬಳಸುತಬಂದರು. ಆ ಕಾಲವು ಲೋಹಯುಗವೆಂದು ಕರೆಯಲ್ಪಡುತ್ತದೆ. ಅದರಂತೆ ಈಗ ಬಲುಮಂದಿ ಕಾರೇಗಾರರು ತಂತಮ್ಮ ಕಾರ್ಯಸ್ಥಾನಗಳಲ್ಲಿ ಹಬೆಯ ಯಂತ್ರಸಾಧನಗಳಿಂದ ಬಗೆಬಗೆಯ ಮಹತ್ಕಾರ್ಯಗಳನ್ನು ನಡೆಸುತಿರುವುದರಿಂದ ಈಗಣ ಕಾಲವನ್ನು ಬಾಷ್ಪಯುಗವೆಂದು ಕರೆಯಬಹುದು. ಆದರೆ ಇಲ್ಲಿಂದ ಮುಂದೆ ಸ್ವಲ್ಪ ಸ್ವಲ್ಪವಾಗಿ ಹಬೆಗೆ ಬದುಲಾಗಿ ವಿದ್ಯುಚ್ಛಕ್ತಿಯ ಉಪಯೋಗವು ಹೆಚ್ಚುತ ಬರುತಿರುವ ಸೂಚನೆಗಳು ಪ್ರತ್ಯಕ್ಷವಾಗುತಿರುವುದರಿಂದ ಬಲು ಬೇಗನೆ ವಿದ್ಯುದ್ಯುಗಾರಂಭವಾಗುವಂತಿದೆ ಯೆಂದು ಹೇಳುವುದರಲ್ಲಿ ಆತಂಕವೇನೂ ಕಾಣಲಿಲ್ಲ.

ಹಬೆಯ ಶಕ್ತಿಗೆ ಬದುಲಾಗಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸುವಿಕೆಯು ಹೆಚ್ಚುತಿರುವುದಕ್ಕೆ ಅನೇಕ ಕಾರಣಗಳಿವೆ. ಹಬೆಯನ್ನುಪಯೋಗಿಸುವಾಗ ಅದ್ರ ನಿಷ್ಪ್ರಯೋಜನವಾಗುವುದೂ ಉಂಟು. ವಿದ್ಯುಚ್ಛಕ್ತಿಯನ್ನು ಕೆಲಸದಮೇಲೆ ವಿನಿಯೋಗಿಸುವಾಗ ಹಬೆಯಷ್ಟು ಅನುಪಯೋಗವಾಗುವುದಿಲ್ಲ. ಮತ್ತು ಹಬೆಯನ್ನು ಪ್ರಯತ್ನದಿಂದ ಆಗಿಂದಾಗ ಅಲ್ಲಲ್ಲಿಯೇ ಉಂಟುಮಾಡಿಕೊಂಡು ಕಾಯಿಸುವುದೊಂದಲ್ಲದೆ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಳ್ಳಬೇಕಾದೆಡೆಗೆ ತೆಗೆದುಕೊಳ್ಳಲು ಇರುವಷ್ಟು ಸೌಲಭ್ಯವು ಹಬೆಯನ್ನುಪಯೋಗಿಸುವುದರಲ್ಲಿಲ್ಲ.

ಒಂದಾನೊಂದು ನೂಲಿನ ಕಾರಖಾನೆಯನ್ನು ಉದಾಹರಣೆಯಾಗಿ ತೆಗೆದುಕೊಳ್ಳೋಣ.

ಹಬೆಯ ಯಂತ್ರದಲ್ಲಿ ದೊಡ್ಡ ಚಕ್ರದ ಗತಿಯು ಯಂತ್ರವೆಲ್ಲವನ್ನೂ ತಿರುಗಿಸುವುದಕ್ಕೆ, ಅದರಲ್ಲಿ ಸರ್ವತ್ರ ಎತ್ತರಗಳಾಗಿರುವ ಸ್ಥಳಗಳಲ್ಲಿ ಉದ್ದುದ್ದವಾದ ಲೋಹದ ದಿಮ್ಮಿಗಳಿಗೆ ಚಕ್ರಗಳನ್ನು ಜೋಡಿಸಿ ತೊಗಲಿನ ಪಟ್ಟಿಗಳಮೂಲಕ ಆ ಶಕ್ತಿಯನ್ನು ಮಗ್ಗಗಳೇ ಮೊದಲಾದುವುಗಳಿಗೆ ಕೊಡಬೇಕಾಗುತ್ತದೆ. ಇವುಗ

ಸಮಯವಿನಿಯೋಗ. ಸಮಯೋಚಿತವಾದ ಉಪನ್ಯಾಸ. ೦-೨-೦.

ಳಗೆ ಆ ಪಟ್ಟಿಯು ಘರ್ಷಣವೇ ಮೊದಲಾದುವುಗಳಿಂದ ಬಹುಭಾಗ ಶಕ್ತಿಯು ನಿರರ್ಥಕವಾಗಿ ಹೋಗುವುದು, ಮತ್ತು ಈ ಮೂಲಕವಾಗಿ ಬಗೆಬಗೆಯ ಅಪಾಯಗಳೊದಗುವುದೂ ಉಂಟು. ತಿರುಗುತಿರುವ ಪಟ್ಟಿಗಳಲ್ಲಿ ಎಷ್ಟೋಸಲ ಕೆಲಸಗಾರರ ಕೈಗಳೇ ಮೊದಲಾದುವು ಸಿಕ್ಕಿಬಿದ್ದು ಭಯಂಕರವಾದ ಅಪಾಯಗಳುಂಟಾಗಿವೆ. ವಿದ್ಯುಚ್ಛಕ್ತಿಯನ್ನು ಉಪಯೋಗಿಸುವುದರಿಂದ ಇಂತಹ ಅಪಾಯಗಳಾಗದಂತೆ ಸುಲಭವಾಗಿ [illegible] ತಪ್ಪಿಸಬಹುದು. ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವ ಯಂತ್ರದಿಂದ ತಂತಿಯನ್ನು ತಂದು ನೇರವಾಗಿ ಯಂತ್ರಗಳಿಗೆ ಜೋಡಿಸಬಹುದು. [illegible] ಘರ್ಷಣದಿಂದಲೂ ಇತರ ಕಾರಣದಿಂದಲೂ [illegible] ಯಂತ್ರವನ್ನು [illegible] ತಂತಿಯ [illegible]

[illegible] ವಿದ್ಯುಚ್ಛಕ್ತಿಯು [illegible]

ಸವಿನುಡಿ:— [illegible]

ಯಲ್ಲಿ ತಯಾರ್ಮಾಡಿ ಅದರ ಪ್ರವಾಹವನ್ನು ಅಲ್ಲಿಂದ ತಂತಿಯಮೂಲಕ ರೈಲ್ವೆಲೈನಿನವರೆಗೆ ತರಲ್ಪಡುತ್ತದೆ. ಅಲ್ಲಿಂದ ಬೇರೆ ಮೂರನೆಯ ಕಂಬಿಯಿಂದಲೋ, ತಲೆಯಮೇಲೆ ತರುವ ತಂತಿಯಿಂದಲೋ, ಆ ಯಂತ್ರಕ್ಕೆ ಸೇರಿಸಲ್ಪಡುತ್ತದೆ. ಇದಕ್ಕೆ ಉದಾಹರಣೆಯನ್ನು ಬೊಂಬಾಯಿನ ವಿದ್ಯುಚ್ಛಕ್ತಿಯ ಟ್ರಾಂಗಾಡಿಯದ್ವಾರ ತಿಳಿಯಬಹುದು. ಇದುವರೆಗೆ ಹೇಳಿದ್ದರಲ್ಲಿ ವಿದ್ಯುದ್ಗತಿಯನ್ನುತ್ಪತ್ತಿಮಾಡುವರೀತಿಯನ್ನು ಸೂಕ್ಷ್ಮವಾಗಿ ವಿವರಿಸಿದಂತಾಯಿತು. ಈಗ ಪ್ರಕಾಶವನ್ನುಂಟುಮಾಡುವುದು ಕೂಡ ಇದರಂತೆಯೇ ಅದ್ಭುತವೃದ್ಧಿಸ್ಥಿತಿಯಲ್ಲಿದೆ. ಕೆರೋಸೀನೆಣ್ಣೆಯ ದೀವಿಗೆಯಲ್ಲಿಯೂ, ಹಬೆಯಿಂದುತ್ಪನ್ನವಾಗುವ ದೀವಿಗೆಯಲ್ಲಿಯೂ ಅನೇಕ ತಿದ್ದುಪಾಡುಗಳಾಗಿ ಬಲುಮಟ್ಟಿಗೆ ಸುಧಾರಿಸಲ್ಪಟ್ಟು ಇನ್ನೂ ಸುಧಾರಣೆಗೆ ಬರುತಿದೆ. ಆದರೂ ಸುಲಭವೂ ನಿರ್ಮಲವೂ ಪ್ರಕಾಶವೂ ಅಪೇಕ್ಷಿಸುವುದಕ್ಕೆ ಹೋದರೆ ವಿದ್ಯುದ್ದೀಪದ ಮುಂದೆ ಬೇರೆಯಾವುದೂ ನಿಲ್ಲಲಾರದು. ಅದು ಕೂಡ ಅತ್ಯಂತವಾಗಿ ಅಭಿವೃದ್ಧಿಯಾಗುತಿದೆ.

ಇವಿಷ್ಟಲ್ಲದೆ ಬೇರೆಬೇರೆ ಅನೇಕ ಕಾರ್ಯಗಳಲ್ಲಿ ವಿದ್ಯುಚ್ಛಕ್ತಿಯು ಉಪಯೋಗಿಸಲ್ಪಡುತಿದೆ. ಲೋಹವು ಒಂದಕ್ಕೊಂದನ್ನು ಜಂಟಿಸುವಾಗ ಬೆಂಕಿಯಲ್ಲಿ ಕಾಯಿಸಿ ಪ್ರಯಾಸದಿಂದ ಶ್ರಮಪಡಬೇಕಾಗಿದೆ. ವಿದ್ಯುಚ್ಛಕ್ತಿಯ ಸಹಾಯವಿದ್ದಿತಾದರೆ ಯಾವ ಬಗೆಯ ಲೋಹವಾದರೂ ಅತಿತೀವ್ರವಾಗಿಯೂ ಸುಲಭವಾಗಿಯೂ ಜಂಟಿಸಿ ಬಿಡಬಹುದು. ಶೋಧಿಸಲ್ಪಡದ ಲೋಹದೊಳಗಿಂದ ಶೋಧಿತವಾದ ಶುದ್ಧ ಲೋಹವನ್ನು ವಿದ್ಯುಚ್ಛಕ್ತಿಯ ಸಹಾಯದಿಂದ ಹೊರತೆಗೆಯಬಹುದು. ಗಾಜಿನ ರಸವನ್ನು ಸಿದ್ಧಪಡಿಸುವಾಗ ಗಾರೆಯ ಕಲ್ಲು, ಮಳಲು ಮುಂತಾದುವುಗಳನ್ನು ಬೆರೆಸಿ ಅದನ್ನು ತುಂಬಿರುವ ಮೂಸೆಯ ಕಾವಿಗೆ ತಡೆಯಲಾರದೆ ಸುತ್ತುಮುತ್ತಲು ಕೆಲಸಗಾರರು ನಿಲುವುದು ಬಹು ಕಷ್ಟವಾಗುತ್ತದೆ. ಈ ಅಂಶದಲ್ಲಿ ಈಚೀಚೆಗೆ ಅಂತಹ ಮೂಸೆಯೊಳಕ್ಕೆ ವಿದ್ಯುಚ್ಛಕ್ತಿಯ ಪ್ರವಾಹವನ್ನು ತಂತಿಯದ್ವಾರ ಸಂಯೋಗಮಾಡಿ ಸಾಕಾದಷ್ಟು ತೀವ್ರವಾದ ಉಷ್ಣವನ್ನೊದಗಿಸಿದರೂ ಇದರಿಂದ ಕೆಲಸಗಾರರಿಗೆ ಸ್ವಲ್ಪಮಟ್ಟಿಗೂ ತೊಂದರೆಯುಂಟಾಗದೆ ಕೆಲಸ ಸಾಗುವುದು.

ಈಗ ವಿದ್ಯುಚ್ಛಕ್ತಿಯನ್ನು ತಯಾರ್ಮಾಡಬೇಕಾದರೆ ಹಬೆಯ ಯಂತ್ರ ಸಹಾಯವು ಬೇಕಾಗಿದೆ. ಹಬೆಯ ಯಂತ್ರ ಸಹಾಯದಿಂದ ವಿದ್ಯುಚ್ಛಕ್ತಿಯನ್ನುಂಟುಮಾಡುವ ಯಂತ್ರವನ್ನು ನಡೆಸಿ ವಿದ್ಯುತ್ಪ್ರವಾಹವನ್ನುಂಟುಮಾಡಬೇಕಾಗಿದೆ. ಇದರಲ್ಲಿ ಇದ್ದಲಿನ (ಬೆಂಕಿಯ) ಉಷ್ಣತೆಯದ್ವಾರ ಹಬೆಯ ಯಂತ್ರದಿಂದ ಗತಿಯ

ಸವಿನುಡಿ:—ಮಾದರಿಯ ಸಂಚಿಕೆಗೆ ನಾಲ್ಕಾಣೆಯ ಸ್ಟಾಂಪಿಟ್ಟು ಬರೆಯಿರಿ.

ನ್ನುಂಟುಮಾಡುವಾಗಲೂ, ಆ ಗತಿಯಿಂದ ವಿದ್ಯುಚ್ಛಕ್ತಿಯುಂಟಾಗುವಾಗಲೂ, ಆ ಶಕ್ತಿಯು ಬಹುವಾಗಿ ನಿರರ್ಥಕವಾಗುತ್ತದೆ. ಈ ಕಾರಣದಿಂದ ಕರಿಯು ಹತ್ತಿಕೊಂಡಕೂಡಲೆ ಅದರ ಉಷ್ಣಾಧಿಕ್ಯತೆಯಿಂದ ಒಂದೇಬಾರಿ ಬೇಗನೆ ವಿದ್ಯುಚ್ಛಕ್ತಿಯುಂಟಾಗುವ ಯುಕ್ತಿಯನ್ನು ಕಂಡುಹಿಡಿಯುವದರಲ್ಲಿ ಪ್ರಯತ್ನಗಳು ನಡೆಯುತಿವೆ. ಇದೊಂದು [illegible], ವಿದ್ಯುಚ್ಛಕ್ತಿಯು ಈಗ್ಗಿಂತಲೂ ಬಹು ಸುಲಭವಾಗಿ [illegible] [illegible]. [illegible] ಇದೊಂದು ಬಗೆಯ [illegible] [illegible].

[illegible]

[illegible]

[illegible]

ದಾಗ ಡಾಕ್ಟರು ಫೋರ್ನೀರು ಡಿ, ಆಲ್ಬ್ಬ ಯವರು ಒಂದು ವಿದ್ಯುಚ್ಛಕ್ತಿಯ ಯಂತ್ರವನ್ನು ಪ್ರದರ್ಶಿಸಿದರು. ಇದರಲ್ಲಿ ಇವರು ಮಾಡಿರುವ ಹೊಸ ಮಾರ್ಪಿನ ದೆಸೆಯಿಂದ, ಈ ಆಶ್ಚರ್ಯಕರವಾದ ಸಂಗತಿಯು ಸಾಧ್ಯವಾಗಿರುತ್ತದೆ. ಅಂದರೆ—ಈ ಯಂತ್ರದಮೂಲಕ ಕಾಂತಿಗ್ರಹಣರೂಪವಾದ ದರ್ಶನಕಾರ್ಯವು ಶ್ರೋತ್ರೇಂದ್ರಿಯದಮೂಲಕ ನೆರವೇರಿಸಲ್ಪಡುವುದು.

ಸೆಲೀನಿಯಮೆಂಬ ಒಂದು ಬಗೆಯ ವಸ್ತುವಿಶೇಷದ ವಿಚಿತ್ರಸ್ವಭಾವವನ್ನಾಧಾರಪಡಿಸಿಕೊಂಡು ಈ ಯಂತ್ರವು ನಿರ್ಮಿಸಲ್ಪಟ್ಟಿದೆ. ಈ ಪದಾರ್ಥದಮೂಲಕ ವಿದ್ಯುಚ್ಛಕ್ತಿಯನ್ನು ಪ್ರಸರಿಸುವಂತೆ ಮಾಡಿದರೆ ಅದರಮೇಲೆ ಬೀಳುವ ಕಾಂತಿಯು ತೀಕ್ಷ್ಣವಾದರೆ ಈ ವಿದ್ಯುಚ್ಛಕ್ತಿಯ ಬಲವು ಹೆಚ್ಚಾಗಿಯು, ಕಾಂತಿಯು ಮಂದವಾದರೆ ಇದು ಕ್ಷೀಣವಾಗಿಯು ಇರುವುದು. ಸಾಮಾನ್ಯ ಸಂಭಾಷಣೆಗಳ ಧ್ವನಿಗಳು ವಿದ್ಯುಚ್ಛಕ್ತಿಯಮೂಲಕವಾಗಿಯೇ ಮತ್ತೊಂದು ಸ್ಥಳಕ್ಕೆ ವ್ಯಾಪಿಸಿ ಇತರರಿಗೆ ಕೇಳುವುದು. ಒಂದು ಸೆಲೀನಿಯಂ ಪ್ಲೇಟ (ಹಲಿಗೆಯು) ನ್ನು ಟಲಿಫೋನು ಯಂತ್ರಕ್ಕೆ ಜೋಡಿಸಿದರೆ ಈ ಪದಾರ್ಥದಮೇಲೆ ಬೀಳುವ ಪ್ರಕಾಶಾಧಿಕ್ಯತೆಯನ್ನನುಸರಿಸಿ ಟಲಿಫೋನು ಯಂತ್ರದೊಳಗಣ ವಿದ್ಯುಚ್ಛಕ್ತಿಯು ತದ್ದ್ವಾರ ಕೇಳ್ಬರುವ ಶಬ್ದವನ್ನು ಪ್ರತಿಧ್ವನಿಸುತಿರುವುದು. ಸೆಲೀನಿಯಮನ್ನು ಒಳ್ಳೆಯ ಬೆಳಕಿನಲ್ಲಿಟ್ಟರೆ ಧ್ವನಿಗಳು ಕೇಳುವುದು. ಅದಿಲ್ಲದಿದ್ದಾಗ ನಿಶ್ಶಬ್ದವಾಗಿರುವುದು. ಅದರಿಂದ ಈ ಯಂತ್ರದಿಂದ ನಮಗೆ ಕೇಳ್ಬರುವ ಧ್ವನಿಗಳನ್ನು ಅನುಸರಿಸಿ ಈ ಯಂತ್ರದಮೇಲೆ ಬೀಳುವ ಕಾಂತ್ಯಾಧಿಕ್ಯತೆಯನ್ನು, ನೋಡದೆಯೇ ಕಂಡುಕೇಳಬಹುದು. ಅಚ್ಚುಅಕ್ಷರಗಳಮೇಲೆ ಬಹುಪ್ರಕಾಶಮಾನವಾದ ದೀಪ ಒಂದಿಟ್ಟರೆ ಟಲಿಫೋನಿನಲ್ಲಿ ಕೇಳಲ್ಪಡುವ ಶಬ್ದಗಳದೆಸೆಯಿಂದ ಅಕ್ಷರಗಳ ಪರಸ್ಪರ ಭೇದವನ್ನು ಕಂಡುಹಿಡಿಯಬಹುದು.

ಈಗ ಸಾಧಾರಣ ವೃತ್ತಾಂತಪತ್ರಿಕಾ ಮುದ್ರಾಕ್ಷರಗಳನ್ನು ಹೀಗೆಯೇ ನೇತ್ರೇಂದ್ರಿಯ ಸಹಾಯವಿಲ್ಲದೆಯೇ ಓದಬಹುದು. ಇದಕ್ಕೆ “ಟೈಪ್‌ರೀಡಿಂಗ್ ಆಪ್ಟೋಫೋನು” ಎಂದು ಹೆಸರು.

ಈಚೆಗೀಚೆಗೆ ಟೆಲಿಗ್ರಾಫುಗಳಮೂಲಕ ಬಲುಮೈಲಿಗಳ ದೂರದಲ್ಲಿರುವ ಇತರರು ಏನುಮಾಡುತಿರುವರೆಂಬದನ್ನು ಕಂಡುಕೊಳ್ಳುವಂತೆ ಮಾಡುವ ಹೊಸ ಬಗೆಯ ಯಂತ್ರ ಒಂದುಕಂಡುಕೊಳ್ಳಲ್ಪಟ್ಟಿದೆ. ಎಂತಹ ರಹಸ್ಯಸ್ಥಾನಗಳನ್ನಾದರೂ ಇತರರರಿಯದೆಯೇ ಬಹುದೂರದೊಳಿರುವ ತಂತಿಯ ಕೊನೆಯಮೂಲಕ ನೋಡಬ

ಸವಿನುಡಿ:—ಸ್ವಲ್ಪ ದರಗಳಲ್ಲಿ ವ್ಯಾಪಾರಸ್ಥರ ಪ್ರಕಟನೆಗಳನ್ನು ಸಾವಿರಾರುಮಂದಿಗೆ ಹಂಚುವುದು.

ಭಿಗು. ಆದುದರಿಂದ ಅಂತಹ ಯಂತ್ರದಿಂದ ಲೋಕಕ್ಕೆ ಉಂಟಾಗುವುದಕ್ಕಿರುವ ಮೇಲನ್ನು ಈಗ ನಿರ್ಣಯಿಸುವುದು ಕಷ್ಟವು.

ವಿದ್ಯುಚ್ಛಕ್ತಿಯ ಸಹಾಯದಿಂದ ಬರೆಯುವುದಕ್ಕೆ ಮತ್ತೊಂದು ಉದಾಹರಣೆಯುಂಟು, ತಂತಿಯ ಮೂಲಕ ವರ್ತಮಾನಗಳನ್ನು ಕಳುಹಿಸುತ್ತಿರುವುದರಿಂದ ಅದಕ್ಕೆ ತಾರಾಯಂತ್ರವೆಂದೂ ತಂತೀವರ್ತಮಾನವೆಂದೂ ಹೆಸರುಂಟಾಗಿರುತ್ತದೆ ; ಇದು ಕೂಡ ವಿದ್ಯುಚ್ಛಕ್ತಿಯಿಂದಲೇ ನಡೆಯತಕ್ಕದ್ದಾಗಿದೆ. [illegible]

* * *

ನಾಲಗೆಯ ಮಹಿಮೆ.

[illegible]

[illegible]

[illegible]

ಲೋಕದಲ್ಲಿ ಕೋಗಿಲೆಯು ಯಾರಿಗೆತಾನೆ ಏನುಪಕಾರವಮಾಡಿತು ! ಕಾಗೆಯು ಮಾಡಿದ ಅಪಕಾರತಾನೆ ಏನು ?

ಎಲೆ ನಾಲಗೆಯೇ !

ನಿನ್ನಿಂದಲೇ ಸಂಪತ್ತು; ! ನಿನ್ನಿಂದಲೇ ವಿಪತ್ತು; ! ನಿನ್ನಿಂದಲೇ ಸುಖವು; ! ನಿನ್ನಿಂದಲೇ ದುಃಖವು; ! ನಿನ್ನಿಂದಲೇ ಮಿತ್ರರು; ! ನಿನ್ನಿಂದಲೇ ಶತೃಗಳು; ! ನಿನ್ನ ಮಹಿಮೆ ಏನು ಸಾಮಾನ್ಯವೇ ? ಮನುಷ್ಯನು ಏಳ್ಗೆಯನ್ನೈದಬೇಕಾದರೆ ಅಮೂಲ್ಯವಾದ ಒಂದು ಸಂಪತ್ತು ನಿನಗಿರಲಿ !! ಒಳ್ನುಡಿಯೆಂಬ ಆ ಐಶ್ವರ್ಯವನ್ನು ಧರ್ಮಪ್ರವೃತ್ತಿಯುಳ್ಳ ಮನೋರಾಜನಿಂದ ಯಥೇಚ್ಛವಾಗಿಪಡೆ ! ಅಮೋಘವಾದ ನಿನ್ನ ಸಂಪತ್ತನ್ನು ಆವ ಮನುಷ್ಯನುಂಟಾಗಿರುವನೋ, ಅವನು ಅಪರಿಮಿತವಾದ ಉಪಕಾರವನ್ನು ಇತರರಿಗೂ ಮಾಡಲಾಪನು ; ತಾನೂ ಪಡೆವನು ; ಕಷ್ಟವಿಲ್ಲದೆ ಆರ್ಜಿಸಬಹುದಾದ, ಮತ್ತು ಎಂದಿಗೂ ಕ್ಷೀಣಿಸದ, ಇಹದಲ್ಲಿ ಅತ್ಯುತ್ತಮ ಸೌಖ್ಯವನ್ನು, ಪರದಲ್ಲಿ ಅಮಿತವಾದ ಆನಂದವನ್ನೂ, ಕೈಗೂಡಿಸುವ ಅದ್ಭುತಶಕ್ತಿಯುಳ್ಳ ನಿನ್ನ ಭಾಗ್ಯಕ್ಕೆ ಸಮಾನವಾದುದಾವುದು ? ನಿನ್ನ ಸಿರಿಯ ಅಪಾರ ಮಹಿಮೆಯನ್ನು ಪ್ರಾಜ್ಞಶಿರೋಮಣಿಗಳಲ್ಲದೆ ಇತರರು ಅರಿಯಲಾರ್ಪರೇ ? !!

ಸಾಮಾನ್ಯವಾಗಿ ಜನರು ಐಶ್ವರ್ಯವೆಂದು ಭಾವಿಸುವುದು, ಪ್ರಾಪಂಚಿಕ ಸಮೃದ್ಧಿಯನ್ನೇ! ಅದರ ಗುಣಾವಗುಣಗಳನ್ನು ಚೆನ್ನಾಗಿ ಪರಿಶೀಲಿಸಿದ ಮಹನೀಯರು ಎಂದಿಗೂ ಅದನ್ನು ಆಶಿಸರು. ಐಶ್ವರ್ಯವು ಎಂದಿಗಾದರೂ ಅಸ್ಥಿರವಾದುದೇ ಸರಿ ! ಮತ್ತು :—

ಶ್ಲೋ ॥ ಅರ್ಥಾನಾಮಾರ್ಜನೇದುಃಖಂ । ಆರ್ಜಿತಾನಾಂತು ರಕ್ಷಣೇ । ನಾಶೇದುಃಖಂವ್ಯಯೇದುಃಖಂ । ಅರ್ಥೋದುಃಖಸ್ಯಭಾಜನಂ ॥'' ಎಂಬಂತೆ ನಿರಂತರವೂ ದುಃಖಕ್ಕೆ ಕಾರಣವಾದುದು. ಇದನ್ನು ಉಚಿತರೀತಿಯಲ್ಲಿ ವಿನಿಯೋಗಿಸುವುದರಿಂದ ಸ್ವಲ್ಪಮಟ್ಟಿಗೆ ಸ್ವಸುಖವನ್ನು, ಪರಲೋಕಸದ್ಗತಿಯನ್ನು, ಸಂಪಾದಿಸಿಕೊಳಬಹುದಾದರೂ. ಇದರಿಂದ ಪಾಪ ಸಂಘಟನೆಯಾಗುವುದೇ ಹೆಚ್ಚು; ಲೋಕದಲ್ಲಿ ಜನರು ಉತ್ಕೃಷ್ಟಸ್ಥಿತಿಗೇರಿದಷ್ಟೂ, ದುರ್ವಿಷಯಾಸಕ್ತರಾಗುವುದೇ ಹೆಚ್ಚಲ್ಲವೇ ? ಭಾಗ್ಯದಿಂದ ಒಂದು ಬಗೆಯ ಉನ್ಮಾದವು ತಲೆಗೇರಲು, ಆಗ ಜನರು ಮಾಡಬಾರದ ಆವ ಕೆಲಸವನ್ನು ತಾನೆ ಮಾಡದೆಬಿಡುವರು? ! ಧರ್ಮವನ್ನು ದೂರೀಕರಿಸುವರು; ಆಚಾರವನ್ನು ವಿಚಾರಿಸರು ; ಗುರುಗಳ ಗೌರವವನ್ನು ಗಣಿಸರು; ನೀತಿಯನ್ನು ನಿಂದಿಸುವರು; ಪ್ರಾಜ್ಞರನ್ನು ಹಳಿವರು; ಒಳ್ನುಡಿಯನೊಲ್ಲರು; ದೀನರಲ್ಲಿ ದಯೆಗೈ

ಸವಿನುಡಿ:—ಮುಂಗಡ ಹಣಕೊಡುವ ಚಂದಾದಾರರಿಗೆ ಬೆಲೆಯುಳ್ಳ ಬಹುಮಾನಗಳು ದೊರೆಯುವುವು.

ಯ್ಯರು ; [illegible] ಪ್ರೀತಿಸುವರು; ಸದಾ ಮುಖವನ್ನು ಗಂಟಿಟ್ಟು ಕೊಂಡಿರುವುದೇ ತಮ್ಮ ಸಿರಿಗೆ ಭೂಷಣವೆಂದೂ, ಬಡವರೊಡನೆ, ಇಲ್ಲವೆ, ತಮ ಗಿಂತ ಕಡಮೆ ತರಗತಿಯವರೊಡನೆ ಧಾರಾಳವಾಗಿ ಮಾತನಾಡುವುದು ತಮಗೆ ಗೌರ ವಕ್ಕೆ ಕುಂದೆಂದೂ ಭಾವಿಸುವರು. [illegible] [illegible] ಕಾಗದವನ್ನಾದರೂ [illegible] ಸದೆ [illegible] [illegible] ಅವರ ಮೂಲಮಂತ್ರ; ! ಪರ ರನ್ನು [illegible] [illegible] [illegible] ಅವರ ಮುಖ್ಯ ತಂತ್ರವು ! [illegible] [illegible] ಲಭಿಸುವುದು ! [illegible]

[illegible]

[illegible]

[illegible]

ಗಾಯರವರು ಇನ್ನೂ ನಿದ್ರಿಸುತಿರುವರು ; ಸ್ವಲ್ಪಹೊತ್ತಿನಮೇಲೆ ಬಾರ ಯ್ಯಾ ; (ಇನ್ನೂ ಸ್ವಲ್ಪ ಹೊತ್ತು ಬಿಟ್ಟುಬಂದಾಗ) ಅಯ್ಯಾ ! ಈಗ ಸ್ನಾನವಾ ಡುತಿರುವರು ; (ಮತ್ತೊಂದುವೇಳೆ ಬಂದರೆ) ಊಟವಮಾಡುತಿರುವರು ; (ತಿರುಗಿ ಯೂ ಬಂದಾಗ) ತಿರುಗಾಡುತಿರುವರು ; ಜುಟ್ಟನ್ನು ಆರಿಸುತ್ತಿರುವರು ; (ಇನ್ನೊ ಮ್ಮೆ ಬರಲು) ಅಂತರ್ಗೃಹದಲ್ಲಿರುವರು ; (ಮತ್ತೂ ಹೋಗಿಬರಲು) ಈಗ ಪಗಡೆ ಯನ್ನು ಆಡುತಿರುವರು. ಮಾತನಾಡಲು ಸಮಯವಿಲ್ಲ. ಹೊರಟುಹೋಗು ! ಸಾಯಂಕಾಲಕ್ಕೆ ಬಾ !) ದ್ವಾರಪಾಲಕರ ಇಂತಹ ನುಡಿಗಳಿಂದಲೇ ಅರ್ಥಿಯು ಅನೇಕವೇಳೆ ತಿರುಗಿ ತಿರುಗಿ ನಿರಾಶಾವಶನಾಗಬೇಕಾದರೂ, ಬಾಪಲ್ಯದಿಂದ ಬಹು ಕಾಲ ನಿರೀಕ್ಷಿಸಿ ಕದಾಚಿತ್ ಒದಗಿದ ಸಮಯದಲ್ಲಿ ಅಧಿಕಾರಿಯನ್ನು ಕಂಡು ಗೋ ಳನ್ನು ಹೇಳಿಕೊಂಡು, ಆತನ ಒಂದೆರಡು ಮಾತುಗಳಿಂದಲೇ ಆಗಲಾದರೂ, ತನ್ನ ಆಶೆಗೆ ಮುಕ್ತಾಯವನ್ನು ಮಾಡಿಕೊಳಬೇಕಾಗುವುದು. ಉನ್ನತ ಪದವಿಯಲ್ಲಿರು ವವರು, ಬಡವರ ಸುಖಕಷ್ಟಗಳನ್ನಾರು ತಿಳಿವರು ? ಕಾಲಿಗೆ ಜೋಡನ್ನು ಮೆಟ್ಟಿ ಕೊಂಡಿರುವನು ಭೂಮಿಯೆಲ್ಲವೂ, ಚರ್ಮದಿಂದಲೇ ಆವೃತವಾಗಿರುವುದೆಂದು ಭಾ ವಿಸುವುದೇ ಸ್ವಾಭಾವಿಕವಲ್ಲವೆ ? "ಭಾಗ್ಯೋನ್ಮತ್ತರ ಗುಣಗಳೇ ದುಷ್ಟರಾದ ಅಧಿ ಕಾರಿವರ್ಗದವರನ್ನೂ ಆಶ್ರಯಿಸಿರುವುವು" ಎಂದಮೇಲೆ ಇನ್ನು ಇಲ್ಲಿ ಹೆಚ್ಚುವಿವರಿ ಸತಕ್ಕುದು ಅನಾವಶ್ಯಕವೇ ಸರಿ ; !

ದುಷ್ಟಾಧಿಕಾರಿಗಳನ್ನು ಜನರು ಗೌರವಿಸುವುದು, "ಅವರು ತಮಗೆ ಕೇಡು ಮಾಡದಿರಲಿ" ಎಂಬುದ್ದೇಶದಿಂದಲ್ಲದೆ ಭಕ್ತಿಯಿಂದ ಎಷ್ಟುಮಾತ್ರವೂ ಅಲ್ಲ ! ಸೂಕ್ತ ಗೌರವಕ್ಕೂ ಅಧಿಕಾರಗೌರವಕ್ಕೂ ತಾರತಮ್ಯವನ್ನು ತಿಳಿದ ವಿವೇಕಿಗಳಾರು ತಾನೆ ಅದನ್ನು ಬಯಸುವರು ? !!

ಶ್ರೀ ಭಗವಂತನು ತಮಗೆ ದಯೆಮಾಡಿಕೊಟ್ಟಿರುವ ಸತ್ಪದವಿಯು ದೀನಾನಾ ಥವಿಪನ್ನರಿಗೆ ಉಪಕರಿಸುವುದಕ್ಕೇ ಹೊರತು ಸುಖಕ್ಕೆ ಮಾತ್ರವೇ ಅಲ್ಲವೆಂದು ಆರು ದೃಢವಾಗಿ ಬಗೆದು ಅದರಂತೆ ಆಚರಿಸುವರೋ, ಅಂತಹರಿಗೆ ಐಶ್ವರ್ಯವಾಗಲೀ, ಅಧಿಕಾರವಾಗಲೀ, ಶ್ರೇಯಸ್ಕರವೂ, ಯಶಸ್ಕರವೂ ಆಗುವುದು. ಆ ಗುಣವಿಲ್ಲದ ಮೇಲೆ ನಿತ್ಯದಾರಿದ್ರ್ಯವೇ ಉತ್ತಮವೆಂದು ಬುದ್ಧಿಶಾಲಿಗಳಾದವರು ಬಗೆಯುವ ರು !!

"ಭಾಷಾನಿಧಿ" ಬೋಧಕರ ಸಹಾಯವಿಲ್ಲದೆ ಒಂಬತ್ತು ಭಾಷೆಗಳನ್ನು ಕಲಿ ಸುವ ಹೊಸ ಪುಸ್ತಕ. ಅಚ್ಚಾಗುತಿದೆ. ಅಚ್ಚು ಪೂರೈಸುವುದರೊಳಗೆ ಮುಂಗಡ ಹಣ ಕಳಿಸುವಂತಹರಿಗೆ ಒಂದು ರೂಪಾಯಿ ನಾಲ್ಕಾಣೆ. ಅನಂತರ ಒಂದು ರೂಪಾಯಿ ಎಂಟಾಣೆ. ವಿಳಾಸಮಾತ್ರ ಕೊಡಿ.

ಹೆಚ್ಚಿನ ಪಾಂಡಿತ್ಯವಾದರೂ, ಒಳ್ಳೆ ತಿಳಿವಳಿಕೆಯಿರದಿದ್ದರೆ ಸುಖಪ್ರದವಾಗಲಾರದು. ಎಲೈ ರಸನೇಂದ್ರಿಯವೇ! ನೀನು ಸಂಪತ್ತಿಹೀನನಾಗಿದ್ದರೆ ಅಹಿತಕಾರಿಯಾಗುವೆಯಲ್ಲದೆ, ನಿನ್ನ ಭಾಗ್ಯದೊಡನೊಂದಿದ್ದರೆ ಎಂದಿಗಾದರೂ, ನಿನ್ನಿಂದ ಅಧರ್ಮಸಂಭವವೇನಾಗುವುದುಂಟೇ!! ಲೋಕದಲ್ಲಿ ನಿನ್ನ ಸಂಪತ್ತೇ ಸಂಪತ್ತು! ಅದನ್ನೇನೆಂದು ಬಣ್ಣಿಸಲಿ! ನಿರಂತರವೂ ಮನಶ್ಚಿಂತೆಯನ್ನು ಪರಿಹರಿಸುವ ದಿವ್ಯೌಷಧವು! ಶತ್ರುಗಳನ್ನು ಮಿತ್ರರನ್ನಾಗಿ ಮಾಡುವಂತಹುದು! ಸರ್ವರನ್ನೂ [illegible] [illegible] [illegible] ! [illegible] ಕೋರಿಕೆಗಳನ್ನೀಯುವ ಕಲ್ಪವೃಕ್ಷವು! [illegible] ಅದೇನೆಂದರೆ:— [illegible]—

[illegible] ಎಂದು ಶ್ರೀಶಂಕರ [illegible] !!

* * *

[illegible]

[illegible]

[illegible]

ತಾನು ಹೆಜ್ಜೆಯೂರುವ ದಾರಿಯಲ್ಲಿ ಅಪಾಯ ಉಪಾಯಗಳನ್ನೆಣಿಸುವುದು ಪ್ರತಿ ಮನುಷ್ಯನಿಗೂ ವಿಧಿಯು. ಸೃಷ್ಟಿಕ್ರಮದಲ್ಲಿ ಮನುಷ್ಯನು ತನ್ನ ಚರಿತಾರ್ಥವನ್ನು ಕುರಿತು ಎಷ್ಟೋಬಗೆಯ ಕೆಲಸ ಮಾಡಬೇಕಾಗುವುದು. ತಾಯಿಗರ್ಭದಿಂದಲೇ ಒಂದೊಂದು ಕೆಲಸವನ್ನೂ ಮೊತ್ತಮೊದಲು ಯಾರೂ ಕಲಿತಿರುವುದಿಲ್ಲವಷ್ಟೆ? ನೆರೆಯವರನ್ನು ನೋಡಿ ಕಲಿಯುವುದು ಕೆಲವು, ತಾನು ಕಷ್ಟಪಟ್ಟು ಕಲಿಯುವುದು ಕೆಲವು, ಪ್ರಯತ್ನದಿಂದ ಹಿರಿಯರನ್ನು ಸೇವಿಸಿ ಕಲಿಯುವುದು ಕೆಲವು, ಗ್ರಂಥವ್ಯಾಸಂಗದಮೂಲಕ ಕಲಿಯುವಂತವು ಕೆಲವು, ದೇಶಾಟನಮಾಡಿ ಕಲಿಯುವಂತವು ಕೆಲವು, ಹೀಗೆ ಎಷ್ಟೋಬಗೆಯಲ್ಲಿ ಕಲಿತಲ್ಲದೆ ಪ್ರಪಂಚನಿರ್ವಾಹಕಾರ್ಯದಲ್ಲಿ ಯಾವಾತನೂ ಸಮರ್ಥನಾಗಲಾರನು. ಒಂದೊಂದು ಸಂಗತಿಯನ್ನು ತಿಳಿಯುವುದಕ್ಕೆ ಎಷ್ಟೆಷ್ಟೋ ಪ್ರಯಾಸಪಡಬೇಕಾಗುತ್ತದೆ. ಎಷ್ಟು ಕಷ್ಟವೋ ಅಷ್ಟೊ ಅಷ್ಟು ಅದಕ್ಕೂ ಹೆಚ್ಚು ಅಥವ ಮಾನವನ ಪರಮಾಯುಸ್ಸನ್ನು ವೆಚ್ಚಮಾಡಬೇಕಾಗುತ್ತದೆ. ಪ್ರಯತ್ನವೂ ತಕ್ಕಷ್ಟು ಅವಧಿಯೂ, ಕಾಲನಿರೀಕ್ಷಣೆಯೂ, ಪ್ರಯಾಸವೂ, ಸಾಕಾದಮಟ್ಟಿನ ವ್ಯಯವೂ, ಯಾವಾಗ ಸರಿಯಾಗಿ ವಿನಿಯೋಗವಾಗುವುದಿಲ್ಲವೋ ಆಗ ಎಂತಹ ಧೀರನಿಗೂ ಯಾವ ಕೆಲಸವೂ ಸಾಗದಂತಾಗುತ್ತದೆ.

ಸಮಸ್ತ ಸಂಗತಿಗಳಲ್ಲೂ ಸರಿಯಾಗಿ ನಡೆದರೂ ಮಾಡುವ ಕೆಲಸವು ತಲೆಯಿಂದ ತಲೆಗೆ ನಿಲುತ್ತದೆ. ಪ್ರತಿಮಾನವನೂ ಸುಖಾಪೇಕ್ಷೆಯಿಂದ ಅದನ್ನು ಸಾಧಿಸುವುದನ್ನು ಕುರಿತು ತನ್ನ ಸರ್ವಪ್ರಯತ್ನವನ್ನೂ ಮಾಡುತ್ತಾನೆ. ಯಾವಾತನಾದರೂ ತನ್ನ ನಿಕೃಷ್ಟದೆಸೆಯನ್ನು ಎಂದೆಂದಿಗೂ ಅಪೇಕ್ಷಿಸುವುದಿಲ್ಲ. ಒಪ್ಪುವುದೂ ಇಲ್ಲ. ಉತ್ಕೃಷ್ಟದೆಸೆಗೇರುವುದಕ್ಕಿರುವ ಅಭಿಲಾಷೆಯು ಅಕುಟಿಲವಾದುದಾಗಿ ಅಂತಹ ಪ್ರಯತ್ನಗಳು ಗಟ್ಟಿಯಾದ ತಳಾದಿಯುಳ್ಳುದಾಗಿರಬೇಕು. ಪ್ರಥಮದಲ್ಲಿ ಸುಖವೆಂದು ಯಾವುದನ್ನು ಭಾವಿಸುವನೋ ಅದು ಕಾರಣಾಂತರದಿಂದ ದುಃಖವಾಗಿ ಪರಿಣಮಿಸಬಹುದು. ಆಗ ತನ್ನ ಭಾಗಕ್ಕಿಲ್ಲದ ಸುಖವು ಪ್ರಪಂಚದಲ್ಲಿಯೇ ಇಲ್ಲದಿರುವಂತೆ ಆಯಾತನಿಗೆ ಭಾಸವಾಗುವುದು ಸಹಜವು. ಅಂತಹ ಸಮಯದಲ್ಲಿ ಪ್ರಯತ್ನವಿಮುಖನಾಗಿ ಹಿಡಿದ ಕಾರ್ಯವನ್ನು ಕೈಬಿಟ್ಟರೆ ನಷ್ಟಭಾಗಿಯಾಗಿ ಪರಮಾವಧಿಯೂ, ಪರಿತಪಿಸುತಿರುವುದು ಸಿದ್ಧವು. ಇದೀಗ ಏಳಿಗೆಗೆ ಕುಂದೆಂದು ಹೇಳಬೇಕಾದುದಿಲ್ಲ.

"ಗೀರ್ವಾಣಭಾಷಾ ಪ್ರವೇಶದಾಯಿನಿ" ಅಚ್ಚಾಗುತಿದೆ. ಬೋಧಕರ ಸಹಾಯವಿಲ್ಲದೆ ಸಂಸ್ಕೃತಭಾಷೆಯನ್ನು ಕಲಿಸುವುದು. ಅಚ್ಚುಪೂರೈಸುವುದಕ್ಕೆ ಮುಂಚೆ ಮುಂಗಡ ಹಣ ಕಳುಹುವವರಿಗೆ ಒಂದು ರೂಪಾಯಿ ನಾಲ್ಕಾಣೆ. ಅನಂತರ ಒಂದು ರೂಪಾಯಿ ಹನ್ನೊಂದಾಣೆ. ವಿಳಾಸಮಾತ್ರ ಕೊಡಿ.

[illegible]ವಿಸಂತತಿಯು ಇಂತಹ ಕೇಡಿಗೆ ಗುರಿಯಾಗದಂತೆ ಎಚ್ಚರಗೊಳುವುದನ್ನು ಕುರಿತು [illegible], ಗ್ರಂಥವ್ಯಾಸಂಗ, ನೀತಿಬೋಧೆ ಮುಂತಾದ ಸಕಲೋಪಾಯಗಳೂ ನೆಲೆಗೊಂಡಿವೆ. ಕಿರಿಯರಿಗೆ ಹಿರಿಯರು ಹೇಳುವ ಮಾತು ಮೊದಮೊದಲು ಹಿತವಾಗಿ ಕಾಣುವದಿಲ್ಲ. ಕಿರಿತನದಲ್ಲಿ ಹೀಗಾದ್ದರೂ ಅಭ್ಯಾಸಕ್ರಮದಿಂದ ಬುದ್ಧಿಯು [illegible] ಅಪಕ್ವದೆ [illegible], ಕುಕಾರ್ಯಗ [illegible] ಉಂಟಾಗುವುದಕ್ಕಿರುವ [illegible] ತಂದುಕೊಳುವರಲ್ಲದೆ [illegible] ನೀತಿಯು [illegible] ಸುನೀತಿಯನ್ನು [illegible]

[illegible]

[illegible]

[illegible]

ಹಿರಿಯರು ಹೇಳುವರು. ಪವಿತ್ರಮತಿಯುತರೆನಿಸಿಕೊಳಲಿಚ್ಛೆಸುವಂತವರು ಸರ್ವಂಸಕಜಂತುಗಳನ್ನೂ ಕೂಡ ನೋಡಬಾರದೆಂಬ ಕಟ್ಟಳೆಯುಂಟು. ನಮ್ಮ ಮನಸಿನಲ್ಲಿ ದುರಾಲೋಚನೆಗಳನ್ನು ಹುಟ್ಟಿಸುವ ಸಂಗತಿಗಳನ್ನು ಕೇಳಲಾಗದು. ಕೆಟ್ಟ ಮಾತುಗಳನಾಡಬಾರದು. ಮಾನವರ ಅಥವ ಇತರ ಪ್ರಾಣಿಗಳ ಅವಸ್ಥಾವಿಶೇಷವನ್ನು ನೋಡಿದಮಟ್ಟಿಗೆ ಕಲುಷಿತಚಿತ್ತರಾದವರು ಬಲುಮಂದಿ ಇರುವರು. ಹೇಯವಾದ ಚಿತ್ರಪ್ರತಿಮೆಗಳನ್ನು ನೋಡುವಿಕೆ, ಭಂಡಪದಗಳನ್ನು ಕೇಳುವಿಕೆ, ಶೃಂಗಾರಕಥೆಗಳನ್ನೋದುವಿಕೆ, ಇವುಗಳಿಂದ ಮನಸ್ಸು ಕೆಡುವುದಕ್ಕೆ ಬಹುವಾಗಿ ಅವಕಾಶವುಂಟು. ನೀತಿಭಾವಗರ್ಭಿತವಾದ ಗ್ರಂಥಗಳನ್ನೋದುವಿಕೆಯಿಂದ ಹೃದಯವು ಸದ್ಭಾವಪೂರಿತವಾದಾಗ ದುರ್ನೀತಿದಾಯಕ ಗ್ರಂಥಗಳನ್ನೋದುವುದರಿಂದ ಮನಸ್ಸು ಕೆಡುವುದೇನಚ್ಚರಿ ? ಭಗವನ್ನಾಮಸಂಕೀರ್ತನಪ್ರಪೂರಿತವಾದ ಹರಿಕಥೆ, ರಸಭರಿತವಾದ ಸಂಗೀತ, ಮುಂತಾದುವುಗಳನ್ನು ಕೇಳುವಾಗ ಮನವು ಸದ್ಭಾವಪೂರಿತವಾಗಿ ಪರವಶವಾಗುವಾಗ ಶೃಂಗಾರಕಥೆಗಳೋದಿ, ಭಂಡಪದಗಳೂ, ಪುಂಡುಹಾಡುಗಳೂ, ಕಿವಿಯಲ್ಲಿ ಬಿದ್ದು ಮನಸು ತಲ್ಲೀನವಾದಾಗ ದುರಾಲೋಚನಾಪರಿಪೂರಿತವಾಗಿ ಕೀಳ್ದಾರಿಯಲ್ಲಿ ಅಡಿಯಿಟ್ಟು ಕೆಡುವುದಕ್ಕೆ ಅನುಮಾನವೇನು ?

ಚಿಕ್ಕವರಾಗಲಿ, ದೊಡ್ಡವರಾಗಲಿ, ತಮ್ಮತಮ್ಮ ಅಭಿಪ್ರಾಯಗಳನ್ನು ಎದುರಾಳಿಗೆ ತಿಳಿಸುವಾಗ ಬಲು ತಾಳ್ಮೆಯುಳ್ಳವರಾಗಿರತಕ್ಕದು ಅತ್ಯವಶ್ಯಕವು. ಬಾಯ್ಮಾತೊಂದು ಹಿತವಾಗಿದ್ದಿತೆಂದರೆ ಸಮಸ್ತ ಶ್ರೇಯಸ್ಸಿಗೂ ಆಕರವು. ತನ್ನ ಅಭಿಪ್ರಾಯಕ್ಕೆ ವಿರೋಧವಾದ ಪ್ರತ್ಯುತ್ತರ ಬಂದಿತೋ ಅಷ್ಟುಬೇಗ ಅಸೂಯೆಗೊಳ್ಳುವಂತವರು ಅನೇಕರಿರುವರು. ಆಗಣ ಸಮಯದಲ್ಲಿ ಅಂತಹರ ಮುಖಮುದ್ರೆಯೂ, ಇಂದ್ರಿಯಗಳ ಚೇಷ್ಟೆಗಳೂ ನೋಡುವಂತವರಿಗೆ ಅತೀವ ಅಸಹ್ಯಕರವಾಗಿರುವುದು ಕೇವಲ ವಿಕಾರರೂಪದಿಂದ ಯಾವಬಗೆಯಿಂದ ಮಾತಾಡಿದರೂ ಮನೋಭಾವವನ್ನು ಇಂಗಿತವು ಹೊರಪಡಿಸದಿರುವದಿಲ್ಲ. ಎಷ್ಟಾಗಿ ಪ್ರಯತ್ನಪಟ್ಟರೂ ಇಂತಹ ಚೇಷ್ಟೆಗಳು ಹಿತವರನ್ನು ಕೂಡ ಅಹಿತರನ್ನಾಗಿಸಿಬಿಡುತ್ತವೆ. “ಮಾತುಬಲ್ಲವರಿಗೆ ಜಗಳವಿಲ್ಲ’’ ಎಂಬ ಗಾದೆಯನ್ನು ಜ್ಞಾಪಕದಲ್ಲಿಡತಕ್ಕದು.

“ಮಾತಿನಿಂದ ಕಂಟು, ಮಾತಿನಿಂದ ನಂಟು’’ ಇದೊಂದು ಚಿತ್ರತಮವಾದ ಗಾದೆಯು ಸಮಯೋಚಿತವಾಗಿಲ್ಲಿ ಶೋಭಿಸುವುದು. ನೋಡಿ; ಮಾತಾಡುವುದೂ ಕಷ್ಟ, ಮಾತಾಡದಿರುವುದೂ ಕಷ್ಟ; ಮುಖಗಂಟಿಕ್ಕಿ ಧೂರ್ತ್ಯಧ್ವನಿಯಿಂದ ಹಿತ

“ಸವಿನುಡಿ”ಯಲ್ಲಿ ಪ್ರಕಟನೆಗಳನ್ನು ಕೊಡುವಂತವರು ಪ್ರತಿ ತಿಂಗಳ ಮೊದಲುವಾರದಲ್ಲಿ ನಮಗೆ ಸೇರುವಂತೆ ಹಣದೊಡನೆ ಬರೆದುಕೊಳತಕ್ಕದು. ಸಂಪಾದಕ.

ವಾದ ಮಾತನ್ನೇ ಆಡುವವರಾದರೂ ಕೇಳುವವರಿಗೆ ಕಠಿಣವಾಗಿ ತೋರಿ ಅರ್ಥಭಿನ್ನವಾಗಿ ಕೆಲವು [illegible]. ಹೀಗೆ [illegible] ಮನೋವೃತ್ತಿಯು [illegible], [illegible], ಅನ್ಯರ ಹಿತವನ್ನೇ [illegible], ಆದರೇನು ! ವಾಕ್ಯಾ[illegible]ದಿಂದಲೂ, ಧ್ವನಿವಿಶೇಷ[illegible] ಒಳ್ಳೆಯದು; ಎದುರಾಳಿಗೆ ಪ್ರತ್ಯ[illegible] [illegible] ತಿದ್ದುವಬಗೆಯಲ್ಲಿ [illegible]

[illegible]

[illegible]

[illegible]

[illegible]

ತಕ್ಕಮಟ್ಟಿನ ಸಲಕರಣೆಗಳಣಿಮಾಡಿ ಮರಳಿ ಲೋಕಸೇವಾಮಹತ್ಕಾರ್ಯದಲ್ಲಿ ಕೈಕಟ್ಟಿ ನಿಂತಿದೆ. ಸರ್ವಶಕ್ತಿಯನ್ನೂ ಇದರಲ್ಲಿ ಧಾರೆಯೆರೆಯಬೇಕೆಂಬ ಸಂಕಲ್ಪವನ್ನು ಪರಮಕೃಪಾಳುವಾದ ಆ ಭಗವಂತನು ಈಡೇರಿಸುವನೆಂಬ ನಂಬುಗೆಯಿಂದಲೆ ಸ್ವಸ್ಥಳವನ್ನು ಬಿಟ್ಟು ಪಟ್ಟಣವನ್ನು ಸೇರಿದುದು. ಪಟ್ಟಣವಾಸವು "ಸವಿನುಡಿ"ಗೆ ಹೊಸದಲ್ಲ. ಕನ್ನಡಿಗರಿಗೆ "ಸವಿನುಡಿ"ಯು ಹೊಸದಲ್ಲ. ಹೊಸಪರಿಚಯದ ಪ್ರಮೇಯವೂ ಇಲ್ಲ.

ದೈವಘಟನೆಯು ಬಹು ಚಮತ್ಕಾರವಾದುದು ! ಅದು ಯಾರಿಗೆ ಯಾವಾಗ ಯಾವ ಸ್ಥಿತ್ಯಂತರದಲ್ಲಿ ತಂದುಬಿಡುವುದೆಂಬ ಸಂಗತಿಯು ಗೊತ್ತಾಗುವುದಿಲ್ಲ. ಪ್ರತಿಯೊಂದು ಪ್ರಾಣಿಗೂ, ಪ್ರತಿಯೊಂದು ಪದಾರ್ಥಕ್ಕೂ ಈ ಸ್ಥಿತ್ಯಂತರವಿದ್ದೇ ಇರುವುದು. ಅದರಲ್ಲಿ ಕೆಲವರು ಬಲುಬೇಗಲೂ ಕೆಲವರು ಬಹು ನಿಧಾನವಾಗಿಯೂ ಇದಕ್ಕೆ ಸಿಕ್ಕುವರು. ಹೊಸ ಪಟ್ಟಣದಲ್ಲಿಯೋ, ಹೊಸ ದೇಶದಲ್ಲಿಯೋ, ನಾವು ಹೆಜ್ಜೆಯೂರಿದಾಗ ನಮಗೊಂದುಬಗೆಯ ಹೊಸತಾದ ಉತ್ಸಾಹವು ಹುಟ್ಟುವುದೆಂಬುದು ಅನೇಕರ ಅನುಭವದಲ್ಲಿರುವ ವಿಷಯವು. ನಮ್ಮ ಗ್ರಾಹಕರಿಗೂ ನಮಗೂ ಇರುವ ಪರಿಚಯವು ಹೊಸತೇನೂ ಅಲ್ಲ. ಹಳೆಯದಾದರೂ ಇಪ್ಪತ್ತೈದು ವರ್ಷಗಳಿಂದ ದೃಢತರವಾಗಿದೆ. ನಮ್ಮೈಕ್ಯದಲ್ಲಿ ನಮ್ಮ ವ್ಯವಹಾರಗಳು ಮತ್ತು ಪರಿಸ್ಥಿತಿಗಳು (ಅಂತಃಕರಣಗಳು) ಪೂರ್ವದಂತೆಯೆ ಇರುವುದರಜೊತೆಗೆ ವಿಘ್ನಪರಂಪರೆಗಳೂ ಬಲುಮಟ್ಟಿಗೆ ದೂರವಾಗಿ ಸಾರಿವೆ.

ಉತ್ಸಾಹಪೂರಿತವಾಗಿ ಸಾಹಿತ್ಯಸೇವಿಗಳ ಚರಣಪ್ರಾಂತಗಳಲ್ಲಿ ಅಡ್ಡಬಿದ್ದು ಭಕ್ತಿಭಾವದಿಂದ ನಿಂತಿರುವ ಸವಿನುಡಿಗೆ ಪಂಡಿತರು ಪಿತೃಸ್ಥಾನೀಯರೆಂಬ ಭಾವನೆಯು ಕಳಂಕರಹಿತವಾದುದು. ಪುತ್ರನಿಗೆ ಪಿತೃವಾಕ್ಯಪರಿಪಾಲನವು ಪರಮಧರ್ಮವಷ್ಟೆ ? ಅಂಜುತಂಜುತ ಅಂಜಲಿಬದ್ಧನಾಗಿ ನಿಂತಿರುವ ಕುವರನಿಗೆ ಕರ್ಮಕ್ಷೇತ್ರದಲ್ಲಿ ಕಾರ್ಪಣ್ಯಕ್ಕೆ ಸಿಕ್ಕದೆ ಕರ್ತವ್ಯಪಥದೊಳು ಸಾನಂದದಿಂದ ನಿಸ್ಸಂದೇಹಸ್ಥಿತಿಯಲ್ಲಿ ಮುಂದೋಡುತಿರುವಂತೆಯು, ಅಡ್ಡವಿಡ್ಡೂರಗಳಿಗಂಜಿ ಹಿಂಜರೆಯದೆ ಅವಿಚಲಿತ ಧೈರ್ಯೋತ್ಸಾಹದಿಂದ ಕರ್ಮಮಾಡುವಂತೆಯೂ, ಕಾಲೋಚಿತವಾದ ಸಾಧನಾಮಂತ್ರೋಪದೇಶವನ್ನು ಮಾಡಿ ಅನುಗ್ರಹಿಸಿ ಸಹಾಯಮಾಡುವುದರಮೂಲಕ ಪಿತೃವಾತ್ಸಲ್ಯವನ್ನು ಹೊರಪಡಿಸಬೇಕೆಂದು ಸವಿನಯವಾದ ಪ್ರಾರ್ಥನೆ. ಹಿತೋಪದೇಶಮಾಡಿ ಹರಸದೆ ಅಸಡ್ಡೆಮಾಡುವತಂದೆಯರುಂಟೆ ? ಸವಿನುಡಿಯು ಬಹುಕಾಲದ

"ಸವಿನುಡಿ" ತಾಲ್ಲೂಕು ಸ್ಥಳಗಳಲ್ಲಿ ಏಜಂಟರುಗಳಾಗಲಿಚ್ಛೆಸುವಂತವರು "ಸಂಪಾದಕ" ರಿಗೆ ಬರೆದು ಹೆಚ್ಚು ಸಂಗತಿಗಳನ್ನು ತಿಳಿಯತಕ್ಕದು.

ಕರ್ನಾಟಕ ವಿದ್ಯಾವರ್ಧಕ ಸಂಘ

[illegible] [illegible] ಹೊಸಪರಿಚಯಗಾಗಿರುವುದರಿಂದ ನಾವು [illegible] [illegible] ಕುರಿತು ಬೊತ್ತವೊದಲು ಡಂಭವಾಗಿ [illegible] ಕಾರ್ಯಕ್ಷೇತ್ರದಲ್ಲಿ ಅವುಗಳನ್ನು ತೋರಪಡಿಸುವುದು ಮೇಲು.

[illegible] ಶ್ರೀಮನ್ಮಹಾರಾಜಾ ಸರ್ಕಾರದವರು ನಮಗೆ ನವೀನಪದ್ಧತಿಯನುಸರಿಸಿ ವಿದ್ಯಾಭ್ಯಾಸ [illegible]. ಆದರಿಂದ ನಾವು ಸಾಕ್ಷರ [illegible]. [illegible] ಸಂಶಯವಿಲ್ಲ. ಆದರೆ [illegible]

[illegible]

[illegible]

[illegible]

Reg. No. M. 1146

1887

ಕನ್ನಡಿಗರ ಕೂಟ
ಧಾರವಾಡ

ಸವಿನುಡಿ.
सविनुडि.

ಕನ್ನಡ ನುಡಿಯ
ಮಾಸ ಪುಸ್ತಕಾವಳಿ

ಸಂಪುಟ ೧೨ ಸಂಖ್ಯೆ ೧೫೮ ? ಸಂಚಿಕೆ ೨

ಭಾರತಿ ಸಂಪಂಗಿರಾಮು,
ಲೇಖಕ, ಸಂಪಾದಕ, ಮತ್ತು ಪ್ರಚಾರಕ.

ಯಾಂತಿನ್ಯಾಯ ಪ್ರವೃತ್ತಸ್ಯ | ತಿರ್ಯಞ್ಚೋಽಪಿ ಸಹಾಯತಾಂ |
ಆಪಂಥಾನಂತು ಗಂತಸ್ವಂ | ಸೋದರೋಽಪಿ ವಿಮುಂಚತಿ ||

ಸತೀದೇವಿ.

ಮುಂದೆ ಪ್ರಕಟವಾಗುವವು,
೨ ಸುನೀತಿ. ೩ ಶಕುಂತಲೆ.

ಸರ್ವಸ್ವಾತಂತ್ರ್ಯವೂ ಸಂಪಾದಕನದು.

ಶಾರದಾವಿಲಾಸ ಮತ್ತು ಕಾಕ್ಸ್ಟನ್ ಮುದ್ರಣಾಲಯಗಳಲ್ಲಿ ಸಂಪಾದಕನಿಗೋಸ್ಕರ ಮುದ್ರಿತವಾಗಿ ಬೆಂಗಳೂರು ಕೋಟೆಯ ಸಿ. ಬೀದಿ ೪೨ನೆಯ ನಂಬರು ಮನೆಯಲ್ಲಿ ಭಾರತಿ ಸಂಪಂಗಿರಾಮನಿಂದ ಪ್ರಕಟಿಸಲ್ಪಟ್ಟಿತು.

ಸ ವಿ ನು ಡಿ.

ಕನ್ನಡನುಡಿಯ ಮಾಸಪುಸ್ತಕಾವಳಿ.

ಬೀಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಅರ್ಧ ಕ್ರಯ ! ಅರ್ಧ ಕ್ರಯ !! ಅರ್ಧ ಕ್ರಯ !!!

1. [illegible] (ಪೂರ್ವಭಾಗ)	[illegible]	14. [illegible] ([illegible] ಭಾಗ)	1-8-0
2. [illegible]	[illegible]	15. ಶ್ರೀವಿವೇಕಾನಂದಸ್ವಾಮಿ.	0-4-0
3. [illegible]	0-12-0	16. ಶ್ರೀವಿವೇಕಾನಂದರ [illegible]	0-4-0
4. ಸಾವಿತ್ರಿ.	[illegible]	17. [illegible]	0-8-0
5. [illegible]	[illegible]	18. [illegible]	0-12-0
6. [illegible]	[illegible]	19. ಕನ್ನಡ [illegible]	0-9-0
7. [illegible]	[illegible]	20. [illegible]	0-2-0
8. [illegible]	[illegible]	21. [illegible]	0-2-0
9. [illegible]	[illegible]	22. [illegible]	0-2-0
10. [illegible]	[illegible]	23. [illegible]	0-2-0
11. [illegible]	[illegible]	24. [illegible]	0-4-0
12. [illegible]	[illegible]	25. [illegible]	0-2-0
13. [illegible]	[illegible]	26. [illegible]	0-3-0
		27. [illegible]	0-4-0
		28. [illegible]	0-4-0
		ಒಟ್ಟು	12-2-[illegible]

[illegible]

[illegible]

[illegible]

ಸ ವಿ ನು ಡಿ.

ಸತೀದೇವಿ.

ಹರಿದ್ವಾರದಬಳಿ ಹಿಮಾಚಲದಿಂದ ಭೂತಲಕ್ಕೆ ಗಂಗೆಯು ಪ್ರವಹಿಸುವ ಸ್ಥಳದಲ್ಲಿ ಕನಖಲವೆಂಬ ಪಟ್ಟಣವುಂಟು. ಯಿದನ್ನು ದಕ್ಷಪ್ರಜಾಪತಿಯು ಆಳುತಿದ್ದನು. ೨

ದಕ್ಷಪ್ರಜಾಪತಿಯು ಅತುಳಪ್ರತಾಪವುಳ್ಳವನು. ಐಶ್ವರ್ಯದಲ್ಲೂ, ವೀರ್ಯದಲ್ಲೂ, ಪ್ರಪಂಚದಲ್ಲಿ ಬೇರೆ ಯಾರೂ ಆತನಿಗೆ ಸಮಾನರಿಲ್ಲ. ಅದರಲ್ಲೂ ಆತನು ಮಹಾತಪಸ್ಸಂಪನ್ನನು. ಆತನು ಮಾಡಿರುವ ಯಜ್ಞ, ದಾನ, ವ್ರತಾನುಷ್ಠಾನ ಮುಂತಾದುವುಗಳಿಷ್ಟೆಂದು ಹೇಳಲಳವಿಲ್ಲ. ಅದರಿಂದ ಜನರು “ಧರ್ಮದಲ್ಲೂ, ಕರ್ಮದಲ್ಲೂ ದಕ್ಷಪ್ರಜಾಪತಿಯ ಸಮಾನರೂ ಇಲ್ಲವೆಂದು ಹೇಳುತಿರುವರು.

ದಕ್ಷನ ರಾಜಧಾನಿಯಾದ ಕನಖಲನಗರವು ಸೌಂದರ್ಯದಲ್ಲಿ ಅಮರಾವತಿಯನ್ನು ಕೂಡ ಸೋಲಿಸುತಿರುವುದು. ಸಾವಿರಾರು ವರುಷಗಳು ಕಳೆದರೂಕೂಡ, ಕನಖಲ ನಗರದ ಪ್ರಾಕೃತಿಕ ಸೌಂದರ್ಯವು, ಸ್ವಲ್ಪಮಟ್ಟಿಗಾದರೂ ಬದಲಾಯಿಸಿಲ್ಲ. ಯೀ ಪಟ್ಟಣದ ಸಮೀಪದಲ್ಲಿ ಪರ್ವತಗಳಿಗೆಲ್ಲಕ್ಕೂ ಅರಸಾದ ಹಿಮಾಚಲವು ಶಿಖರದಮೇಲೆ ಶಿಖರಗಳನ್ನೇರಿಸಿಕೊಂಡು [illegible]ಯಂತೆ ನಿಂತಿರುವುದು. ಯಿವೆರಡರನಡುವೆ ಮಹಾಕಾಯವುಳ್ಳ ಘಟಸರ್ಪಾಕಾರವಾಗಿ ಅತ್ಯಂತ ವೇಗವಾಹಿನಿಯಾದ ಗಂಗೆಯು ಕೆಳಭಾಗದಲ್ಲಿ ಹರಿಯುತಿದೆ. ಕನಖಲ ನಗರದಲ್ಲಿ ಗಂಗೆಯು ಅಪೂರ್ವ ಶೋಭೆಯನ್ನು ಬಣ್ಣಿಸುವುದು ಸಾಧ್ಯವಲ್ಲ. ಗಂಗಾಜಲವು ಸ್ಫಟಿಕದಂತೆ ಸ್ವಚ್ಛವು. ನದೀತಲದಲ್ಲಿರುವ ಸಣ್ಣ ಸಣ್ಣ ಮೀನುಗಳು ನೋಟಕರಕಣ್ಗೆ ಥಳತಳಗುಟ್ಟುತ ಅದ್ಭುತವನ್ನೂ, ಆಶ್ಚರ್ಯವನ್ನೂ, ಉಂಟುಮಾಡುವುವು. ಗಂಗಾಜಲವು ಕೆಲವೆಡೆಯಲ್ಲಿ ಪಾದರಸದಂತೆ ಶುಭ್ರವಾಗಿಯೂ, ಕೆಲವೆಡೆ

ಯಲ್ಲಿ ಮೇಘವರ್ಣದಂತೆ ನೀಲವರ್ಣವಾಗಿಯೂ ಶೋಭಿಸುತಿದೆ. ಗಂಗಾ [illegible] ಕಂಡುಕೊಂಡು ಮುಗ್ಧವಾದ ಆರ್ಯರ್ಷಿಗಣವು [illegible] ಗಂಗಾಸಂದರ್ಶನ ಮಾಡತಕ್ಕ ದೆಂದು [illegible] ಮಹರ್ಷಿಗಳ ಅನುಜ್ಞೆಯು ಈಗಲೂ ಆಚರಣೆಯಲ್ಲಿರುವುದು, ತೀರ್ಥಯಾತ್ರಿಕರನೇಕರ ಅನುಭವದಲ್ಲಿದೆ. [illegible] ಗಂಗಾನದಿಗೆ ನೀಲಧಾರೆಯೆಂದು ಹೆಸರು. ದಕ್ಷಪ್ರಜಾಪತಿಯ [illegible] ಪ್ರವಾಹವು, ಈ ನೀಲಧಾರೆಯ [illegible] ಗಂಗೆಯು ಆ ಪ್ರವಾ[illegible]

[illegible]

ಯೆಂದು ಆಗಿಂದಾಗ ಕೇಳುತಿರುವರು. ರಾಜಕನ್ನೆಯರೇನನ್ನೂ ಹೇಳುವುದಿಲ್ಲ. ಆದರೆ ಅವರು ಮುತ್ತುರತ್ನಗಳನ್ನು ಬಿಸುಟು, ಆ ಕಲ್ಲುಗಳನ್ನೆಲ್ಲ ತಾದು ತಮ್ಮತಮ್ಮ ಆಟದಮನೆಗಳಲ್ಲಿ ತುಂಬುತಿರುವರು. ರಾಜಕನ್ನೆಯರು ದಿನಕ್ರಮವಾಗಿ ದೊಡ್ಡವರಾಗುತ ಬಂದರು. ಆಗ ದಕ್ಷಪ್ರಜಾಪತಿಯು ಅತ್ಯಂತ ವಿಜೃಂಭಣೆಯಿಂದ ಅವರ ವಿವಾಹಗಳನ್ನು ನಡೆಸಿದನು. ಹೆಣ್ಣುಮಕ್ಕಳೂ, ಅಳಿಯಂದಿರನ್ನೂ ನೋಡಿ ರಾಜಾರಾಣಿಯರ ಸಂತೋಷಕ್ಕೆ ಪಾರವಿಲ್ಲವಾಯ್ತು. ವಿವಾಹವಾದಬಳಿಕ ರಾಜಪುತ್ರಿಯರೊಬ್ಬೊಬ್ಬರಾಗಿ ಶ್ವಶುರಾಲಯಗಳನ್ನು ಹೊಂದಿ, ಸುಖದಿಂದ ಸಂಸಾರಯಾತ್ರೆ ಮಾಡತೊಡಗಿದರು.

ದಕ್ಷರಾಜನಿಗೆ ಅವಿವಾಹಿತೆಯಾದ ಕನ್ನೆಯೊಬ್ಬಳೇ ಉಳಿದಿರುವಳು. ಆಕೆಯ ಹೆಸರು ಸತೀದೇವಿ. ಈಕೆಯು ಸರ್ವಕನಿಷ್ಠತನುಜೆಯಾದುದರಿಂದ ತಾಯ್ತಂದೆಗಳಿಗೆ ಬಹು ಪ್ರೀತಿಪಾತ್ರಳು. ಒಂದುದಿನ ಅರಸೂ ಅರಸಿಯೂ ಅಂತಃಪುರದಲ್ಲಿದ್ದಾಗ ಅರಸಿಯು ಅರಸನನ್ನು ಕುರಿತು—

ಒಂದು ಹೊಸಮಾತು ಹೊಳೆಯಿತು. "ದೇವರು ಹೆಡ್ಡನೇ? ಇಷ್ಟು ವಿಶಾಲವಾದ ಮರಕ್ಕೆ ಅಡಕೆಯ ಹೋಳಿನಷ್ಟು ಸಣ್ಣವಾದ ಹಣ್ಣುಗಳು! ಎದ್ದು ನಿಲ್ಲಲಾರದೆ ನೆಲದ ಮೇಲೆ ಹಬ್ಬಿರುವ ಕುಂಬಳಬಳ್ಳಿಗೆ ಎತ್ತಲಾರದಂಥ ಕಾಯಿಗಳು. ಈ ವಿಷಮತೆಯೇಕೆ? ಕಸುವುಳ್ಳ ದೊಡ್ಡ ಮರಕ್ಕೆ ದೊಡ್ಡ ಕಾಯಿಗಳಾಗಬೇಕು. ಬಲವಿಲ್ಲದ ಬಳ್ಳಿಗೆ ಚಿಕ್ಕ ಕಾಯಿಯಾಗಬೇಕು. ಇದು ಸರಿಯಾದ ಕ್ರಮವಲ್ಲವೆ?" ಎಂದುಕೊಂಡನು. ತುಸು ಹೊತ್ತಿನಲ್ಲಿಯೇ ಅಲ್ಲಿಯೇ ಅಡ್ಡಾಗಿ ಮಲಗಿ ನಿದ್ದೆ ಹೋದನು.

ಮಲಗಿ ನಿದ್ದೆ ಹೋದ ಮಲ್ಲಯ್ಯನ ಹಣೆಯ ಮೇಲೆ ಪಟ್ಟನೆ ಏನೋ ಬಿದ್ದಿತು. ಎಚ್ಚತ್ತು ನೋಡಿದಾಗ ಅದೊಂದು ಚಿಕ್ಕ ಆಲದ ಹಣ್ಣಾಗಿತ್ತು. ಒಂದು ಹಕ್ಕಿಯು ಕಚ್ಚಿ ತಿನ್ನುವಾಗ ಆ ಹಣ್ಣು ಜಾರಿ ಕೆಳಗೆ ಬಿದ್ದಿತ್ತು. ಆಗ ಅವನ ಮನಸ್ಸಿಗೆ ಮತ್ತೊಂದು ಮಾತು ಹೊಳೆಯಿತು. "ದೇವರು ಹೆಡ್ಡನಲ್ಲ. ನನ್ನ ಹಣೆಯ ಮೇಲೆ ಬಿದ್ದ ಆಲದ ಹಣ್ಣು ಕುಂಬಳಕಾಯಿಯಷ್ಟು ದೊಡ್ಡದಾಗಿದ್ದರೆ ನನ್ನ ಗತಿಯೇನಾಗುತ್ತಿತ್ತು? ಹೆಂಡತಿ ಮಕ್ಕಳ ಪಾಡೇನಾಗುತ್ತಿತ್ತು? ನನ್ನಂತೆಯೇ ಸಾವಿರಾರು ಜನರೂ ದನಕರುಗಳೂ ದಿನಾಲು ಈ ಗಿಡದ ನೆರಳಿಗೆ ಬಂದು ಕೂಡುತ್ತವೆ. ಅವುಗಳ ಮೇಲೆ ಕುಂಬಳಕಾಯಿಯಷ್ಟು ಭಾರವಾದ ಹಣ್ಣುಗಳು ಬೀಳುತ್ತಿದ್ದರೆ ಹೇಗೆ? ಪರೋಪಕಾರಕ್ಕಾಗಿಯೇ ಹುಟ್ಟಿ ಬೆಳೆದ ಆಲದ ಮರದಿಂದ ಪರಪೀಡೆಯಾಗಬಾರದೆಂದು ದೇವರು ಅದಕ್ಕೆ ಇಷ್ಟು ಚಿಕ್ಕ ಹಣ್ಣುಗಳನ್ನು ಕೊಟ್ಟಿದ್ದಾನೆ. ನೆಲದ ಮೇಲೆ ಬಿದ್ದು ಹಾಳಾಗುತ್ತಿರುವ ಕುಂಬಳ ಬಳ್ಳಿಗೆ ಆಗುವ ಕಾಯಿ ದೊಡ್ಡದಾದರೇನು! ಚಿಕ್ಕದಾದರೇನು! ದೇವರ ಕೃತಿಗೆ ಹೆಸರಿಡುವ ಮೊದಲು ಸಂಪೂರ್ಣ ವಿಚಾರ ಮಾಡಬೇಕು."

ಮಲ್ಲಯ್ಯನು [illegible] [illegible] [illegible] ಮನೆಯತ್ತ ನಡೆದುಕೊಂಡು ಬಂದನು. ಮನೆಯಲ್ಲಿ ನಡೆದ ವಿಚಾರವನ್ನೆಲ್ಲ ಹೆಂಡತಿಗೆ ಹೇಳಿದನು. "ದೇವರ ವಿಷಯದಲ್ಲಿ ಹಾಗೆಲ್ಲ ಆಲೋಚನೆ ಮಾಡುವುದು ಸರಿಯಲ್ಲ" ಎಂದು [illegible] ಮಾತಾಡಿಕೊಂಡರು.

ಗಣಿತ ಶಿಕ್ಷಕ

★

೪೧೨ ಪುಟಗಳು ~ **ಬೆಲೆ ೧ ರೂ.** ~ **೨-೩-೪ನೆಯ ಇ. ಗಳಿಗಾಗಿ**

೩-೪ ಕ್ಲಾಸುಗಳು ಒಬ್ಬ ಮಾಸ್ತರನ ಕಡೆಗೆ ಇರುವಂಥ ಶಾಲೆಗಳಲ್ಲಿ ಗಣಿತ ಶಿಕ್ಷಕವು ನಿಜವಾಗಿಯೇ ಗಣಿತ.
ಶಿಕ್ಷಕನಾಗಿ ಸಹಾಯಕವಾಗಿಲ್ಲವೇ? ೧೦ವರ್ಷ ಅನುಭವ ತಕ್ಕೊಂಡವರಿಗೆ ಇದರ ಬಗ್ಗೆ ಹೆಚ್ಚಿಗೆ ವರ್ಣಿಸು-
ವದು ಬೇಡ. ಇಷ್ಟರಲ್ಲಿಯೇ ಎಲ್ಲರ ಪ್ರೀತಿಗೆ ಪಾತ್ರವಾಗಿ ಅನೇಕಸಾರೆ ಮುದ್ರಣ ಹೊಂದಿದೆ.
ಈಗಿನ ತುಟಾಗ್ರತೆಯ ಕಾಲದಲ್ಲಿ ವೆಚ್ಚಮಾಡಿದ ಹಣದಿಂದ ಬಹಳ ಲಾಭವಾಗಬೇಡವೇ?

ಕೊರತೆ ಇಲ್ಲ ~ ಬೆಲೆ ಕಡಿಮೆ ~ ವೆಚ್ಚವಿಲ್ಲದೆ ಪೂರೈಕೆ

ಪುಸ್ತಕಗಳು ಕರ್ನಾಟಕದ ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ದೊರೆಯುತ್ತವೆ. ದೊರೆಯುವದಿಲ್ಲೆಂದು ಅನಿಸಿದರೆ, ನಿಮಗೆ ಬೇಕಾಗುವಷ್ಟು ಪ್ರತಿಗಳ ಮೂಲಬೆಲೆಯನ್ನು ಮನಿಯಾರ್ಡರದಿಂದ ಕಳಿಸಿ ಪಾವತಿಗಳನ್ನು ಕಾಯ್ದುಕೊಳ್ಳಿರಿ. ಅವನ್ನು ತೆಗೆದುಕೊಂಡು ಯಾವ ವೆಚ್ಚವೂ ಇಲ್ಲದೆ ಪುಸ್ತಕ ಕೊಡುವಂತೆ ನಿಮ್ಮ ಸಮೀಪದ ಪುಸ್ತಕವ್ಯಾಪಾರಿಗಳಲ್ಲಿ ಇಲ್ಲವೆ ದೊಡ್ಡ ಶಾಲೆಗಳಲ್ಲಿ ವ್ಯವಸ್ಥೆ ಮಾಡಲಾಗುವದು. ಶಕ್ಯವಾದರೆ ನಿಮ್ಮ ಊರಿಗೇ ತಂದುಕೊಡಬಹುದು. ಹೆಚ್ಚಿನ ವಿವರಕ್ಕೆ ಬರೆಯಿರಿ.

ವಿಳಾಸ :— **ಬ. ದು. ಹಿರೇಮಠ, ಮಾಸ್ತರ ವಿಜಾಪುರ.**

ಹೊಸ ಪುಸ್ತಕ! ಸರಕಾರದಿಂದ ಮಂಜೂರ! ಲಾಭ ಪಡೆಯಿರಿ

ಹೊಸ ಪದ್ಧತಿಯ
ಹಿಂದೀ ಜಮಾಖರ್ಚು ಭಾಗ ೧
(ಮನೆಯ ಜಮಾಖರ್ಚು)

ಸರಕಾರದವರು ಈ ಪುಸ್ತಕವನ್ನು ಮೇಲಿನ ಎಲ್ಲ ಇಯತ್ತೆಗಳಿಗೆ ಟೆಕ್ಸ್ಟ ಬುಕ್ ಎಂದು ಮಂಜೂರ ಮಾಡಿರುವರು. ಇದರಲ್ಲಿ ಮನೆಯ ಜಮಾಖರ್ಚಿನ ವಿಷಯಗಳು ಸಂಪೂರ್ಣವಿರುವವಲ್ಲದೆ ಪ್ರಾ. ನೋಟು, ಹುಂಡಿ, ಚೆಕ್ಕು, ಮನಿಯಾರ್ಡರು ಮುಂತಾದ ವ್ಯವಹಾರುಪಯುಕ್ತವಾದ ಮಾಹಿತಿಗಳೂ ಇವೆ. ಹೆಣ್ಣುಮಕ್ಕಳ ಮತ್ತು ಗಂಡುಮಕ್ಕಳ ಪ್ರಾ. ಶಾ. ಪ್ರ. ಪ. ಪರೀಕ್ಷೆಯ ಉಮೇದವಾರರಿಗೆ ಬಹುಉಪಯುಕ್ತವಿದೆ.

ಬೆಲೆ : ೮ ಆಣೆ.

ಹೊಸ ಪದ್ಧತಿಯ
ಆರಂಭದ ಜಮಾಖರ್ಚು
(ಕನ್ನಡ ೪ನೆಯ ಇಯತ್ತೆಯವರಿಗಾಗಿ)

ಸರಕಾರದವರು ಈ ಪುಸ್ತಕವನ್ನು ಮಂಜೂರ ಮಾಡಿದ್ದಾರೆ. ಮಂಜೂರಿ ನಂ. [illegible] ಇರುತ್ತದೆ. ಈ ಪುಸ್ತಕದಲ್ಲಿ ದಿನದ ವ್ಯವಹಾರಗಳ ಲೆಕ್ಕವನ್ನಿಡುವದು, ಶಾಲೆಯ ಸ್ಟೇಶನರಿ ಸಾಮಾನುಗಳ, ಸಹಕಾರಿ ಸಂಘದ ಅಂಗಡಿಯ ಲೆಕ್ಕ ಇಡುವದು, ವ್ಯವಹಾರುಪಯುಕ್ತವಾದ ಮಾಹಿತಿಗಳೂ ಪ್ರಶ್ನಗಳೂ ಅವುಗಳ ಉತ್ತರಗಳೂ ಇರುವವು. ಇದು ಸ್ಕಾಲರಶಿಪ್ ಪರೀಕ್ಷೆಯ ಉಮೇದುವಾರರಿಗೆ ಬಹು ಉಪಯುಕ್ತವಿರುತ್ತದೆ.

ಬೆಲೆ : ೩ ಆಣೆ

ವಿಳಾಸ :— **ರಾ. ಸಿ. ಸಜ್ಜನ, ಮಾಸ್ತರ ಜೋರಾಪುರ ಪೇಟೆ, ವಿಜಾಪುರ.**

ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ
K. V. V. SANGHA DHARWAR.

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

★

ಶ್ರೀ. ಪಂಡಿತ ಪೂಜಾರರೂ ಶ್ರೀ. [illegible] ಕೂಡಿ ರಚಿಸಿದ ಈ ಪುಸ್ತಕವನ್ನು ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ಮನಗಂಡಿದ್ದ ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿದ್ದಾರೆ. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಬೇರೆ ಯಾವ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ [illegible]

[illegible] ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿನಿಯರು ಇದನ್ನು ಅವಶ್ಯವಾಗಿ ಓದಲೇಬೇಕೆಂದು [illegible] ಶಿಕ್ಷಕರ ಅಭಿಪ್ರಾಯವಿದೆ.

ಶ್ರೀ. [illegible]

ಕವಿತಾ [illegible] ಭಾಗ ೧ .... [illegible]

ಕವಿತಾ [illegible] ಭಾಗ ೨ .... [illegible]

ಈ ಪುಸ್ತಕ [illegible]

ಈ ಪುಸ್ತಕ [illegible]

ಈ ಪುಸ್ತಕ [illegible]

ಸ್ವತಂತ್ರ

೧೫೪೫೪೬

ನಂಬರ್
೯೪೬

ಭಾರತ ಬುಕ್ ಡಿಪೊ
ಧಾರವಾಡ.

ಬೆಲೆ
೪ ಆಣೆ

A boon to
Medical Practitioners
and Dealers !

For all Kinds of :

○ **Medicines**
○ **Injectables**
○ **Surgical apparatus**
etc.,

&

Highest Quality

○ **Pencillian**
○ **Pencillian Ointment**

: Please communicate with :

SREE GIRIJA MEDICAL STORES
Wholesale and Retail Chemists and Druggists
Arcot Sreenivasachar Street,
BANGALORE CITY.

ದೇವಾಲಯಗಳೆಲ್ಲ ಗರಡಿಮನೆಗಳಾಗಲಿ !
ಗಂಡುಗಲಿತನ ತಲೆಯೆತ್ತಿ ನಿಲ್ಲಲಿ !!

ಆದರೆ—ಶಾಂತಿ
ಸಂಯಮ—ಐಕ್ಯತೆ
ಮೆರೆದಾಡಲಿ
ಎಂದು ಬಾಪೂಜಿ ಸಾರಿದ

ಇದೇ
ಸಂದೇಶವನ್ನು
ಸಾರಿದ
ಇನ್ನೊಬ್ಬ
ಕರ್ಮಯೋಗಿಯ
ಕಥೆ

ಕೃಷ್ಣಲೀಲಾ

ಮಹಾತ್ಮಾ ಪಿಕ್ಚರ್ಸ್ ಕನ್ನಡ ಚಿತ್ರ

ಕನ್ನಡ ನಾಡಿನ ನೂರಾರು ನಟನಟಿಯರ ಅಭಿನಯ

ನಿರ್ದೇಶನ : ಸಿ. ವಿ. ರಾಜು ★ **ಸ್ಟುಡಿಯೋ : ನವಜ್ಯೋತಿ**

ಮಹಾತ್ಮಾ ಪಿಕ್ಚರ್ಸ್
ಚಾಮರಾಜಪುರಂ : : ಮೈಸೂರು

೧೯೪೬
ಸ್ವತಂತ್ರ

ಸುಗಂಧ ದ್ರವ್ಯಗಳು! ಪರಿಮಳಗಳು !!

ಪ್ರತಿನಿತ್ಯವೂ ದೇವಸ್ಥಾನ ಮತ್ತು ಮನೆಗಳಲ್ಲಿ ಬಳಸಲು ಬೇಕಾಗುವ ಊದಿನ ಕಡ್ಡಿ, ದಶಾಂಗ ಮತ್ತು ಇತರ ಪರಿಮಳಗಳಿಗೆ ಹೆಸರಾದ [illegible] ತಯಾರಿಕೆಗಳನ್ನೇ ಉಪಯೋಗ ಮಾಡಿ.

ಸುವಾಸ ಊದಿನ ಕಡ್ಡಿಗಳು
ಸುವಾಸ ಧೂಪದ [illegible]
ಸುವಾಸ ದಶಾಂಗ
ಮತ್ತು ಸುವಾಸ ಪರಿಮಳ ದ್ರವ್ಯಗಳು

[illegible]

[illegible]

[illegible] ಅಂಡ್ ಸನ್ಸ್
ಪರಿಮಳ ದ್ರವ್ಯಗಳ ವ್ಯಾಪಾರಿಗಳು

[illegible]



ಂಪುಟ ೧
ಂಚಿಕೆ ೫

ಸಂಪಾದಕರು :
ಬಸವರಾಜ ಕಟ್ಟೀಮನಿ

ನವಂಬರ್
೧೯೪೬

ಸಮರವೋ? ಶಾಂತಿಯೊ?

ತಾತ್ಕಾಲಿಕ ಸರಕಾರಕ್ಕೆ ಕಾಂಗ್ರೆಸ್ಸು ಸೇರಿದಾಗ ದೇಶದಲ್ಲೆಲ್ಲ ಕಪ್ಪು ಬಾವುಟ ಹಾರಿಸಿ, ದ್ವೇಷಾಸೂಯೆಗಳ ಪ್ರದರ್ಶನ ನಡಸಿ, ಜಾತೀಯ ದೊಂಬೆಗಳ ಮೂಲಕ ವಿಷ ಕಾರಿಕೊಂಡ ಮುಸ್ಲಿಂ ಲೀಗು ಇಂದು ಅದೇ ಸರಕಾರಕ್ಕೆ ಸೇರಿಕೊಂಡಿದೆ.

ನೆಹರೂ ಮಂತ್ರಿಮಂಡಲ ಅಧಿಕಾರಕ್ಕೆ ಬಂದಾಗ ಲೀಗಿನವರು ಕಪ್ಪು ಬಾವುಟ ಹಾರಿಸಿದ ಹಾಗೆ ಹದಿನೈದು ದಿನಗಳ ಹಿಂದೆ ಇದೇ ಲೀಗು ಅಧಿಕಾರ ಸ್ವೀಕರಿಸಿದಾಗ ಕಾಂಗ್ರೆಸ್ಸಿನವರೇನೂ ಕಪ್ಪುಬಾವುಟ ಹಾರಿಸಲಿಲ್ಲ. ದ್ವೇಷಾಸೂಯೆಗಳನ್ನು ವ್ಯಕ್ತಗೊಳಿಸಲಿಲ್ಲ. 'ನಮ್ಮ ಸೋದರರು ನೀವು ಬನ್ನಿ. ನಿಮಗೆ ಸ್ವಾಗತ' ಎಂದಿತು ಕಾಂಗ್ರೆಸ್. ಅದರ ಸ್ನೇಹ ಸಹಕಾರಗಳ ಕೈಯನ್ನು ಒರಟುತನದಿಂದ ನಿರಾಕರಿಸಿ ಬಿಳಿದೊರೆ ವೇವೆಲ್ಲರ ಬೆರಳು ಹಿಡಿದುಕೊಂಡು ಲೀಗು ಸರಕಾರಕ್ಕೆ ಸೇರಿಕೊಂಡಿದೆ!

ಲೀಗಿನ ಈ ವರ್ತನೆಯಿಂದ ಯಾರಿಗೂ ಆಶ್ಚರ್ಯವಾಗಬೇಕಾಗಿಲ್ಲ. ಆಯತ ಸಮಯಗಳಲ್ಲೆಲ್ಲ ತನ್ನ ಹೃದಯದಲ್ಲಿರುವ ಕಾಂಗ್ರೆಸ್ ದ್ವೇಷವನ್ನು ಪ್ರದರ್ಶಿಸಿ ಬ್ರಿಟಿಷರ ಬಾಲ ಹಿಡಿದು ನೇತಾಡುವ ಲೀಗ್ ಧೋರಣೆ ಭಾರತೀಯರಿಗೆ ಅಪರಿಚಿತವಾದುದಲ್ಲ.

‘ ಈ ಮಾನ್ಯ ಮಂತ್ರಿಗಳು ! ’

ದೇಶಹಿತದ ದೃಷ್ಟಿಯಿಂದ ಕಾಂಗ್ರೆಸ್ಸು ತಾತ್ಕಾಲಿಕ ಸರ್ಕಾರಕ್ಕೆ ಸೇರಲು ನಿರ್ಧರಿಸಿದಾಗ ಶ್ರೇಷ್ಠ ರಾಜಕಾರಣಪಟುಗಳೂ, [illegible] ಮುತ್ಸದ್ದಿಗಳೂ ಜಗನ್ಮಾನ್ಯರೂ ಆದ ಭಾರತೀಯ ಮುಖಂಡರನ್ನಾರಿಸಿ ಮಂತ್ರಿಪದವಿಯ ಹೊಣೆಗಾರ ಸ್ಥಾನಗಳನ್ನು ವಹಿಸಿಕೊಳ್ಳಲು ಕಳುಹಿಸಿತು. ಪಂಡಿತ ನೆಹರು, ಸರ್ದಾರ್ ಪಟೇಲ್, ರಾಜೇಂದ್ರಬಾಬು, ಅಸಫ್ ಅಲಿ, ರಾಜಾಜಿ ಎಲ್ಲರೂ ಜಗನ್ಮಾನ್ಯರಾದ ವ್ಯಕ್ತಿಗಳು. [illegible]

[illegible]

ಶಗಳನ್ನು ಗಮನಿಸದೆ, ಯುಕ್ತಾಯುಕ್ತ ವಿವೇಚನೆಯಿಲ್ಲದೆ ಉದ್ರೇಕಕಾರಿ ಭಾಷಣ ಮಾಡುವ ವಿದ್ಯೆಯಲ್ಲಿ ಪಳಗಿದವರು ಗಜ್ನಫರ್ ಅಲಿಖಾನ್. ಇಂಥವರನ್ನು ಸಚಿವಸ್ಥಾನಕ್ಕೇರಿಸುವಲ್ಲಿ ಜಿನ್ನಾರವರ ಉದ್ದೇಶವೇನಿದೆಯೊ !

[illegible] ಮಂಡಲ್, ಜೋಗೇಂದ್ರನಾಥ ಮಂಡಲ್. ಅಂಬೇಡಕರರ [illegible] ಜಿನ್ನಾರವರ ಕುತಂತ್ರದ ಗಾಳಕ್ಕೆ ಸಿಕ್ಕಿಬಿದ್ದ [illegible] — ಮಂಡಲ್. [illegible] ಯೋಗ್ಯತೆ ಅವರದೇ !

ನೆಹರು, ಪಟೇಲ್, ರಾಜೇಂದ್ರಬಾಬು [illegible] ವಿಶ್ವಮಾನ್ಯ [illegible] ? ಇಂಥ ಶ್ರೇಷ್ಠ ಮುತ್ಸದ್ದಿಗಳ ಸಾಲಿನಲ್ಲಿ ಸರಿಸಮಾನ [illegible] ಈ ಮೂರ [illegible] ‘ [illegible] ’ [illegible] !

[illegible] !

[illegible]

ಹೊಲೆಯರೇ ಎಂದು ನಮ್ಮ ಅಭಿಪ್ರಾಯ) ಸಚಿವಸ್ಥಾನಕ್ಕೇರಿಸಿದುದೇಕೆಂದು ಆಶ್ಚರ್ಯಪಡಬೇಕಾದ ಅಗತ್ಯವೂ ಇಲ್ಲ. ಕಾಂಗ್ರೆಸ್ ಹರಿಜನರಿಗೆ ವಿರುದ್ಧವಾಗಿ ಅಂಬೇಡಕರ್ ಪಂಥದ ಹೊಲೆಯರನ್ನೆತ್ತಿಕಟ್ಟಿ,ಆ ಮೂಲಕ ಹಿಂದುಗಳಲ್ಲಿ ಒಡಕನ್ನು ಬೆಳಸಿ, ತಾವು ‘ಅಲ್ಪಸಂಖ್ಯಾಕರ ಕೈವಾರಿ’ ಗಳಾಗಿ ಮೆರೆಯಬೇಕೆಂಬ ಜಿನ್ನಾಸಾಹೇಬರ ವಕೀಲೀ ಮೆದುಳಿನ ಆಟವಿದೆಂಬುದು ಎಲ್ಲರಿಗೂ ಗೊತ್ತು. ಅಲ್ಪಸಂಖ್ಯಾಕರ ಬಗೆಗೆ ಲೀಗಿಗುಂಟಾಗಿರುವ ಈ ‘ ಕಳವಳ’ ಮೊಸಳೆಯ ಕಳವಳವೆಂಬುದೂ ಗೊತ್ತು. ಲೀಗ್ ಮಂತ್ರಿಮಂಡಲದ ಆಡಳಿತದಲ್ಲಿರುವ ಬಂಗಾಲದಲ್ಲಿ ಇಂದು ಅಲ್ಪಸಂಖ್ಯಾಕರಿಗೊದಗಿರುವ ಕಡು ವಿಪತ್ತೇ ಈ ಕಠೋರ ಸತ್ಯವನ್ನು ಜಗತ್ತಿಗೆ ಸಾರಿ ಹೇಳುತ್ತಿದೆ.

ಮತ್ತೂ ‘ಹೋರಾಟ’ದ ಮಾತೇ !

‘ ಪ್ರತ್ಯಕ್ಷ ಪ್ರತೀಕಾರ ’ ದ ಬೊಬ್ಬೆಯಿಡುತ್ತ, ದೇಶದ ಹಲವು ಕಡೆಗಳಲ್ಲಿ ಅಮಾನುಷ ದೊಂಬೆಗಳೇಳಲು ಕಾರಣವಾದ ಲೀಗು ಈಗ ತಾತ್ಕಾಲಿಕ ಸರ್ಕಾರಕ್ಕೆ ಸೇರಿರುವುದರಿಂದಲೂ ಯಾರೂ ಸಮಾಧಾನದ ಉಸಿರು ಹಾಕಬೇಕಾಗಿಲ್ಲ. ಆ ಕಾಲ ಬಂದಿಲ್ಲವೆಂದು ತೋರುತ್ತದೆ ಇನ್ನೂ. ನೂರಾರು ವರ್ಷಗಳಿಂದ ಡೊಂಕಾಗಿಯೆ ಇದ್ದ ನಾಯಿಬಾಲ ಅಲ್ಪಾವಧಿಯಲ್ಲೆ ನೇರವಾಗಿ ಬಿಡುವುದುಂಟೇ? ಜಿನ್ನಾಸಾಹೇಬರ ಈ ಶಿಷ್ಯರು ಸರ್ಕಾರಕ್ಕೆ ಸೇರಿದೊಡನೆಯೆ ದೇಶದಲ್ಲಿ ನಡೆದಿರುವ ಕೋಮುವಾರು ಸಮರ ನಿಂತು ಹೋಗಿ ಶಾಂತಿಯುಂಟಾಗುವುದೆಂದು ನಿರೀಕ್ಷಿಸಿದ್ದವರಿಗೆಲ್ಲ ಅರ್ಥಾತ್ ನಿರಾಶೆಯಾಗಿದೆ. ಸಮರವೂ ನಿಲ್ಲಲಿಲ್ಲ. ಶಾಂತಿಯೂ ಬರಲಿಲ್ಲ. ಲೀಗಿನ ‘ ಪ್ರತ್ಯಕ್ಷ ಪ್ರತೀಕಾರ ’ ದ ಮಾತೂ ನಿಂತಿಲ್ಲ. ‘ ಜಿಹಾದ್ ’ ಕೂಗೂ ಅಡಗಿಲ್ಲ. ‘ ಪಾಕಿಸ್ತಾನ ’ ದ ಅರ್ಭಟ ಅಳಿದಿಲ್ಲ. ಸರ್ಕಾರಕ್ಕೆ ಸೇರಿದ ಲೀಗ್‌ಸಚಿವರೇ ಈ ‘ಹೋರಾಟ’ ದ ಮಾತುಗಳನ್ನಾಡುವಾಗ ಇನ್ನುಳಿದವರದೇನು !

‘ ಮಂತ್ರಿಮಂಡಲದಲ್ಲಿದ್ದುಕೊಂಡೇ ನಾವು ‘ ಹೋರಾಟ ’ ನಡಸುತ್ತೇವೆ ’ ಎಂದು ಸ್ಪಷ್ಟವಾಗಿಯೆ ಸಾರಿದ್ದಾರೆ ಲೀಗ್ ಮಂತ್ರಿಗಳು.

ಗಜ್ನಫರ್ ಅಲಿ ಉವಾಚ-

ಈ ಮಾನ್ಯ ಲೀಗ್ ಮಂತ್ರಿಗಳಲ್ಲೊಬ್ಬರಾದ ಗಜ್ನಫರ್ ಅಲಿಖಾನ್‌ರವರಿಗಂತೂ ತಾತ್ಕಾಲಿಕ ಸರಕಾರವೆಂದರೆ ಇನ್ನೇನೂ ಅಲ್ಲ – ಅವರಹೋರಾಟಕ್ಕೆ ಅದೂಒಂದು ರಂಗಸ್ಥಳ. ಕೊಂಚ ಅವರ ಮಾತನ್ನಾದರೂ ಕೇಳಿ.

“ ಕೇಂದ್ರದಲ್ಲಿ ಕಾಂಗ್ರೆಸ್ ಸರಕಾರ ಸ್ಥಾಪಿತವಾದನಂತರ ದೇಶದ ಹಲವೆಡೆಗಳಲ್ಲಿಉದ್ಭವಿಸಿದ ಗಲಭೆಗಳೆಲ್ಲ ಏನುಸೂಚಿಸುತ್ತವೆ ? ತಮ್ಮ ನೈಜಪ್ರತಿನಿಧಿಗಳನ್ನೊಳಗೊಂಡಿರದ ಸರಕಾರಕ್ಕೆ ಭಾರತದ ಹತ್ತುಕೋಟಿ ಜನ ಮುಸ್ಲಿಮರು ತಲೆಬಾಗಿಸಲಾರದೆಂಬದನ್ನು ! ಮುಸ್ಲಿಮರಲ್ಲಿ

ಹುಟ್ಟಿದ ಸ್ವಾತಂತ್ರ್ಯದಾಹವನ್ನಾದರೂ ತಡೆಗಟ್ಟಲಾರರು. ಪಾಕಿಸ್ತಾನವನ್ನು ಸಾಧಿಸಿಯೇ ತೀರುವೆವು ನಾವು!"

'ಮುಸ್ಲಿಮರ ಅಸಂತೋಷ!' ಹೂಂ. ಹೌದು. ಕಲಕತ್ತಾ, ಮುಂಬಯಿ ಅಲಹಾಬಾದ, ಅಹಮದಾಬಾದ, ಢಾಕ್ಕಾ- ಎಲ್ಲಕಕ್ಕೂ ಮಿಗಿಲಾಗಿ ಪೂರ್ವಬಂಗಾಲದ ನವಖಾಲಿ, ತಿಪ್ಪೇರಾ ಜಿಲ್ಲೆಗಳಲ್ಲಿ ನಡೆದ, ನಡೆಯುತ್ತಿರುವ ದೊಂಬಿ, ಹಾಡಹಗಲು ಜನರ ಕೊಲೆ, ರಕ್ತಪಾತ, ಲೂಟಿಸುಲಿಗೆ, ಸ್ತ್ರೀಯರ ಮಾನಭಂಗ, ಒತ್ತಾಯದ ಮತಾಂತರ, ಮನೆಮಠಗಳ ಸೂರೆ- ಈ ಎಲ್ಲ ಅತ್ಯಾಚಾರಗಳಿಗೂ ಮುಸ್ಲಿಮರ ಅಸಂತೋಷವೇ ಕಾರಣ. [illegible]

[illegible]

[illegible]

[illegible]

ಭಾಗವೊಂದರಲ್ಲಿ ದೇಶಹಿಂದೆಂದೂ ಕಂಡರಿಯದ ಅಶಾಂತಿ, ಅವ್ಯವಸ್ಥೆಗಳಿಗೊಳಗಾಗಿದ್ದರೂ ಸಹ — ಅದನ್ನು ಹೋಗಲಾಡಿಸುವುದು ಸಾಧ್ಯವಿದ್ದರೂ ಸಹ-ಎಲ್ಲವನ್ನು ಕಡೆಗಣಿಸಿಬಿಟ್ಟು ದಾರ್ಜಿಲಿಂಗ್‌ನಲ್ಲಿ ಸುಖವಾಗಿ ಕಾಲ ಕಳೆಯುತ್ತಿರಬೇಕಾದರೆ ಅವರ ಹೃದಯ ಎಂಥದಿರಬೇಕು! ರೋಮ್ ನಗರ ಸುಟ್ಟು ಬೂದಿಯಾಗುತ್ತಿದ್ದಾಗ ನೀರೋ ಪಿಟೀಲು ಬಾರಿಸುತ್ತಿದ್ದನಂತೆ. ಈ ಮಿ. ಸುಹ್ರಾವರ್ದಿ.....

[illegible]

ಗಲಭೆಗೊಳಗಾದ ಪ್ರದೇಶಗಳನ್ನೆಲ್ಲ ಸುತ್ತಿಬಂದ ಆಚಾರ್ಯ ಕೃಪಾಲನಿಯವರ ಹೇಳಿಕೆಯೂ ನಮ್ಮ ಅಭಿಪ್ರಾಯವನ್ನೆ ಸಮರ್ಥಿಸುತ್ತದೆ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನಿರ್ಣಯವೂ ಇದೇ ಹೇಳಿಕೆಯನ್ನು ಪುಷ್ಟೀಕರಿಸುತ್ತದೆ.

ಹೆಣಗಳ ಮೇಲೆ ಪಾಕಿಸ್ತಾನ ?

ದೇಶದಲ್ಲೆಲ್ಲ ಇಂಥ ನರಮೇಧಗಳನ್ನು ನಡಸಿ, ಮಂತ್ರಿಮಂಡಲವನ್ನು ಹೋರಾಟದ ರಂಗವನ್ನಾಗಿ ಮಾಡಿ 'ಪಾಕಿಸ್ತಾನ್' ದೊರಕಿಸಬೇಕೆಂದು ಲೀಗ್ ಮುಖಂಡರ ಯೋಚನೆಯೆ? ಅಲ್ಪ ಸಂಖ್ಯಾತರ ಕತ್ತುಕುಯ್ದು, ಅವರ ಹೆಣಗಳ ರಾಶಿ ಮಾಡಿ ಅವುಗಳ ಮೇಲೆ ತಮ್ಮ ಪಾಕಿಸ್ತಾನ್ ಕಟ್ಟಬೇಕೆಂದು ಅವರ ವಿಚಾರವೆ?

ಈ ರೀತಿಯಾಗಿ 'ಪಾಕಿಸ್ತಾನ'ದ ಅಡಿಯಲ್ಲಿ ಬಿದ್ದುಕೊಳ್ಳಲು ಅಲ್ಪಸಂಖ್ಯಾತರೊಪ್ಪುವರೆಂದು ಲೀಗಿನವರ ತಿಳಿವಳಿಕೆಯೊ? ಹಿಂದುಸ್ಥಾನದಲ್ಲಿರುವ ಎಲ್ಲ ಅಲ್ಪಸಂಖ್ಯಾತರೂ ಅಂಬೇಡಕರ್ ಪಂಥದವರಂಥ ದೇಶದ್ರೋಹಿಗಳೂ, ಅಪ್ಪಟ ಮೂರ್ಖರೂ ಆಗಿರುವರೆಂದು ಅವರ ನಂಬಿಕೆಯೊ?

ಲೀಗಿಗೆ ಕೊನೆಯ ಎಚ್ಚರಿಕೆ

ಇಲ್ಲ. ಅದಾವುದೂ ಸಾಧ್ಯವಿಲ್ಲ. ನವಖಾಲಿ, ತಿಪ್ಪೇರಾ ಜಿಲ್ಲೆಗಳಲ್ಲಿ ಈ ಪಾಕಿಸ್ತಾನೀ ಕ್ರೈನೂರ ಶಾಹಿ ಹರಿಸಿದ ಅಲ್ಪಸಂಖ್ಯಾತರ ನೆತ್ತರ ಹೊಳೆ ಹಿಂದುಸ್ಥಾನವನ್ನೆಲ್ಲ ಎಚ್ಚರಿಸಿದೆ. ಇಂಥ 'ಪಾಕಿಸ್ತಾನ'ದ ನೆರಳಿಗೆ ನಿಲ್ಲುವುದಕ್ಕೂ ಸಹ ಯಾರಿಗೂ ಇಷ್ಟವಿಲ್ಲ. ಈ ನಗ್ನಸತ್ಯವನ್ನು ಇನ್ನೂ ಎಂದು ಅರಿಯುತ್ತದೆಯೊ ಮುಸ್ಲಿಂ ಲೀಗು! 'ಹೋರಾಟ-ಹಾರಾಟ'ಗಳ ಮಾತು ಇಂದು ನಿಷ್ಪ್ರಯೋಜಕ. ಕಾಂಗ್ರೆಸ್ಸಿನೊಂದಿಗೆ ಸ್ನೇಹದಿಂದ ವರ್ತಿಸುವುದರಲ್ಲೇ ತನಗೆ ಲಾಭವಿದೆಯೆಂಬುದನ್ನು ಎಂದು ಕಂಡುಕೊಳ್ಳುತ್ತದೆಯೊ!

ಸಮರ ಯಾರಿಗೂ ಇಷ್ಟವಿಲ್ಲ. ಎಲ್ಲರಿಗೂ ಬೇಕಾದುದು ಶಾಂತಿ, ಸಂಪೂರ್ಣ ಸ್ವಾತಂತ್ರ್ಯ. 'ನಾವೂ ಸ್ವಾತಂತ್ರ್ಯಕ್ಕಾಗಿ ದುಡಿಯುತ್ತಿದ್ದೇವೆ' ಎಂದು ಲೀಗ್ ಮುಖಂಡರು ಹೇಳುವ ಮಾತಿನಲ್ಲಿ ಹುರುಳಿದ್ದರೆ 'ಹೋರಾಟ'ದ ಮಾತುಗಳನ್ನು ಪೂರ್ಣವಾಗಿ ತ್ಯಜಿಸಿ, ಪುಂಡಾಟಿಕೆಯ ಕೃತ್ಯಗಳನ್ನು ವರ್ಜಿಸಿ ಸ್ವತಂತ್ರ ಭಾರತವನ್ನು ಕಟ್ಟುವ ಪವಿತ್ರ ಕಾರ್ಯದಲ್ಲಿ ಲೀಗು ಭಾಗವಹಿಸಲಿ.

'ಜಗತ್ತಿನಲ್ಲೆಲ್ಲ ಬಲಾಢ್ಯವಾದ ಸಾಮ್ರಾಜ್ಯದ ವಿರುದ್ಧ ನಾವು ನಿರ್ಭಯರಾಗಿ ಹೋರಾಡಿದ್ದೇವೆ. ಪುಂಡರು ಮತ್ತು ಹೇಡಿಗಳ ಬೆದರಿಕೆಗಳಿಗೆ ನಾವು ಹೆದರಲಾರೆವು. ಹೋರಾಟದ ದಾರಿಯನ್ನೆ ಪದೇ ಪದೇ ತೋರಿಸುವವರಿಗೆ ಹೋರಾಟವೇ ಇದುರಾದೀತು!' ಎಂದು ಎಚ್ಚರಿಸಿದ್ದಾರೆ ಪಂಡಿತ ನೆಹರೂ.

ಸಮರದ ಮಾತು ಆಡುವವರಿಗೆಲ್ಲ ಸಮಯೋಚಿತ ಎಚ್ಚರಿಕೆ ಇದು. ಬರೀ ನೆಹರೂ ಹೇಳುವ ಮಾತಲ್ಲ ಇದು. ಇಡೀ ಹಿಂದುಸ್ಥಾನ ಹೇಳುವ ಮಾತು.

—೨೮-೧೦-೪೬

ಶಂಕರಪ್ಪನಿಗೆ ಶತಸಾವಿರ ಜೈ ಹಿಂದ್!

'ನಮ್ಮ ಪ್ರಿಯಭಾರತ! ಇನ್ಕಿಲಾಬ್ ಜಿಂದಾಬಾದ್! ಝಂಡಾ ಉಚಾಂರಹೇ ಹಮಾರಾ!' ಎಂದು ಗರ್ಜಿಸಿದ ತರುಣ ಕೇಸರಿ ನೀನು ಶಂಕರಪ್ಪ! ನಿನ್ನ ಸ್ಫೂರ್ತಿ ನಮ್ಮನ್ನು ಹುರಿದುಂಬಿಸುತ್ತಿದೆ. ಕರ್ತವ್ಯವನ್ನು ಮರೆತು ನಾವು ಸೋಮಾರಿಗಳಾಗಿ ಬಿದ್ದುಕೊಂಡಿರುವಾಗ ನಿನ್ನ ಅಂದಿನ ವೀರವಾಣಿ ನಮ್ಮ ಕಿವಿಗಳಲ್ಲಿ ಮೊರೆಯುತ್ತಿದೆ. ರಕ್ತದಿಂದ ಕೆಂಪಗಾದ ಅಂದಿನ ನಿನ್ನ ಆ ಶರೀರದ ಚಿತ್ರ ನಮ್ಮ ಬಗೆಗಣ್ಣಿಗೆ [illegible] ನಮ್ಮನ್ನೆಚ್ಚರಿಸುತ್ತಿದೆ.

[illegible]

[illegible]

[illegible]

[illegible]

ಕಲ್ಕತ್ತೆಯಲಿ ಕಾಳಿ!

ಕಲ್ಕತ್ತೆಯಲಿ ಕಾಳಿ ಬಲಿಗೆ ಬಂದಳು ಮೊನ್ನೆ :
ನರಪಶುವು ನರಪಶುವ ಕೊಂದು ಕುಣಿಯಿತು ಕೇಕೆ
ಹಾಕಿ ; ನಲಿಯಿತು ತಿವಿದು ಹೊಡೆದಪ್ಪಳಿಸಿ ಸುಟ್ಟು
ಸುಲಿದು ಸಾಯಿಸಿ ಕೂಸು ಕುನ್ನಿಗಳ, ಹೆಣ್ಣುಗಳ,
ಗಂಡುಗಳ, ದುರ್ಬಲರ, ದೀನರ, ಅನಾಥರನು.
ಈ ಪಶುವ ಹೆಣ ಬೀದಿ ಬೀದಿ ಮಂದಯಿಸಿರಲು
ನೋಡಿ ಗಹಗಹಿಸಿ ರಿಂಗಣಗುಣಿದು ರಣಹದ್ದು
ಉತ್ಸವಕೆ ಬಿಜಯಗೈದಿತ್ತು ; ಬೀದಿಯನಾಯಿ
ಈ ವೈರದಾರ್ಭಟಕೆ, ' ಜೀತೋಽಸ್ಮಿ ' ಎಂದು ಸೈ
ವೆರಗಾಗಿ ನಿಂತಿತ್ತು ; ಕಾಗೆಗಳ ಬಳಗ, ' ಅಹ,
ನರನು ಸೃಷ್ಟಿಯ ಮಕುಟ ಎಂಬ ಮಾತಹುದು ದಿಟ!'
ಎಂದು ಕಾ ಕಾ ಎಂದು ಕೊಂಡುಕೊನೆಯಿತು ನರನ.

ಹದ್ದಿಗೂ ಕಾಗೆಗೂ ನಾಯಿಗೂ ಈ ವರೆಗು
ಕೊಲುವ ನರ ಕೊಂದುದನು ತಿನ್ನಲೊಲ್ಲನಿದೇಕೆ
ಎಂಬ ಸಂಶಯ ಹರಿದುದಿಲ್ಲ. ' ನರ ನಿಃಸ್ವಾರ್ಥಿ ;
ಕೊಲ್ಲುವನು ನಮಗಾಗಿ!' ಎಂದು ತಂತಮ್ಮೊಳಗೆ
ನಿರ್ಧರಿಸಿ ಗರಿ ಹೊಡೆದು ಬಾಲವಲ್ಲಾಡಿಸುತ
ಕೊರಲೆತ್ತಿ ಹಾಡಿದುವು ನರನ ಜಯಗೀತವನು.

ಕ್ರಿಸ್ತಬುದ್ಧರು ತಮ್ಮ ಅವತಾರವಿಂದು ಕೃತ
ಕೃತ್ಯವಾಯ್ತೆಂದು ಹಿಗ್ಗಿದರು ; ನಮ್ಮಾ ಗಾಂಧಿ
ವರುಷ ವರುಷದ ತನ್ನ ತಪಕೆ ಬಂದಿದೆ ಸಿದ್ಧಿ
ಎಂದು ತಣಿದನು. ನೆತ್ತರಲ್ಲಿ ಬರೆದಿದೆ ನೋಡಿ :
ದೇವ ಮಾನವಗಣದ ಅವತಾರ ಸೂಚನೆಯು ;
ಮನುಕುಲದ ಅಂತಿಮ ವಿಮೋಚನೆಯ ಯೋಚನೆಯು!

—ಎಂ. ಗೋಪಾಲಕೃಷ್ಣ ಅಡಿಗ

ಕಲ್ಕತ್ತಾ ದುರಂತ

೧

ಮಾನವರೆ ವಿರಚಿಸಿದ ಜಾತಿಯು ಭೂತ ಬೃಹದಾಕಾರದೆ
ಬಾಹು-ಬುದ್ಧಿಯು ಪಸರಿ ನಿಂತಿದೆ, ಯಾರ ಕೈಗೂ ನಿಲುಕದೆ.
ಸ್ವಾರ್ಥ ಚಕ್ಷುವು ತಾಳಿ, ವಿಲಯದ ನಾಟ್ಯ ನಲಿಯಲು ತೊಡಗಿದೆ!
ರಕ್ತ ಪಾನವು ಹರಿಸಿ, ಪಾತಕವು ದಿವ್ಯತೆಗೆ ಮಸಿ ಹಚ್ಚಿದೆ!!
[illegible]
[illegible]

೨

[illegible]
[illegible]
[illegible]
[illegible]
[illegible]
[illegible]

೩

[illegible]
[illegible]
[illegible]
[illegible]
[illegible]
[illegible]

೪

[illegible]
[illegible]

ಉತ್ತಮುತ್ತ್ವವ ಪಡೆದು, ದಿವ್ಯತೆಯನ್ನು ಗಳಿಪುದು ಧ್ಯೇಯವು;
ಗುರಿಯ ಸಾಧಿಸದಿಂತು ಗರ್ತದಿ ಪತನವಿದು ದುರದೃಷ್ಟವು.
ಹಿಂದು-ಮುಸ್ಲಿಮರೊಂದೆ ಬಟ್ಟಲಿ
ನಲ್ಲಿ ನೇಹವನೀಂಟಲಿ!

೫

ವಿಶ್ವಕೊಬ್ಬನೆ ಸಾಕು ದೇವರು, ನಾಮ-ರೂಪಗಳಲ್ಲದ.
ಜಾತಿಯೊಂದೇ ಸಾಕು ನರರದು, ಹೆಣ್ಣು-ಗಂಡಿನ ಭೇದದ.
ಆಯು ತೈಲವು ಬತ್ತುವನಕವು ಜೀವ ದೀಪವು ಬೆಳಗಲಿ!
ಮಧ್ಯದಲಿ ನಂದಿಸುವ ಘಾತುಕತನದ ಕತ್ತಲೆ ಕಳೆಯಲಿ!!
ಕಟುಕತನ ಮೋಡಗಳು ಬಿರಿಯಲಿ!
ಶಾಂತಿ ಚಂದ್ರಿಕೆ ಬೆಳಗಲಿ!!

—ಅಮ್ಮೆಂಬಳ ಶಂಕರ ನಾರಾಯಣ, ವಿದ್ವಾನ್
ಮಂಗಳೂರು

ಕರ್ನಾಟಕದ ಏಕಮಾತ್ರ ಪರಿಮಳ ಫ್ಯಾಕ್ಟರಿ!

* ಡಿ. ಎಂ. ಎಂ. ಸ್ಪೆಷಲ್ ಜವಾಜಿ ಬತ್ತಿ.
* ಶಿವಾಜಿ ದರ್ಬಾರ್ ಬತ್ತಿ.
* ಮಾನ ಅಂಬರ್ ಬತ್ತಿ.
* ಪ್ರಭೂಸ್ ಅಗರ್‌ಬತ್ತಿ.
* ರೋಜ್ ಬತ್ತಿ.

ಇವುಗಳಲ್ಲದೆ :—
ದೇವರ ಪೂಜೆಗೆ ಬೇಕಾದ ಉತ್ಕೃಷ್ಟ ತರಹೆಯ ಪರಿಮಳ ದಶಾಂಗ ಧೂಪದಕೊಡಗಳೂ ದೊರೆಯುತ್ತವೆ.

ವಿವರಗಳಿಗೆ :—
ಎಂ. ಮುದ್ದಣ್ಣ ಅಂಡ್ ಸನ್ಸ್
153, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಸ್ವತಂತ್ರ ಪ್ರೇಮಿಗಳಿಗೆಲ್ಲ

ಸಂತೋಷದ ಸಮಾಚಾರ

ದಾವಣಗೆರೆಯಲ್ಲಿ 'ಸ್ವತಂತ್ರ'ದ ಶಾಖಾ ಕಚೇರಿ !

'ಸ್ವತಂತ್ರ' ಪ್ರಾರಂಭವಾದಂದಿನಿಂದಲೂ ದಾವಣಗೆರೆಯ ನಾಗರಿಕರು ಅದರ ಬಗ್ಗೆ ಅಪಾರ ಪ್ರೀತಿ ತೋರಿಸಿದ್ದಾರೆ. ದಿನದಿನವೂ ಅಲ್ಲಿ ಬೆಳೆಯುತ್ತಿರುವ 'ಸ್ವತಂತ್ರ' ಬಳಗಕ್ಕೆಲ್ಲ ಅನುಕೂಲವಾಗಲೆಂದು ಈ ತಿಂಗಳಿನಿಂದ ನಮ್ಮ ಶಾಖಾಕಚೇರಿಯೊಂದನ್ನು ಅಲ್ಲಿ ತೆರೆಯಲಾಗಿದೆ. ಚಿತ್ರದುರ್ಗ ಜಿಲ್ಲೆಗೆ ನಮ್ಮ ಪ್ರತಿನಿಧಿಗಳಾದ ಶ್ರೀ ಅಂದನೂರು ಕೊಟ್ರಪ್ಪನವರು ಈ ಶಾಖಾ ಕಚೇರಿಯ ಆಡಳಿತದ ಹೊಣೆಯನ್ನು ವಹಿಸಿಕೊಂಡಿದ್ದಾರೆ. ಚಿತ್ರದುರ್ಗ ಜಿಲ್ಲೆಯ ನಮ್ಮ ವಾಚಕರೂ, ಜಾಹಿರಾತುದಾರರೂ ಅವರೊಂದಿಗೆ ವ್ಯವಹರಿಸಬೇಕಾಗಿ ಕೋರಿದೆ.

ಶಾಖಾಕಚೇರಿಯ ವಿಳಾಸ:

ಸ್ವತಂತ್ರ ಶಾಖಾ ಕಚೇರಿ
[illegible] ಗಾಂಧಿಚೌಕ
ದಾವಣಗೆರೆ

[illegible]

[illegible]

[illegible]

'ಸ್ವತಂತ್ರ'

[illegible]

ಸೂಚನೆ

[illegible] 'ಸ್ವತಂತ್ರ'ದ [illegible]

[illegible]

ತೆರೆಯ ಮರೆಯಿಂದ

'ಟಂ-ಟಂ'

" ಕ್ವಿಟ್ ಕರ್ನಾಟಕ ! "

ಬ್ರಿಟಿಷರ ಬೂಟು ಒರೆಸಿ, ದೇಶವನ್ನು ಅವರಿಗೊಪ್ಪಿಸುವಲ್ಲಿ ನೆರವಾಗಿ, ಆ ಸೇವೆಯ ಪ್ರತಿಫಲವಾಗಿ ಸಣ್ಣ ಪುಟ್ಟ ಜಾಗೀರುಗಳನ್ನು ಪಡೆದು 'ಸಂಸ್ಥಾನಿಕ' ರೆಂದು ಮೆರೆದುಕೊಳ್ಳುವ 'ರಾಜರು' ಗಳಿಂದ ತುಂಬಿದೆ ನಮ್ಮ ಹಿಂದೂಸ್ಥಾನ.

ಉತ್ತರ ಕರ್ನಾಟಕದ ಕೆಲವು ಮೂಲೆಗಳಲ್ಲೂ ಇಂಥ 'ರಾಜರು' ಗಳು ಕೆಲವರಿದ್ದಾರೆ. ಅವರೆಲ್ಲರೂ ಮರಾಠಿಗರು. ಕರ್ನಾಟಕದೊಂದಿಗೆ ಯಾವ ಸಂಬಂಧವೂ ಅವರಿಗಿಲ್ಲ. ಆದರೂ ಬ್ರಿಟಿಷರ ಕೃಪೆಯ ಫಲವಾಗಿ ಅವರು ಕೆಲವು ಕಡೆಗಳಲ್ಲಿ ಕನ್ನಡ ಪ್ರಜೆಗಳನ್ನಾಳುತ್ತ ಬಂದಿದಾರೆ. ಸಾಂಗಲಿ, ಮಿರಜ, ಜಮುಖಂಡಿ, ರಾಮದುರ್ಗ ಮೊದಲಾದವು ಇಂಥ ನಾಮಧಾರಿ ಸಂಸ್ಥಾನಗಳಲ್ಲಿ ಕೆಲವು.

ಶ್ರೀರಾಮಚಂದ್ರನ ಹೆಸರಿದ್ದರೂ ಸಹ ಆ ಪುಣ್ಯಾತ್ಮನ ನಾಮವನ್ನು ಹಾಳು ಮಾಡುವಂಥ ರಾವಣರಾಜ್ಯ ನಡಸಿದ ರಾಮದುರ್ಗದ 'ರಾಜನ' ವಿಚಾರ ನಿಮಗೆ ಗೊತ್ತೇ ಇದೆಯಲ್ಲ. ಇನ್ನುಳಿದ ರಾಜರೂ ಇಂಥವರೇ! ಇದುವರೆಗೂ ಇವರ ಸ್ವೇಚ್ಛಾಚಾರಕ್ಕೆ ಅಡ್ಡಿ, ಆತಂಕಗಳಾವುವೂ ಇರಲಿಲ್ಲ. ಇವರು ಇಷ್ಟಪಟ್ಟದ್ದೇ ಕಾನೂನು. ಮಾತನಾಡಿದ್ದೇ ಕಟ್ಟಳೆ. ಹೀಗಿತ್ತು ಈ ಇಸ್ಪೀಟು ರಾಜರುಗಳ ವೈಖರಿ.

ಈಗ ಕಾಲ ಬದಲಾಗಿದೆ. ಹಿಂದೂಸ್ಥಾನದ ಮೇಲೆ ಬೆಳಗುತ್ತಿದ್ದ ಬ್ರಿಟಿಷ್ ಸಾಮ್ರಾಜ್ಯ ಸೂರ್ಯ ಅಸ್ತಮಿಸಿ ಪ್ರತಿಯಾಗಿ ಸ್ವಾತಂತ್ರ್ಯಸೂರ್ಯ ಉದಯಿಸುತ್ತಿದಾನೆ. ಸರಿ. ಇನ್ನು ತಮಗೆ ಉಳಿಗಾಲವಿಲ್ಲ ಎಂಬುದು ಈ ಬೇಬೀ ರಾಜರುಗಳಿಗೆ ಮನದಟ್ಟಾಗಿ ಹೋಗಿದೆ. ಪ್ರಜೆಗಳಪ್ರೀತಿಯನ್ನು ಗಳಿಸಿದ ವಿನಾ ತಮ್ಮ ರಾಜತ್ವ ಉಳಿಯಲಾರದೆಂದು ತಿಳಿದ ಅವರು ಆ ಬಗ್ಗೆ ಎಲ್ಲ ಪ್ರಯತ್ನಗಳನ್ನೂ ಮಾಡಲಾರಂಭಿಸಿದ್ದಾರೆ.

ಸಣ್ಣ ಪುಟ್ಟ ಸಂಸ್ಥಾನಗಳ ಮಿಳನದ ಚಳವಳಿಯೂ ನಡೆದಿದೆ. ಅದರಿಂದಲಾದರೂ ತಮ್ಮ ಆಸನಗಳುಳಿದಾವೇನೋ ಎಂಬ ಆಸೆ ಅವರಿಗೆ.

ಉತ್ತರ ಕರ್ನಾಟಕದ ಸಂಸ್ಥಾನಗಳಲ್ಲಿರುವ ಕನ್ನಡಜನ ಕೂಡಲೇ ಎಚ್ಚೆತ್ತುಕೊಳ್ಳಬೇಕು. ಈ ಚಿಕ್ಕ ಪುಟ್ಟ ರಾಜರುಗಳಿಂದ ಕರ್ನಾಟಕಕ್ಕೆ ಯಾವ ಪ್ರಯೋಜನವೂ ಇಲ್ಲ. ಅವರು ಮರಾಠಿಗರು. ನಾವು ಕನ್ನಡಿಗರು. ನಮ್ಮ ಮೇಲೆ ರಾಜ್ಯವಾಳಲು ಯಾವ ಅಧಿಕಾರವೂ ಅವರಿಗಿಲ್ಲ. ಬ್ರಿಟಿಷರ ಬೂಟು ಒರೆಸಿದ್ದುದರಿಂದ ಬಂದ ಅವರ 'ರಾಜ್ಯಗಳು'

ಬ್ರಿಟಿಷರು ದೇಶಬಿಟ್ಟು ಹೊರಡುತ್ತಿರುವ ಈ ಕಾಲದಲ್ಲಿ ಬುಡಮೇಲಾಗಲೇ ಬೇಕು.

ನಮ್ಮ ಬಂಧು ಭಗಿನಿಯರ ಮೇಲೆ ಘೋರ ಅತ್ಯಾಚಾರ ನಡೆಸಿದ್ದ ಎಂಟು ಜನರನ್ನು ಗಲ್ಲಿಗೇರಿಸಿ ರಕ್ತ ಕುಡಿದ ರಾಮದುರ್ಗದ ರಾಜನನ್ನು [illegible] ಕರ್ನಾಟಕ [illegible] 'ಕ್ಲಬ್' [illegible] ರಾಜರುಗಳಲ್ಲಿ [illegible] ಮೊದಲನೆಯವನಾಗುವಂತೆ ನೋಡಿಕೊಳ್ಳಬೇಕು. ರಾಮದುರ್ಗದವರಲ್ಲಿ [illegible] ಕನ್ನಡಿಗರೆಲ್ಲ ಎಚ್ಚರವಾಗಬೇಕು.

ದಾವಣಗೆರೆಯಲ್ಲಿ ಕಾಳಸಂತೆಯ ಕೋಲಾಹಲ

[illegible]

ಸಿಕ್ಕಿಬಿದ್ದು ಊರಲ್ಲೆಲ್ಲ ಬೊಬ್ಬೆಯೋ ಬೊಬ್ಬೆಯಾಗಿ ಹೋಗಿದೆ.

ಕಾಳಸಂತೆಯ ಈ ಕದೀಮರಲ್ಲಿ ಕೆಲವರು ಹಿಂದೆ ಕಾಂಗ್ರೆಸ್ ಮುಖಂಡರಾಗಿ ಮೆರೆದಿದ್ದುದು ಇನ್ನೂ ಒಂದು ವೈಶಿಷ್ಟ್ಯ. ಇವರೆಲ್ಲ ಈಗಲೂ ಖಾದೀಧಾರಿಗಳು; ಕ್ಷಣ ಕ್ಷಣಕ್ಕೂ 'ಸತ್ಯ, ಅಹಿಂಸೆ,' ಎಂದು ಜಪಿಸುತ್ತಿರುವವರು; 'ಗಾಂಧೀವಾದಿ'ಗಳೆಂದು ಹೇಳಿಕೊಳ್ಳಲು ಹೆಮ್ಮೆಪಡುವವರು. ಇಂಥವರೇ ಕಾಳಸಂತೆಯ ವ್ಯಾಪಾರಿಗಳಾಗಬೇಕಾದರೆ-ಇದೇನು ಕಾಂಗ್ರೆಸ್ ಸಂಸ್ಥೆಯಲ್ಲಿ ಶಿಸ್ತಿನ ಅಭಾವವೋ? ಇಲ್ಲ-[illegible] ದುರ್ಬಲತೆಯೋ?

[illegible]

ಪ್ಸೆ ಬಂದಿದೆ! ಮೊನ್ನೆ ಕಾಂಗ್ರೆಸ್ ಸಭೆಯೊಂದು ನಡೆದಾಗ ಕುಡುಕನೊಬ್ಬ ಅಲ್ಲಿಗೆ ಬಂದು ‘ಬಿಳಿಟೋಪಿಯವರೆಲ್ಲಾ ಬ್ಲಾಕ್‌ಮಾರ್ಕೆಟ್‌ನವರು!’ ಎಂದು ಉಗಿದುಹೋದನಂತೆ!

ಸಾವಿರಾರು ಜನರ ಪ್ರಾಣಾಹುತಿ, ರಕ್ತತರ್ಪಣಗಳಿಂದ ಕಟ್ಟಲ್ಪಟ್ಟ ಕಾಂಗ್ರೆಸ್ ಇಂಥ ಹಲವರು ಸ್ವಾರ್ಥಿ ಬಂಡವಾಳಗಾರರಿಂದ ಹಾಳಾಗಕೂಡದೆಂದು ನಾವು ದೇಶದ ತರುಣರಿಗೆ ಕರೆ ಕೊಡುತ್ತೇವೆ. ಕಾಂಗ್ರೆಸ್ ಸಂಸ್ಥೆಯಿಂದ ಈ ಕಾಳಸಂತೆಯ ಕಳ್ಳರನ್ನೆಲ್ಲ ತಕ್ಷಣ ಒದ್ದೋಡಿಸಬೇಕು. ಮೈಸೂರು ಕಾಂಗ್ರೆಸ್ ಕಾರ್ಯಕಾರಿಸಮಿತಿಯ ಮಾನ್ಯ ಮುಖಂಡರು ದಾವಣಗೆರೆಯ ಸಮಸ್ಯೆಯನ್ನು ತಕ್ಷಣ ಗಮನಿಸಿ ಈ ಅಪರಾಧಿಗಳಿಗೆ ತಕ್ಕ ಶಾಸನ ವಿಧಿಸಿ ಅವರನ್ನು ಕಾಂಗ್ರೆಸ್ಸಿನಿಂದ ಹೊರದೂಡಬೇಕು. ನಮ್ಮ ಪ್ರೀತಿಯ ಕಾಂಗ್ರೆಸ್ ಸಂಸ್ಥೆಯಲ್ಲಿ ಇಂಥ ಕಾಳಸರ್ಪಗಳಿರಕೂಡದು! ದಾವಣಗೆರೆಯ ಕಾಂಗ್ರೆಸ್ ಪ್ರೇಮಿ ಜನರೆಲ್ಲರ, ಕರ್ನಾಟಕದ ತರುಣರೆಲ್ಲರ. ಹೇಳಿಕೆ ಇದು.

‘ಕಾಯ್‌ಗs ಬಾಯಿಾ ?’

ಬೆಳಗಾವಿಯಲ್ಲಿ ಮರಾಠಿ ಹೇಡಿಗಳು ಕೆಲವರು ಈಚೆಗೆ ನಡಸುತ್ತಿರುವ ಹೆಣ್ಣುತನದ ಕೃತ್ಯಗಳಿಂದಾಗಿ ಅಖಿಲ ಕರ್ನಾಟಕದ ದೃಷ್ಟಿಯೆಲ್ಲ ಆ ನಗರದ ಕಡೆ ಹೊರಳಿದೆ.

ಕನ್ನಡಿಗರ ನಗರವೊಂದಕ್ಕೆ ಹೊಟ್ಟೆ ಹೊರೆಯಲು ಬಂದು ಅಲ್ಲಿಯೆ ನೆಲಸಿದ ಈ ಮರಾಠಿಗರು ಇದೀಗ ಆ ನಗರ ತಮ್ಮದೇ, ತಮ್ಮಪ್ಪನದೇ—ಎಂದು ಸಾಧಿಸುತ್ತಿದಾರೆ. ಅದಕ್ಕಾಗಿ ಬಗೆ ಬಗೆಯ ಕುಟಿಲೋಪಾಯಗಳನ್ನೂ ಕೈಗೊಳ್ಳುತ್ತಿದಾರೆ.

ಕಳೆದ ತಿಂಗಳಂತೂ ಈ ನಿಮಕ್‌ಹರಾಮ್ ಮರಾಠಿಗರ ನಾಚಿಕೆಗೇಡಿತನದ ಪರಮಾವಧಿಯಾಯಿತು. ‘ಕರ್ನಾಟಕ ಮಾತೆಗೆ ಜಯವಾಗಲಿ’ ಎಂದು ಹೇಳುವ ಹುಡುಗರನ್ನೆಲ್ಲ ಈ ಹೇಡಿಗಳು ಹೊಡೆದರು. ಅಪ್ಪಾನಾಯಕ ಎಂಬ ಕನ್ನಡ ಯುವಕ ರಾತ್ರಿ ೧೦ ಘಂಟೆಗೆ ಒಬ್ಬನೇ ಹೋಗುವಾಗ ೩೦-೪೦ ಜನ ಮರಾಠಿಗರು ಹೆಂಗಸರಂತೆ ಮುಸುಕು ಹಾಕಿಕೊಂಡು ಬಂದು ಆತನನ್ನು ಲಾಠಿಯಿಂದ ಹೊಡೆದರು. ಅಶೋಕ ಅರಟಾಳ ಎಂಬ ಯುವಕನನ್ನು ಹತ್ತು ಹದಿನೈದು ಜನ ಸೇರಿ ಹೊಡೆದರು.

ಈ ಮರಾಠಿಗರ ಗಂಡಸುತನ ನೋಡಿ ಹೇಗಿದೆ! ಒಬ್ಬ ಯುವಕನನ್ನು ೩೦-೪೦ ಜನ ಸೇರಿ ಹೊಡೆಯಬೇಕಾದರೆ ಎಂಥ ವೀರ್ಯವಿದೆಯೋ ಅವರಲ್ಲಿ! ಶೂರ ಶಿವಾಜಿಯ ನಾಡಿನವರಂತೆ ಈ ಜನ! ಶಿವಾಜಿಯ ಹೆಸರು ಹೇಳಲು ನಾಚಿಕೆಯಾಗಬೇಕು ಇವರಿಗೆ. ಪರಕೀಯ ಶತ್ರುಗಳನ್ನೋಡಿಸಲು ಹೋರಾಡಿದ ವೀರ ಶಿವಾಜಿಯ ಹೆಸರಿಗೆ ಕಲಂಕ ಹ

ಚ್ಚಿನ ಈ ಮರಾಠಿ 'ಬಾಯಿಸಾ'ಗಳಿಗೆಲ್ಲ ಕರ್ನಾಟಕ ತಕ್ಕ ಉತ್ತರಕೊಡಬೇಕು. ಕರ್ನಾಟಕದ ಜನ ಸತ್ತಿಲ್ಲವೆಂಬುದನ್ನು ಈ 'ಬಾಯಿಸಾ'ಗಳಿಗೆ ತೋರಿಸಿಕೊಡಬೇಕು.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ ಈ ಬಗ್ಗೆ [illegible]

'ನಾಡಿನ ಇಂಥ ಭೀಕರಸ್ಥಿತಿಯಲ್ಲಿ ದೀಪಾವಳಿಯನ್ನಾಚರಿಸುವುದು ಬೇಡ. ಉತ್ಸವಗಳನ್ನು ಮಾಡುವುದು ಬೇಡ' ಎಂದು ಗಾಂಧೀಜೀ ಹೇಳಿದ್ದರೂ ಸಹ ಹುಬ್ಬಳ್ಳಿಯ ಈ ಉತ್ಸವಪ್ರಿಯರು ದೀಪಾವಳಿ ಕಾಲದಲ್ಲಿ ಈ ಸಾಹಿತ್ಯೋತ್ಸವ ನಡಸಿಯೇ ಬಿಟ್ಟರಂತೆ!

ಅನ್ನಾಭಾವದಿಂದ ಜನ ಸಾಯುತ್ತಿರುವ ಈ ಕಾಲದಲ್ಲಿ ಸಹ ಹುಬ್ಬಳ್ಳಿಯಲ್ಲಿ ನೆರೆದ ಈ ಸಾಹಿತಿಗಳಿಗಾಗಿ ಹೋಳಿಗೆಗಳು [illegible]!

[illegible]

ಅರಿಕೆ

[illegible]

—[illegible]

ನಮ್ಮ ಊರು

(ದಿಗ್ದರ್ಶಕರು :—" ಪ. ವಿ. ")

"ಇಷ್ಟೊಂದು ಅಭಿಮಾನದಿಂದ ಹೇಳುವ ನಿಮ್ಮ ಊರು ಹಿಮಾಲಯ ಪರ್ವತದ ಮೇಲಿದೆಯೋ ಅಥವಾ ಪಾತಾಳದಿಂದ ಎದ್ದುಬಂದಿದೆಯೋ?" ಎಂದು ಬೇರೆ ಊರಿನವರಾದ ನೀವು ಕೇಳಬಹುದು. ನಮ್ಮ ಊರು ಆಕಾಶದಿಂದಲಾದರೂ ಉದುರಿಬಿದ್ದಿರಲಿ, ಅಥವಾ ತಿಬೆಟ್ಟಿನ ಕೊಳ್ಳದಲ್ಲಾದರೂ ಇರಲಿ, ಎಷ್ಟೆಂದರೂ-ಏನೆಂದರೂ ನಮ್ಮ ಊರು. ನಮ್ಮ ಓಣಿ, ನಮ್ಮ ಮನೆ ಅಂದರೆ ಯಾರಿಗೆ ತಾನೆ ಅಭಿಮಾನವಿರುವುದಿಲ್ಲ? ಇರಲಿ.

ನಮ್ಮ ಊರು ಹೂಬಳ್ಳಿ-ಬ್ಯಾಂಗಲ್ ಊರುಗಳ ಮಧ್ಯಮಾರ್ಗದಲ್ಲಿದೆ. ಮೈಸೂರು ಶೀಮೆಯಲ್ಲಿ ಮೂರನೇ ಮಹಾಪಟ್ಟಣವೆಂದು ಹೆಸರು ಪಡೆದಿದೆ. ವ್ಯಾಪಾರೋದ್ಯಮಗಳಲ್ಲಿ ನಿಶಾನಿ ಹಚ್ಚಿದೆ. ಶೇಂಗಾ-ನೆನೆಗಡಲೆ-ಕಳ್ಳೀಕಾಯಿ, ಬಟಗಡಲೆ, ಭೈಮೂಗ ಇತ್ಯಾದಿ ಇತ್ಯಾದಿಗಳ ವ್ಯಾಪಾರಕ್ಕಂತೂ ಎತ್ತಿದ ಕೈ! ನಮ್ಮೂರಿನಲ್ಲಿ ಕಂಬಳಿಗಳು ತಯಾರಾಗುತ್ತಿಲ್ಲವಾದರೂ ನಮ್ಮೂರಿನ ಕಂಬಳಿಗಳೆಂದರೆ ಪ್ರಸಿದ್ಧ.

ನಮ್ಮೂರಿಗೆ ನೀವು ಬರಬೇಕೆಂದು ಇಚ್ಛಿಸಿಟ್ಟರೆ, ಪಂಹರದಲ್ಲಿಯೋ, ಇತ್ತ ಮಿಕ್ಸಜೂಜೂರಿನಲ್ಲಿಯೋ ನಿಮ್ಮ ಕಾಫಿ ತಿಂಡಿ ತೀರಿಸಿಕೊಂಡು ಬನ್ನಿ! ಯಾಕಂದರೆ ನಮ್ಮೂರು ಸ್ಟೇಷನ್ನಿಗೆ ಕಾಫಿ ಹೋಟ್ಲು ಇಲ್ಲ. ನೀವು ಬರುವಾಗ ಮುಂಚಿತ ತಿಳಿಸಿ. ನಿಮ್ಮ ಸ್ವಾಗತಕ್ಕೆ ಊರೆಲ್ಲಾ ಬರುತ್ತೇವೆ. ನಮಗೇನು ಪ್ಲ್ಯಾಟ್‌ಫಾರ್ಮ್ ಟಿಕೆಟ್ ಬೇಕಾಗಿಯೇ ಇಲ್ಲ.

ನಮ್ಮೂರಿಗೆ ಬರಬೇಕೆನ್ನಿಸಿದರೆ ಮೊದಲು ಮೇರಿ ಪರಿಚಯಮಾಡಿಕೊಳ್ಳಿ-ಪೂರ್ವಕ್ಕೆ ಕಳ್ಳೀಸಾಲು-ಉತ್ತರಕ್ಕೆ ಶ್ಮಶಾನ, ಪಶ್ಚಿಮಕ್ಕೆ ಗೋರಿಗಳು-ದಕ್ಷಿಣಕ್ಕೆ ಕ್ಷಯದ ಆಸ್ಪತ್ರೆ!

ನಮ್ಮೂರಿನ ಸ್ಟೇಷನ್ನಿನಲ್ಲಿ ನೀವು ಇಳಿದೊಡನೆಯೇ ನಮ್ಮ ಸ್ಟೇಷನ್ನನ್ನು ಕೊಂಚ ನೋಡಿ. ಎಷ್ಟು ದೊಡ್ಡ ಸ್ಟೇಷನ್! ಎಂತೆಂತಹ ಗೋಡೆಗಳು! ಆಹಾಹಾ! ಯಾಕೆ ಅನ್ನುವಿರಾ? ನಮ್ಮೂರಿನ ಸ್ಟೇಷನ್ನಿಗೆ ದುಡ್ಡು ವೆಚ್ಚ ಮಾಡುವುದೆಂದರೆ ಧರ್ಮಾದಾಯಖಾತೆಗೆ ಖರ್ಚು ಹಾಕಿದಂತೆ! ಆ 'ಓವರ್ ಬ್ರಿಡ್ಜ್' ನೋಡಿದಿರಾ? ಅದೊ ಅಲ್ಲಿ ಕಾಣುವುದು 'ಅಂಡರ್‌ಬ್ರಿಡ್ಜ್'! ಮಳೆ ಬಂದಾಗಲೆಲ್ಲ ಇದರ ಬುಡದಲ್ಲಿ ನಿಂತು ಕತ್ತೆಗಳು ಕಂಪನಿಯವರನ್ನು ಹಾಡಿ

[illegible]

[illegible]

ಹೀಗೆ ಬನ್ನಿ !

ಬೆಟ್ಟ-ನಿಷ್ಪೂರು ಬಸವಪ್ಪನವರು:-ನಮ್ಮೂರಿನ ನಗರಸಭೆಯ ಮಾಜಿ ಹಾಗೂ ಹಾಲಿ ಅಧ್ಯಕ್ಷರು. ಮಧ್ಯೆ ಕೊಂಚ ವಿರಾಮ ಸಿಕ್ಕಿತ್ತು ಅಷ್ಟೆ! ಖಾದೀ ಧಾರಿಗಳು. ಆದರೂ ಕಾಂಗ್ರೆಸ್ ವಿರೋಧಿಗಳು. ಸರಳತೆಯಿದೆ. ಬಡಬಗ್ಗರೆಂದರೆ ತುಂಬಾ ಕನಿಕರದವರು. [illegible] ಸಾದಾ ಜೀವನ! ನೈಜ ಪ್ರಜಾಸೇವಕರು! ನಮ್ಮೂರಿನ ಯಾವ ಕಾಂಗ್ರೆಸ್ಸಿಗರೂ [illegible] ನೈಜ ಸೇವೆ ಸಲ್ಲಿಸಿದಾರೆ ನಮ್ಮೂರಿಗೆ. ಆದರೆ ಹೆಸರಿಗೆ [illegible] ನಿಷ್ಠುರ [illegible] ಹೀಗಿದ್ದರೂ [illegible] ಕಾರಣವೆಂದರೆ [illegible]

[illegible]

ಜನತೆಯ ಆ ಸಂಶಯವನ್ನು (ನಿಜವಿದ್ದರೆ) ಬೇಗನೆ ನಿವಾರಿಸಿದರೆ-ನಿರ್ಭಯವಾಗಿ ಕಾಂಗ್ರೆಸ್ಸಿನ ಕೊಡೆಯ ನೆರಳಿಗೆ ಬಂದರೆ-ನಮ್ಮೂರಿನ ಮುಂದಾಳುಗಳಿಗೆಲ್ಲ ಮೇಲ್ಪಂಗ್ತಿ ಹಾಕಿಕೊಡುವ ನಾಯಕರಾಗುವವರಲ್ಲಿ ಸಂದೇಹವಿಲ್ಲ.

ನೋಂದಾಡೆ ನಜಮಲ್ಲರಾಯರು: ಇವರ ಬಗ್ಗೆ ಎಷ್ಟು ಹೇಳಿದರೂ, ಏನು ಹೇಳಿದರೂ ಕಡಿಮೆಯೇ! ಸ್ಥಳೀಯ ಕಾಂಗ್ರೆಸ್ಸಿನ ಮಾಜೀ ಅಧ್ಯಕ್ಷರಾದ ಇವರು-ಇಂದಿಗೂ ನಖಶಿಖಾಂತ ಖಾದೀಧಾರಿಗಳಾದ ಇವರು-ನ್ಯಾಯಾನ್ಯಾಯ ವಿಚಾರಿಸುವ ಶಕ್ತಿಯುಳ್ಳ ವಕೀಲರಿವರು ಒಮ್ಮನೊಮ್ಮೆ - ವಿನಾಕಾರಣವಾಗಿ (ಅಧಿಕಪ್ರಸಂಗ ಕಾರಣವಿರಬಹುದು) ಕಾಂಗ್ರೆಸ್ ಅಧ್ಯಕ್ಷ ಪದವಿಗೆ ರಾಜೀನಾಮೆಯಿತ್ತು ಮೊದಲನೇ ಅಪರಾಧ ಮಾಡಿದರಲ್ಲದೆ-ಅಕ್ಕಿ, ಸಕ್ಕರೆ ವ್ಯಾಪಾರಕ್ಕೆ ಬಿದ್ದು ಅಸಂಖ್ಯಾತ 'ಉಪಕಾರ'ಗಳನ್ನು ಮಾಡಿ, ಚುನಾವಣೆಯ ಪ್ರಸಂಗದಲ್ಲಿ ಕಾಂಗ್ರೆಸ್ಸಿನ ಎದುರಾಳಿಗಳಾಗಿ ನಿಲ್ಲುವ "ಶಿಶುಪಾಲನ ೧೦೧ ನೇ" ಅಪರಾಧ ಮಾಡಿದರು. ನೋಂದಾಡೆ ನಜಮಲ್ಲರಾಯರಿಗೆ ಅದ್ಭುತ ಕರ್ತೃತ್ವ ಶಕ್ತಿಯಿದೆ. ಆದರೆ ಅದರಲ್ಲಿ ಹಿಟ್ಲರನ ಸರ್ವಾಧಿಕಾರಿತ್ವ ತುಂಬಿಕೊಂಡಿದೆ. ಬುದ್ಧಿಯಿದೆ-ಆದಕ್ಕೆ ಚರ್ಚಿಲ್ ಸಾಹೇಬರಂಥವರ 'ಕುಯುಕ್ತಿ' ಕುಟಿಲನೀತಿ ಆವರಿಸಿಕೊಂಡಿದೆ. ನೋಂದಾಡೆ ನಜಮಲ್ಲರಾಯರು ಮಾಡುತ್ತಿರುವ ಇನ್ನೂ ಹೆಚ್ಚಿನ ದ್ರೋಹವೆಂದರೆ-ನಾಲ್ಕಾರು 'ಕಾಲಿಕ್ತು'ಗಳ ಜೊತೆ ಮಾಡಿಕೊಂಡು-ತಮ್ಮದಕ್ಕೊಂದು ಪಾರ್ಟಿ ಎಂದು ಹೆಸರಿಟ್ಟುಕೊಂಡು-ಇನ್ನೊಂದು ವ್ಯಕ್ತಿಯ ದ್ವೇಷ ಮಾಡಲು ಹಚ್ಚಿ, ಆ ವ್ಯಕ್ತಿಗೂ, ಆ ವ್ಯಕ್ತಿಯ ಹಿಂದಿರುವವರಿಗೂ ಇನ್ನೊಂದು ಪಾರ್ಟಿ ಎಂದು ಹೆಸರಿಟ್ಟು ಅದರ ಸರ್ವತೋಮುಖ ವಿನಾಶಕ್ಕಾಗಿ-ತಮ್ಮ ಪಾರ್ಟಿಯ ಅರ್ಥಾತ್ ತಮ್ಮ ಕೀರ್ತಿಯ ಧ್ವಜಸ್ತಂಭ ಸ್ಥಾಪನೆಗೆ ಯತ್ನಿಸುವುದು. ಗಾಂಧೀ ಜಯಂತಿಯಂತಹ ಪವಿತ್ರ ಕಾರ್ಯದಲ್ಲಿ ಕೂಡಾ ಇನ್ನೊಂದು ಪಾರ್ಟಿಯ ಕೈವಾಡವಿದೆಯೆಂದು ತಮ್ಮ ಪಾರ್ಟಿಯ ನೆರಳು ಕೂಡಾ ಬೀಳದಂತೆ ನೋಡಿಕೊಳ್ಳುವ ನೋಂದಾಡೆ ನಜಮಲ್ಲರಾಯರಿಗೆ ಸ್ವತಂತ್ರ ಭಾರತದಲ್ಲಿನ ಅಖಂಡ ಕರ್ನಾಟಕದ ಗವರ್ನರರು ಎಂಥ ಕಠಿಣ ಶಿಕ್ಷೆ ವಿಧಿಸುವರೋ ತಿಳಿಯದಾಗಿದೆ. ನಜಮಲ್ಲರಾಯರು ಈ ಕ್ಷಣಕ್ಕೆ ತಮ್ಮ ಬುದ್ಧಿ ಬದಲಾಯಿಸುವುದೊಳ್ಳೆಯದು. ಈಗಿರುವ ಬುದ್ಧಿಯುಳ್ಳವರಾಗಿ ಯಾವ ಸಂಘ-ಸಂಸ್ಥೆ-ಪರಿಷತ್ತು - ಸಭೆ-ಸಮ್ಮೇಲನಗಳಲ್ಲಿ ಮುಂಗೈ ಜೋರುಮಾಡಿ ಮುಂದೆ ಬಂದರೆ ಇದು ಸೇವಾಬುದ್ಧಿಯಿಂದಲ್ಲ-ಇನ್ನೊಂದು ಪಾರ್ಟಿಯ ಇನ್ನೊಂದು ವ್ಯಕ್ತಿ ಮುಂದೆ ಬರಬಾರದೆಂದು ಮಾಡಿದ 'ಮುಂದುಡುಕುತನ' 'ಅನೈತಿಕ ಆಕ್ರಮಣ' ಎಂದು ಜನತೆ ಕರೆಯುತ್ತದೆಂಬುದನ್ನು ಸಿರಿಮಾನ್ ನೋಂದಾಡೆ ನಜಮಲ್ಲರಾಯರು ಮರೆಯದಿರಲಿ!

ಸೂಸಲ ಸುಖನಿವಾಸಶೆಟ್ಟರು:- ನಮ್ಮೂರಿನ ಪ್ರಮುಖ ಕಾಂಗ್ರೆಸ್ಸಿಗರಲ್ಲಿ ಒಬ್ಬರಾದ ಇವರ ಮುಖವನ್ನು ನೋಡಿ

ದೊಡನೆಯೇ "ಆಕಳಿನಂಥ ಪ್ರಾಣಿ'' ಎಂದು ಯಾರಿಗಾದರೂ ಸ್ವಾಭಾವಿಕವಾಗಿ ಅನ್ನಿಸುತ್ತೆ. ಮಹಾತ್ಮಾಗಾಂಧೀಜಿಯವರಿಗಿಂತಲೂ ಮೂರುಪಟ್ಟು ಮಿಗಿಲಾದ ಶಾಂತತೆಯಿದೆ. ಆ ಸಮಾಧಾನಕ್ಕೆ ಸರಿಯಾಗಿ ಸ್ವಚ್ಛ ಮನಸ್ಸು, ಕಷ್ಟ ಸಹಿಷ್ಣುತೆ ಇವರಿಗಿದ್ದಂತೆ ಕೋರುವುದಿಲ್ಲ. [illegible]

ಮುಖಂಡರೆನ್ನಿಸಿಕೊಳ್ಳಲು ಮೊದಲು ಮುಂದೆ ಬರುತ್ತಾರೆ. ೧೯೪೨ ಆಗಸ್ಟ ಚಳವಳಿಯಲ್ಲಿ ಗುಂಡುಹಾರಿದಾಗ ನಮ್ಮ ಸುಖನಿವಾಸಶೆಟ್ಟರು ಮನೆಯ ಮಹಡಿಯ ಮೇಲೆ ಕಿರ್ಲೋಸ್ಕರ ಪಲ್ಲಂಗದ ಬದಿಯಲ್ಲಿ ಸುಖವಾಗಿ ಪವಡಿಸಿ, ಬೆಳ್ಳಿಯ ಲೋಟದಲ್ಲಿ ಎಳೆನೀರು ಕುಡಿಯುತ್ತಿದ್ದರೆಂದು 'ಹುಡುಗರೆಲ್ಲ' ಇವರ ಹೆಸರಿನಲ್ಲಿ [illegible] ಹೊಡೆಯುತ್ತಿದ್ದಾರೆ. [illegible] ಶಾಂತಿ, ಸೈರಣೆಗಳ [illegible]

[illegible]

ಯುತ್ತೆ–ಇಲ್ಲವಾದರೆ ನಿಂತುಬಿಡುತ್ತೆ. ಹೊಸ ಸ್ಪ್ರಿಂಗ್ ಹಾಕದಿದ್ದರೆ ಈ ಗಡಿಯಾರ'ಕಂಡೆಮ್'ಆಗುವುದು ಖಂಡಿತ!

ಮಾವನೂರು ಮುಸಿಯಪ್ಪನವರು:- ಕೈಯಿಂದ ಕೆಲಸವಾಗದಿದ್ದರೂ ಮುಂದುವರಿದು ಮಾಡುವವರಿಗೆ ಬೆನ್ನುಮೂಳೆಯಾಗಿ ಇರುವ ದೊಡ್ಡ ಮನಸ್ಸಿನಿಂದಾಗಿ ನಮ್ಮೂರಿನ ಕಾಂಗ್ರೆಸ್ಸಿಗರಲ್ಲಿ ಇವರೂ ಒಬ್ಬ ದೊಡ್ಡವರೆನ್ನಿಸಿಕೊಂಡಿದಾರೆ. ಅನೇಕರು ಇವರ ಮೇಲೆ ಬ್ಲಾಕ್ ಮಾರ್ಕೆಟ್ ಅಪವಾದ ಕೊಡುತ್ತಿದಾರೆ. ಅದು ದಿಟವೋ, ಸಟೆಯೋ ಎಂಬುದರ ಚರ್ಚೆ ನನಗೆ ಬೇಕಿಲ್ಲ. ಒಂದು ಮಾತನ್ನು ಮಾತ್ರ ಧೈರ್ಯವಾಗಿ ಹೇಳಬಹುದು–ನೂರಿನ್ನೂರು ರೂಪಾಯಿ ಸಂಬಳದ ಕೆಲವು ಸಿಮ್ಮಃಖ್‌ಹರಾಮ್ ನೋಕರರು ಮಾಡಿರುವಷ್ಟು ಅಪರಾಧವನ್ನು ಮಾವನೂರು ಮುಸಿಯಪ್ಪನವರು ಮಾಡಿರಲಾರರು.

ಮೇ. ಟಿ. ಕೆಮ್ಮಣ್ಣನವರು:- ನಮ್ಮೂರಿನಲ್ಲಿ ಸಾರ್ವಜನಿಕವಾದ ಕಾಂಗ್ರೆಸ್ಸಿನ ಯಾವ ಸಭೆಗಳೇ ನಡೆಯಲಿ, ಯಾರ ಅಧ್ಯಕ್ಷತೆಯಲ್ಲಿ ಎಂಬುದನ್ನು ಕೇಳುವ ಅವಶ್ಯಕತೆಯೇ ಇಲ್ಲ. ಅಂದರೆ ನಮ್ಮ ಮೇ. ಟಿ. ಕೆಮ್ಮಣ್ಣನವರೇ ಮುಂದಾಗಿ ಹೋಗಿ ಆ ಸ್ಥಾನವನ್ನಾಕ್ರಮಿಸುತ್ತಾರೆಂದು ಭಾವಿಸಬೇಡಿ. ಇನ್ನೊಬ್ಬರಿಲ್ಲದ್ದಕ್ಕಾಗಿ ಇವರು ಅಧ್ಯಕ್ಷರಾಗುವುದು ಅಷ್ಟೆ! ಸಭೆಗಳಿಗಷ್ಟೇ ಅಲ್ಲ, ಕಾಂಗ್ರೆಸ್ಸಿಗೂ ಇವರೇ ಅಧ್ಯಕ್ಷರು. ನಗರಸಭೆಯ ಅಧ್ಯಕ್ಷರೂ ಆಗಿ ನೋಂದಾಡೆ ಪಜಮಲ್‌ರಾವ್ ಮತ್ತು ಕಂಪನಿಯ ಹೊಟ್ಟೆಯುರಿಗೆ ಇನ್ನೂ ಹೆಚ್ಚಿನ ಕಾರಣರಾದರು. ನಮ್ಮೂರಿಗೊಂದು ಮೇಟಿಯಿದ್ದ ಹಾಗೆ ಇವರು. ಬಡವರ ಮನೆಯ ಬಾಗಿಲಿಗೆ ಭೂಷಣ ಈ ಕೆಮ್ಮಣ್ಣು. ಕೆಂಪು ಇರುವಂತೆ ಜಗಟೂ ಬಹಳ ಈ ಕೆಮ್ಮಣ್ಣಿನದು. ಊರೆಲ್ಲ ಒಂದಾದರೂ ತನ್ನ ಹಟವನ್ನೇ ಸಾಧಿಸುವ ಸ್ವಭಾವ. ಮೇಟಿಯವರು ಈ ಹಟ ತೊಡುವ ಮೊದಲು ಅದು ದಿಟವಾದುದೋ ಸಟೆಯಾದುದೋ ಎಂದು ತಾವೇ ತಾವಾಗಿ ವಿಚಾರಿಸುತ್ತಾರೆ. ತನ್ನ ಮನಸ್ಸಿಗೆ ನ್ಯಾಯವೆನ್ನಿಸಿತೋ ಹಟ ತೊಟ್ಟರೇ! ಒಮ್ಮೆ ಹಟಕ್ಕೆ ಬಿದ್ದರೆಂದರೆ ಬಿಡಿಸಲು ಯಾರಪ್ಪನಿಂದಲೂ ಸಾಧ್ಯವಿಲ್ಲ.

ನಾನ್‌ಜಿ ನೀರಪ್ಪನವರು:- ಕಾಂಗ್ರೆಸ್ ಪ್ರಮುಖರು. ಒಬ್ಬರಿಗೆ ಜೀ ಅನ್ನುವುದಿಲ್ಲ. ಇನ್ನೊಬ್ಬರ 'ಜೀ' ಬೇಕಿಲ್ಲ. ಸ್ವರ್ಗವೂ ಬೇಡ; ನರಕವೂ ಬೇಡ. ಚುನಾವಣೆಗೆ ನಿಲ್ಲು ಎಂದಾಗ ಒಲ್ಲೆನ್ನುವುದಿಲ್ಲ. ಸೋತಾಗ ಸುಮ್ಮನಿದ್ದುಬಿಡುತ್ತಾರೆ. ಧೈರ್ಯವಾಗಿ ಮುನ್ನುಗ್ಗಿದರೆ ಮುಖಂಡರಾಗುವ ಯೋಗ್ಯತೆಯಿದೆ.

ಎಡೆ ಇಶ್ವರಾಯರು:- ಕಾಂಗ್ರೆಸ್ ಅಧಿವೇಶನದಂತಹ ದೊಡ್ಡ ದೊಡ್ಡ ಊಟದ ಪ್ರಸಂಗಗಳಲ್ಲಿ ಕೂಡಾ, ಬ್ರಾಹ್ಮಣರೇ ಅಡಿಗೆ ಮಾಡಿ, ಬ್ರಾಹ್ಮಣರೇ ಬಡಿಸಲು ಬರಬೇಕೆಂಬ ಕ್ಷುಲ್ಲಕ ಮನಸ್ಸು ಮನೆಮಾಡಿಕೊಂಡಿದೆಯಾಗಿ ಇದೊಂದು ಒಳ್ಳೆಯ ವ್ಯಕ್ತಿಯಾದೀತು ಎಂಬ ಆಸೆಯಿಲ್ಲ.

ಗಡಗಿಮಠದ ಗುಂಡಾಡಯ್ಯನವರು:- ಹೋ! ಇವರೂ ಒಬ್ಬ ಪ್ರಸಿದ್ಧ

ದೊಡನೆಯೇ "ಆಕಳಿನಂಥ ಪ್ರಾಣಿ" ಎಂದು ಯಾರಿಗಾದರೂ ಸ್ವಾಭಾವಿಕವಾಗಿ ಅನ್ನಿಸುತ್ತೆ. ಮಹಾತ್ಮಾಗಾಂಧೀಜಿಯವರಿಗಿಂತಲೂ ಮೂರುಪಟ್ಟು ಮಿಗಿಲಾದ ಶಾಂತತೆಯಿದೆ. ಆ ಸಮಾಧಾನಕ್ಕೆ ಸರಿಯಾಗಿ ಸ್ವಚ್ಛ ಮನಸ್ಸು, ಕಷ್ಟಸಹಿಷ್ಣುತೆ ಇವರಿಗಿದ್ದಂತೆ ಕಾಣುವುದಿಲ್ಲ. ಒಣದಂಟು ಕಡಿದು, ಹಸಿಲು ಪೊರಕೆ ತಿಂದು ಹಾಲು ಕರೆಯುವ 'ತ್ಯಾಗಬುದ್ಧಿ' ಇಲ್ಲ ಈ ಆಕಳಿಗೆ. ಹಾಲು ಕರೆಯಲು ಕೂಡಾ ಎಲ್ಲರಿಗೂ ಸಾಧ್ಯವಿಲ್ಲ. [illegible]

ಮುಖಂಡರೆನ್ನಿಸಿಕೊಳ್ಳಲು ಮೊದಲು ಮುಂದೆ ಬರುತ್ತಾರೆ. ೧೯೪೨ ಆಗಸ್ಟ ಚಳವಳಿಯಲ್ಲಿ ಗುಂಡುಹಾರಿದಾಗ ನಮ್ಮ ಸುಖನಿವಾಸಕೆಟ್ಟರು ಮನೆಯ ಮಹಡಿಯ ಮೇಲೆ ಕಿರ್ಲೋಸ್ಕರ ಪಲ್ಲಂಗದ ಬುವದಲ್ಲಿ ಸುಖವಾಗಿ ಪವಡಿಸಿ, ಬೆಳ್ಳಿಯ ಲೋಟದಲ್ಲಿ ಎಳೆನೀರು ಕುಡಿಯುತ್ತಿದ್ದರೆಂದು 'ಹುಡುಗರೆಲ್ಲ' ಇವರ ಹೆಸರಿನಲ್ಲಿ ಶಂಖ ಹೊಡೆಯುತ್ತಿದ್ದಾರೆ. [illegible]

[illegible]

[illegible]

ಯುತ್ತೆ-ಇಲ್ಲವಾದರೆ ನಿಂತುಬಿಡುತ್ತೆ. ಹೊಸ ಸ್ಪ್ರಿಂಗ್ ಹಾಕದಿದ್ದರೆ ಈ ಗಡಿಯಾರ 'ಕಂಡೆಮ್' ಆಗುವುದು ಖಂಡಿತ!

ಮಾವನೂರು ಮಸಿಯಪ್ಪನವರು:- ಕೈಯಿಂದ ಕೆಲಸವಾಗದಿದ್ದರೂ ಮುಂದುವರಿದು ಮಾಡುವವರಿಗೆ ಬೆನ್ನುಮೂಳೆಯಾಗಿ ಇರುವ ದೊಡ್ಡ ಮನಸ್ಸಿನಿಂದಾಗಿ ನಮ್ಮೂರಿನ ಕಾಂಗ್ರೆಸ್ಸಿಗರಲ್ಲಿ ಇವರೂ ಒಬ್ಬ ದೊಡ್ಡವರೆನ್ನಿಸಿಕೊಂಡಿದ್ದಾರೆ. ಅನೇಕರು ಇವರ ಮೇಲೆ ಬ್ಲಾಕ್ ಮಾರ್ಕೆಟ್ ಅಪವಾದ ಕೊಡುತ್ತಿದ್ದಾರೆ. ಅದು ದಿಟವೋ, ಸಟೆಯೋ ಎಂಬುದರ ಚರ್ಚೆ ನನಗೆ ಬೇಕಿಲ್ಲ. ಒಂದು ಮಾತನ್ನು ಮಾತ್ರ ಧೈರ್ಯವಾಗಿ ಹೇಳಬಹುದು-ನೂರಿನ್ನೂರು ರೂಪಾಯಿ ಸಂಬಳದ ಕೆಲವು ನಿಮ್ಕ್‌ಹರಾಮ್ ನೋಕರರು ಮಾಡಿರುವಷ್ಟು ಅಪರಾಧವನ್ನು ಮಾವನೂರು ಮಸಿಯಪ್ಪನವರು ಮಾಡಿರಲಾರರು.

ಮೇ. ಟ. ಕೆಮ್ಮಣ್ಣನವರು:- ನಮ್ಮೂರಿನಲ್ಲಿ ಸಾರ್ವಜನಿಕವಾದ ಕಾಂಗ್ರೆಸ್ಸಿನ ಯಾವ ಸಭೆಗಳೇ ನಡೆಯಲಿ, ಯಾರ ಅಧ್ಯಕ್ಷತೆಯಲ್ಲಿ ಎಂಬುದನ್ನು ಕೇಳುವ ಆವಶ್ಯಕತೆಯೇ ಇಲ್ಲ. ಅಂದರೆ ನಮ್ಮ ಮೇ. ಟ. ಕೆಮ್ಮಣ್ಣನವರೇ ಮುಂದಾಗಿ ಹೋಗಿ ಆ ಸ್ಥಾನವನ್ನಾಕ್ರಮಿಸುತ್ತಾರೆಂದು ಭಾವಿಸಬೇಡಿ. ಇನ್ನೊಬ್ಬರಿಲ್ಲದ್ದಕ್ಕಾಗಿ ಇವರು ಅಧ್ಯಕ್ಷರಾಗುವುದು ಅಷ್ಟೆ! ಸಭೆಗಳಿಗಷ್ಟೇ ಅಲ್ಲ, ಕಾಂಗ್ರೆಸ್ಸಿಗೂ ಇವರೇ ಅಧ್ಯಕ್ಷರು. ನಗರಸಭೆಯ ಅಧ್ಯಕ್ಷರೂ ಆಗಿ ನೋಂದಾಡೆ ಹಜಮಲ್‌ರಾವ್ ಮತ್ತು ಕಂಪನಿಯ ಹೊಟ್ಟೆಯುರಿಗೆ ಇನ್ನೂ ಹೆಚ್ಚಿನ ಕಾರಣರಾದರು. ನಮ್ಮೂರಿಗೊಂದು ಮೇಟಿಯಿದ್ದ ಹಾಗೆ ಇವರು. ಬಡವರ ಮನೆಯ ಬಾಗಿಲಿಗೆ ಭೂಷಣ ಈ ಕೆಮ್ಮಣ್ಣು. ಕೆಂಪು ಇರುವಂತೆ ಜಗಟೂ ಬಹಳ ಈ ಕೆಮ್ಮಣ್ಣಿನದು. ಊರೆಲ್ಲ ಒಂದಾದರೂ ತನ್ನ ಹಟವನ್ನೇ ಸಾಧಿಸುವ ಸ್ವಭಾವ. ಮೇಟಿಯನರು ಈ ಹಟ ಕೊಡುವ ಮೊದಲು ಅದು ದಿಟವಾದುದೋ ಸಟೆಯಾದುದೋ ಎಂದು ತಾವೇ ತಾವಾಗಿ ವಿಚಾರಿಸುತ್ತಾರೆ. ತನ್ನ ಮನಸ್ಸಿಗೆ ನ್ಯಾಯವೆನ್ನಿಸಿಕೋ ಹಟ ಕೊಟ್ಟರೇ! ಒಮ್ಮೆ ಹಟಕ್ಕೆ ಬಿದ್ದರೆಂದರೆ ಬಿಡಿಸಲು ಯಾರಪ್ಪನಿಂದಲೂ ಸಾಧ್ಯವಿಲ್ಲ.

ನಾನ್‌ಜಿ ನೀರಪ್ಪನವರು:- ಕಾಂಗ್ರೆಸ್ ಪ್ರಮುಖರು. ಒಬ್ಬರಿಗೆ ಜೀ ಅನ್ನುವುದಿಲ್ಲ. ಇನ್ನೊಬ್ಬರ 'ಜೀ' ಬೇಕಿಲ್ಲ. ಸ್ವರ್ಗವೂ ಬೇಡ; ನರಕವೂ ಬೇಡ. ಚುನಾವಣೆಗೆ ನಿಲ್ಲು ಎಂದಾಗ ಒಲ್ಲೆನ್ನುವುದಿಲ್ಲ. ಸೋತಾಗ ಸುಮ್ಮನಿದ್ದುಬಿಡುತ್ತಾರೆ. ಧೈರ್ಯವಾಗಿ ಮುನ್ನುಗ್ಗಿದರೆ ಮುಖಂಡರಾಗುವ ಯೋಗ್ಯತೆಯಿದೆ.

ಎಡೆ ಇಷ್ಟರಾಯರು:- ಕಾಂಗ್ರೆಸ್ ಅಧಿವೇಶನದಂತಹ ದೊಡ್ಡ ದೊಡ್ಡ ಊಟದ ಪ್ರಸಂಗಗಳಲ್ಲಿ ಕೂಡಾ, ಬ್ರಾಹ್ಮಣರೇ ಅಡಿಗೆ ಮಾಡಿ, ಬ್ರಾಹ್ಮಣರೇ ಬಡಿಸಲು ಬರಬೇಕೆಂಬ ಕ್ಷುಲ್ಲಕ ಮನಸ್ಸು ಮನೆಮಾಡಿಕೊಂಡಿದೆಯಾಗಿ ಇದೊಂದು ಒಳ್ಳೆಯ ವ್ಯಕ್ತಿಯಾದೀತು ಎಂಬ ಆಸೆಯಿಲ್ಲ.

ಗಡಗಿಮಠದ ಗುಂಡಾಡಯ್ಯನವರು:- ಹೋ! ಇವರೂ ಒಬ್ಬ ಪ್ರಸಿದ್ಧ

ವ್ಯಕ್ತಿಗಳೇ! ಅದೋ ಕುದುರೆಗಾಲು ಹಾರಿಸುತ್ತ ಬರುತ್ತಿದ್ದಾರೆ ನೋಡಿ, ಅವರೇ ನಮ್ಮ ಗುಂಡಾಚಯ್ಯನವರು. ಯಾವ ಅಧಿಕಾರಿಗಳು ಬಂದರೂ ಗುಂಡಾಡಿಸುವ ಸ್ವಭಾವ. ಇವರ '[illegible]' ಪತ್ರಿಕೆಯೆಂದರೆ 'ಇದು ಸರಕಾರಿ [illegible]' ಯೆಂದು [illegible]

[illegible]

ಸ್ಮಾತ್—ಅಪ್ಪಿ ತಪ್ಪಿ—ಅದೃಷ್ಟವಶಾತ್ 'ಧರ್ಮನಿರಾಕಾರ' ಎಂಬ ಬಿರುದು ಇವರಿಗೆ ಬಂದರೂ ಬರಬಹುದು.

ಸಾಕು ಇನ್ನು ನಮ್ಮೂರಿನ ಪರಿಚಯ.

ಈ ದಿನ ರಾತ್ರಿ ಸೆಕೆಂಡ್ ಷೋ 'ವಸಂತ್ ಟಾಕೀಸ್'ನಲ್ಲೇ ನೋಡಿರಿ. [illegible] ಪ್ರಯುಕ್ತ [illegible]

[illegible] ನಮಸ್ಕಾರ!

([illegible])

'ಸ್ವತಂತ್ರ'ದ ಏಜಂಟರು

[illegible]

ಪ್ರೇಮವೋ? ಕಾಮವೋ?

'ಚದುರಂಗ'

ನಾನೂ ಅವನೂ ಸ್ನೇಹಿತರು. ಅವನು ಕೊಂಚ ಬಡಾಯಿ ಕೊಚ್ಚುವ ಸಂಪ್ರದಾಯಕ್ಕೆ ಸೇರಿದವನು. ನಾವು ಕಾಲೇಜಿನಲ್ಲಿ ಓದುತ್ತಿದ್ದಾಗ, ಎಲ್ಲ ಹುಡುಗಿಯರೂ ತನ್ನನ್ನೇ ಪ್ರೀತಿಸುವರೆಂದು ಅವನ ನಂಬಿಕೆ. ನಾವು 'ವಾಕ್' ಹೊರಟಾಗಲೆಲ್ಲಾ ಅದೇ ಸುದ್ದಿ! ವೆರಾಂಡದಲ್ಲಿ ಹೋಗುತ್ತಿದ್ದಾಗ ಕಮಲ ಕರೆಯುವ ನಗೆಯನ್ನು ತನ್ನ ಮೇಲೆ ಬೀರಿದಳು. ಕೆಮಿಸ್ಟ್ರಿ ಲೆಬಾರಟರಿಯಲ್ಲಿ 'ಪ್ರಾಕ್ಟಿಕಲ್' ಮಾಡುತ್ತಿದ್ದಾಗ, ಹುಡುಗರು ಹಂಬಲಿಸುತ್ತಿದ್ದ ಗಿರಿಜ, 'ಟೆಸ್ಟ ಟ್ಯೂಬ್' ತೆಗೆದುಕೊಳ್ಳುವ ನೆವದಲ್ಲಿ ನ್ನೈ ಮುಟ್ಟಿಕೊಂಡು ಹೋದಳು—ಇತ್ಯಾದಿ, ಇತ್ಯಾದಿ, ಹೇಳದಿದ್ದರೆ ಅವನಿಗೆ ತಿಂದ ಅನ್ನ ಜೀರ್ಣಿಸದು.

ಒಟ್ಟಿನಲ್ಲಿ, ಹುಡುಗಿಯರು ಎಂದರೆ ಅವನಿಗೆ ತುಂಬ ತಿರಸ್ಕಾರ. ಅವರೆಲ್ಲ, ಅವನು ತಿರುಗಿದಾಗ ಕಣ್ಣುಹಾಕುವ, ಕರೆದೆಡೆಗೆ ಓಡಿಬರುವ ಆಟದ ಸಾಮಗ್ರಿಗಳಂತೆ. ಅವನಿಗೆ ಅಕ್ಕ ತಂಗಿಯರಿರಲಿಲ್ಲ. ಅದೇ ಇರಬಹುದು-ಈ ಮನೋಭಾವಕ್ಕೆ ಕಾರಣ! ಆದರೆ ತನ್ನ ತಾಯಿಯನ್ನು ಕಂಡರೆ ಅವನಿಗೆ ತುಂಬಾ ಗೌರವ. ಅವನ ದೃಷ್ಟಿಯಲ್ಲಿ ಹೆಂಗಸು ಎಂದರೆ ಹಾಗಿರಬೇಕು. ಎಷ್ಟು ದೊಡ್ಡ ಗುಣ ಆಕೆಯದು! ಎಂತಹ ಮಾನದ ಜೀವನ! ಅದಿರಲಿ, ಆಕೆಯ ಸಂಗೀತವೊ? ವೀಣೆಯನ್ನು ಹಿಡಿದು ಆಕೆ ಕುಳಿತಳೆಂದರೆ ಬ್ರಹ್ಮನ ತೊಡೆಯ ಮೇಲೆ ಠೀವಿಯಿಂದ ಮಂಡಿಸಿರುವ ಶಾರದೆ ಬೆಚ್ಚಿಬೀಳಬೇಕು!

ನಾನು ಅವನ ತಾಯಿಯನ್ನು ನೋಡಿದುದು ಬೇಸಿಗೆಯ ರಜದಲ್ಲಿ. ಬೇಡ ಬೇಡವೆಂದರೂ ಅವನು ತನ್ನೂರಿಗೆ ಎಳೆದುಕೊಂಡುಹೋದ. ಬಟ್ಟೆಯನ್ನು ಬದಲಾಯಿಸಿ, ಊಟಕ್ಕೆ ಕುಳಿತಾಗ ಆಕೆಯನ್ನು ನೋಡಿದೆ. ಮಧ್ಯ ವಯಸ್ಸು ಮೀರಿದ್ದಂತೆ ತೋರಿತು. ಗಾಳಿಗೆ ಹಾರುತ್ತಿದ್ದ ಸೆರಗನ್ನು ಎಳೆದುಕೊಳ್ಳುವ ಆಕೆಯ ರೀತಿ, ತಾಯ್ತನದ ಹಿರಿಮೆಯನ್ನು ಎತ್ತಿತೋರುವಂತಿತ್ತು. ಅನ್ನವನ್ನು ಬಡಿಸುವಾಗ 'ಇನ್ನು ಕೊಂಚ ಇಡುತ್ತೇನೆ' ಎಂಬ ಆಕೆಯ ವಾತ್ಸಲ್ಯದ ಮಾತುಗಳು ನನ್ನ ತಾಯಿಯ ನೆನಪನ್ನು ತರುತ್ತಿದ್ದುವು. ಆಗ ನನ್ನಲ್ಲೇ ಅಂದುಕೊಂಡೆ.—ನನ್ನ ಸ್ನೇಹಿತ ಬಡಾಯಿಗಾರನೇನೋ ದಿಟ. ಆದರೆ ಅವನ ತಾಯಿಯ ವಿಷಯದಲ್ಲಿ ಮಾತ್ರ ಅವನು ಹೇಳುವುದೆಲ್ಲಾ ಸತ್ಯ!

ದಿನಕಳೆದಂತೆಲ್ಲಾ ಅವಳಲ್ಲಿ ಮೂಡಿದ ಪೂಜ್ಯ ಬುದ್ಧಿ, ನನ್ನ ಮನಸ್ಸನ್ನು ಅರಳಿಸುತ್ತಹೋಯಿತು. ಅದೇನು ನಯ! ಅದೇನು ನಡತೆ! ಅದೇನು ಗಾಂಭೀರ್ಯ! ನಿಜವಾಗಿಯೂ ತಾಯಿಯೆಂದರೆ ಹೀಗಿರಬೇಕು. ಅಲ್ಲದೆ ಸಂಸಾರ ನಡೆಸುವುದರಲ್ಲಿ ತೋರುತ್ತಿದ್ದ ಆಕೆಯ ಚಾತುರ್ಯ, ಕಲೆಯ ಮುದ್ರೆಯನ್ನು ಬೀರುತ್ತಿತ್ತು. ಒಂದು ಕಾಲದ ವೈಭವ ಹೋಗಿದ್ದರೂ ಬಡತನದಲ್ಲಿಯೇ ರಸವನ್ನು ಕಾಣುವ

ನಲವತ್ತೈದು ವರ್ಷಗಳ ಕಾಲ ಪ್ರೇಮವನ್ನು [illegible]

[illegible]

ಲಿನ ಬೇಗೆಯನ್ನು ಹಿಡಿದು, ಕೂಡಿಟ್ಟು ನನ್ನ ಮೇಲೆ ಸುರಿಯುತ್ತಿದ್ದುವು. ನಾನು ಹಾಗೆಯೇ ಕೈಯ ಮೇಲೆ ತಲೆಯಿಟ್ಟು, ಚಾಪೆಯ ಮೇಲೆ ಮಲಗಿದ್ದೆ. ಆಕೆ ಪಕ್ಕದಲ್ಲಿ ಕುಳಿತು 'ಶಾಕುಂತಲಾ' ನಾಟಕವನ್ನು ಓದಿ ಅರ್ಥ ಹೇಳುತ್ತಿದ್ದಳು. ಆ ಕಡೆಯಲ್ಲಿ ಆಕೆ ಅಷ್ಟು ಹತ್ತಿರ ಕುಳಿತಿದ್ದುದು ನನಗೇಕೋ ಹಿಡಿಸಲಿಲ್ಲ. ಅವಳ ದೇಹದ ಕಾವು ಕಾದ ಹೆಂಚಿಗಿಂತಲೂ ತೀಕ್ಷ್ಣವಾಗಿ ನನ್ನನ್ನು ಸುಡುತ್ತಿತ್ತು. ಅದರಿಂದಲೇ ಆಕೆ ಓದುತ್ತಿದ್ದುದು [illegible] ಭಾಗ [illegible] ಹುಟ್ಟಿಸಿತ್ತು.

[illegible]

ಮುಂಗುರುಳನ್ನು ನೇವರಿಸಿತು. ಚಕಿತನಾದೆ! ಅಲ್ಲಿನವರೆಗೆ ನನ್ನ ತಾಯಿಯಲ್ಲದೆ ಮತ್ತಾವ ಹೆಂಗಸೂ ಹಾಗೆ ನನ್ನನ್ನು ಮುಟ್ಟಿರಲಿಲ್ಲ. ಆದರೂ ನನ್ನ ಮನಸ್ಸಿನಲ್ಲಿ ಅವಳು ತಾಯಿಯ ಮಟ್ಟವನ್ನೇರಿದ್ದಳು. ಆದುದರಿಂದ ಕೊಂಚ ಅನುಮಾನವಾದರೂ, ತಪ್ಪೇನೂ ಕಾಣಲಿಲ್ಲ.

ಈಗ ಶಕುಂತಲಾ ದುಷ್ಯಂತರ ಪ್ರಣಯದ ವರ್ಣನಾಭಾಗ. ಅವಳ ಕಡೆಯೇ ನೋಡುತ್ತ, ಕೇಳುವಂತೆ ನಟಿಸುತ್ತಿದ್ದೆ. ಅವಳು ಓದುವಳು, ನನ್ನನ್ನು ನೋಡುವಳು, ಅರ್ಥ ಹೇಳುವಳು. ಆದರೆ ಈಗ ಮಾತ್ರ ಅವಳ ತಾಯ್ತನ ಅವಳ ದೇಹವನ್ನು ಬಿಟ್ಟು ಓಡಿಹೋಗಿತ್ತು. ಅದರ ಸ್ಥಳದಲ್ಲಿ ನೆರೆದ ಹೆಣ್ಣಿನ ಪ್ರಣಯ ಚೇಷ್ಟೆಗಳು ಮೂಡಿದ್ದವು. ಹೃದಯದೊಳಗಿನ ಆಳವಾದ ಚಿಲುಮೆಯೊಂದರಿಂದ ಬುಗ್ಗೆಬುಗ್ಗೆಯಾಗಿ ಬಂದ ನಗೆ, ಮುದಿಬಿದ್ದ ಆ ಕಣ್ಣುಗಳಿಗೆ ಒಂದು ವಿಲಕ್ಷಣ ಹೊಳಪನ್ನು ಕೊಟ್ಟಿತ್ತು. ನನ್ನನ್ನು ನೋಡುವ ಆಸೆಯ ನೋಟದಲ್ಲಿ ಕಾಮದ ಲೇಪವಿತ್ತು. ಆಗಲೇ ಮಾಸಲು ತಿರುಗಿದ್ದ ಅವಳ ತುಟಿಗಳು ರಕ್ತದ ಒತ್ತಡದಿಂದ ಕೆಂಪಾದವು. ಸ್ವಲ್ಪ, ಸಣ್ಣಗೆ ಅದುರುತ್ತಿದ್ದವು. ಅವಳ ಮಾತುಗಳಲ್ಲಿ ನಡುಕವಿತ್ತು, ಆಸೆಯಿತ್ತು, ಆಹ್ವಾನವಿತ್ತು. ಅವಳ ಕೈ ನನ್ನ ದೇಹವನ್ನು ತಡವರಿಸುತ್ತಿತ್ತು.

ಅವಾಕ್ಕಾದೆ. ನನ್ನ ಸ್ನೇಹಿತನ ತಾಯಿ! ವಯಸ್ಸಾಗಿದೆ. ಇದೇನು ಹೀಗಾಡುತ್ತಾಳೆ? ಅವಳೇಕೆ ನನ್ನೆಡೆಗೆ ಒತ್ತಿ ಒತ್ತಿ ಬರುತ್ತಿದ್ದಾಳೆ? ಅವಳ ಮೈಯೇಕೆ ನನ್ನ ಮೈಯ ಸೋಂಕಿಗೆ ಹಂಬಲಿಸುತ್ತಿದೆ? ಬೆವರೇಕೆ ಹಾಗೆ ಸುರಿಯುತ್ತಿದೆ? ಕಾರಣ ಹೊರಗಿನದೋ? ಒಳಗಿನದೊ?

ಅವಳು ಪೂರಾ ಸೋತಿದ್ದಳು. ಬಯಕೆ, ಬಾಯ್ ಬಾಯ್ ಬಿಡುತ್ತಿತ್ತು. ಅವಳ ಮನಸ್ಸಿನ ತಡೆಗಳೆಲ್ಲಾ ಆಸೆಯ ಉರಿಯಲ್ಲಿ ಸುಟ್ಟು ಬೂದಿಯಾಗಿದ್ದವು. ಆಗ ಅವಳು ಮನುಷ್ಯಳಾಗಿರಲಿಲ್ಲ—ಕಾಮದ ಕೈಗೊಂಬೆಯಾಗಿದ್ದಳು. ನಾನು ನಿರಾಕರಿಸಿದಂತೆಲ್ಲಾ ಅವಳ ಹುಚ್ಚು, ನೂರ್ಮಡಿಸುತ್ತಿತ್ತು. ನನ್ನನ್ನು ಅಪ್ಪುವ ಭರದಲ್ಲಿ ಸೆರಗು ಜಾರಿದುದೂ, ನೆರಿಗೆ ಸಡಿಲಿದುದೂ, ಅವಳಿಗೆ ಕಾಣದಾದುವು. ಆದರೆ ನಾನು ಅವಳ ಕೈ ಕೊಡಹಿ, "ಅಮ್ಮಾ, ಇದೇನೀ ಹುಚ್ಚು? ನಿಮ್ಮಂಥವರೇ ಹೀಗಾಡಿದರೆ ಉಳಿದವರ ಗತಿಯೇನು?" ಎಂದು ಹುಬ್ಬು ಗಂಟಿಕ್ಕಿದೆ. ಆಕೆಯ ಮೈ ನಡುಗಿತು. ಕಣ್ಣು ನೀರೂರಿ ಒದ್ದೆಯಾಯಿತು. ತಾಳಲಾರದೆ ತಲೆಯನ್ನು ತಗ್ಗಿಸಿದಳು—ನಾಚಿಕೆಯಿಂದಲ್ಲ; ಸೋಲಾಯಿತೆಂಬ ದುಃಖದಿಂದ.

ನಾನು ಅವಳನ್ನೇ ನೋಡುತ್ತಿದ್ದೆ. ಒಂದೆರಡು ಹನಿ ಕಣ್ಣೀರು ಅವಳೆಷ್ಟು ತಡೆಯಲು ಯತ್ನಿಸಿದರೂ ನಿಲ್ಲದೆ ಹರಿದು ಕೆಂಪು ರೇಷ್ಮೆಯ ರವಿಕೆಯನ್ನು ತೇವ ಮಾಡಿತು. ಅವಳ ಆಗಿನ ಸ್ಥಿತಿ ಯಾರಾದರೂ ಅಯ್ಯೋ, ಎನ್ನುವಸ್ಥಿತಿ. ಕಿಟಕಿಯ ಕಡೆ ನೋಡಿದೆ. ಮಳೆ ಹೊಯ್ಯುತ್ತಿತ್ತು. ಬಹಳ ಹೊತ್ತಿನಿಂದ ಬೀಳುತ್ತ

ಇದ್ದಿರಬಹುದು. ಹೊರಗೆ ಮಳೆ, ಒಳಗೆ ಮಳೆ.....ಒಂದು, ಮೋಡಗಳು ಜನಕೆಗಾಗಿ ಸುರಿಸುವ ನೀರು. ಇನ್ನೊಂದು ಆಸೆಯಮರ ಕಡಿದು ಉದುರುವ ಹನಿ— ಬಾಗಿದ ಕತ್ತು ಮೆಲ್ಲ ಮೆಲ್ಲನೆ ಮೇಲಾಯಿತು. ಹನಿಗಣ್ಣಿನಲ್ಲೇ ನನ್ನನ್ನು ನೋಡಿದಳು. ಆ ನೋಟ ನನ್ನನ್ನು ದಹಿಸುವ ನೋಟ! [illegible] ಆವರಿಸುವ ನೋಟ!!

[illegible]

ಲೋಡಿ ಬೆಳಕಾಗಿದೆ.'' ಮಾತುಗಳೂ [illegible]ಳುತ್ತಿದ್ದವು.

ಮಾತಿಲ್ಲದೆ ನನ್ನ ಹೃದಯವೂ ಅಳುತ್ತಿತ್ತು. ನಲವತ್ತೈದು ವರುಷಗಳ ದೀರ್ಘಕಾಲ ಪಾತಿವ್ರತ್ಯದಲ್ಲಿ ಬೆಳೆದು ಬಂದ ಈ ಹೆಂಗಸು ಗಳಿಗೆಯೊಂದರಲ್ಲಿ [illegible] ಮಾರುಹೋದುದನ್ನು ಕಂಡು ನನಗೆ [illegible]. ಆದರೆ ಈ ಹೆಂಗಸು ಅಷ್ಟು ಕಾಲವೂ ರವೆಯಷ್ಟಾದರೂ ಪ್ರೇಮವನ್ನು ಕಂಡರಿಯೆನೆಂದು ಹೇಳುತ್ತಾಳೆ. ಹಾಗಿದ್ದಲ್ಲಿ ಅಷ್ಟು ದಿನ ಅವಳು ಗಂಡನಲ್ಲಿ ಬಾಳಿದುದು [illegible]

[illegible]

ಕಾಂಗ್ರೆಸ್ಸಿನ ಅಡಿಗಲ್ಲು ಸಡಿಲಿಸುತ್ತಿರುವ

★ ಈ ಸ್ವಾರ್ಥಿಗಳನ್ನೋಡಿಸಿ ! ★

ಇಂದಿನ ಕಾಶ್ಮೀರ

ಅಖಿಲ ಭಾರತದ ರಾಜಕೀಯದಲ್ಲಿಯೂ ಇದೇ ಕಷಾಯವನ್ನು ನಾವು ಆಗಾಗ ನೋಡುತ್ತಿದ್ದೇವೆ. ಕಾಶ್ಮೀರದಲ್ಲಿ ಪ್ರಜೆಗಳು ಜವಾಬ್ದಾರೀ ಸರಕಾರಕ್ಕಾಗಿ ಹೋರಾಟವೆಬ್ಬಿಸಿ ಬಹುಕಾಲವಾಯಿತು. ಎಲ್ಲಾ ಆಶ್ರಿತ ಸಂಸ್ಥಾನಗಳಂತೆ ಕಾಶ್ಮೀರದಲ್ಲೂ ಆಡಳಿತದ ದಬ್ಬಾಳಿಕೆ ನಿರಂತರ ನಡೆದೇ ಇತ್ತು. ಅದೆಲ್ಲವನ್ನೂ ವಿರೋಧಿಸಿ ಅಲ್ಲಿನ ಜನತೆಯು ತಮ್ಮ ನಾಗರಿಕ ಹಕ್ಕು,ಬಾಧ್ಯತೆಗಾಗಿ ಹೋರಾಟ ಹೂಡಿದಾಗ ಅದನ್ನು ಹಿಂದೂರಾಜನೆದುರು ಮುಸ್ಲಿಂ ಪ್ರಜೆಗಳು ದಂಗೆ ಎಬ್ಬಿಸುವುದೆಂದು ಕೆಲಮಂದಿ ಸ್ವಾರ್ಥಿಗಳು ಬಹುಕಾಲ ಬಣ್ಣ ಹಚ್ಚಿದರು.

ಈ ತೆರದಲ್ಲಿ ಬಣ್ಣ ಹಚ್ಚಿದ್ದುದರ ಫಲವಾಗಿ ಪ್ರಜೆಗಳು ಮತ್ತಷ್ಟು ಉಗ್ರ ದಂಡನೆಗೆ ಗುರಿಯಾಗಬೇಕಾಯಿತೇನೋ ನಿಜ. ಆದರೆ ತೇದ ಶ್ರೀಚಂದನದ ಕಂಪು ಗಮಗಮಿಸುವಂತೆ— ಕಾದ ಬಂಗಾರದ ಬಣ್ಣ ಹೆಚ್ಚುವಂತೆ – ಕಾಶ್ಮೀರದ ಪ್ರಭುತ್ವದ ದಬ್ಬಾಳಿಕೆ ಜೋರಾಗಿ ನಡೆಯುತ್ತಿದ್ದಂತೆಯೇ ಅಲ್ಲಿನ ಪ್ರಜೆಗಳ ಹೋರಾಟ ಶೇಕ್ ಅಬ್ದುಲ್ಲರಂತಹ ಧುರೀಣರ ಮುಂದಾಳುತನದಲ್ಲಿ ಪ್ರಬಲವಾಗುತ್ತಾ ಹೋಯಿತು. ಕೊನೆಗೆ ಅಖಿಲ ಭಾರತವೇ ಬೆರಗಾಗುವಂತೆ, ಪ್ರಜೆಗಳ ಸ್ವಾತಂತ್ರ್ಯ ಪ್ರೇಮವನ್ನಪ್ಪಳಿಸಲು ಕಾಶ್ಮೀರದ ಆಡಳಿತದವರು ಮಾಡುತ್ತಿರುವ ಉಗ್ರೋಪಾಯಗಳನ್ನೆದುರಿಸುವ ಸಲುವಾಗಿ–ಭಾರತಕ್ಕೆ ಸ್ವಾತಂತ್ರ್ಯದಾನದ ಮಾತುಕತೆ ನಡೆಯುತ್ತಿದ್ದರೂ-ಸ್ವತಃ ನೆಹರುಗಳೇ ಗುಂಡಿನೆದುರು ಎದೆಯೊಡ್ಡಲೂ ಸಿದ್ಧರಾಗಿ ಪ್ರಜೆಗಳ ಬೆಂಬಲ ನಿಲ್ಲಲು ನಡೆದರು ! ರಾಮದುರ್ಗದ ಸಂದರ್ಭದಲ್ಲಿ ಕರ್ನಾಟಕದ ಕೆಲಮಂದಿ ಮುಂದಾಳುಗಳು ಮಾಡಿದಂತೆ ಈ ಸಂದರ್ಭದಲ್ಲಿ ನೆಹರುಗಳು ಆತ್ಮವಂಚನೆ ಮಾಡಲಿಲ್ಲ. ಇದರಿಂದಲೇ ಅವರ ಉಜ್ವಲ ಕೀರ್ತಿಯು ನೂರ್ಮಡಿ ಉಜ್ವಲವಾಯಿತು. ಕಾಂಗ್ರೆಸ್ಸು ಸಂಸ್ಥೆಯ ಘನಸ್ತಿಕೆಯು ಸಾವಿರ ಪಾಲು ಹೆಚ್ಚಿತು. ಕಾಶ್ಮೀರದ ವಿಚಾರದಲ್ಲಿ ಹಿಂದೆ ಸಡಿಲಾಗಿದ್ದ ಕಾಂಗ್ರೆಸ್ಸಿನ ತಳಹದಿಯನ್ನು ಹೀಗೆ ನೆಹರು ಪುನಹ ಭದ್ರಗೊಳಿಸಿದರು.

ತಮಿಳುನಾಡಿನ ಹೊಲಸು

ಅತ್ತ ತಮಿಳುನಾಡಿನಲ್ಲೂ ಅದೇ ಹೊಲಸು ಎದ್ದಿದೆ. ೧೯೪೦ರ ಸಾಲಿನಲ್ಲಿ ರಾಜಾಜಿ ವಿಪರೀತ ಬುದ್ಧಿಶಾಲಿಯಾಗಿ,

ಎನ್ನುತ್ತಾರೆ :

ಶ್ರೀ ಕಯ್ಯಾರ ಕಿಞ್ಞಣ್ಣ ರೈ

ಪೆರಡಾಲ

ಕಾಂಗ್ರೆಸ್ ಸಂಸ್ಥೆಯಲ್ಲಿ ಪ್ರವೇಶಿಸಿ ಅದನ್ನು ಹಾಳುಮಾಡುತ್ತಿರುವ [illegible]

[illegible]

ಮೂರು ಗಾಂಧೀಜಿಯವರಲ್ಲಿಗೂ ಹೋಯಿತು. ಗಾಂಧೀಜಿ ಇದನ್ನು 'ಕ್ಲೀರ್' ಎಂದು ಕರೆದರು. ಹಾಗೆ ಹೇಳಿ ತಮಿಳುನಾಡಿನ ರಾಜಕೀಯದಲ್ಲಿ ಇನ್ನಷ್ಟು ಕೆಸರು ಚೆಲ್ಲಿದರು. ಗಾಂಧೀಜಿ ರಾಜಾಜಿಗೆ ಎಂತಹ ಶಿಫಾರಸುಪತ್ರ ಕೊಟ್ಟರೂ ಆ ಸಲ ಪ್ರಾಂತದ ಪ್ರಧಾನಪಟ್ಟವು ಅವರಿಗೆ ಸಿಗದಿರುವುದು ಅವರ ಮೇಲೆ ಜನರಿಗಿರುವ ಅವಿಶ್ವಾಸವನ್ನು ತೋರಿಸಲಿಲ್ಲವೆ? ಹೀಗೆ ಶುದ್ಧವಾದ ರಾಜಕೀಯದಲ್ಲಿ ಅಶುದ್ಧವಾದ ಜಾತೀಯತೆಯ [illegible]

[illegible]

ಅಲ್ಲಿ ಪ್ರಭುತ್ವ ನಡೆಸುತ್ತಿರುವಾಗ ಈ ಅನ್ಯಾಯವನ್ನು ನಡೆಯಬಿಡುವುದರಲ್ಲಿ ನ್ಯಾಯವುಂಟೆ? ಈ ಪ್ರಶ್ನೆ ರಾಷ್ಟ್ರದ ಹಿತದ ಪ್ರಶ್ನೆ; ರಾಷ್ಟ್ರ ಪ್ರೇಮಿಯಾದ ಪ್ರತಿಯೊಬ್ಬ ಭಾರತೀಯನ ಮುಂದಿರುವ ಜೀವಂತ ಪ್ರಶ್ನೆ.

೧೯೪೨ರ ಕಾಂಗ್ರೆಸ್ಸಿನ ಹೋರಾಟವನ್ನು ಜಪಾನು ಪರವೆಂದವರನ್ನು, ಕಾಂಗ್ರೆಸ್ಸಿನವರು ಫೆಸಿಸ್ಟ್ ಪರವೆಂದವರನ್ನು ಕಾಂಗ್ರೆಸ್ಸು ಮುಖಂಡರನ್ನು ಗುಂಡಿಕ್ಕಿ ಕೊಲ್ಲಬೇಕೆಂದವರನ್ನು, ಮರೆಯಲು ಸಾಧ್ಯವಿಲ್ಲ. ಹಾಗೆಂದರೆ ಅವರ ಕುರಿತು ಪ್ರತೀಕಾರದ ಸೇಡು ತೀರಿಸಬೇಕೆಂದು ವಾದವಲ್ಲ. ಆದರೆ ಅಂತಹವರಿಗೆ ಇಂದೂ ಕಾಂಗ್ರೆಸ್ಸಿನೊಳಗೆ ಪ್ರವೇಶಕೊಡುವುದು–ಮನ್ನಣೆಯ ಪಟ್ಟಕಟ್ಟುವುದು–ನ್ಯಾಯವಲ್ಲ; ದೇಶದ ಏಳಿಗೆಯ ದೃಷ್ಟಿಯಿಂದ ನ್ಯಾಯವಲ್ಲ–ಕಾಂಗ್ರೆಸ್ಸಿನೊಳ ಬಂದೂ ಅವರು ಇನ್ನು ಮುಂದಾದರೂ ದೇಶಹಿತ ಮಾಡುವರೆ ಅಥವಾ ರಾಷ್ಟ್ರದ್ರೋಹವನ್ನೇ ಮುಂದುವರಿಸುವರೆ ಎಂಬುದು ವಿಚಾರಣೀಯ ವಿಷಯ. ಅಂತಹವರಿಂದ ಕಾಂಗ್ರೆಸ್ಸು ಉಳಿದೀತೇ ಎಂದೂ ವಿಚಾರಿಸಬೇಕಾಗಿದೆ. ಈ ವಿಚಾರಗಳನ್ನು ರಾಷ್ಟ್ರಪ್ರೇಮಿಗಳ ಗಂಭೀರವಾಗಿ ಯೋಚಿಸಬೇಕು.

ಮಹಾತ್ಮರ ಹಿತಶತ್ರುಗಳು

ಗಾಂಧೀಜಿ ಭಾರತದ ಮಹಾಮುಖಂಡರು. ಭಾರತಕ್ಕೆ ಅವರಿಂದ ಆದ ಉಪಕಾರ ಮರೆಯಲು ಸಾಧ್ಯವಿಲ್ಲ. ಭಾರತದಲ್ಲಿ ಹಾಗೂ ಭಾರತೀಯರಲ್ಲಿ ಶತಮಾನಗಳಿಂದ ಅಡಗಿ ಅಪ್ಪಳಿಸಿಹೋಗಿದ್ದ ಸ್ವಾತಂತ್ರ್ಯ ಪ್ರೇಮವು ಅವರ ಮಹಾ ಮುಂದಾಳುತನದಲ್ಲಿ ಹೇಗೆ ನೆರೆಯಂತೆ ಉಕ್ಕೇರಿ ಬಂದು ಎಂತಹ ಅದ್ಭುತ ಪ್ರಗತಿಯನ್ನು ತಂದಿತು ಎಂಬುದಕ್ಕೆ ಕಾಲು ಶತಮಾನಗಳ ಈ ಹೋರಾಟಗಳಲ್ಲಿ ಭಾರತೀಯರಿಗೆ ಒದಗಿದ ಯಶಸ್ಸುಗಳೇ ಸಾಕ್ಷಿಯಾಗಿವೆ. ಗಾಂಧೀಜಿಯವರ ಒಂದು ಮಾತಾದರೂ ಭಾರತೀಯರಲ್ಲಿ ಊಹಿಸಲು ಸಾಧ್ಯವಿಲ್ಲದಷ್ಟು ಪರಿಣಾಮಕಾರಿಯಾಗಿದೆ. "ಪಟ್ಟಾಭಿಯವರ ಸೋಲು ನನ್ನ ಸೋಲು" ಎಂದು ಗಾಂಧೀಜಿ ಹೇಳಿ ಸುಭಾಷರನ್ನು ರಾಷ್ಟ್ರಪತಿಯ ಗದ್ದುಗೆಯಿಂದ ಇಳಿಸಿದ್ದು ಕೊನೆಗೆ ಹತಾಶರಾದ ಅವರು ರಾಷ್ಟ್ರ ಬಿಟ್ಟು ಓಡಿಹೋಗುವಂತೆ ಆದದ್ದು ಇದೆಲ್ಲವೂ ಜನತೆಯ ಮೇಲೆ ಮಹಾತ್ಮರ ಮಾತಿನ ಪ್ರಭಾವವನ್ನು ಜಗತ್ತಿಗೆ ತಿಳಿಸಿವೆ.

ಗಾಂಧಿಜಿಯವರಿಗೆ ಇರುವ ಈ ಮಹಾ ಪ್ರಭಾವವನ್ನು ಅವರ ಆಪ್ತರೆಂದು ನಟಿಸಿಕೊಳ್ಳುವ ಕೆಲವರು ದುರುಪಯೋಗಪಡಿಸಿಕೊಳ್ಳುತಿದ್ದಾರೆ. ಪ್ರತಿಯೊಂದು ಚಿಲ್ಲರೆ ವಿಷಯಗಳಿಗೂ ಗಾಂಧೀಜಿಯವರಲ್ಲಿಗೆ ದೂರು ಕೊಂಡುಹೋಗುತ್ತಾರೆ. ಅವರ ಅಭಿಪ್ರಾಯ ಪಡೆಕೊಳ್ಳುತ್ತಾರೆ. ಅದನ್ನು ಬಹಿರಂಗಪಡಿಸುತ್ತಾರೆ. ಹೀಗೆಲ್ಲಾ ಮಾಡಿ ತಮ್ಮ ಕುತಂತ್ರಗಳು, ತಮ್ಮ ದೌರ್ಬಲ್ಯಗಳು ಗಾಂಧಿಜಿಯವರ ಮಾತಿನಿಂದ ಮರೆಯಾಗಿ ಮುಂದೆಯೂ ತಮ್ಮ ಸ್ವಾರ್ಥಸಾಧನೆಯು ನಡೆಯುವಂತೆ ಹಂಚಿಕೆ ಹೂಡುತಿದ್ದಾರೆ. ಹಾಗೆಲ್ಲಾ ಮಾಡುವುದರಿಂದ ಅವರು ದೇಶಕ್ಕೆ

ಹಾಗೂ ಗಾಂಧಿಜಿಯವರಿಗೆ ಅಹಿತವನ್ನೇ ಮಾಡುತ್ತಾ ಇದ್ದಾರೆ. ತಾವು ಮಾಡಿದ ಕೊಲೆಯನ್ನು ಗಾಂಧಿಜಿಯವರ ಮುಖಕ್ಕೆ ಚೆಲ್ಲುತ್ತಿದ್ದಾರೆ. ಹೀಗೆಲ್ಲಾ ಅನ್ಯಾಯವಾದರೂ ಚಿಂತೆಯಿಲ್ಲ. ತಮ್ಮ ಬೇಳೆ ಬೆಂದರೆ ಸಾಕೆಂಬುವೊಂದೇ ಈ ಸಂಗದ ಹಠವಾಗಿದೆ. ಇಂತಹ ಸಂಗದವರೊಂದು ಮುಖವಾಡವನ್ನು ಬಳಸಿಕೊಂಡು ದೇಶಕ್ಕೆ ದ್ರೋಹ ಬಗೆಯುತ್ತಿರುವ ವಿಚಾರವನ್ನು ಕಾಂಗ್ರೆಸಿಗರು, ದೇಶ ಪ್ರೇಮಿಗಳು ವಿಶೇಷವಾಗಿ ಜನಾಂಗವು ಚೆನ್ನಾಗಿ ತಿಳಿದುಕೊಳ್ಳಬೇಕಾಗಿದೆ. ತಿಳಿದು ಎಚ್ಚರವಾಗಿರಬೇಕಾಗಿದೆ.

ಹುಳುಕು ಹೊರಬಿದ್ದಿದೆ!

[illegible]

ಮಾಡಿದವರು ಎಂಬ ಬಗ್ಗೆ ಪ್ರಮಾಣವನ್ನು ತಯಾರಿಸಿದ್ದಾರೆ. ಆ ಪ್ರಮಾಣಗಳ ಬಲದಿಂದ ಇಂದು ಅಸೆಂಬ್ಲಿ ಸದಸ್ಯತ್ವಕ್ಕೂ ಮಂತ್ರಿಮಂಡಳಕ್ಕೂ ಕಾಂಗ್ರೆಸ್ಸ್ ವರ್ಕಿಂಗ್ ಕಮಿಟಿಗೂ ಘಟನಾ ಸಮಿತಿಗೂ ಹೋಗಿ ಮಂಡಿತರಾಗಿದ್ದಾರೆ. ಹೀಗೆ ಅಖಿಲ ಕರ್ನಾಟಕದಲ್ಲಿ, ಅಖಿಲ ಭಾರತದಲ್ಲಿ ತಲೆಮರಸಿಕೊಂಡು ಆಂದೋಳನ ನಡೆಸಿದ ಪ್ರಮಾಣಪತ್ರ ತಯಾರಿಸಿದ ಈ ಜನರು, ತಾವು ಹುಟ್ಟಿದ ಊರಲ್ಲಿ ತಮ್ಮ ಹಳ್ಳಿಯಲ್ಲಿ ಎಷ್ಟರಮಟ್ಟಿಗೆ ಸತ್ಯಾಗ್ರಹ ನಡೆಯುವಂತೆ ಮಾಡಿದ್ದಾರೆಂಬುದನ್ನು ಅಂತಹ ಹಳ್ಳಿಗಳಿಂದ ತಿಳಿದರೆ ಅವರ ನಿಜವಾದ ಹುಳುಕು ಹೊರಬಿದ್ದೀತು. ಇಂದು ಮಂತ್ರಿಮಂಡಳವನ್ನೇ ವರ್ಕಿಂಗ್ ಕಮಿಟಿಯನ್ನೇ ಸೇರಿದ ಇಂತಹ ಜನರು [illegible]

[illegible]

ಶೂಲಕ್ಕೇರಿಸಿಕೊಂಡವರ ಜತೆಯಲ್ಲಿ !

ಸೆಂಟ್ರಲ್ ಜೈಲಿನಲ್ಲಿನ ಆ ಭೀಕರ ದಿನಗಳ ಕಥೆ

ಶ್ರೀ ಆರ್. ಎಸ್. ಆರಾಧ್ಯ. ತುಮಕೂರು

ಈಸೂರಿನ ಗಲಭೆಯ ನಿಮಿತ್ತ ಐವರು ವೀರರು ಶೂಲಕ್ಕೇರಿಸಲ್ಪಡುತ್ತಿದ್ದಾಗ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ರಾಜಕೀಯ ಕೈದಿಗಳಾಗಿದ್ದ ಶ್ರೀ. ಆರಾಧ್ಯರು ಬರೆದಿಟ್ಟ ದಿನಚರಿಯಿದು.

೩-೩-೪೩

ಗಲ್ಲಿಗೇರಿಸಬೇಕಾದರೆ ಸೂರ್ಯೋದಯಕ್ಕೆ ಮುಂಚೆ ಏರಿಸಬೇಕು ಎಂಬುದಾಗಿ ಕಾನೂನು ಇದೆ. ಸಾಮಾನ್ಯವಾಗಿ ೮ ಗಂಟೆಗೆ ಸರಿಯಾಗಿ ಹಾಕುತ್ತಾರೆ. ಹಾಕುವಾಗ್ಗೆ ಸಿಟಿ ಮ್ಯಾಜಿಸ್ಟ್ರೇಟ್, ಡಾಕ್ಟರ್, ಜೈಲ್ ಸೂಪರಿಂಟೆಂಡೆಂಟ್, ಜೈಲರ್, ಚೀಫ್ ವಾರ್ಡನ್ ಮತ್ತು ೨೦-೩೦ ಜನ ಬಂದೂಕದ ಸಿಪಾಯಿಗಳು, ಫಾಶಿಹಾಕುವ ಚಂಡಾಲನನ್ನು ಹೊರತಾಗಿ ಮತ್ತಿನ್ನಾರನ್ನೂ ಆ ಸ್ಥಳಕ್ಕೆ ಬಿಡುವುದಿಲ್ಲ. ಉಳಿದ ಎಲ್ಲಾ ಖೈದಿಗಳನ್ನು ಅವರವರ ಕೊಠಡಿಯಿಂದ ಹೊರಕ್ಕೇ ಬಿಟ್ಟಿರುವುದಿಲ್ಲ. ಎಲ್ಲರನ್ನು ಬೀಗ ಹಾಕಿಯೇ ಕಾವಲು ಇರುತ್ತಾರೆ.

ಫಾಶಿಗೆ ಹಾಕಿದೊಡನೆ ಅಧಿಕಾರಿಗಳೆಲ್ಲರೂ ಅಲ್ಲಿಂದ ಹೊರಟು ಬರುತ್ತಾರೆ. ಅರ್ಧ ಗಂಟೆಯ ತರುವಾಯ ಡಾಕ್ಟರು ಮತ್ತು ಜೈಲ್ ಅಧಿಕಾರಿಗಳೊಬ್ಬರು ಮತ್ತೆ ಅಲ್ಲಿಗೆ ಹೋಗಿ ಆ ಹೆಣದ ಪರೀಕ್ಷೆ ಮಾಡಿ ಜೀವ ಹೋಗಿದೆ ಎಂದು ರಿಕಾರ್ಡುಮಾಡಿ ಬರುತ್ತಾರೆ. ಇದು ಫಾಶಿ ಹಾಕುವ ಪದ್ಧತಿ.

ಫಾಶಿ ಶಿಕ್ಷೆಗೆ ಗುರಿಯಾದ ಇವರು ತಮ್ಮ "ನೆಂಟರಿಷ್ಟರಿಗೆಲ್ಲಾ ಪತ್ರಗಳನ್ನು ಬರೆದಿದ್ದರು. 'ದೇವರು ತಮ್ಮನ್ನು ಇನ್ನು ಹಲವು ದಿನಗಳಲ್ಲೇ ಅಗಲಿಸಿ ಬಿಡುವನಾದುದರಿಂದ, ಮತ್ತು ಸರ್ಕಾರವು ತಮ್ಮನ್ನು ಗಲ್ಲಿಗೇರಿಸಲು ನಿರ್ಧರಿಸಿರುವುದರಿಂದ' ಕೊನೆಯಸಾರಿ ಬಂದು ಭೇಟಿ ಮಾಡಿಕೊಂಡು ಹೋಗಬೇಕೆಂದು" ಪತ್ರಗಳನ್ನು ನಿನ್ನೆಯೆ ಬರೆದಿದ್ದಾರೆಂದು ಗೊತ್ತಾಯ್ತು. ಈ ದಿನ ನೇಣುಹಾಕುವ ಹಗ್ಗಗಳ ಪರೀಕ್ಷೆ ನಡೆಯಿಸಲ್ಪಟ್ಟಿತು. ಕಮ್ಮಾರ, ಮತ್ತು ಬಡಿಗೆಯವರು ಶೂಲದ ಬಳಿ ಹೋಗಿ ಕೊಂಚ ರಿಪೇರಿ ಮುಂತಾದವನ್ನು ನಡೆಯಿಸಿ ಸರಿಪಡಿಸಿ ಬಂದರು.

೪-೩-೪೩

ಫಾಶಿಗೆ ಗುರಿಯಾಗಿದ್ದವರು ಗುರಪ್ಪ, ಮಲ್ಲಪ್ಪ, ಹಾಲಪ್ಪ, ನಾರಾಯಣಾಚಾರಿ, ಮತ್ತು ಶಂಕರಪ್ಪ. ಇವರ ಪೈಕಿ ಮೂರು ಜನ ವಿವಾಹಿತರು. ಇಬ್ಬರು ಅವಿವಾಹಿತರು. ನಾರಾಯಣಾಚಾರಿಯು ಹೊರತಾಗಿ ಇನ್ನುಳಿದ ನಾಲ್ವರೂ ತರುಣರು. ಮೂವತ್ತು ವರ್ಷಗಳನ್ನು ಸಹ ಮೀರಿರಲಿಲ್ಲ. [illegible]

[illegible] ಆತ್ಮಗಳು ರಾಷ್ಟ್ರೋದ್ಧಾರಕ್ಕಾಗಿ ವಿನಾಸಲಾಗಿವೆ' ಎಂದು ಅವರು ಹೇಳುತ್ತಿದ್ದರು. ಅವರ ಪೈಕಿ ಇಬ್ಬರು ಆ ಹೊಡೆದಾಟದ ಗುಂಪಿನಲ್ಲಿಸಹ ಇರಲಿಲ್ಲವೆಂದೂ ಅಂದಿನ ದಿನ ಅವರು ಆ ಗಲಾಟೆಯ ಸ್ಥಳಕ್ಕೇ ಬಂದಿರಲಿಲ್ಲವೆಂದೂ ಅವರು ಆಗಾಗ್ಗೆ ಮಾತನಾಡಿಕೊಳ್ಳುತ್ತಿದ್ದರಂತೆ. "ಇವರುಗಳು ಅಲ್ಲಿಗೆ ಬಂದಿರಲೇ ಇಲ್ಲ. ಆ ದೃಶ್ಯವನ್ನು ಕಂಡವರೇ ಅಲ್ಲ ಆದರೂ ಕ್ರೂರ ಸರ್ಕಾರದ ಕಣ್ಣಿಗೆ ಬಿದ್ದು ಶೂಲಕ್ಕೇರಿಸಲ್ಪಡುತ್ತಿದ್ದಾರೆ" ಎಂದು ಅವರು [illegible] ಹೇಳುತ್ತಿದ್ದ ಮಾತುಗಳನ್ನು ಕೇಳಿದರೆ ಎಂಥವರ ಕಲ್ಲೆದೆಯೂ [illegible]

[illegible]

ಇದನ್ನು ದೂರದಲ್ಲಿ ನಿಂತು ಅಸ್ಪಷ್ಟವಾಗಿ ಕೇಳಿಸಿಕೊಂಡು ನಮ್ಮ ಮನೋವೇದನೆಯನ್ನು ಎದೆಯಲ್ಲಿ ಅಡಗಿಸಿಕೊಂಡು 'ದೇವರು ಕಾಪಾಡುತ್ತಾನೆ' ಎಂದು ಹೇಳುತ್ತಿದ್ದೆವು.

೫-೩-೧೯೪೩ ಶುಕ್ರವಾರ

ಶೂಲಕ್ಕೇರಿಸಿದವರ ಶವವನ್ನು ಅವರ ಬಂಧುಗ್ಗಳು ಬಂದು ಅರ್ಜಿ ಮೂಲಕ ಕೇಳಿಕೊಂಡರೆ ಕೊಡುವುದು ಅಭ್ಯಾಸ. ಈ ಐದು ಜನರ ಮೃತದೇಹವನ್ನು ತೆಗೆದುಕೊಂಡುಹೋಗಲು ಯಾರೂ ಇದುವರೆವಿಗೆ ಅರ್ಜಿ ಹಾಕಿರಲಿಲ್ಲ. ಇದೇನಿದು ಇವರ ಮೃತದೇಹವನ್ನು ತೆಗೆದುಕೊಂಡು ಹೋಗಲು ಹೊರಗಿನವರಾರು ಬರಲಿಲ್ಲವಲ್ಲ ಎಂದು ಮನಸ್ಸು ಕಾತರಿಸುತಿತ್ತು.

ಯಾರನ್ನೇ ಆಗಲಿ ಶೂಲಕ್ಕೇರಿಸಬೇಕಾದರೆ ಅಂಥವನನ್ನು ಜೈಲಿನವರು ಬಹಳ ಎಚ್ಚರಿಕೆಯಿಂದ ಶೂಲಕ್ಕೇರಿಸುವ ದಿನದವರಿವಿಗೂ ಸಂರಕ್ಷಿಸುತ್ತಾರೆ. ಕಾನೂನು ರೀತ್ಯಾ ಅವನನ್ನು ನೇಣು ಹಾಕಿ ಕೊಲ್ಲಬೇಕೇ ಹೊರತೂ ಇನ್ನಾವ ರೀತಿಯಲ್ಲೂ ಅವನ ಪ್ರಾಣಕ್ಕೆ ಅಪಾಯ ತಟ್ಟಕೂಡದು. ಹಾಗಾಗದೆ ಅವನ ಜೀವಕ್ಕೆ ಯಾವ ರೀತಿಯಲ್ಲಾದರೂ ಧಕ್ಕೆ ತಗುಲಿದರೆ ಜೈಲಿನ ಅಧಿಕಾರಿಗಳು ಜವಾಬ್ದಾರರಾಗಬೇಕಾಗುತ್ತದೆ. ಆದ್ದರಿಂದ ಅವನಿಗೆ ಫಾಸಿ ಶಿಕ್ಷೆ ವಿಧಿಸಿದ ದಿನದಿಂದ ಅವನ ಮೊಕದ್ದಮೆಯು ಆಫೀಸಿಗೆ ಹೋಗಿ ಅಲ್ಲಿಂದ ಪ್ರಭುಗಳ ಬಳಿಗೆ ಜೀವದಾನ ಅರ್ಜಿ ಹೋಗಿ ಅಲ್ಲಿಯೂ ನಿರಾಕರಿಸಲ್ಪಟ್ಟರೆ ಫಾಶಿಗೆ ಹಾಕುವ ದಿನದವರಿವಿಗೂ ಅವನೊಬ್ಬನನ್ನೇ ಪ್ರತ್ಯೇಕವಾಗಿ ಜೈಲಿನ ಗೊತ್ತಾದ ಒಂದು ಭಾಗದಲ್ಲಿ ಇಡುತ್ತಾರೆ. ಅವನನ್ನು ಹಗಲು ರಾತ್ರಿ ಇಬ್ಬರು ಜೈಲು ಸಿಪಾಯಿಗಳು ಮತ್ತು ಒಬ್ಬ ದಫೇದಾರನೂ ನೋಡಿಕೊಳ್ಳುತ್ತಾರೆ.

ಶೂಲಕ್ಕೇರಿಸುವ ದಿನ ಸೆರೆಮನೆಯಲೆಲ್ಲಾ ಭಯಂಕರತೆ ಕಂಡುಬರುತ್ತದೆ. ದೇವನಿತ್ತ ಜೀವವನ್ನು ಸರ್ಕಾರವು ತನ್ನ ಬಲದಿಂದ ಕ್ರೌರ್ಯದಿಂದ ತೆಗೆಯುವುದನ್ನು ಪ್ರತಿಯೊಬ್ಬನು ತೆಗಳುತ್ತಿರುತ್ತಾನೆ. ಪ್ರತಿಯೊಬ್ಬನ ಮುಖದ ಮೇಲು ಕರುಳು ಕುಯ್ಯುವಂತಹ ಹೃದಯವೇದನೆಯ ತೆರೆಯೊಂದು ಹರಿದಾಡುತ್ತಿರುತ್ತದೆ. ಯಾರ ಬಾಯಲ್ಲೂ ಹೆಚ್ಚು ಮಾತಿಲ್ಲ. ಮೂಕ ಸಂಕಟವು ಎಲ್ಲರ ಎದೆಯನ್ನು ಇರಿಯುತ್ತಿರುತ್ತದೆ. ಸೆರೆಮನೆಯಲ್ಲಿನ ಎಲ್ಲ ಕಾಮಗಿರಿಗಳಲ್ಲೂ ಫಾಸಿಗೇರಿಸಲ್ಪಡುವವನ ಬಗ್ಗೆ ಪಿಸಪಿಸ ಮಾತು ನಡೆಯುತ್ತಿರುತ್ತದೆ. ಅಂದಿನ ದಿನ ಗಿಡ, ಮರ, ಗೋಡೆ ನೆಲ ಮತ್ತು ಮುಂತಾದ ಪ್ರತಿಯೊಂದು ಸಾಮಾನು ದುಃಖಿಸುತ್ತಿರುವಂತೆ ಭಾಸವಾಗುತ್ತದೆ. ಅಧಿಕಾರಿಗಳು ನಡೆಯಿಸಿದ ಈ ಕೊಲೆಯ ದಿನ ಪ್ರತಿ ಚೇತನಾಚೇತನ ವಸ್ತುವೂ ಸಹ ಭೀಕರತೆಯ ಕರಾಳಸ್ವರೂಪವನ್ನು ಕಾಣುತ್ತದೆ ಎಂಬುದನ್ನು ಅಂದೆ ನಮ್ಮ

ಹೃದಯವು ನಮಗೆ ಸೂಚಿಸಲು ಆರಂಭಿಸಿತು.

[illegible]ನೇ ಶನಿವಾರ.

ಸುಮಾರು ಬೆಳಿಗ್ಗೆ ಹತ್ತುಗಂಟೆಯ ವೇಳೆಗೆ ನಮ್ಮ ಬಳಿಗೆ ಬಂದ [illegible]ಯ ಅಧಿಕಾರಿಯೊಬ್ಬನು 'ನಿಮ್ಮ ಮಿತ್ರರನ್ನು ಸೋಮವಾರ ನೇಣುಹಾಕಲಾಗುವುದು' ಎಂದನು. ಅದನ್ನು ಕೇಳುತ್ತಿದ್ದಂತೆಯೇ [illegible] [illegible]

ವಾದವು. ಒಬ್ಬರನ್ನೊಬ್ಬರು ನೋಡುವಾಗ್ಯೆ ದುಃಖವನ್ನು ನುಂಗಿಕೊಂಡು ದೃಷ್ಟಿಸುತ್ತಿದ್ದ ಕಣ್ಣುಗಳು ಏನನ್ನೋ ಸೂಚಿಸಲು ಬಯಸಿ ಹಾಗೆಯೇ ಮುಚ್ಚಿಕೊಳ್ಳುತ್ತಿದ್ದುವು. 'ಈಸೂರಿನವರನ್ನು ಸೋಮವಾರ ನೇಣುಹಾಕುವರಂತೆ ನಿಜವೆ?' ಎಂದು ಕೇಳಬೇಕೆಂದು ಎಲ್ಲರ ಹೃದಯದಲ್ಲೂ ಕಾತುರತೆ. ಆದ್ದರೆ ಆ [illegible] ಹೃದಯಭೇದಕ ಸುದ್ದಿಯನ್ನು [illegible], ಕಿವಿಯಲ್ಲಿ [illegible] ಬೇಕಿರಲ್ಲ. [illegible] ಗಲ್ಲಿಗೇರಿಸುವುದು [illegible]ಯಲ್ಲಿ ಗಲ್ಲಿಗೇರಿಸಲ್ಪಡುವವರ ಬಂಧುಗಳು ಅವ[illegible] ಭೇಟಿ[illegible] ಸಲುವಾಗಿ [illegible] ಉಚಿತವಾದ [illegible]

[illegible]

ನೀವು ಕೇಳಿದ್ದು!

(ವಾಚಕರು ಕೇಳುವ ಪ್ರಶ್ನೆಗಳಿಗೆ, ಎತ್ತುವ ಸಮಸ್ಯೆಗಳಿಗೆ ಸ್ವತಃ ಸಂಪಾದಕರೇ ಇಲ್ಲಿ ಉತ್ತರ ಕೊಡುತ್ತಾರೆ. ಪ್ರಶ್ನೆ ಕೇಳುವವರು ತಮ್ಮ ಪೂರ್ಣ ಹೆಸರು ವಿಳಾಸಗಳನ್ನು ತಿಳಿಸಬೇಕಾದುದು ಅವಶ್ಯಕ.)

ಹ. ವೆಂ. ನಾಗರಾಜರಾಯ (ತುಮಕೂರು)

ಕಳೆದ ತಿಂಗಳಿನ 'ಸ್ವತಂತ್ರ' ದಲ್ಲಿ 'ಜಾಗಿರದಾರರಿಗೂ ಜಾತಿಯ ಹುಚ್ಚೇ?' ಎಂಬ ವಿಚಾರವನ್ನೋದಿ ವಿಪರೀತ ದುಃಖವುಂಟಾಯಿತು. ಈ ಸಮಾಚಾರ ನಿಜವೆ? ಈ ಬಗ್ಗೆ ಜಾಗಿರದಾರರು ಏನು ಸಮಾಧಾನ ಕೊಟ್ಟಿದ್ದಾರೆ?

—ಏನೂ ಇಲ್ಲ. ಮೌನವಾಗಿದ್ದಾರೆ.

ಗೆ. ಮು. ರುದ್ರಯ್ಯ (ಬಳ್ಳಾರಿ)

(೧) ಬಳ್ಳಾರಿಯ ಮೂಲನಿವಾಸಿಗಳಾದ ವೈಶ್ಯರು ಮೊದಲಿನಿಂದಲೂ ಮನೆಯಲ್ಲಿ ಕನ್ನಡವನ್ನೆ ಮಾತನಾಡುತ್ತಿದ್ದರೂ ಈಚೆಗೆ ೫-೬ ವರ್ಷಗಳಿಂದ ಮಕ್ಕಳಿಗೆ ತೆಲುಗು ಕಲಿಸುತ್ತಿರುವುದಕ್ಕೆ ಕಾರಣವೇನಿದ್ದೀತು?

—ತೆಲುಗಿನ ಮೋಹವೆ. ಇನ್ನೇನು?

(೨) ಇವರ ಕುಲದೇವರಾದ ಶ್ರೀ. ನಗರೇಶ್ವರಸ್ವಾಮಿ ದೇವಾಲಯಕ್ಕೆ 'ಹಿಂದೂ ವುಲತಪ್ಪ ಇತರುಲು ಪ್ರವೇಶಿಸಕೂಡದು' ಎಂಬ ಪಟ ಹಚ್ಚಿದ್ದಾರೆ. ಇದಕ್ಕೇನೆನ್ನುತ್ತೀರಿ?

—ಇಂಥ ಪಟಗಳು ಬಳ್ಳಾರಿಯಲ್ಲಿ ಮಾತ್ರವಲ್ಲ; ಎಷ್ಟೋ ಊರುಗಳಲ್ಲೂ ಇವೆ. ಜಾತೀಯತೆ ಸಂಪೂರ್ಣವಾಗಿ ಮಾಯವಾದ ವಿನಾ ಇಂಥ ಅಸಹ್ಯ ಪಟಗಳು ತೊಲಗಲಾರವು.

ಐ. ದೊಡ್ಡರುದ್ರಪ್ಪ (ದಾವಣಗೆರೆ)

(೧) ಶ್ರೀ. ಕೆ. ಐ. ಪುಟ್ಟಪ್ಪನವರು ತನ್ನ ಆರಾಧ್ಯಗುರುವೆಂದು ನನ್ನ ತಂಗಿಯೊಬ್ಬಳಿಗೆ ಹುಚ್ಚು ಹಿಡಿದಿದೆ. ಅದು ಬಿಡುವುದೆಂತು?

—ಒಮ್ಮೆ ಪುಟ್ಟಪ್ಪನವರೊಂದಿಗೆ ಭೇಟಿ ಮಾಡಿಸಿ. [illegible] ಹುಚ್ಚು ಓಡಿಹೋದೀತು.

(೨) ನನ್ನ ಸ್ನೇಹಿತಳೊಬ್ಬಳು ಅಲ್ಪ ವಿದ್ಯೆಯಿಂದ ಗರ್ವಿಷ್ಠಳಾಗಿ ಮನಸ್ಸಿಗೆ ಬಂದಂತೆ ವರ್ತಿಸುತ್ತಿದ್ದಾಳೆ. ಅವಳನ್ನು ಒಳ್ಳೆಯ ದಾರಿಗೆ ತರುವುದೆಂತು?

—ಸ್ವೇಚ್ಛಾ ವರ್ತನೆಯಿಂದಾಗಿ ಒಂದು ಸಲ ಏಟುಬಿದ್ದು, ಆಕೆಗೆ ತಾನಾಗಿಯೆ ಬುದ್ಧಿ ಬಂದೀತು. ಅದುವರೆಗೂ ತಾಳ್ಮೆಯಿಂದಿರಿ.

ಎಂ. ಎಸ್. ಮುಟಿಷಿ (ಧಾರವಾಡ)

(೧) ಇಲ್ಲಿನ ಸಮಾಜ ಪುಸ್ತಕಾಲಯದವರು ತಮ್ಮ 'ಸ್ವತಂತ್ರ'ಕ್ಕೆ ಬಹಿಷ್ಕಾರ ಹಾಕಿದ್ದಾರಂತೆ. ಕಾರಣವೇನು? ಜನರಿಗೆ ಸಾಹಿತ್ಯವನ್ನೊದಗಿಸಿಕೊಡುವ ದೊಡ್ಡ ಉದ್ದೇಶವನ್ನಿಟ್ಟುಕೊಂಡು ಸ್ಥಾಪಿತವಾಗಿರುವ ಇಂಥ ಪುಸ್ತಕಾಲಯಗಳು, ಕನ್ನಡ ಪುಸ್ತಕ-ಪತ್ರಿಕೆಗಳಿಗೆ ಬಹಿಷ್ಕಾರ ಹಾಕುತ್ತ ನಡೆದಲ್ಲಿ, ನಮ್ಮ ಸಾಹಿತ್ಯಕ್ಕೆ ಧಕ್ಕೆ ತಗಲಲಾರದೇ? ಈ ರೀತಿ ಮಾಡುವಲ್ಲಿ ವ್ಯಕ್ತಿಗತ ದ್ವೇಷವೇನಾದರೂ ಇರಬಹುದೇ?

—[illegible]

(೨) [illegible]

—ನನ್ನ ಮೇಲೆ ದ್ವೇಷವಿಟ್ಟುಕೊಳ್ಳಲು ಯಾರಿಗೂ ಕಾರಣವಿಲ್ಲ. ದ್ವೇಷದಿಂದ ಮಾಡುವ ಆರೋಪವಲ್ಲ ಇದು; ತಪ್ಪು ಕಲ್ಪನೆಯಿಂದ, ವಿವೇಚನಾರಾಹಿತ್ಯದಿಂದ ಇಂಥ ಮಾತು ಬರುತ್ತದೆ. ಕಾರಂತರು ನನಗೆ ಬಹಳ ಪ್ರಿಯರಾದ ಸ್ನೇಹಿತರು. ಅವರಿಗೂ ನನಗೂ ಯಾವ ಜಗಳವೂ ಆಗಿಲ್ಲ. ನಮ್ಮಲ್ಲಿ ಯಾವ ವೈಮನಸ್ಯವೂ ಇಲ್ಲ. ಆದರೂ ಅವರ ಪುಸ್ತಕಗಳನ್ನು ಕುರಿತು ನನಗಿರುವ ಸ್ಪಷ್ಟವಾದ ಅಭಿಪ್ರಾಯವನ್ನು ನಾನು ತಿಳಿಸಬಾರದೇನು? 'ಮರಳಿ ಮಣ್ಣಿಗೆ' ಒಳ್ಳೆಯ ಕಾದಂಬರಿಯಲ್ಲ—ಎಂದು ನಾನು ಹೇಳುತ್ತಲೂ ಕಾರಂತರ ಮೇಲಿನ ದ್ವೇಷದಿಂದ ನಾನು ಹಾಗೆ ಹೇಳುತ್ತೇನೆಂದು ಅವರು ಭಾವಿಸಿದರೆ, ಕಾರಂತರನ್ನು ಕಂಡರೆ ನಾನು ವಿಷ ಕಾರುತ್ತೇನೆ—ಎಂದು ಆಡಿಕೊಂಡರೆ ಅದು ಅವರ ವಿವೇಚನಾರಾಹಿತ್ಯದ ಲಕ್ಷಣ, ಅಷ್ಟೆ.

[illegible] (ಹರಿಹರಹಳ್ಳಿ)

ನಿಮ್ಮ 'ಸ್ವತಂತ್ರ' ಪತ್ರಿಕೆ ಏತಕ್ಕಾಗಿ ನಡೆಯುತ್ತಿದೆ? ನಿಮ್ಮ ಸಂಪಾದನೆಗೋ ಅಥವಾ ಸಮಾಜ ಸೇವೆಗೋ?

—'ಸ್ವತಂತ್ರ' ದ ಸಂಪಾದನೆಯಿಂದ [illegible]

ನ್ನು' ಕಟ್ಟಲು ಆದರ್ಶವಾದ ಪತ್ರಿಕೆಯೊಂದನ್ನು ಹೊರಡಿಸುವ ಅಗತ್ಯವಿತ್ತು. ಅದೇ ಉದ್ದೇಶಕ್ಕಾಗಿ ಹೊರಟಿದೆ 'ಸ್ವತಂತ್ರ'. ಕಾಸು ಗಳಿಸಲು ಹೊರಟ ಬಂಡವಾಳಗಾರ ಸ್ವಾರ್ಥಿಗಳು ನಾವಲ್ಲ. ನೆನಪಿರಲಿ!

ಟಿ. ವಿ. ಸುಬ್ಬರಾವ್ (ಮೈಸೂರು)

ಕನ್ನಡ ಸಾಹಿತ್ಯದಲ್ಲಿ ಶ್ರೇಷ್ಠವಾದ ಕಾದಂಬರಿ ಯಾವುದು?

—'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ಎಂದು ನನ್ನ ಅಭಿಪ್ರಾಯ.

ಎಚ್. ಎಂ. ಶಿವಲಿಂಗಯ್ಯ (ಹೊಸಕೋಟೆ)

(೧) 'ವೈದೀಕಿಜಂ' ಎಂಬ ಪದದ ಬಗ್ಗೆ 'ನವಸಂದೇಶ' ಮತ್ತು 'ಜಯಂತಿ' ಪತ್ರಿಕೆಗಳಿಗೆ ವಿವಾದ ಹುಟ್ಟಲು ನಿಜವಾದ ಕಾರಣವಾವುದು?

—'ವೈದೀಕಿಜಂ' ಎಂದರೇನೆಂಬುದೇ ನನಗಿನ್ನೂ ಅರ್ಥವಾಗಿಲ್ಲ. ಇನ್ನು ಆ ಪದದ ಬಗ್ಗೆ ಆಕ್ಷೇಪಣೆಯನ್ನೆತ್ತಿ ವಾದ ಹೂಡುವ ಉಪದ್ವ್ಯಾಪಕ್ಕೆ ಕಾರಣವೇನೆಂಬುದನ್ನು ಶೋಧಿಸಲು ನನಗಿಷ್ಟವಿಲ್ಲ.

(೨) ದಾವಣಗೆರೆಯಲ್ಲಿ ಅಖಿಲ ಕರ್ನಾಟಕಸ್ಥರ ಮಹಾಸಭೆ ಸೇರುವ ವಿಚಾರವಾಗಿ ಧಾರವಾಡದ ಪತ್ರಿಕೆಯೊಂದರಲ್ಲಿ 'ಜನಿವಾರ-ಶಿವದಾರ' ಗಳ ದೃಷ್ಟಾಂತವನ್ನೆತ್ತಿರುವುದು ಸರಿಯೆ?

—ತಪ್ಪು. ಕರ್ನಾಟಕಸ್ಥರ ಮಹಾಸಭೆಗೂ, ಜನಿವಾರ ಶಿವದಾರಗಳಿಗೂ ಯಾವ ಬಾದರಾಯಣ ಸಂಬಂಧವೂ ಇರಲಿಲ್ಲ.

(೩) ನಮ್ಮ ಕನ್ನಡಿಗರಲ್ಲಿಯೆ ಪಕ್ಷ, ಪಂಗಡ, ಭೇದಗಳು ತಲೆದೋರಲು ಕಾರಣವೇನು?

—ಅಣ್ಣ ತಮ್ಮಂದಿರನ್ನೆಲ್ಲ ಒಡೆದು ದೂರಗೊಳಿಸಿದ ಆ ಮಹಾತಾಯಿ ಇದಾಳಲ್ಲ—ಜಾತೀಯತಾದೇವಿ. ಅವಳನ್ನು ಮುಂದೆ ಹಾಕಿ, ತಮ್ಮ ನೀಚಸ್ವಾರ್ಥ ಸಾಧಿಸಿಕೊಳ್ಳುವ ಆಷಾಢಭೂತಿಗಳ ತಂಡವೂ ಇದೆಯಲ್ಲ. ನಮ್ಮ ನಮ್ಮಲ್ಲಿನ ಈ ಕೃತ್ರಿಮ ಭಿನ್ನಭಾವಕ್ಕೆ ಇವರೇ ಕಾರಣರು.

ಸಿ. ಎಂ. ಸುವರ್ಣ (ಮುಂಬಯಿ)

'ಸ್ವತಂತ್ರ' ದ ಸಂಪಾದಕನಾಗುವಲ್ಲಿ ತಮ್ಮ ಮುಖ್ಯ ಉದ್ದೇಶವೇನು?

—ಸಮತಾವಾದೀ ಸ್ವತಂತ್ರ ಕರ್ನಾಟಕವನ್ನು ಕಟ್ಟಲು ಸಾಹಿತ್ಯದ ಮೂಲಕ ನೆರವಾಗುವುದು.

ಜಿ. ಎಂ. ಬಡಿಗೇರ (ಗದಗ)

ಶಾಲೆಯಲ್ಲಿ ವಿದ್ಯಾರ್ಥಿನಿಯರನ್ನು ಯಾವಾಗಲೂ ಕುಚೇಷ್ಟೆ ಮಾಡುವ ಕುಚೋದ್ಯಗಾರರಿಗೇನು ಮಾಡಬೇಕು?

—ನೀವೇ ಏನು ಮಾಡಿದರೂ ಸಾಲದು. ವಿದ್ಯಾರ್ಥಿನಿಯರೇ ಈ ಕುಚೋದ್ಯವನ್ನು ನಿಲ್ಲಿಸಬಲ್ಲರು. ಮೊದಲು ಅವರು ಮನಸ್ಸು ಮಾಡಬೇಕು. ಕುಚೇಷ್ಟೆ ಮಾಡುವವರಿಗೆ ಸರಿಯಾದ ಉತ್ತರ ಕೊಡಬೇಕು. ಅವರು ದಾರಿಗೆ ಬರದಿದ್ದರೆ ಕೆನ್ನೆಗೆ ಬಿಗಿಯಬೇಕು.

ಸುರೇಂದ್ರ ಇಂಗಳೆ (ಕಿತ್ತೂರು)

(೧) ಸದ್ಯದ ಪರಿಸ್ಥಿತಿಯಲ್ಲಿ ಕರ್ನಾಟಕದ ಯೋಗ್ಯ ಮುಖಂಡರಾರು?

—ಅದೇ ಪ್ರಶ್ನೆಯನ್ನೇ ನಾವೂ ಕೇಳಬೇಕಾಗಿದೆ. ಜನಸಾಮಾನ್ಯರೇ ಅದಕ್ಕೆ ಉತ್ತರ ಕೊಡಬೇಕಾಗಿದೆ.

(೨) ಮುಂಬಯಿಯ [illegible] ಆರ್ಟ್ ಕಾಲೇಜಿನಲ್ಲಿ ಈ ಸಲ ಕನ್ನಡದ ಒಬ್ಬ ವಿದ್ಯಾರ್ಥಿಗೂ ಸಹ ಪ್ರವೇಶ ದೊರೆಯಲಿಲ್ಲ. ಕಾರಣವೇನು?

—ಕಾಲೇಜು ಅಧಿಕಾರಿಗಳ ಸಂಕುಚಿತ ವೃತ್ತಿ; ಅನ್ಯಾಯಗಳನ್ನೆಲ್ಲ [illegible] ಕನ್ನಡಿಗರ [illegible].

ಡಾ. ದಾ. [illegible]

([illegible])

[illegible] 'ಬೆಂಗಳೂರಿನ [illegible]' [illegible]?

—[illegible]

[illegible] (ಹುಬ್ಬಳ್ಳಿ)

[illegible]

—ಇಂದು ಈ ಪ್ರಶ್ನೆಯೆ ಅನವಶ್ಯಕ. ವಿದ್ಯಾರ್ಥಿಗಳು, ಶಿಕ್ಷಕರು, ವ್ಯಾಪಾರಸ್ಥರು, ಕೂಲಿಕಾರರು, ರೈತರು ಅವರಿವರು ಎಂದೇನು-ಎಲ್ಲರ ಬಾಳಿನಲ್ಲೂ ರಾಜಕೀಯ ಬೆರೆತುಕೊಂಡಿದೆ. ಜನಜೀವನದಿಂದ ರಾಜಕೀಯವನ್ನು ಬೇರ್ಪಡಿಸುವುದೇ ಅಸಾಧ್ಯ.

ರಾಮರಾವ್ ದೇಶಪಾಂಡೆ

(ಧಾರವಾಡ)

(೧) '[illegible]' ವಾರ್ಷಿಕ ಸಂಚಿಕೆಯಲ್ಲಿ ನಿಮ್ಮ 'ಕಾರವಾನ್' ಮತ್ತು 'ಗುಲಾಬಿ ಹೂ' ಕಥಾಸಂಗ್ರಹಗಳನ್ನು ಕುರಿತು ಅನ್ಯಾಯವಾಗಿ ಅವಹೇಳನೆ ಮಾಡಿರುವ 'ವಿಹಂಗಮ' ಯಾರು ಗೊತ್ತೇ ನಿಮಗೆ? ಆ ಪತ್ರಿಕೆಯ ಉಪಸಂಪಾದಕರಾಗಿರುವ ಕೆ. ರಾ. ಸುಬ್ಬರಾ[illegible] [illegible] ಒಂದು [illegible] ಮಿತ್ರರ [illegible] 'ಸ್ವತಂತ್ರ'ದಲ್ಲಿ ಬಂದ [illegible]?

—[illegible]

ವಿಷಕಾರುವ ಈ ಹೆಣ್ಣುಗಳ ಕಡೆ ನಾನು ದೃಷ್ಟಿ ಹೊರಳಿಸುವುದೂ ಇಲ್ಲ.

(೨) ಹಿಂದೆ ನೀವು 'ಉಷಾ' ಸಂಪಾದಕರಾಗಿದ್ದಾಗ ನಿಮ್ಮ ನೆರವಿನಿಂದಾಗಿ ಮುಂದೆ ಬಂದ 'ಕಾಮ್ರೇಡ್ ಸಾಹಿತಿ'ಯೊಬ್ಬನು ಧಾರವಾಡ, ಹುಬ್ಬಳ್ಳಿಗಳಲ್ಲಿ ನಿಮ್ಮ ಬಗ್ಗೆ ವಿಪರೀತ ಅಪಪ್ರಚಾರ ಮಾಡುತ್ತಿದ್ದಾನೆ. ಇದು ನಿಮಗೆ ತಿಳಿದಿದೆಯೆ?

—ಎಂದೋ ತಿಳಿದಿತ್ತು. ನಿಮ್ಮ ಹಾಗೇ ಇನ್ನು ಅನೇಕ ಜನ ವಾಚಕ-ಲೇಖಕ ಮಿತ್ರರೂ ಈ'ಕಾಮ್ರೇಡು'ವಿನ ಅಪಪ್ರಚಾರದ ಬಗ್ಗೆ ನನಗೆ ತಿಳಿಸಿದ್ದರು. 'ಹೋಗಲಿ ಪಾಪ! ಬಯ್ದರೆ ಬಯ್ದುಕೊಳ್ಳಲಿ. ಬಾಯತಿಂಡಿ ತೀರಿಸಿಕೊಳ್ಳಲಿ' ಎಂದು ಸುಮ್ಮನಿದ್ದೆ. ಕೆಲದಿನಗಳಿಗೆ ಹಿಂದೆ ನಾನು ಕಮ್ಯುನಿಸ್ಟರ ನೈಜ ಸ್ವರೂಪವನ್ನು ಬಯಲಿಗೆಳೆದುದನ್ನು ಕಂಡು ಈ 'ಕಾಮ್ರೇಡು' ಗಳೆಲ್ಲ ಕುಪ್ಪಳಿಸುತ್ತಿದ್ದಾರೆ. ಹೋಗಲಿ ಬಿಡಿ. ಲಾಗ ಹಾಕಿಕೊಳ್ಳಲಿ.

* * *

(೩೬ನೇ ಪುಟದಿಂದ ಮುಂದುವರಿದುದು)

ಎಂದು 'ನಾವು ಎಲ್ಲಿಹೋಗುತ್ತಿದ್ದೇವೆ' ಎಂಬುದನ್ನು ಸಹ ಯೋಚಿಸದೆ ಮೂಕ ಪಶುಗಳಂತೆ ಪಾಶಿ ಶಿಕ್ಷೆಯವರ ಬಳಿಗೆ ಸಾಗಿದರು. ಎಲ್ಲರ ನೋವು, ಸಂಕಟಗಳನ್ನು ಅವರ ಮುಂದೆ ಸುರಿಸಿ ಅವರಿಗೂ ಸಹಿಸಲಾರದಷ್ಟು ಸಂಕಟವನ್ನುಂಟು ಮಾಡಿ, ಹಿಂದಿನದು, ಇಂದಿನದು ಎಲ್ಲವನ್ನು ಹೇಳಿ 'ಅಯ್ಯೋ ಅಯ್ಯೋ ದೇವರೆ' ಎಂದು ಹಲವಾರು ಸಾರಿ ಅರಚಾಡಿ 'ವೇಳೆಯಾಯಿತು ಇನ್ನು ಇಲ್ಲಿಂದ ಹೊರಡಿ' ಎಂದು ಸಿಪಾಯಿಗಳು ಬಲವಂತಮಾಡಿ ಹೊರಡಿಸಿದಾಗ ಮೆಲ್ಲಗೆ ಅಲ್ಲಿಂದ ಹೊರಗೆ ಬಂದರು. ಬರುವಾಗ ಅವರನ್ನು ನೋಡಿದವರಾರೂ ಕಣ್ಣೀರು ತಾರದೆ ಇರಲಿಲ್ಲ. ನೋಡಬಾರದೆಂದಿದ್ದರೂ ನೋಡಿ ಹೃದಯದ ನೋವನ್ನು ಹೆಚ್ಚಿಸಿಕೊಂಡೆವು.

(ಕ್ರಮಶಃ)

* * *

ನಿಮ್ಮ ನೆನಪಿಗಾಗಿ

'ಸ್ವತಂತ್ರ'ದ ಚಂದಾ ವಿವರ.

ಸಂಸ್ಥೆಗಳಿಗೆ ಮತ್ತು ವಾಚನಾಲಯಗಳಿಗೆ ೧ ವರ್ಷಕ್ಕೆ ೪-೦-೦

ಒಂದು ವರ್ಷಕ್ಕಿಂತ ಕಡಿಮೆ ಅವಧಿಗೆ ಚಂದಾ ಸ್ವೀಕರಿಸುವುದಿಲ್ಲ.

ವಾಚಕರಿಗೆ:	೨ ವರ್ಷಕ್ಕೆ	೫-೮-೦
	೧ ವರ್ಷಕ್ಕೆ	೩-೦-೦
	ಆರು ತಿಂಗಳಿಗೆ	೧-೧೨-೦

ವಿ. ಪಿ. ಮೂಲಕ ತರಿಸಿಕೊಂಡಲ್ಲಿ, ವಿ. ಪಿ. ವೆಚ್ಚವನ್ನು ವಾಚಕರೇ ವಹಿಸಬೇಕಾಗುತ್ತದೆ.



ತರ್ಕಾರಿ ಮತ್ತು ಅವುಗಳನ್ನು ಬೆಳೆಯುವ ಬಗೆ

([illegible])

[illegible]

ವಲ, ಆಲೂಗಡ್ಡೆ, ಕೋಸು, ಟೋಮ್ಯಾಟೊ, ಮುಸುಕಿನಜೋಳ, ಕಲ್ಲಂಗಡಿ, ದಿಲ್ ಪಸಂದ್, ಈರುಳ್ಳಿ, ಮೆಣಸಿನ ಕಾಯಿ, ಕ್ಯಾರೆಟ್, ಬೀಟ್ ರೂಟ್ ಇವುಗಳಲ್ಲಿ ಯಾವುದು ಬೇಡ ? ಅನುದಿನದ ಉಪಯೋಗಕ್ಕೆ ಇವೆಲ್ಲವೂ ಬೇಕು ! ಹರಟೆಯಿಂದ ಕೊಲ್ಲುವ ಕಾಲ ಕೈತೋಟಕ್ಕೆ ವಿನಿಯೋಗವಾದರೆ ಹಳೆಯ ತರ್ಕಾರಿಗೆ ಒಂದಕ್ಕೆ ನಾಲ್ಕು ಬೆಲೆ ಇಡುವುದೂ ತಪ್ಪುತ್ತದೆ. ಕೈತೋಟ ಮಾಡಬೇಕೆಂದಿರುವವರಿಗೆ ಈ ಪುಸ್ತಕಕ್ಕಿಂತ ಉತ್ತಮ ಪುಸ್ತಕ ಕನ್ನಡದಲ್ಲಿ ಸಿಗಲಾರದು.

ಲೇಖಕರು ಮೇಲ್ಕಂಡ ಪ್ರತಿಯೊಂದು ತರ್ಕಾರಿಯ ಭೇದಪ್ರಭೇದಗಳು, ಯಾವ ರೀತಿಯ ಬೀಜಗಳನ್ನು ಯಾವ ಕಾಲದಲ್ಲಿ ಬಿತ್ತಬೇಕು, ಭೂಮಿಯನ್ನು ಹದಗೊಳಿಸುವಿಕೆ, ನೀರಿಡುವಿಕೆ, ಗೊಬ್ಬರ ಹಾಕುವಿಕೆ, ಆಗಾಗ ತಗುಲಬಹುದಾದ ರೋಗಗಳಿಂದ ಗಿಡಗಳನ್ನು ಪಾರು ಮಾಡುವ ಕ್ರಮ, ಗಿಡಗಳ ಬೆಳವಣಿಗೆಗೆ ಅನುಸರಿಸಬೇಕಾದ ವ್ಯವಸಾಯಕ್ರಮ ಇತ್ಯಾದಿ ವಿಚಾರಗಳನ್ನು ಪ್ರಯೋಗ [illegible] ಕಂಡುಹಿಡಿದ ಶಾಸ್ತ್ರೀಯ ರೀತಿಯಲ್ಲಿ [illegible] ಶೈಲಿಯಲ್ಲಿ ಬರೆದಿದ್ದಾರೆ. ಪ್ರತಿಯೊಂದು ವಿಚಾರವನ್ನು [illegible].

ಕೈತೋಟ [illegible] ಈ ಪುಸ್ತಕವನ್ನು ಓದಿ [illegible] —[illegible]

ಮೂರು ವಾರ್ಷಿಕ ಸಂಚಿಕೆಗಳು

ವಿಕಟವಿನೋದಿನಿ

(ಸಂಪಾದಕರು ಮತ್ತು ಪ್ರಕಾಶಕರು ಶ್ರೀ ಬಿ. ಶಿವಪ್ಪ. ಕ್ರೌನ್ ಚತುರ್ಥಾಕಾರದ ೧೦೦ ಪುಟಗಳು. ಬೆಲೆ ಹನ್ನೆರಡಾಣೆ)

ಪೌರವಾಣಿ

(ಸಂಪಾದಕರು. ಶ್ರೀ ಆರ್.ವಿ. ಭದ್ರಣ್ಣ ಪ್ರಕಾಶಕರು ಶ್ರೀ ಎಂ.ಎನ್. ಸೀತಾರಾಮಯ್ಯ. ಕ್ರೌನ್ ಚತುರ್ಥಾಕಾರದ ೧೫೨ ಪುಟಗಳು. ಬೆಲೆ ಎಂಟಾಣೆ)

ವಾಹಿನಿ

(ಸಂಪಾದಕರು ಮತ್ತು ಪ್ರಕಾಶಕರು: ಶ್ರೀ ಎಂ. ಎಸ್ ಚಿಂತಾಮಣಿ. ಕ್ರೌನ್ ಚತುರ್ಥಾಕಾರದ ೧೩೬ ಪುಟಗಳು. ಬೆಲೆ ೧ರೂ)

ಲಘುಬರಹಗಳನ್ನೊದಗಿಸುವುದೇ ತನ್ನ ಉದ್ದೇಶವೆಂದು ಭಾವಿಸಿದ ‘ವಿಕಟವಿನೋದಿನಿ’ ತನ್ನ ಮೂವ್ವತ್ತೈದನೆಯ ವಾರ್ಷಿಕ ಸಂಚಿಕೆಯರೂಪದಲ್ಲಿ ಈಸಾರಿ ಹೊರಬಂದಿದೆ. ಕರ್ನಾಟಕದ ಜನತೆಯಲ್ಲಿ ರಾಷ್ಟ್ರೀಯ, ಕ್ರಾಂತಿಯುತ ಭಾವನೆಗಳು ಅರಳಲು ತನ್ನಿಂದಾದಷ್ಟು ನೆರವು ನೀಡುತ್ತಿರುವ ವಾರಪತ್ರಿಕೆ ‘ಪೌರವಾಣಿ’ ಆರನೆಯ ವಾರ್ಷಿಕ ಸಂಚಿಕೆ ಪ್ರಕಟಿಸಿದೆ. ತನ್ನ ‘ಬಾಲ್ಯಾರಿಷ್ಟದಕಾಲ’ದ ಮೊದಲ ವರ್ಷವನ್ನು ದಾಟಿ ಜನ್ಮದಿನಾಂಕವಾಗಿ ಬಂದಿದೆ ‘ವಾಹಿನಿ’ .

‘ವಿಕಟವಿನೋದಿನಿ’ಯಲ್ಲಿ ಓದಬಹುದಾದ ಬರಹಗಳಲ್ಲಿ ‘ಮನೆಹೆಣ್ಣು’,‘ಬಹುಕಾಲದ ಆಸೆ’ ಮತ್ತು ‘ರಾಯರ ಪಾರಾಯಣ’ವನ್ನು ಉಲ್ಲೇಖಿಸಬಹುದು. ‘ಪೌರವಾಣಿ’ಯಲ್ಲಿ ಎಲ್ಲ ‘ವಾರ್ಷಿಕಸಂಚಿಕೆಯ ಬರಹಗಾರ’ರೂ, ಕೆಲವರು ಮೈಸೂರು ಕಾಂಗ್ರೆಸ್‌ನಾಯಕರೂ ಲೇಖನಗಳನ್ನು ಬರೆದಿರುತ್ತಾರೆ. ಹಲವಾರು ಸಮಸ್ಯೆಗಳನ್ನು ಕುರಿತು ಬರಹಗಳಿವೆ. ಅನೇಕ ಲೇಖನಗಳು ಬೇಸರಪೂರಕವೆಂದು ಒಪ್ಪಿಕೊಳ್ಳಬೇಕಾದರೂ ಶ್ರಮಪಟ್ಟು ಓದಿದಲ್ಲಿ ತುಂಬಾ ವಿಚಾರಗಳನ್ನು ಗ್ರಹಿಸಲು ಅನುಕೂಲವಾಗುವದು. ಲೇಖನಗಳು ಮಾತ್ರವಲ್ಲದೆ, ನಾಲ್ಕೈದು ಕತೆಗಳೂ ಇವೆ.

ಒಂದೆರಡು ಚಿತ್ರ, ನಾಲ್ಕಾರು ಕತೆ, ಏಳೆಂಟು ಕವನ, ಹತ್ತೋ ಹನ್ನೆರಡೋ ಲೇಖನಗಳು, ಮೂವತ್ತು, ನಲವತ್ತು ಜಾಹಿರಾತುಗಳು, ಮತ್ತು ವರ್ಷಭವಿಷ್ಯ, ಅದಿಷ್ಟು ಒಟ್ಟುಗೂಡಿದಲ್ಲಿ ಒಂದು ವಾರ್ಷಿಕ ಸಂಚಿಕೆಯಾಗುವುದು ಎಂದು ವಾರ್ಷಿಕ ಸಂಚಿಕೆಗೆ ವ್ಯಾಖ್ಯೆ ಕೊಡಬಹುದು ‘ವಾಹಿನಿ’ಯೂ ಸಹ ವಾರ್ಷಿಕ ಸಂಚಿಕೆಯ ಲಕ್ಷಣಗಳನ್ನು ಮರೆಯದೆ (ನಿಯಮಗಳನ್ನು ಉಲ್ಲಂಘಿಸದೆ) ಹೊರಬಿದ್ದಿದೆಯೆನ್ನಬಹುದು. ಒಂದು ವರ್ಷದ ಸಾಹಿತ್ಯಸೃಷ್ಟಿಯ ಬಗ್ಗೆ ಬರೆಯಲಾಗಿರುವ ಲೇಖನಮಾಲೆಯೊಂದರ ವಿನಾ ಮತ್ತೇನೂ ವೈಶಿಷ್ಟ್ಯತೆ ಸಂಚಿಕೆಯಲ್ಲಿ ಕಂಡುಬರುವುದಿಲ್ಲ. ಈ ಮಾಲೆಯಲ್ಲಿ ವಿದಿತವಾಗಿರುವ ಅನೇಕ ಅಭಿಪ್ರಾಯಗಳನ್ನು ಒಪ್ಪಲು ಸಾಧ್ಯವಿಲ್ಲವೆಂದು ಈ ಮೊದಲೇ ಅನೇಕರು ಹೇಳಿರುತ್ತಾರೆ. ಸಲ್ಲದ ಯೋಗ್ಯತೆಯನ್ನು

ಕೆಲವು ಪುಸ್ತಕಗಳಿಗೆ ಹೇರಿರುವುದು, ಕೆಲವು ಹಿರಿಯ ಸಾಹಿತಿಗಳಲ್ಲಿ ಗುಲಾಮತನದ ಅಸ್ಪಷ್ಟ ಪ್ರದರ್ಶನವೂ, ಕಲುಷಿತ ಮನಸ್ಸಿನಿಂದ ಕೆಲವು ಕಡೆಗಳಲ್ಲಿ ಕಾಣಿಕೊಂಡಿರುವುದೆಂದೂ ಈ ಮಾಲೆಯ ಕೆಲವು ಲೇಖನಗಳಲ್ಲಿ ಕಂಡು ಬಂದಿರುವುದು ಖಂಡನಾರ್ಹವಾಗಿದೆ. 'ನನಗೆ ತಿಳಿದಮಟ್ಟಿಗೆ ಬ್ರಾಹ್ಮಣಸ್ವಾಮಿಗಳೊಬ್ಬರು ಕನ್ನಡದಲ್ಲಿ ಪುಸ್ತಕ ಬರೆದುದು ಇದೇ ಮೊದಲು' ಇದು ಆ ಮಾಲೆಯ ಒಂದು ಲೇಖನದಿಂದ ಆರಿಸಿದ ಆಣಿಮುತ್ತು. ಯೋಗ್ಯನಾದ ವಿಮರ್ಶಕ ಲೇಖಕರ ಜಾತಿಯನ್ನು [illegible]

[illegible]

ಗಳು ಇಲ್ಲವೇ ಇಲ್ಲ ಎಂದರೂ ತಪ್ಪಾಗಲಾರದು.

ವರ್ಷ ಭವಿಷ್ಯದ ಜಾಡ್ಯದಿಂದ ಮೂರು ಪತ್ರಿಕೆಗಳೂ ಇನ್ನೂ ಮುಕ್ತವಾಗಿಲ್ಲ. ರಕ್ಷಾಪತ್ರದ ಆಕರ್ಷಣೆಯಲ್ಲಿ, ಮೂರು ಪತ್ರಿಕೆಗಳೂ ಹಿಂದೆಬಿದ್ದಿವೆ. ಮುದ್ರಣಕಾರ್ಯ 'ವಾಹಿನಿ'ಯಲ್ಲಿ ಸುಂದರವಾಗಿ ನೆರವೇರಿದೆ, ವಿಕಟವಿನೋದಿನಿಯಲ್ಲಿ ಚೆನ್ನಾಗಿದೆ. 'ಪೌರವಾಣಿ' ಯಲ್ಲಿ ಪರವಾಗಿಲ್ಲ.

—ಆರ್. ಬಿ.

ಚಿತ್ರಸಮಾಚಾರ್

([illegible])

ಚಿತ್ರಕ್ಷೇತ್ರದಲ್ಲಿ ನಡೆಯುವುದನ್ನೆಲ್ಲ ನಿರ್ಭಯವಾಗಿ, [illegible]

ಸಾದರ ಸ್ವೀಕಾರ

[illegible]

[illegible]

ಬಿಡಿಪ್ರತಿ ೪ ಆಣೆ. ಸಂಪಾದಕರು: ಶ್ರೀ ಆರ್. ಎಸ್. ನಾರಾಯಣ ಅವರು. ೧೨, ಕಾಳಪ್ಪ ಬ್ಲಾಕ್. ಬಸವನಗುಡಿ. ಬೆಂಗಳೂರು]

ರಾಷ್ಟ್ರದ ಸೇವೆಯೇ ತನ್ನ ಗುರಿಯೆಂದು ಘೋಷಿಸಿ ಬಂದಿರುವ 'ಕೇಸರಿ' ಗೆ 'ಸ್ವತಂತ್ರ' ದ ಜೈ ಹಿಂದ್! ಸುಸ್ವಾಗತ! ಸಂಪಾದಕರಾದ ಶ್ರೀ. ನಾರಾಯಣರವರು ಬೆಂಗಳೂರಿನ ನುರಿತ ಪ್ರತಿಕೋದ್ಯೋಗಿಗಳು. 'ತಾಯಿನಾಡು' ಪತ್ರಿಕೆಗೆ ಸಂಬಂಧಪಟ್ಟವರು. ನಮ್ಮ ಮುಂದಿರುವ ಈ ಮೊದಲ ಸಂಜಿಕೆಯಲ್ಲಿ ರಾಜ್ಯಾಂಗ ನಿರ್ಮಾಣಸಭೆ, ಮೈಸೂರು ಜನತೆಯ ಆಶಯ, ಮೈಸೂರು ಕಾಂಗ್ರೆಸ್ ಹಾಗೂ ಭಾರತ ಕಾಂಗ್ರೆಸ್ ನವೀನ ಅಧ್ಯಕ್ಷರು, ಇತ್ಯಾದಿ ಪ್ರಾಸಂಗಿಕ ಲೇಖನಗಳಿವೆ. 'ನೃತ್ಯಕಲೆ'ಯನ್ನು ಕುರಿತು ಕುಮಾರ ವೆಂಕಣ್ಣನವರು ಬರೆದಿರುವ ಲೇಖನವೂ, ಅನಂತಭಟ್ಟರ ಕತೆಯೂ ಸಂಚಿಕೆಗೆ ಕಳೆ ಕಟ್ಟಿವೆ. ಸಹೋದ್ಯೋಗಿ 'ಕೇಸರಿ' ದಿನ ದಿನಕ್ಕೂ ಶಕ್ತಿಯನ್ನು ಬೆಳಸಿಕೊಂಡು ನೂತನ ಕರ್ನಾಟಕದ ನಿರ್ಮಾಣಕಾರ್ಯದಲ್ಲಿ ನೆರವಾಗಲೆಂಬುದೇ 'ಸ್ವತಂತ್ರ'ದ ಹಾರಯಿಕೆ.

ಸ್ವಾತಂತ್ರ್ಯ ಸಂಗ್ರಾಮ ಅಥವಾ ಶಿವಪುರದಿಂದ ಸುಭಾಷ ನಗರಕ್ಕೆ

ಮೈಸೂರು ಕಾಂಗ್ರೆಸ್ಸಿನ ಹುಟ್ಟು, ಬೆಳವಳಿಗೆ, ಹೋರಾಟ, ಇತ್ಯಾದಿಗಳ ಈ ಇತಿಹಾಸ ಸಮಯೋಚಿತವಾದದ್ದು. ಬೆಂಗಳೂರಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಸಂದರ್ಭದಲ್ಲಿ ಪ್ರಕಟವಾದ ಈ ಪುಸ್ತಕವನ್ನು ವಿಶ್ವಕರ್ನಾಟಕದ ಶ್ರೀ ಟಿ. ಟಿ. ಶರ್ಮರು ಬರೆದಿದ್ದಾರೆ. ನೆಹರು ಪ್ರಕಟನ ಮಂದಿರದವರು ಪ್ರಕಾಶಕರು. ಬೆಲೆ ೦-೬-೦ ಮಾತ್ರ. ಕಾಂಗ್ರೆಸ್ ಪ್ರೇಮಿಗಳೆಲ್ಲ ಸಂಗ್ರಹಿಸಬೇಕಾದ ಚಿಕ್ಕ ಪುಸ್ತಕ ಇದು.

ಸ್ವೀಕಾರ

೧. ಒಡೆದ ಕನ್ನಡಿ (ಹರಟೆಗಳ ಸಂಗ್ರಹ) ಶ್ರೀ ಎನ್. ಎಸ್. ಗದಗಕರ.

೨. ಮೃಗಜಲ (ಕಥಾಸಂಗ್ರಹ) ಶ್ರೀ ಟಿ. ಆರ್. ಭಾಗವತ.

೩. ಗ್ರಾಮಪಂಚಾಯತನ (ಕಾದಂಬರಿ) ಶ್ರೀ ಬಾ. ಕೃ. ಲಕ್ಷ್ಮೇಶ್ವರ.

೪. ವಿವೇಕ ಚೂಡಾಮಣಿ ಶ್ರೀ ಎಂ. ಎಸ್. ಸುಬ್ಬಣ್ಣ.

೫. ಲಂಚ ಪ್ರಪಂಚ.

— ಮ. ಶ್ರೀಧರಮೂರ್ತಿ.

ವೀರಮಹಿಳೆ ವಿಜಯಲಕ್ಷ್ಮಿ

●

ಕುಮಾರಿ ಯಶೋಧರಾ ದಾವಣಗೆರೆ

●

'ಕಿತ್ತೂರು ಚೆನ್ನಮ್ಮ, ವೀರರಾಣಿ ಪದ್ಮಿನಿ ಇವರೆಲ್ಲರಿಗಿಂತ ಹೆಚ್ಚು ಮುಂದುವರೆದವರು ನಮ್ಮ ವಿಜಯಲಕ್ಷ್ಮಿ ಪಂಡಿತ್. ಶ್ರೀಮಂತಿಕೆಯಲ್ಲಿ ಬೆಳೆದು ಸುಖವಾಗಿ ಉಂಡು ತಿಂದು ನಲಿಯುವುದನ್ನು ಬಿಟ್ಟು ಭಾರತದ ಹಿತಕ್ಕಾಗಿ ಸರ್ವಸ್ವವನ್ನೂ ತ್ಯಾಗಮಾಡಿ ನಾಡಿಗಾಗಿ ಹಗಲೂ ರಾತ್ರಿ ದುಡಿಯುತ್ತಿರುವ ವಿಜಯಲಕ್ಷ್ಮಿ, [illegible]

[illegible]

ರಾಷ್ಟ್ರಪ್ರೀತಿ, ದೇಶಭಕ್ತಿಗಳಿಗೆ ತವರುಮನೆಯಾದ ನೆಹರೂ ಪರಿವಾರದಲ್ಲಿ ಹುಟ್ಟಿದ ವಿಜಯಲಕ್ಷ್ಮಿಗೆ ಚಿಕ್ಕಂದಿನಿಂದಲೂ ದೇಶ ಪ್ರೀತಿ ಬೆಳೆದಿದ್ದಲ್ಲಿ ಆಶ್ಚರ್ಯವೇನೂ ಇಲ್ಲ. ಯೋಗ್ಯವಾದ ಶಿಕ್ಷಣ, ಉಚಿತವಾದ ಸಹವಾಸ, ತಂದೆ, ಸೋದರರ ಉತ್ಸಾಹಜನಕ ಸಹಾಯ, ಹೆಚ್ಚಾಗಿ ಅಲ್ಲಿನ ಸ್ವಾತಂತ್ರ್ಯದ ಗಾಳಿ ವಿಜಯಲಕ್ಷ್ಮಿಯನ್ನು ತೇಜಸ್ವೀ ಸ್ತ್ರೀಯನ್ನಾಗಿ ಮಾಡಲು ನೆರವಾದವು. ಅಂದು ಆನಂದಭವನದಲ್ಲಿ ದೊರೆತ ಆ ಶಿಕ್ಷಣವೇ ಇಂದು ಮಂತ್ರಿಣಿ, ನಿಯೋಗಿ ವಿಜಯಲಕ್ಷ್ಮಿಯ ಪ್ರಭಾವಕ್ಕೆ ಕಾರಣವೆಂದು ಹೇಳದೆ ತಪ್ಪಿಲ್ಲ.

ವಿಜಯಲಕ್ಷ್ಮಿ ಪ್ರಭಾವಶಾಲಿ ಮಾತುಗಾರಳಾಗಿರುವಂತೆಯೇ ಕೆಲಸಗಾರಳೂ ಆಗಿದ್ದಾರೆ. ಇಂಗ್ಲಿಷಿನಲ್ಲಿ [illegible] ಎಲ್ಲ ಗುಣಲಕ್ಷಣ [illegible] ನಿಯೋಗಗಳಲ್ಲಿರುವ [illegible] ಪ್ರೀತಿ [illegible]

[illegible]

ರಜತಪರದೆ

ನಿರ್ದೇಶಕರು : 'ಪ್ರಭು'

ವಾರ್ತಾ ಸಂಗ್ರಹ

(ನಮ್ಮ ವಾಚಕರಿಗಾಗಿ ವಿವಿಧ ಪತ್ರಿಕೆಗಳಿಂದ ಸುದ್ದಿಗಳನ್ನು ಆಯ್ದು, ತಕ್ಕ ರೂಪು ಕೊಟ್ಟು ಈ ವಿಭಾಗದಲ್ಲಿ ಸಂಗ್ರಹಿಸಲಾಗಿದೆ)

ವಿವಾಹ

ಷಾಲಿಮಾರ್ ಸಂಸ್ಥೆಯ ಒಡೆಯರಾದ ಡಬ್ಲ್ಯು. ಜಡ್. ಆಹಮುದ್‌ರವರು, ನಟಿ ನೀನಾ (ಶಾಹಿದಾ ಬೇಗಂ) ಳನ್ನು ಮದುವೆಯಾದ ವಾರ್ತೆ ಬಂದಿದೆ. ಅಹಮದರ ಮೊದಲ ಪತ್ನಿ, ಸಫಿಯಾಬೇಗಂ ಈಗ ಅಮೇರಿಕದಲ್ಲಿ ಮತ್ತೊಂದು ವಿವಾಹದ ಯೋಚನೆಯಲ್ಲಿದ್ದಾಳೆ. ನೀನಳ ಮೊದಲನೇ ಪತಿ, ಮೊಹಸಿನ್ ಅಬ್ದುಲ್ಲಾ 'ಷಿಕಾರಿ' ಯ ನಟ ವೀರಳನ್ನು ವರಿಸಿದ್ದಾರೆ.

—ಸೌಂಡ್.

ಸುಮನ್‌ಸುಲೆ ಎಂಬಾಕೆಯು ಮಜಾರ್‌ಖಾನರ ಮೂರನೇ ಧರ್ಮಪತ್ನಿಯಾದಳಂತೆ. ಈ ಖಾನರ ಮೊದಲ ಇಬ್ಬರು ಹೆಂಡತಿಯರೂ ಜೀವಂತವಾಗಿಯೇ ಇದ್ದಾರೆ.

—ಪಿಕ್ಚರ್ ಪೋಸ್ಟ್.

ಶಾಂತ ಚಿತ್ತ ಚೋರ

ಎ. ಆರ್. ಕಾರ್ದಾರರಿಗೆ ಮಧ್ಯರಾತ್ರಿಯಲ್ಲಿ ಹಣದ ಪೆಟ್ಟಿಗೆಯ ಬೀಗದ ಕೈಗಳಿಗಾಗಿ ಯಾರೋ ಭೇಟಿ ಕೊಟ್ಟಿದ್ದರಂತೆ. ಸುಳುವು ಕೊಡದೆ, ಪೋಲೀಸರಿಗೆ ಫೋನ್ ಮೂಲಕ ತಿಳಿಸಲಾಗಿ ಆ ಶಾಂತಚಿತ್ತ ಚೋರನನ್ನು ಪೋಲೀಸರು ಬಂದು ಕರೆದೊಯ್ದರಂತೆ.

— ಸೌಂಡ್

[illegible]

[illegible]

[illegible]

—[illegible]

[illegible]

[illegible]

ಳನ್ನು ಒದಗಿಸುತ್ತಿರುವುದಾಗಿ ಒಂದು ವರದಿ.

—ಟಾಕ್-ಎ-ಟೋನ್

ಶಾಂತಾರಾಮರ ಚಟುವಟಿಕೆಗಳು.

ಗ್ಲೋಬ್ ಸಂಸ್ಥೆಯ ವಾರ್ತೆಯೊಂದರಿಂದ, ಶಾಂತಾರಾಮರು, ಡಾ. ಕೋಟ್ನಿಸ್ ಚಿತ್ರಕ್ಕೆ ಇಂಗ್ಲೀಷ್ ಸಂಭಾಷಣೆಗಳನ್ನಿಟ್ಟುಕೊಂಡು, 'ದಿ ಸಾಂಗ್ ಆಫ್ ಬುದ್ಧ' ಎಂಬ ಹೆಸರಿನಲ್ಲಿ ಅಮೇರಿಕ ಮತ್ತು ಇಂಗ್ಲೆಂಡ್ ದೇಶಗಳಲ್ಲಿ ಪ್ರದರ್ಶಿಸಲು ಪ್ರಯತ್ನಿಸುತ್ತಿದ್ದಾರೆಂದು ತಿಳಿದುಬಂದಿದೆ.

ಈ ಸುದ್ದಿ ಹೇಗೋ ಸ್ವಾಗತಾರ್ಹವೇ ಸರಿ. ಆದರೆ ಚಿತ್ರದ ಹೆಸರನ್ನು 'ದಿ ಸಾಂಗ್ ಆಫ್ ಬುದ್ಧ' ಎಂಬುದಾಗಿ ಮಾರ್ಪಡಿಸುವ ಅವಶ್ಯಕತೆಯೇನಿತ್ತು? ಶಾಂತಿಸ್ಥಾಪನೆಯಲ್ಲಿ ಅತಿ [illegible] ಸೇವೆಗೈದ ಡಾ. ಕೋಟ್ನೀಸರಿಗೆ ಅಂತರ್ರಾಷ್ಟ್ರೀಯ ಪ್ರಚಾರ ಕೊಡಲು ಶಾಂತಾರಾಮರಿಗೆ ಹೆದರಿಕೆಯೆ? ಬುದ್ಧನ ಹೆಸರನ್ನು ಎಳೆಯದೆ, ಚಿತ್ರಕ್ಕೊಂದು ವಿಚಿತ್ರ ರೀತಿ ಮುಸುಕನ್ನು ಹೊದಿಸದೇ ಇದ್ದಲ್ಲಿ, ಅಮೇರಿಕನರನ್ನು ಸಿನಿಮಾ ಮಂದಿರಗಳ ಕಡೆಗೆ [illegible] ಸಾಧ್ಯವಿಲ್ಲವೆಂದು ಶಾಂತಾರಾಮರು ಭಾವಿಸುವರೇ? ಚಿತ್ರದ [illegible] ಇದ್ದಲ್ಲಿ. [illegible] ಶಾಂತಾರಾ[illegible]? [illegible] 'ದಿ [illegible] ಆಫ್ ಡಾ. [illegible]'

ಚಿತ್ರವನ್ನೇಕೆ ಗಮನಿಸಬಾರದು ?........ .... ಮತ್ತೇಕೆ ಈ ಮೂರ್ಖತನ ಶಾಂತಾರಾಮರೆ ?

—ಟಾಕೀ ಹೆರಾಲ್ಡ್

ಶಾಂತಾರಾಮರು ಸ್ವದೇಶಕ್ಕೆ ಹಿಂತಿರುಗಿದ ಕೂಡಲೆ ಅರ್ಥರ್ ರ‍್ಯಾಂಕ್ ಎಂಬ ಬ್ರಿಟಿಷ್ ಬಂಡವಾಳಗಾರರಿಗಾಗಿ ಹಿಂದೂ ದೇಶದಲ್ಲಿ ಚಿತ್ರಗಳನ್ನು ತಯಾರಿಸುವರೆಂದು ವದಂತಿಹಬ್ಬಿದೆ.

—ಪಿಕ್ಚರ್ ಪೋಸ್ಟ್.

ನೀಚಾನಗರ್

ಫ್ರಾನ್ಸಿನ ಕಾನಸ್ ಎಂಬಲ್ಲಿ ನಡೆಯುತ್ತಿರುವ ಅಂತರ್ರಾಷ್ಟ್ರೀಯ ಚಿತ್ರಪ್ರದರ್ಶನೋತ್ಸವದಲ್ಲಿ ಹಿಂದೂದೇಶದ ಪರವಾಗಿ ಪ್ರದರ್ಶಿಸಲ್ಪಟ್ಟ 'ನೀಚಾನಗರ್' ಎಂಬ ಚಿತ್ರಕ್ಕೆ ವಿಶೇಷ ಮನ್ನಣೆ ದೊರೆತಿದೆ. ಈ ಉತ್ಸವದಲ್ಲಿ ಪ್ರದರ್ಶಿಸಲ್ಪಟ್ಟ ಚಿತ್ರಗಳಲ್ಲಿ ಆರಿಸಲ್ಪಟ್ಟ ನಾಲ್ಕು ಉತ್ತಮ ಚಿತ್ರಗಳಲ್ಲಿ ಇದೂ ಒಂದೆಂದು ಗಣಿಸಲಾಗಿದೆ ಮತ್ತು ಬಹುಮಾನವೂ ಸಹ ಕೊಡಲ್ಪಟ್ಟಿದೆ.

—ಇಂಡಿಯನ್ ಎಕ್ಸ್‌ಪ್ರೆಸ್.

ರೇಮುಂಡ್ ಬಾರ್ಕ್ಯ ಫ್ರಾನ್ಸ್‌ದೇಶದ ಪ್ರಸಿದ್ಧ ಚಿತ್ರ ವಿಮರ್ಶಕರು. ಇವರು ಹಿಂದೂಸ್ಥಾನದ ಪರವಾಗಿ ಅಂತರ್ರಾಷ್ಟ್ರೀಯ ಚಿತ್ರಪದರ್ಶನೋತ್ಸವದಲ್ಲಿ ಪ್ರದರ್ಶಿಸಲ್ಪಟ್ಟ 'ನೀಚಾನಗರ್' ಬಗ್ಗೆ ಅಲ್ಲಿನ ಪತ್ರಿಕೆಯೊಂದರಲ್ಲಿ ಈ ರೀತಿ ಅಭಿಪ್ರಾಯಪಟ್ಟಿರುತ್ತಾರೆ. "........ 'ನೀಚಾನಗರ್', ಹಿಂದೂಸ್ಥಾನದ ನಟನಟಿಯರಿಂದ ಅಭಿನಯಿಸಲ್ಪಟ್ಟ, ಸತ್ಯ, ಸಾಮಾಜಿಕದೃಶ್ಯ. ಹಿಂದೂದೇಶದ ವಾತಾವರಣವನ್ನು ನೈಜತೆಯೊಂದಿಗೆ ಒದಗಿಸುವುದರಲ್ಲಿ ಇದು ಎಲ್ಲ ತಾಂತ್ರಿಕ ಕೌಶಲ್ಯಗಳನ್ನೂ ಮೀರಿಸಿದೆ. ಈ ಚಿತ್ರದಮಟ್ಟ ತುಂಬಾ ಉತ್ತಮವಾಗಿರುವುದು ನಿಜಕ್ಕೂ ಆಶ್ಚರ್ಯಕರ ಮತ್ತು ಗಮನೀಯವಾದ ವಿಚಾರ........'

ಕೃಷ್ಣಲೀಲಾ ಚಿತ್ರದಲ್ಲಿ ರತ್ನಮಾಲಾ

ಅಂತ್ಯದಲ್ಲಿ ಈ ರೀತಿ ಬರೆಯುತ್ತಾರೆ. 'ಸತ್ತು ಹೋದ ತನ್ನ ಮಗುವಿನ ಮೇಲೆ ಬಿದ್ದುಕೊಂಡು ತಾಯಿ ರೋದಿಸುವ ಆ ದೃಶ್ಯವನ್ನು ನಾನು ಎಂದಿಗೂ ಮರೆಯಲಾರೆ.'

—ಫೋರಂ.

ನವ ಭವಿಷ್ಯ

ನವಂಬರ್ ೧೯೪೬

[ಜ್ಯೋತಿಷ ಚೂಡಾಮಣಿ]

ಮೇಷ : ನಿಮ್ಮ [illegible]

ವೃಷಭ : [illegible]

ಮಿಥುನ : [illegible]

ಕರ್ಕ : [illegible]

ಸಿಂಹ : [illegible]

ಕನ್ಯಾ : ನೌಕರಿಂಧಂದೆ, ಉದ್ಯೋಗಗಳಲ್ಲಿ ಟೋಪಿ. ಮಿತ್ರರಲ್ಲಿ ಆಂತರಿಕ ಉದಾಸೀನ, ಅನೇಕ ಕಷ್ಟಕಾರ್ಯಗಳನ್ನು ಅವಶ್ಯವಾಗಿ ಸ್ವೀಕರಿಸಬೇಕಾಗುತ್ತೆ.

ತುಲಾ : ನೀವು ಧಾರ್ಮಿಕ ಕಾರ್ಯಕ್ಕೆಂದು [illegible] ಮಾಡಿಕೊಟ್ಟಿದ್ದ ದುಡ್ಡು ವ್ಯಕ್ತಿ ವಿಲಾಸಕ್ಕೆ ವಿನಿಯೋಗಿಸಲಾಯಿತು ಎಂದು ತಿಳಿಯುವುದು. ಐಶ್ವರ್ಯಪ್ರಾಪ್ತಿ.

ವೃಶ್ಚಿಕ : ನಿಮಗೆ ನವಗ್ರಹಗಳಿಗಿಂತಲೂ [illegible] ಶತ್ರುಗಳಿದ್ದಾರೆ. ಅವರು ನಿಮ್ಮ [illegible] ನಿಮ್ಮ ಮೇಲೆ ಎತ್ತಿಕಟ್ಟುವ [illegible].

ಧನು : ಈ ಮಾಸ [illegible] ಸಂಪಾದನೆ [illegible], [illegible]

ಮಕರ : [illegible] ಕೊಂಡರೆ. [illegible] ಅವರು [illegible]

ಕುಂಭ : [illegible]

ಮೀನ : [illegible]

[illegible]

ಬಟ್ಟೆ ಮತ್ತು ಚರ್ಮದ ಕೈಗಾರಿಕೆಯಲ್ಲಿ

ಉಮಾ ಟರ್ಕಿ—

ರೆಡ್ ಆಯಿಲ್

50% 70% 100%

ಈ ಎಲ್ಲ ತರಹೆಯೂ ನಮ್ಮಲ್ಲಿದೆ.

: ಈ ವಿಳಾಸಕ್ಕೆ ಬರೆಯಿರಿ :

ಉಮಾ ಕೆಮಿಕಲ್ ಅಂಡ್
ಅಲ್ಲಿಡ್ ಇಂಡಸ್ಟ್ರೀಸ್

ಹೊಸ ತರಗುಪೇಟೆ, ಬೆಂಗಳೂರು ಸಿಟಿ

चि. म. वीरभद्रशर्मा. नीलगिरि

ಧರ್ಮ ಸಂಜೀವಿನೀ

(ಕನ್ನಡ ಮಾಸಪತ್ರಿಕೆ)

ಕಂದ|| ಕನ್ನಡನಾಡೊಳು ಸಲಿಸಂ| ಪನ್ನ ಭಾ [illegible]
ಮುನ್ನಿನ ಧರ್ಮಾದಿಗಳಂ| ಬನ್ನಣದಿಂ [illegible]

ಸಂಪುಟ ೨] ಕ್ಷಯ ಸಂ|| ನಿಜ [illegible] [ಸಂಚಿಕೆ ೬

ಧಾರವಾಡ.

ಸಂಪಾದಕರು:—
ಯರ್. ಜಿ. ಬಸವರಾಜಶಾಸ್ತ್ರೀ,
ಯಂ. ಎಸ್. ಬಸವಪ್ಪಶಾಸ್ತ್ರೀ,
ಧರ್ಮಸಂಜೀವಿನೀ ನಿಲಯ, ರಾಯಚೂರು.

ಮಾಡಲ್ ಮುದ್ರಾಕ್ಷರಶಾಲಾ, ಬೆಂಗಳೂರು ಸಿಟಿ.

೫೦೫
(೫)

ವಿಷಯಗಳು.

ಕ್ಷಯಸಂವತ್ಸರವು.
ವಿವಿಧ ವಿಷಯಗಳು.
[illegible] ನಿರಂಜನಪ್ಪ, ಸಿದ್ದಾಪುರ.
[illegible] ಹನುಮಂತರಾವ್, ಸೆಕ್ರೆಟರಿ.
[illegible] ವೆಂಕಟರಾವ್, ವಕೀಲ.
[illegible] [illegible]
[illegible] [illegible]
[illegible] [illegible]
[illegible] [illegible]

ಧರ್ಮಸಂಜೀವಿನೀ (ಮಾಸಪತ್ರಿಕೆ.)

[illegible]

[illegible]

[illegible]

[illegible]

॥ ಶ್ರೀಃ ॥

ಧರ್ಮಸಂಜೀವಿನೀ

ಸಂಪುಟ ೨.] ಕ್ಷಯ ಸಂ॥ ನಿಜಚೈತ್ರ. [ಸಂಚಿಕೆ ೬.

ಶಾ॥ ವೃ॥ ಶ್ರೀಮದ್ಧರ್ಮ ಪರಂಪರಾಪ್ರಣಯಿನೀ ಸತ್ಕಾರ್ಯ ಸಂವರ್ಧಿನೀ।
ಸತ್ಕಾಮೋತ್ಕರಪೂರಣೀ ಪ್ರವಿಲಸನ್ಮೋಕ್ಷಾಧ್ವ ಸಂದರ್ಶಿನೀ॥
ಅನ್ಯೇಷೂತ್ತಮ ಭವ್ಯಕಾರ್ಯನಿವಹೇಷ್ವೌತ್ಸುಕ್ಯ ಸಂಪಾದಿನೀ।
ಸೇಯಂ ಸಾಧುಸಮಾರ್ಜನೀಯ ವಿಷಯಾಸದ್ಧರ್ಮಸಂಜೀವಿನೀ ॥೧॥

——:೦:——

ಕ್ಷಯ ಸಂವತ್ಸರವು

ಜಗದೀಶ್ವರನು ನಾನಾ ಆಕಾರ ಮತ್ತು ನಾನಾ ಹೆಸರುಳ್ಳ ಪ್ರಪಂಚಕ್ಕೆ ಹೇಗೆ ಮೂಲಕಾರಣನಾಗಿರುವನೋ ಹಾಗೆ ಆತನಿಂದ ಸೃಷ್ಟವಾದ ಕಾಲತತ್ತ್ವವಾದರೂ ಜಗತ್ತಿನಕಾರಣವಾಗಿದೆ. ಅದರಿಂದ ಸಕಲರು ಈಶ್ವರಾಧೀನರು ಮತ್ತು ಕಾಲಾಧೀನರು ಎಂದು ನುಡಿಯುತ್ತಿರುವ ರೂಢಿಯುಂಟು. ಈಶ್ವರನ ಪರಿಣಾಮವು ಯಾರಿಂದಲೂ ನಿರ್ಧರಿಸಲಿಕ್ಕೆ ಆಗಲಾರದು. ಆದರೆ ಕಾಲದ ಪರಿಣಾಮವು ಶಾಸ್ತ್ರಗಳಿಂದ ನಿರ್ಧರಿಸಲ್ಪಟ್ಟಿರುವದು. ಅದು ಹೇಗೆಂದರೆ—ಒಂದುವೇಳೆ ರೆಪ್ಪೆಯನ್ನು ಮುಚ್ಚುವಷ್ಟು ಕಾಲವು ನಿಮೇಷವೆನಿಸುವದು; ೧೮ ನಿಮೇಷಗಳಾಗಲು ೧ ಕಾಷ್ಠೆ; ೩೦ ಕಾಷ್ಠೆಗಳಾಗಲು ೧ ಕಲೆ; ೩೦ ಕಲೆಗಳಾಗಲು ೧ ಕ್ಷಣ; ೧೨ ಕ್ಷಣಗಳಾಗಲು ಒಂದು ಮುಹೂರ್ತ, ೩೦ ಮುಹೂರ್ತಗಳಾಗಲು ಹಗಲಿರುಳು ಕೂಡಿದ ೧ ದಿವಸ; ೧೫ ದಿವಸಗಳಾಗಲು ೧ ಪಕ್ಷ; ೨ ಪಕ್ಷಗಳಾಗಲು ೧ ಮಾಸ, ೧೨ ಮಾಸಗಳಾಗಲು ೧ ವರ್ಷ. ಪ್ರಭವ ಮೊದಲಾಗಿ ಕ್ಷಯಕಡೆಯಾಗಿ ಇರುವವೇ ೬೦ ವರ್ಷಗಳು. ಪುರುಷನ ಆಯುಷ್ಯವು ೧೦೦ ವರ್ಷದ್ವಾಗಿದ್ದರೂ ಯಾವನಾದರೊಬ್ಬನು ಹುಟ್ಟಿ ೬೦ ವರ್ಷ ಬಾಳಿದ ಮಾತ್ರಕ್ಕೆ ಪರಮಾತ್ಮ ವಾಚಕವಾದ ಯಜಮಾನಶಬ್ದದಿಂದ ಅವನನ್ನು ಕರೆಯುವರೆಂದರೆ ಮನುಷ್ಯಶರೀರಕ್ಕೆ ಕಾಲದಿಂದ ಉಂಟಾಗುವ ಗೌರವವು ಎಷ್ಟರಮಟ್ಟಿಗಿರುವದೆಂಬುದು

ಸ್ಪಷ್ಟವಾಗಿ ತೋರುತ್ತದೆ. ಪ್ರಭವಾದಿಯಾದ ೬೦ ವರ್ಷಗಳಲ್ಲಿ ಮೊದಲ ೨೦ ವರ್ಷಗಳು ಉತ್ತಮಗಳೆಂತಲೂ, ಆಮೇಲೆ ೨೦ ವರ್ಷಗಳು ಮಧ್ಯಮಗಳೆಂತಲೂ, ಕಡೆಯ ೨೦ ವರ್ಷಗಳು ಕನಿಷ್ಠಗಳೆಂತಲೂ, ಅವು ಕ್ರಮವಾಗಿ ಉತ್ತಮ, ಮಧ್ಯಮ, ಕನಿಷ್ಠ ಫಲಗಳನ್ನೇ ಕೊಡುವವೆಂತಲೂ ಹೇಳುತ್ತಾರೆ. ಅದರಂತೆ ಇತ್ತಿತ್ತ ಕಡೆಯ ವರ್ಷಗಳಲ್ಲಿ ಮೇಲಿಂದಮೇಲೆ ಬರಗಾಲವೂ, ನಾನಾವಿಧಗಳಾದ ಸೋಂಕುರೋಗ (ಪ್ಲೇಗು, ಇನ್‌ಫ್ಲುಯೆಂಜಾ ಮುಂತಾದವು) ಗಳೂ ಪರರಾಷ್ಟ್ರಗಳ ಕಾದಾಟವೂ, ಸ್ವದೇಶದ ಕೋಲಾಹಲವೂ, ಪರಸ್ಪರ ಜಾತಿಗಳ ಅಸೂಯೆಯೂ ಹೆಚ್ಚಾಗಿ ಈ ಕಾರಣಗಳಿಂದ ಇಡೀ ಜಗತ್ತು ಸುಖಕ್ಕೆಂತಲೂ ಬರಿಯ ದುಃಖವನ್ನೇ ಅನುಭವಿಸುತ್ತಿದೆ. ಅವರಲ್ಲಿ [illegible] ಕ್ಷಯಸಂವತ್ಸರವು ತನ್ನ ಹೆಸರಿಗೆ ತಕ್ಕ ಫಲವನ್ನೇ [illegible] ಅನುಮಾನಿಸುತ್ತಿರುವರು. ಆದರೂ ಈ ಸಂವತ್ಸರದ [illegible] ಅಧಿಕವಾಗಿ ಬಂದುದರಿಂದ ಜಗತ್ತಿಗೆ [illegible] ಕ್ಷಯಸಂವತ್ಸರದಲ್ಲಿ [illegible] ಸಸ್ಯಾಧಿಪತಿ ಶುಕ್ರ, ಧಾನ್ಯಾಧಿಪತಿ ಬುಧ, ಮೇಘಾಧಿಪತಿ [illegible] ರಸಾಧಿಪತಿ [illegible] ನೀರಸಾಧಿಪತಿ ಗುರು, ಅರ್ಘಾಧಿಪತಿ [illegible] ಈ ಪ್ರಕಾರ ಆಗಿರುವರು. [illegible] ಪ್ರವೇಶವಾಗುವದು. [illegible] ಪ್ರವೇಶಿಸುವದು. [illegible] ಈ ಮೊದಲಾದ ಕಾರಣಗಳಿಂದ [illegible]

[illegible]

ಧರ್ಮಸಂಜೀವಿನಿಯ ಸಂಚಿಕೆಯು ಕ್ಷಯ ಸಂವತ್ಸರದ ಅಧಿಕ ಚೈತ್ರಮಾಸದಲ್ಲಿ ಬರಲಿಲ್ಲವೆಂದು ವಾಚಕರಲ್ಲಿ ಕೆಲವರು ಅನ್ನುತ್ತಿರಬಹುದು. ಹಾಗೆ ಮಾಡಿದಲ್ಲಿ ವರ್ಷಕ್ಕೆ ೧೨ ಸಂಚಿಕೆಗಳು ಆಗುವದಕ್ಕೆ ಬದಲಾಗಿ ೧೩ ಸಂಚಿಕೆಗಳಾಗುತ್ತಿದ್ದವು. ಇಂಗ್ಲೀಷ ತಿಂಗಳುಗಳನ್ನು ಹಿಡಿದು ಮಾಸಪತ್ರಿಕೆಯನ್ನು ಹೊರಡಿಸುವವರಿಗೆ ಈ ಪ್ರಸಂಗವು ಬರುವದಿಲ್ಲ. ಒಂದುವೇಳೆ ಹಾಗಾಗಬೇಕೆಂಬ ಇಚ್ಛೆಯುಂಟಾದರೂ ಚಿಕ್ಕವಳಾದ ಸಂಜೀವಿನಿಗೆ ಅಷ್ಟೊಂದು ಖರ್ಚನ್ನು ವಹಿಸಿಕೊಳ್ಳುವ ಸಾಮರ್ಥ್ಯವು ಹೇಗೆ ಬಂದೀತು? ಆ ಕಾರಣ ೨ನೆಯ ಸಂಪುಟದ ೬ನೆಯ ಸಂಚಿಕೆಯನ್ನು ಈ ನಿಜ ಚೈತ್ರದಲ್ಲಿ ಪ್ರಚಾರಗೊಳಿಸಿರುತ್ತೆ.

ಸಂಪಾದಕೀಯ ಟಿಪ್ಪಣಿ.

ಧರ್ಮಸಂಜೀವಿನಿಯು ದಿನೇದಿನೇ ವೃದ್ಧಿಯನ್ನು ಹೊಂದಬೇಕಾದ ಕಾರಣಗಳಲ್ಲಿ ಉತ್ತಮ ಲೇಖನಗಳ ಸಂಚಯವು ಕೂಡಾ ಒಂದು ಕಾರಣವೇ ಆಗಿದೆ. ಆದರಂತೆ ಅನಂತ ಜನರ ಲೇಖಗಳು ಇದರಲ್ಲಿ ಸೇರಿಸಲ್ಪಡುತ್ತಿವೆ. ಆದರೆ ಲೇಖಕರ ಲೇಖಗಳಲ್ಲಿ ಪ್ರಮಾದವಶದಿಂದ ತೋರಿಬರುವ ತಪ್ಪುಗಳಿಗೆ ಸಂಪಾದಕರು ಹೊಣೆಗಾರರಲ್ಲವೆಂಬುದನ್ನು ಎಲ್ಲರೂ ಅರಿಯತಕ್ಕದ್ದು.

ರಥೋತ್ಸವ

ಕ್ರಿಯಾಸಿದ್ಧಿಯಿಂದ ಮಹಿಮಾತಿಶಯವನ್ನು ತೋರಿ ಈ ಲೋಕದ ಉದ್ಧಾರಕೃತಿಯನ್ನೆಸಗಿದ ಮಹಾನುಭಾವರು ವೀರಶೈವ ಸಮಾಜದಲ್ಲಿ ಎಷ್ಟೋ ಆಗಿಹೋಗಿರುವರು. ಅಂತಹ ಮಹಾತ್ಮರಲ್ಲಿ ಒಬ್ಬರಾಗಿದ್ದ ಸಹಜ ವಿರಕ್ತರೆನಿಸಿದ ನೀರಡಗುಂಭ ಪಶ್ಚಿಮಾದ್ರಿಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳ ರಥೋತ್ಸವವೂ ತದಂಗಭೂತವಾದ ಗಣಾರಾಧನೆಯೂ ಗತಸಂವತ್ಸರದ ಫಾಲ್ಗುಣ ಬ|| ೩ ದಿವಸ ಸಮರ್ಪಕವಾಗಿ ನೆರವೇರಿಸಲ್ಪಟ್ಟವು. ಮತ್ತು ಯಾತ್ರಾರ್ಥಿಗಳಾಗಿ ಬಂದು ಶ್ರೀ ಸ್ವಾಮಿಗಳ ದರ್ಶನಕ್ಕೆ ಪಾತ್ರರಾದ ಸಮಸ್ತ ಸಜ್ಜನರಿಗೆ ಭಕ್ತಿ-ಜ್ಞಾನ ಬೋಧಕಗಳಾದ ಶಿವಭಜನ ಕೀರ್ತನಗಳು ಸುಶ್ರಾವ್ಯವಾಗಿ ಜರುಗಿಸಲ್ಪಟ್ಟವು.

ಸಮಾಜಾಭಿಮಾನಿ.

ಸ್ಪಷ್ಟವಾಗಿ ತೋರುತ್ತದೆ. ಪ್ರಭವಾದಿಯಾದ ೬೦ ವರ್ಷಗಳಲ್ಲಿ ಮೊದಲ ೨೦ ವರ್ಷಗಳು ಉತ್ತಮಗಳೆಂತಲೂ, ಆಮೇಲೆ ೨೦ ವರ್ಷಗಳು ಮಧ್ಯಮಗಳೆಂತಲೂ, ಕಡೆಯ ೨೦ ವರ್ಷಗಳು ಕನಿಷ್ಠಗಳೆಂತಲೂ, ಅವು ಕ್ರಮವಾಗಿ ಉತ್ತಮ, ಮಧ್ಯಮ, ಕನಿಷ್ಠ ಫಲಗಳನ್ನೇ ಕೊಡುವವೆಂತಲೂ ಹೇಳುತ್ತಾರೆ. ಆದರಂತೆ ಇತ್ತಿತ್ತ ಕಡೆಯ ವರ್ಷಗಳಲ್ಲಿ ಮೇಲಿಂದಮೇಲೆ ಬರಗಾಲವೂ, ನಾನಾವಿಧಗಳಾದ ಸೋಂಕುರೋಗ (ಪ್ಲೇಗು, ಇನ್‌ಫ್ಲ್ಯುಯೆಂಜಾ ಮುಂತಾದವು) ಗಳೂ ಪರರಾಷ್ಟ್ರಗಳ ಕಾದಾಟವೂ, ಸ್ವದೇಶದ ಕೋಲಾಹಲವೂ, [illegible] ಹೆಚ್ಚಾಗಿ ಈ ಕಾರಣಗಳಿಂದ ಇಡೀ ಜಗತ್ತು ಸುಖಕ್ಕಿಂತಲೂ ಬಹಳ ದುಃಖವನ್ನೇ ಅನುಭವಿಸುತ್ತಿದೆ. ಅದರಲ್ಲಿ [illegible] ಕ್ಷಯಸಂವತ್ಸರವು ತನ್ನ ಹೆಸರಿಗೆ ತಕ್ಕ ಫಲವನ್ನೇ [illegible] ಅನುಮಾನಿಸುತ್ತಿರುವರು. ಆದರೂ ಈ [illegible] ಬರುವುದರಿಂದ ಜಗತ್ತಿಗೆ [illegible] ಕ್ಷಯಸಂವತ್ಸರದಲ್ಲಿ [illegible] ಬುಧ, [illegible] ಈ ಪ್ರಕಾರ ಆಗುವರು. [illegible] ಪ್ರವೇಶವಾಗುವದು. [illegible] ಪ್ರವೇಶವಿಸುವದು. [illegible] ಈ [illegible] ಕಾರಣಗಳಿಂದ [illegible]

[illegible]

ಧರ್ಮಸಂಜೀವಿನಿಯ ಸಂಚಿಕೆಯು ಕ್ಷಯ ಸಂವತ್ಸರದ ಅಧಿಕ ಚೈತ್ರಮಾಸದಲ್ಲಿ ಬರಲಿಲ್ಲವೆಂದು ವಾಚಕರಲ್ಲಿ ಕೆಲವರು ಅನ್ನುತ್ತಿರಬಹುದು. ಹಾಗೆ ಮಾಡಿದಲ್ಲಿ ವರ್ಷಕ್ಕೆ ೧೨ ಸಂಚಿಕೆಗಳು ಆಗುವದಕ್ಕೆ ಬದಲಾಗಿ ೧೩ ಸಂಚಿಕೆಗಳಾಗುತ್ತಿದ್ದವು. ಇಂಗ್ಲೀಷ ತಿಂಗಳುಗಳನ್ನು ಹಿಡಿದು ಮಾಸಪತ್ರಿಕೆಯನ್ನು ಹೊರಡಿಸುವವರಿಗೆ ಈ ಪ್ರಸಂಗವು ಬರುವದಿಲ್ಲ. ಒಂದುವೇಳೆ ಹಾಗಾಗಬೇಕೆಂಬ ಇಚ್ಛೆಯುಂಟಾದರೂ ಚಿಕ್ಕವಳಾದ ಸಂಜೀವಿನಿಗೆ ಅಷ್ಟೊಂದು ಖರ್ಚನ್ನು ವಹಿಸಿಕೊಳ್ಳುವ ಸಾಮರ್ಥ್ಯವು ಹೇಗೆ ಬಂದೀತು? ಆಕಾರಣ ೨ನೆಯ ಸಂಪುಟದ ೬ನೆಯ ಸಂಚಿಕೆಯನ್ನು ಈ ನಿಜ ಚೈತ್ರದಲ್ಲಿ ಪ್ರಚಾರಗೊಳಿಸಿರುತ್ತೆ.

ಸಂಪಾದಕೀಯ ಟಿಪ್ಪಣಿ.

ಧರ್ಮಸಂಜೀವಿನಿಯು ದಿನೇದಿನೇ ವೃದ್ಧಿಯನ್ನು ಹೊಂದಬೇಕಾದ ಕಾರಣಗಳಲ್ಲಿ ಉತ್ತಮ ಲೇಖನಗಳ ಸಂಚಯವು ಕೂಡಾ ಒಂದು ಕಾರಣವೇ ಆಗಿದೆ. ಅದರಂತೆ ಅನಂತ ಜನರ ಲೇಖಗಳು ಇದರಲ್ಲಿ ಸೇರಿಸಲ್ಪಡುತ್ತಿವೆ. ಆದರೆ ಲೇಖಕರ ಲೇಖಗಳಲ್ಲಿ ಪ್ರಮಾದವಶದಿಂದ ತೋರಿಬರುವ ತಪ್ಪುಗಳಿಗೆ ಸಂಪಾದಕರು ಹೊಣೆಗಾರರಲ್ಲವೆಂಬುದನ್ನು ಎಲ್ಲರೂ ಅರಿಯತಕ್ಕದ್ದು.

ರಥೋತ್ಸವ

ಕ್ರಿಯಾಸಿದ್ಧಿಯಿಂದ ಮಹಿಮಾತಿಶಯವನ್ನು ತೋರಿ ಈ ಲೋಕದ ಉದ್ಧಾರಕೃತಿಯನ್ನೆಸಗಿದ ಮಹಾನುಭಾವರು ವೀರಶೈವ ಸಮಾಜದಲ್ಲಿ ಎಷ್ಟೋ ಆಗಿಹೋಗಿರುವರು. ಅಂತಹ ಮಹಾತ್ಮರಲ್ಲಿ ಒಬ್ಬರಾಗಿದ್ದ ಸಹಜ ವಿರಕ್ತರೆನಿಸಿದ ನೀರಡಗುಂಭ ಪಕ್ಷಿಮಾದ್ರಿಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳ ರಥೋತ್ಸವವೂ ತದಂಗಭೂತವಾದ ಗಣಾರಾಧನೆಯೂ ಗತಸಂವತ್ಸರದ ಫಾಲ್ಗುಣ ಬ|| ೩ ದಿವಸ ಸಮರ್ಪಕವಾಗಿ ನೆರವೇರಿಸಲ್ಪಟ್ಟವು. ಮತ್ತು ಯಾತ್ರಾರ್ಥಿಗಳಾಗಿ ಬಂದು ಶ್ರೀ ಸ್ವಾಮಿಗಳ ದರ್ಶನಕ್ಕೆ ಪಾತ್ರರಾದ ಸಮಸ್ತ ಸಜ್ಜನರಿಗೆ ಭಕ್ತಿ-ಜ್ಞಾನ ಬೋಧಕಗಳಾದ ಶಿವಭಜನ ಕೀರ್ತನಗಳು ಸುಶ್ರಾವ್ಯವಾಗಿ ಜರುಗಿಸಲ್ಪಟ್ಟವು.

ಸಮಾಚಾರದಾತಾ.

ಬಸವ ಜಯಂತಿ.

ವೀರಶೈವರು ಪುಣ್ಯಾತಿಶಯನಾದ ಶ್ರೀ ಬಸವೇಶ್ವರನ ಜಯಂತಿಯ ದಿನವನ್ನು ಹಬ್ಬದಂತೆ ವಿಶೇಷವಾಗಿ ಆಚರಿಸಬೇಕಾದ ಕಾರಣ ಅದು ಈ ವರ್ಷದ ವೈಶಾಖ ಶುಕ್ಲಪಕ್ಷ ಬಿದಿಗೆಗುರುವಾರ ಆಚರಿಸಲ್ಪಡಬೇಕೆಂಬುದಾಗಿ ಸಿದ್ಧಾಂತಿಗಳಿಂದ ನಿರ್ಣಯಿಸಲ್ಪಟ್ಟಿದೆ. ಆದದರಿಂದ ಪಟ್ಟಣ ದೊಡ್ಡ ಗ್ರಾಮಗಳಲ್ಲಿರುವ ವೀರಶೈವರು ಆ ದಿನ ತಮ್ಮ ಒಕ್ಕಲತನದ ವೃಷಭಾದಿಗಳನ್ನು ಶೃಂಗರಿಸಿ ಪವಿತ್ರತೆಯಿಂದ ಜಂಗಮಾರ್ಚನೆ, ವೃಷಭ ಪೂಜೆ, ಶಿವಪುರಾಣ ಕೀರ್ತನ ಶ್ರವಣ ಮುಂತಾದವುಗಳನ್ನು ಜರುಗಿಸಿ ಧನ್ಯರಾಗಬೇಕು.

ಶಿವಯೋಗಮಂದಿರದ ಜಾತ್ರೆ.

[illegible] ಶು|| [illegible] ಕೃಷ್ಣಪಕ್ಷ [illegible] ಮಹಾ ಶಿವರಾತ್ರಿಯ [illegible] ಶ್ರೀ ಶಿವಯೋಗಮಂದಿರದಲ್ಲಿ ಪ್ರತಿವರ್ಷದಂತೆ ಜಾತ್ರೆ ಜರುಗಿತು. ಆ ದಿನ [illegible] ಜಂಗಮ ಪಾದಪೂಜೆಯು, [illegible] ಎಲ್ಲಿ ನೋಡಿದರೂ ಶಿವಶಿವ [illegible] ಗಂಟೆಯಿಂದ ಶಿವಕೀರ್ತನವು ಜರುಗಿತು. [illegible] ಧಾರ್ಮಿಕ, ನೈತಿಕ, [illegible] ಉಪನ್ಯಾಸಗಳು [illegible] ಜರುಗಿದವು. [illegible] ಆಯಿತು. [illegible]

[illegible]

ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ.

ಶ್ರೀ ಜಗದ್ಗುರು ರೇಣುಕಾಚಾರ್ಯರ ರಥೋತ್ಸವವು.

ವೀರಶೈವ ಜಗತ್ತಿನ ಮುಕ್ತಿಸ್ಥಾನವೆನಿಸಿದ ಶ್ರೀಮದ್ರಂಭಾಪುರಿ ವೀರಸಿಂಹಾಸನ ಮಹಾ ಸಂಸ್ಥಾನ ಮಠದಲ್ಲಿ ಅನಾದಿಯಿಂದಲೂ ನಡೆದುಬಂದ ಶ್ರೀಮಜ್ಜಗದ್ಗುರು ರೇಣುಕ ಶಿವಾಚಾರ್ಯರ ಜಯಂತಿಯ ರಥೋತ್ಸವ ಸಮಾರಂಭಕ್ಕೆ ಶ್ರೀ ಮಹಾ ಸಂಸ್ಥಾನದಿಂದ ಶ್ರೀಮುಖವನ್ನಪ್ಪಣೆಕೊಡಿಸಿದ ಪ್ರಕಾರ ಶ್ರೀ ಜಗದಾಚಾರ್ಯ ಚರಣ ಸೇವಾಭಿಲಾಷಿಗಳಾದ ನಾನಾ ಪ್ರಾಂತಗಳ ಶ್ರೀ ಪಟ್ಟಚರಾಧಿಕಾರಿಗಳು, ಪಂಡಿತರು, ಕವಿಗಳು, ಶೆಟ್ಟರು, ಗೌಡರು, ಸಾವುಕಾರರು ಮುಂತಾದ ಅನೇಕ ಮಹಾಶಯರು ಸಕಾಲಕ್ಕೆ ಆಗಮಿಸಿದ್ದರು. ಪದ್ಧತಿಯಂತೆ ಉತ್ಸವಾರಂಭವಾಗಿ ಫಾಲ್ಗುಣ ಶು|| ೧೪ ಶುಕ್ರವಾರ ಬೆಳಿಗ್ಗೆ ಶ್ರೀಮದಾಚಾರ್ಯಸ್ವಾಮಿಗೆ ಏಕಾದಶ ರುದ್ರಾಭಿಷೇಕ ಪೂರ್ವಕ ಸಹಸ್ರ ಬಿಲ್ವಾರ್ಚನೆಯೂ, ಮಹಾ ಸಂತರ್ಪಣೆಯೂ ನಡೆದು, ಮಧ್ಯಾಹ್ನ ಮಘಾ ನಕ್ಷತ್ರ ಪ್ರವೇಶಕಾಲದಲ್ಲಿ ವೈದಿಕರ ವೇದಘೋಷದಿಂದಲೂ, ಭಕ್ತಮಾಹೇಶ್ವರರ ಸಮುದಾಯದ ಜಯಜಯ ಘೋಷದಿಂದಲೂ, ನಾನಾ ವಿಧಗಳಾದ ವಾದ್ಯಗಳಿಂದಲೂ, ಶ್ರೀಮದಾಚಾರ್ಯ ಭಕ್ತಿಯನ್ನು ಹೆಚ್ಚಿಸುವ ಶ್ರೀ ಬ್ರಹ್ಮರಥೋತ್ಸವವು ಬಹು ವಿಜೃಂಭಣೆಯಿಂದ ನೆರವೇರಿತು. ಉಳಿದಾದ ಉತ್ಸವಗಳು ನಡೆಯುತ್ತಿದ್ದಂತೆಯೇ ಮರುದಿವಸ (ತಾ|| ೨೭-೨-೨೬) ರಲ್ಲಿ ಶ್ರೀ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಸನ್ನಿಧಾನದಲ್ಲಿ ಯಾವತ್ತು ಮಹಾಜನಗಳು ಸಭೆಸೇರಿದರು. ಮೊದಲು ತುಂಕೂರಿನ ಬಿ. ಶಿವಮೂರ್ತಿಶಾಸ್ತ್ರಿಗಳು ತಾವು ಭಕ್ತಿಯಿಂದ ರಚಿಸಿಕೊಂಡು ಬಂದಿದ್ದ ಶ್ರೀ ಜಗದ್ಗುರುಗಳ ಸ್ತುತಿಪರಗಳಾದ ಪದ್ಯಮಾಲಿಕೆಯನ್ನು ಪಠಿಸಿದನಂತರ ಸಮಯೋಚಿತಗಳಾದ ಕೆಲವು ಭಾಷಣಗಳು ಜರುಗಿದವು. ಅಷ್ಟಕ್ಕೆ ವೇಳೆಯಾದ್ದರಿಂದ ಸಭಿಕರನ್ನು ಆಶೀರ್ವದಿಸಿ, ಶ್ರೀ ಮಹಾ ಜಗದ್ಗುರುಗಳವರು ಅನುಷ್ಠಾನಕ್ಕೆ ದಯಮಾಡಿಸಿದರು. ಪುನಃ ಸಾಯಂಕಾಲಕ್ಕೆ ಸಭೆ ಸೇರಿತು. ಸಮಿ ಶಾಸ್ತ್ರಿಗಳ ಸುಶ್ರಾವ್ಯವಾದ ಕೀರ್ತನವೂ ಆಯಿತು. ತದನಂತರ ಶ್ರೀ ಜಗದ್ಗುರುಗಳವರು ತಮ್ಮ ಅಮೃತವಾಣಿಯಿಂದ ವೈದಿಕ ವಿದ್ಯಾಪ್ರಸಾರಕ್ಕಾಗಿಯೂ, ಮಠ ಸುಧಾರಣೆಗಾಗಿಯೂ ಸ್ಥಾಪಿಸಲ್ಪಡುವ ಶ್ರೀ ಜಗದ್ಗುರು ಪಂಚಾಚಾರ್ಯ ಸಂಸ್ಕೃತ ಕಾಲೇಜಿನ ವ್ಯವಸ್ಥೆಯ ಬಗ್ಗೆ ನಾನಾ ಪ್ರಾಂತಗಳ ವೀರಶೈವರು ತಮ್ಮ ತಮ್ಮ ಸಲಹೆಗಳನ್ನು ತಾ|| ೨೨-೪-೧೯೨೬ ರ ರೊಳಗಾಗಿ ಶ್ರೀ ಮಹಾ ಸನ್ನಿಧಿಗೆ ಬಿನ್ನವಿಸಿಕೊಳ್ಳಬೇಕೆಂತಲೂ, ನಾನಾ ಪ್ರಾಂತಗಳ ಪ್ರಮುಖರು ಮುತುವರ್ಜಿ ವಹಿಸಿ, ನೊಬಲಗನ್ನು

ಮೈಸೂರು ಬ್ಯಾಂಕಿಗೆ ಜವಾ ಹಿಡಿಸತಕ್ಕದ್ದೆಂತಲೂ ಅಪ್ಪಣೆಕೊಡಿಸಿದ್ದಕ್ಕೆ ಸಮಸ್ತರೂ ಅತ್ಯಾದರದಿಂದ ಸಮ್ಮತಿಸಿ ಸಂತುಷ್ಟರಾದರು. ಈ ವಿಷಯಕವಾಗಿ ನಾನಾಪ್ರಾಂತ್ಯಗಳಿಂದ ಬಂದಿದ್ದ ಕೆಲವು ಸಲಹೆಗಳು ಓದಲ್ಪಟ್ಟು ಅವು ಮುಂದಿನ ಕಮಿಟಿಯಲ್ಲಿ ವಿಮರ್ಶಿಸುವ ಬಗ್ಗೆ ಇಡಲ್ಪಟ್ಟವು. ತಾತ್ಕಾಲಿಕ ಕಾರ್ಯವು ಸಂಪೂರ್ಣವಾದನಂತರ ಶ್ರೀ ಜಗದ್ಗುರುಗಳವರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಶ್ರೀ ಮಹಾಸ್ವಾಮಿಯವರ ಪಟ್ಟೋತ್ಸವಗಳು, ಮಹಾ ಸಂತರ್ಪಣೆಯೂ ಕ್ರಮವಾಗಿ ನಡೆಯುತ್ತಾ ಬಂದವು. ಭಕ್ತಜನಸಮುದಾಯವು ಶ್ರೀ ಜಗದ್ಗುರುಗಳವರ ಸೇವೆಯನ್ನು ಮಾಡಿ, [illegible] ಧನ್ಯರಾದರು. ಮಹಾ [illegible] ಕಾಲವು.

(ಮೈ. ಸ್ಟಾರ್.

* * *

ಶಿವಭಜನಾ ಮಹೋತ್ಸವ.

[illegible]

ಕಲ್ಲೂರು ವೇದಮೂರ್ತಿ ಸೂಗೂರು ಶಾಸ್ತ್ರಿಗಳಿಂದ ವೇದವೇದಾಂತೋದಾಹರಣೆಗಳೊಡನೆ ಸರಸವಾಗಿಯೂ ಗಂಭೀರವಾಗಿಯೂ ಹೇಳಲ್ಪಟ್ಟ ಶಿವಕೀರ್ತನೆಯಿಂದಲೂ ಶಿಲಾಪೂರದ ಆಡಿವಯ್ಯಸ್ವಾಮಿಗಳಿಂದ ಮನಸ್ಸಿನಲ್ಲಿ ನೆಲಸಿ ಪರಿಣಾಮವಾಗುವಂತೆ ಬೋಧಿಸಲ್ಪಟ್ಟ ಬ್ರಹ್ಮಜಿಜ್ಞಾಸದಿಂದಲೂ, ವೇ|| ಜಾನೇಕಲ್ಲು ಬ್ರಹ್ಮಶ್ರೀ ಸಿದ್ಧಾಂತಿ ಸಿದ್ಧರಾಮಶಾಸ್ತ್ರಿಗಳಿಂದ ವಿಧ್ಯುಕ್ತಪ್ರಕಾರವಾಗಿ ಮಾಡಿಸಲ್ಪಟ್ಟ ಹೋಮ, ನೂತನ ಬಸವೇಶ್ವರಸ್ಥಾಪನ ಮತ್ತು ಶ್ರೀ ರುದ್ರಾಭಿಷೇಕಾದಿ ಶಿವಕಾರ್ಯಗಳಿಂದಲೂ, ಸಂಗೀತ ವಿದ್ವಾಂಸರಾದ ಮಲೆಮರಿ ಹಂಪಯ್ಯನವರಿಂದ ಹಾಡಲ್ಪಟ್ಟ ಮೃದುಮಧುರ ಗಾನದಿಂದಲೂ, ಭಾಷಣಾದಿಗಳಿಂದಲೂ ಮೇಲ್ಕಂಡ ಅಧ್ಯಕ್ಷರಿಂದ ಹೇಳಲ್ಪಟ್ಟ ಪುರಾಣಶ್ರವಣದಿಂದಲೂ ಅತಿ ವಿಜೃಂಭಣೆಯಿಂದ ನಡೆದು ಮಾಘ ಬ|| ೩೦ ಶುಕ್ರವಾರದಲ್ಲಿ ಮಹಾಗಣಾರಾಧನೆಯು ಜರುಗಿ ಸಂಧ್ಯಾಕಾಲದಲ್ಲಿ ಶ್ರೀ ಜಂಬುಕೇಶ್ವರನ ರಥೋತ್ಸವವು ಅನಂತವಾದ್ಯಗಳಿಂದಲೂ ಸ್ತ್ರೀಯರ ಕಲಶ ಕನ್ನಡಿಗಳಿಂದಲೂ ವೇದಘೋಷದಿಂದಲೂ ಸಮ್ಮುಖ ಬಸವೇಶ್ವರನಲ್ಲಿಗೆ ನಡೆದು ಪುನರಾಗಮನವು ನಿರಾತಂಕವಾಗಿ ಶ್ರೀ ಜಂಬುಕೇಶ್ವರನ ದೇವಾಲಯಕ್ಕೆ ಬಂದು ತಲಪಿತು. ಈ ಮಹೋತ್ಸವಕಾರ್ಯದರ್ಶನಾಧಿಕದಿಂ ಕೃತಾರ್ಥರಾಗುವೆವೆಂದು ಆಗಮಿಸಿದ ನಿಖಿಲ ಪ್ರಮುಖ ಜನಸ್ತೋಮದಿಂದಲೂ ಮಹಾರಾಜಶ್ರೀ ಹರವಿ ಮಾಲಿ ಪಟೇಲ್ ಬಸವನಗೌಡರು ಸರ್ವಕಾರ್ಯನಿರ್ವಾಹಕರಾಗಿ ನಿಂತು ಪರಮಭಕ್ತಿಯಿಂದ ಪ್ರತಿಯೊಂದು ಕಾರ್ಯಗಳ ಬಗ್ಗೆ ಸುಧಾರಣೆಯುಳ್ಳವರಾಗಿ ತಾರತಮ್ಯವರಿತು ನಡೆದುದರಿಂದಲೂ ಈ ಮಹೋತ್ಸವವು ಅತಿ ವಿಜೃಂಭಣೆಯಿಂದ ದಂಭರಹಿತವಾಗಿ ಸಾಂಗವಾದ ನಂತರ ಮಾರನೇ ದಿವಸ ಅಂದರೆ ಫಾಲ್ಗುಣ ಶು|| ೧ ಶನಿವಾರದ ದಿವಸ ಸರ್ವ ವಿದ್ವಾಂಸಮಂಡಳಿಗೂ ಮಹಾಸ್ವಾಮಿಗಳಿಗೂ ಅನಂತ ಸಾಧುಗಳಿಗೂ ಪರಮಾನಂದವಾಗುವಂತೆ ಧರ್ಮಿಷ್ಠರಾದ ಶ್ರೀಮಂತ ಹಂಪನಗೌಡರಿಂದ ಯಥೋಚಿತ ಸಂಭಾವನೆಯುಮಾಡಲ್ಪಟ್ಟಿತು.–ಅಹೋ! ಲೋಕಬಾಂಧವರೇ, ನೀವೆಲ್ಲ ಇಂಥಾ ಪುಣ್ಯಕಾರ್ಯಗಳಂ ಮಾಡಿ ಧರ್ಮಕೀರ್ತಿಗಳಿಗೆ ಭಾಜನರಾಗಬೇಕೆಂದು ನನ್ನ ಕೋರಿಕೆ. ಈ ಶಿವಭಜನಮಹೋತ್ಸವವನ್ನು ನಡೆಸಿದ ನೀರುಮಾನವಿ ಶ್ರೀಮಂತ ಹಂಪನಗೌಡರಿಗೂ, ಕಾರ್ಯನಿರ್ವಾಹಕರಾದ ಹರ್ವಿ ಮಾಲೀ ಪಟೇಲ್ ಬಸವನಗೌಡರಿಗೂ, ಸಹಕಾರಿಯಾದ ವಿದ್ವಾಂಸಮಂಡಳಿಗೂ, ಶಿವಭಜನೆಯನ್ನು ಕೇಳಿ ನೋಡಿದ ಪರಮಭಕ್ತರಿಗೂ ಶ್ರೀ ಜಂಬುಕೇಶ್ವರನು ಸಕಲೈಶ್ವರ್ಯವನ್ನು ಕೊಟ್ಟು ಕಾಪಾಡಲೆಂದು ಕೈಯೆತ್ತಿ ಬೇಡುತ್ತೇನೆ.

ಮೈ. ಸ್ಟಾ.

ಮಹಾಗಾಂವ ಪಂಚಾಂಗ.

ಶ್ರೀ ಶ್ರೀ ಸಿದ್ಧಾಂತಿ [illegible] ಶಾಸ್ತ್ರಿಗಳು, ಪಾಠಶಾಲಾ, ಮಹಾಗಾಂವ ಇವರ ಕನ್ನಡ ಪಂಚಾಂಗವು ನಿಜಾಮ ಇಲಾಖೆಯಲ್ಲಿ ಒಂದನೆಯದಾಗಿದೆ. ಇದು ಹುಟ್ಟಿದಂದಿನಿಂದ ಪ್ರತಿವರ್ಷವು ಅಭಿವೃದ್ಧಿಯಲ್ಲಿ ಇರುವದು. ಇತ್ತೀಚಿಗೆ ನಿಜಾಂ ಇಲಾಖೆಯಲ್ಲಿ ಹೊರಡುತ್ತಿರುವ ಕೆಲವು ಕನ್ನಡ ಪಂಚಾಂಗಗಳು ಇವರ ಮಾದರಿಯನ್ನೇ ಅನುಕರಿಸುವವು. ಇವರು [illegible] ಶಾಸ್ತ್ರಿಗಳು ಸಿದ್ಧಾಂತವನ್ನು ಸಕ್ರಮವಾಗಿ ಅನುಸರಿಸುವವರೊಳಗೆ ಗಣಿತದಲ್ಲಿ [illegible] ಶಕ್ತಿಯುಳ್ಳವರಾಗಿದ್ದಾರೆ. ಸೂಕ್ಷ್ಮ [illegible] ಇವರ ಪಂಚಾಂಗದ ಫಲಗಳು ಇವರ ಅನುಭವಕ್ಕೆ ಬಂದು ಪಂಚಾಂಗವು [illegible] ಪ್ರಸಿದ್ಧವಾಗಲು ಕಾರಣವಾಗಿದೆ. ಈ ಕ್ಷಯಸಂವತ್ಸರದ ಪಂಚಾಂಗವನ್ನು [illegible] ಪ್ರಕಟಿಸಿದ್ದಾರೆ. ಪ್ರತಿಯೊಬ್ಬರು ತಮ್ಮ ಮನೆಯಲ್ಲಿ ತರಿಸಿಕೊಳ್ಳುವದು ಯೋಗ್ಯವಾಗಿದೆ.

* * *

ಆರೋಗ್ಯ ಚಂದ್ರಿಕೆ.

[illegible]

[illegible]

ಪ್ರಮುಖರ ಕಾಕದೃಷ್ಟಿಯು.

ಲೇಖಕ:— ನಿರಂಜನಪ್ಪ, ಸಿದ್ದಾಪುರ.

ಪ್ರತಿಯೊಂದು ಊರು, ಕೇರಿ, ಮನೆ, ಮಠ ಮುಂತಾದವುಗಳಿಗೆಲ್ಲಾ ಪ್ರಮುಖರು ಬೇಕು. ಪ್ರಮುಖರಿರುವ ಊರು, ಕೇರಿ, ಮನೆ, ಮಠಗಳ ಕಾರ್ಯಗಳು ಸುಸೂತ್ರಗಳಾಗಿಯೂ, ಶ್ಲಾಘನೀಯಗಳಾಗಿಯೂ ಜರುಗುತ್ತಿವೆ. ಪ್ರಮುಖರಿಲ್ಲದ ಊರು, ಕೇರಿ, ಮನೆ, ಮಠಗಳ ಕಾರ್ಯಗಳು ಎಳುಬೀಳಾಗಿ ಕೆಟ್ಟುಹೋಗುತ್ತಿವೆ. ಆದರಿಂದ ಸಕಲ ಕಾರ್ಯಗಳಿಗೂ ಪ್ರಮುಖರೆಂಬುವರನ್ನು ಸೂತ್ರಧಾರಕರೆಂದು ಹೇಳಬಹುದು. ಆದರೆ ಪ್ರಮುಖರೆಂಬುವರು ಎಂಥವರು, ಯಾವ ತರಹದವರು, ಹೇಗಿರುವರು, ಎಂಥವರಿಂದ ಎಂಥಾ ಕಾರ್ಯಗಳು ನಡೆಯುತ್ತಿವೆ ಇತ್ಯಾದಿ ಸಂಗತಿಗಳನ್ನು ಕುರಿತು ಹೇಳುವದು ಪ್ರಸ್ತುತಕ್ಕೆ ತಕ್ಕದ್ದಾಗಿದೆ. ಯಾವ ಪುರುಷರು ಸಾತ್ವಿಕ ಗುಣದವರೋ ಸಾರಾಸಾರ ವಿಚಾರಪರರೋ, ಪುಣ್ಯದ ಪ್ರೇಮ, ಪಾಪದ ಭಯವುಳ್ಳವರಾಗಿರುವರೋ, ತಮ್ಮಂತೆ ಇತರರನ್ನು ಬಗೆಯುವರೋ, ತಾವು ಕಷ್ಟವನ್ನು ಸಹಿಸಿ ಉಳಿದವರಿಗೆ ಸೌಖ್ಯವನ್ನು ಕೊಡುವರೋ, ಪರೋಪಕಾರವನ್ನೇ ತಮ್ಮಧ್ಯೇಯವಾಗಿ ಇಟ್ಟುಕೊಂಡಿರುವರೋ, ಪರರ ಹೊನ್ನು, ಹೆಣ್ಣು, ಮಣ್ಣು (ಭೂಮಿ)ಗಳನ್ನು ವಿಷದಂತೆ ಭಾವಿಸಿ ಅವಕ್ಕೆ ಕೈಹಾಕದಿರುವರೋ, ಅನ್ಯರ ಬೈಗುಳನ್ನು ಸಹಿಸಿ ಮತ್ತು ಅವರನ್ನು ಬುದ್ಧಿವಾದಕ್ಕೆ ಹಚ್ಚಿ ತಿಳಿಸುತ್ತಿರುವರೋ, ಸಾವಿರ ಕಷ್ಟಗಳು ಒದಗಿದರೂ ಸತ್ಯವನ್ನೇ ನುಡಿಯುತ್ತಿರುವರೋ, ದಯಾಧರ್ಮ ಉಳ್ಳವರೋ, ಅಂಥವರಿಗೇನೆ ಪ್ರಮುಖರೆಂದು ಖಂಡಿತವಾಗಿ ಹೇಳಬೇಕು. ಇವೇ ಪ್ರಮುಖರ ಲಕ್ಷಣಗಳು. ಇಂಥವರಿಂದಲೇ ಊರು, ಕೇರಿ, ಮನೆ, ಮಾರುಗಳು ಸುವ್ಯವಸ್ಥೆಯಿಂದ ವೃದ್ಧಿ ಹೊಂದುವವಲ್ಲದೆ ಅವರಿದ್ದ ದೇಶಗಳು ಸುಧಾರಣೆಯ ಅಗ್ರಸ್ಥಾನವನ್ನು ಹೊಂದುವವು. ಇಂಥಾ ಯೋಗ್ಯ ಪ್ರಮುಖರಿದ್ದಲ್ಲಿ ಮುಂದೆ ಕಾಲೂರಿ ಬಂದ ದುಷ್ಟರು ಹಿಂದಕ್ಕೆ ತಾವೇ ತಿರುಗಿ ಹೋಗುವರು. ಇಂಥವರಿದ್ದಲ್ಲಿ ಅಪರಾಧವಾಗಲಿ, ಅಪರಾಧಿಗಳಾದ ಜನವಾಗಲಿ ಸಿಕ್ಕದಿರುವದರಿಂದ ಸರಕಾರದವರು ಸುಮ್ಮನೆ ನೆಮ್ಮದಿಯನ್ನು ಹೊಂದುವರು. ಮತ್ತು ಸರಕಾರದ ಕಾರ್ಯಗಳು ಪರಿಶ್ರಮವಿಲ್ಲದೆ ಪಾರುಗಾಣುತ್ತಿರುವವು.

ಜನತೆಯಲ್ಲಿ ದ್ವೇಷಾಸೂಯೆಗಳು ನಷ್ಟವಾಗುವದರಿಂದ ಪ್ರತಿಕುಟುಂಬದಲ್ಲಿ ಸುಖಶಾಂತಿಗಳು ನೆಲೆಗೊಳ್ಳುವವು. ಇದು ಪ್ರಮುಖ ಜನದ ಪ್ರಭಾವವು; ಪ್ರಮುಖರೆಂದೆನಿಸಿಕೊಳ್ಳುವವರಿಗೂ ಕೀರ್ತಿಯು. ಈಗಿನ ಪ್ರತಿಯೊಂದು ಸಣ್ಣ ದೊಡ್ಡ ಊರುಗಳಲ್ಲಿರುವ ಪ್ರಮುಖ ಜನರು ಹಾಗಿರದೆ ಬೇರೆ ರೀತಿಯಿಂದ ಇದ್ದಾರೆ. ಇವರ ಸ್ಥಿತಿಯೇ ಬೇರಾಗಿದೆ. ಆದಕಾರಣ ಯಾವ ಊರಲ್ಲಿ ನೋಡಿದರೂ ಜನರಿಗೆ ಇವರಿಂದ ಸುಖವಾಗುವದು ಒತ್ತಟ್ಟಿಗಿರಲಿ, ಸುಖಕ್ಕೆ ಬದಲಾಗಿ ಕಷ್ಟಪರಂಪರೆಗಳೇ ಹೆಚ್ಚುತ್ತಿದ್ದಾವೆ. ಹೀಗೆ ಕಷ್ಟಪರಂಪರೆಗಳಲ್ಲಿ ಬಿದ್ದು ಜನವು ಹಾಳಾಗಿ ಹೋಗುವದಕ್ಕೆ ಈ ನವಯುಗದ ಪ್ರಮುಖರೆನಿಸುವವರ [illegible] ಒಳ್ಳೇ ಸಹಕಾರಿಗಳಾಗಿದ್ದಾರೆ. ಈ ಕಾಲದಲ್ಲಿ ಪ್ರಮುಖರೆಂದೆನಿಸಿಕೊಳ್ಳಬೇಕಾದರೆ [illegible] ತೀರಬೇಕೆಂಬುದೇನು ಅವಶ್ಯವಿಲ್ಲ. [illegible] ಸಾಕು. ಮತ್ತೆ ಕೆಲವು [illegible] ಪ್ರಮುಖರೆನಿಸಿಕೊಳ್ಳುತ್ತಾರೆ. ಆ ನಿಮಿತ್ತ [illegible] ಒಬ್ಬ ಮನು[illegible] ಇಂದಿಲ್ಲಾ [illegible] ತಲೆಯೆತ್ತಿ [illegible]

[illegible]

'ಸಮೂಲಂ ಪ್ರವಿನಶ್ಯತಿ' ಎಂದೆನಿಸಿಬಿಡುವನು. ಈ ಸಾಮರ್ಥ್ಯ ಬಂದ ಬಳಿಕ ಪೂರಾ ಪ್ರಮುಖನಾದನು.

ಆಗ ಇಂಥಾ ಪ್ರಮುಖನ ವಾಗ್ಬಾಣಗಳು ಎಲ್ಲಿಬೇಕೋ ಅಲ್ಲಿ ನಡೆಯುವವು. ಇವನ ಆಲೋಚನೆಗಳು ಎಲ್ಲಾ ಕಡೆಯಲ್ಲಿಯೂ ಮುಂದುವರಿಯುವವು. ದುರ್ಬಲರಾದವರು ಇವನ ಕೈ ಗೊಂಬೆಯಂತೆ ಹೇಳಿದಂತೆ ಕೇಳುವರು. ಈ ವಿಧದ ವಿಪರೀತ ಗುಣದ ಪ್ರಮುಖರೇ ಹೆಚ್ಚಾಗಿರುವರು. ಅಥವಾ ಹೇಳಿದ ಗುಣಗಳಲ್ಲಿ ಒಂದು ಹೆಚ್ಚು ಕಡಿಮೆಯಾದ ಗುಣವಿದ್ದರೂ ಇರಬಹುದು. ಅಂತೂ ಇಂತೂ ಕುಂತಿಯ ಮಕ್ಕಳಿಗೆ ರಾಜ್ಯವಿಲ್ಲೆಂಬಂತೆ ಹಾಗೂಹೀಗೂ ಈ ನವಯುಗದಲ್ಲಿ ಸಹಜ ವರ್ತನದ ಸಭ್ಯರಿಗೆ ಪ್ರಮುಖತ್ವವಿಲ್ಲೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅದರಿಂದ ವಿಪರೀತ ಗುಣಮಣಿಮಂಡನರಾದ ಪ್ರಮುಖರು ಮಠವನ್ನು ಮನೆಯನ್ನಾಗಿ ಮಾಡುವರು; ಮನೆಯನ್ನು ಮಠವನ್ನಾಗಿ ಮಾಡುವರು ! ಕುಲವಂತರನ್ನು ಕುಲಹೀನರನ್ನಾಗಿ ತಿಳಿಯುವರು; ಕುಲಗೇಡಿಗಳನ್ನು ಕುಲವಂತರನ್ನಾಗಿ ಕೂಡಿಕೊಳ್ಳುವರು! ತಮಗೆ ಸರಿಬಾರದ ದೊಡ್ಡವರನ್ನು ಹಳಿಯುವರು; ತಮ್ಮ ಬೆನ್ನು ಕಾಯುವ ಅಲ್ಪರನ್ನು ಶ್ಲಾಘಿಸುವರು. ತಾವು ಆಡುವದೇ ನೀತಿಯೆಂಬರು; ಇತರರಾಡುವದು ದುರ್ನೀತಿಯೆಂಬರು. ತಮ್ಮ ಕೆಡುಕು ಕೃತ್ಯಗಳಿಗೆ ಒಳಿತೆಂಬರು; ಇತರರ ಒಳ್ಳೇ ಕೆಲಸಕ್ಕೆ ಕೆಡಕೆಂದು ಎಣಿಸುವರು. ತಮ್ಮ ನಡತೆಯು ಸದಾಚಾರವೆಂಬರು; ಇತರರ ಸಭ್ಯವರ್ತನಕ್ಕೆ ದುರಾಚಾರವೆಂಬರು. ತಮ್ಮ ತಿಳುವಳಿಕೆಯು ಯುಕ್ತವೆಂಬರು; ಅನ್ಯರ ತಿಳುವಳಿಕೆಯು ಅಯುಕ್ತವೆಂಬರು. ನೂರು ಪ್ರಸಂಗಗಳಲ್ಲಿಯೂ ತಮ್ಮದನ್ನು ನ್ಯಾಯವಾಗಿ ತಿಳಿಯುವರು; ಪರರದನ್ನು ಅನ್ಯಾಯವಾಗಿ ತಿಳಿದುಕೊಂಡಿರುವರು. ಸರಕಾರದ ಕಣ್ಣಿಗೆ ತಮ್ಮ ತಪ್ಪು ಬಿದ್ದು ಆಕಸ್ಮಾತ್ ಆರು ಮೂರು ತಿಂಗಳು ಶಿಕ್ಷೆಹೊಂದಿ ಬಂದರಂತೂ ಮತ್ತಿಷ್ಟು ಇವರಿಗೆ ಬಲಬಂದಂತಾಗುವದು. ನಾವು ಮಾಡಿದ ತಪ್ಪಿಗೆ ಇಷ್ಟಾದರೆ ಆಯಿತಲ್ಲ ಎಂದು ನಿರ್ಭೀತಿಯಿಂದ ನುಡಿಯುವರು. ಆಗ ಬಿಟ್ಟು ಮೇಯಿಸಿದ ಗೂಳಿಯಂತೆ ಕಂಡವರಮೇಲೆ ಕಾಲು ಕೆದರುವರು. ಹಾಯಿ ! ಹಾಯಿ! ಇಂಥವರಿಂದ ಕುಲಜಾತಿಗಳಲ್ಲಿ ಊರುಕೇರಿಗಳಲ್ಲಿ, ಮಠಮನೆಗಳಲ್ಲಿ, ಸಹೋದರ ಬಂಧುಗಳಲ್ಲಿ, ಗಂಡಹೆಂಡರಲ್ಲಿ, ತಂದೆಮಕ್ಕಳುಗಳಲ್ಲಿ, ಗುರುಶಿಷ್ಯರಲ್ಲಿ, ಗುಡಿಗುಂಡಾರ, ಕೆರೆ, ಭಾವಿ, ಹೊಲ, ಗದ್ದೆ ಮುಂತಾದ ವಿಷಯಗಳಲ್ಲಿ ತಲೆದೋರಿದ ಕ್ಷುದ್ರಕಲಹಗಳೇ ಪರ್ವತಾಕಾರವಾಗಿ ಬೆಳೆಸಲ್ಪಟ್ಟು ತನ್ಮೂಲಕ ವಾದಿ ಪ್ರತಿವಾದಿಗಳ ಅರ್ಥಪ್ರಾಣಗಳು ಹಾಳಾಗಿ

ಇಹಪರಗಳಿಗೆ ಸಲ್ಲದ ಅನರ್ಥಕೋಟಿಗಳು ಆಗುತ್ತಿರುವವು. ಆದಕಾರಣ ನಮ್ಮ ದೇಶ, ನಮ್ಮ ಕುಲ, ನಮ್ಮ ಜಾತಿ, ನಮ್ಮ ಸಂಪತ್ತು, ನಮ್ಮ ಗೌರವಗಳು ದಿನೇದಿನೇ ನಿರ್ನಾಮವಾಗಲಿಕ್ಕೆ ಹತ್ತಿವೆ. ಐಕ್ಯವೆಂಬ ಲೋಕೋತ್ತರ ಗುಣವು ನಮ್ಮ ದೇಶವನ್ನು ಬಿಟ್ಟು ಪರದೇಶ ಗಮನವನ್ನು ಮಾಡಿರುತ್ತದೆ. ಇತರ ದೇಶಗಳವರು ಯಾವ ವಿದ್ಯೆ, ಯಾವ ಸಾಹಸ, ಯಾವ ಐಕ್ಯ, ಯಾವ ಸಾಧನಗಳಿಂದ ಸ್ವರ್ಗದ ಸುಖವನ್ನೇ ಈ ಮಾನವ ಲೋಕದಲ್ಲಿ ಹೊಂದುತ್ತಿರುವರೋ, ಅದೇ ಮಾನವ ಲೋಕದಲ್ಲಿ ನಾವಿನ್ನು ಪರಲೋಕದ ಕಲ್ಯಾಣಕ್ಕಾಗುವ ಸಾಧನಗಳೊಡನೆ ಕೂಡಿಕೊಂಡಿರುವರೆಂದರೆ ನಾಚಿಕೆಗೇಡಿನ ಮಾತಲ್ಲವೇ? ಸಾಕು ಸಾಕು! ಪ್ರಮುಖಜನರೇ, ನಿಮ್ಮ [illegible] ಕಡೆಗೆ [illegible] ಹಾಕಿರಿ. ಇಹಪರಗಳಿಗೆ ಸಲ್ಲದ ನಿಮ್ಮ ದುರ್ಗುಣಗಳನ್ನು ದೂರದಲ್ಲಿಡಿರಿ. ಭಾರತಮಾತೆಯ ಮಾನವ ಮಕ್ಕಳಾಗಿ ನಮ್ಮ ಸಹೋದರರೆಂದು ಭಾವಿಸಿರಿ. ಅವರ ಅಭ್ಯುದಯವೇ ನಮ್ಮ ಅಭ್ಯುದಯ, ಅವರ ಸೌಖ್ಯವೇ ನಮ್ಮ ಸೌಖ್ಯ; ಅವರ ಹಾನಿಯೇ ನಮ್ಮ ಹಾನಿಯೆಂದು ತಿಳಿದು ನಿಮ್ಮ [illegible] ಕಪಟ ಕುತಂತ್ರಗಳನ್ನು ಬಿಟ್ಟು ಬಿಡಿರಿ. [illegible] ಕಲಹವಾಡುವದು [illegible] ನಿಮ್ಮ ತಪ್ಪಿಗೆ [illegible] ಈ ಕಾಲದಲ್ಲಿ [illegible] ಪ್ರಮುಖರು [illegible] ಜವಾಬ್ದಾರಿ [illegible] ಬಿಟ್ಟು [illegible]

ಓಂ

ಲಿಂಗಸುಗೂರಿನ ಬಾಲಮಿತ್ರ ಸಮಾಜದ ರಿಪೋರ್ಟು

ನೈಜಾಮ ಇಲಾಖೆಯ ಜಿಲ್ಹೆ ರಾಯಿಚೂರ ಪೈಕಿ ಲಿಂಗಸುಗೂರು ಎಂಬ ಗ್ರಾಮದಲ್ಲಿ "ಬಾಲಮಿತ್ರ ಸಮಾಜ" ಎಂಬ ಸಂಘವು ಸ್ಥಾಪಿಸಲ್ಪಟ್ಟು ೪-೫ ವರುಷಗಳಿಂದ ತನ್ನ ಕೆಲಸವನ್ನು ಮಾಡಹತ್ತಿದೆ. ಇದುವರಿಗೂ ಈ ಕಮಿಟಿಯ ರಿಪೋರ್ಟನ್ನು ಪ್ರಕಟಿಸಲು ಕೆಲವು ಅನಾನುಕೂಲತೆಯ ಬಗ್ಗೆ ಆಗಲಿಲ್ಲ. ಈಗ ರಿಪೋರ್ಟ ಲೇಖನ ಕೆಲಸವು ನನ್ನಕಡೆ ಬಂದದ್ದರಿಂದ ನನ್ನನ್ನು ಸುದೈವಿಯೆಂದು ತಿಳಿಯುತ್ತೇನೆ. ಹಾಗು ಈ ರಿಪೋರ್ಟನಲ್ಲಿ ತಮ್ಮ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸುವೆನೆಂದು ಆಶ್ವಾಸನಕೊಟ್ಟ ಪ. ಬಸವಪ್ಪಶಾಸ್ತ್ರಿಗಳವರ ಅಭಿನಂದನವನ್ನು ಈ ಕಮಿಟಿಯು ಮನಃಪೂರ್ವಕವಾಗಿ ಮಾಡುತ್ತದೆ.

ಪ್ರತಿಯೊಂದು ದೇಶ, ಜಾತಿ, ಭಾಸೆ, ಸಮಾಜವು ಸುಧಾರಿಸಿ ಏಳ್ಗೆ ಹೊಂದಬೇಕಾದರೆ ಆಯಾ ದೇಶಗಳಲ್ಲಿ ಅನೇಕ ಧಾರ್ಮಿಕ ಸಾಮಾಜಿಕ ವಾಚನಾಲಯಗಳು ಇರುವದು ಅವಶ್ಯವದೆ. ಯಾವ ದೇಶದಲ್ಲಿ ವಿಪುಲ ವಾಚನಾಲಯಗಳು ಇಲ್ಲವೋ, ಆ ದೇಶವು ಎಂದೂ ಸುಧಾರಿಸಲಾರದು. ಜನರಲ್ಲಿ ಐಕ್ಯವನ್ನುಂಟುಮಾಡಿ ಪರಸ್ಪರ ಪ್ರೇಮ ಬೆಳಿಸುವದೂ ಮತ್ತು ಜನರ ನೈತಿಕ-ಧಾರ್ಮಿಕ ಸುಧಾರಣೆಯನ್ನು ಮಾಡುವದೂ ವಾಚನಾಲಯವೇ ಆಗಿದೆ. ಇನ್ನೂ ಭಾಷಾಸುಧಾರಣ ದೃಷ್ಟಿಯಿಂದ ನೋಡಿದರೂ ವಾಚನಾಲಯಗಳು ಬೇಕೇಬೇಕು. ಯಾವ ಭಾಸೆಯಲ್ಲಿ ವಾಚನಾಲಯಗಳಿಲ್ಲವೋ, ಆ ಭಾಷೆಯು ಎಂದೂ ಏಳ್ಗೆಯನ್ನು ಹೊಂದಲಾರದು. ಯಾಕೆಂದರೆ ವಾಚನಾಲಯಗಳು ಲೋಕ ಶಿಕ್ಷಣಕ್ಕೆ ಸಾಧನೀಭೂತವಾಗಿರುವವು. ಹಾಗೂ, ಜನತೆಯಲ್ಲಿ ವಾಚನಾಭಿರುಚಿಯನ್ನೂ, ತದ್ವಾರಾ ರಾಜಕೀಯ, ಸಾಮಾಜಿಕ, ಆರ್ಥಿಕ, ಭಾಷಾವಿಷಯಕ ಶಿಕ್ಷಣವನ್ನೂ, ಜ್ಞಾನವನ್ನೂ ಮಾಡಿಕೊಡುವವು. ಈ ವಾಚನಾಲಯಗಳ ಅಭಾವದಿಂದ ಕನ್ನಡವು ಯಾವ ಸ್ಥಿತಿಗೆ ಬಂದಿದೆಯೆಂಬುದು ಎಲ್ಲ ಕನ್ನಡಿಗರಿಗೆ ಗೊತ್ತಿದ್ದ ಮಾತೇ ಅದೆ. ನಮ್ಮ ದೇಶವು ಕರ್ನಾಟಕವಿದ್ದು ದೇಶಭಾಷೆಯಾದ ಕನ್ನಡದ ಸ್ಥಿತಿಯು ಶೋಚನೀಯವಾದದ್ದು ವಿಷಾದನೀ ಸರಿ. ಕನ್ನಡದಲ್ಲಿ ವಿಪುಲ ವೃತ್ತಪತ್ರಗಳೂ, ಗ್ರಂಥಗಳೂ ಇರುವದಿಲ್ಲ. ಆದರೆ ಈಗ ಕೆಲವು ಭಾಷಾ

ಭಿಮಾನಿಗಳು ಕನ್ನಡ ವಾಙ್ಮಯದ ಸೇವೆಯನ್ನು ತನು-ಮನ-ಧನದಿಂದ ಮಾಡಹತ್ತಿದ್ದಾರೆ. ಅವರೂ ಆರ್ಥಿಕ ಕೊರತೆಯಿಂದ ಅವರಿಗೆ ಸಹ ತೊಂದರೆಯಾಗಹತ್ತಿದೆ. ಕನ್ನಡಿಗರಲ್ಲಿ ಭಾಷಾಭಿಮಾನವು ಲುಪ್ತವಾಗಹತ್ತಿದೆ. ವರ್ಷಕ್ಕೆ ೨-೩ ರೂಪಾಯಿಗಳನ್ನು ಕೊಟ್ಟು ಒಂದು ವೃತ್ತ ಪತ್ರವನ್ನು ಕೊಳ್ಳಲಿಕ್ಕೆ ಸಹ ನಮ್ಮ ಕನ್ನಡಿಗರ ಮನಸ್ಸು ಒಲ್ಲದು. ಅದ್ದರಿಂದ ಕನ್ನಡವು ತೆಲಗು, ಮಹಾರಾಷ್ಟ್ರ ಮುಂತಾದ ಪರಭಾಷೆಗಳ ಹೊಡೆತದಿಂದ ಜರ್ಜರವಾಗಹತ್ತಿದೆ. ಇನ್ನೂ ಸ್ವಲ್ಪ ದಿವಸ ಕನ್ನಡಿಗರು ಹೀಗೆಯೇ ಸ್ವಸ್ಥರಿದ್ದರೆ ಕೂಡಲೆ ಕನ್ನಡವು ಪೂರಾ ರಸಾತಳಕ್ಕೆ ಇಳಿಯುವದೆಂಬುದಕ್ಕೆ ಸಂಶಯ ಕಾಣುವದಿಲ್ಲ. ಕನ್ನಡಿಗರಾದ ನಾವು ನಮ್ಮ ಭಾಷೆಯಲ್ಲಿ ಒಂದು [illegible] ಅದರಲ್ಲಿ ಎಷ್ಟೋ ಪರಭಾಷೆಯ ಶಬ್ದಗಳು ಸೇರುತ್ತವೆ. [illegible] ಕನ್ನಡ [illegible] ಪರಭಾಷೆಯೇ ಆಗುತ್ತದೆ. ಈ ಎಲ್ಲ ಅನರ್ಥಗಳು ವಾಚನಾಲಯದ ಕೊರತೆಯಿಂದಲೇ ಆಗಿರುತ್ತವೆ. ಕಾರಣ ಕನ್ನಡಿಗರು [illegible] ಬಿಟ್ಟು ಪ್ರತಿಯೊಂದು ಗ್ರಾಮದಲ್ಲಿ ಒಂದೊಂದು ಸಾರ್ವಜನಿಕ ಕನ್ನಡ ವಾಚನಾಲಯಗಳನ್ನು ಸ್ಥಾಪಿಸಿ ತದ್ವಾರಾ ಜನರಲ್ಲಿ ವಾಚನಾಭಿರುಚಿಯನ್ನು ಹುಟ್ಟಿಸಬೇಕು. ಅಂದರೆನೇ ಈ ಭಾಷೆಯು ತನ್ನ ಪೂರ್ವಸ್ಥಿತಿಗೆ ಬರಬಹುದು.

ಇದೇ [illegible] "ಬಾಲಮಿತ್ರ ಸಮಾಜ" ವೆಂಬ ಒಂದು [illegible]

ಈ [illegible]

ಮ|| ರಾ|| ವೆಂಕಟರಾವ—ಪ್ರೆಸಿಡೆಂಟ

ಮ|| ರಾ|| ಗಳಾದ

(೧)	ಜಿ. ಹನಮಂತರಾವ, ವಕೀಲ.	(೫)	ಹನಮಂತರಾವ, ಕುಲಕರ್ಣಿ.
(೨)	ಯಮ್. ವೆಂಕೋಬರಾವ, ವಕೀಲ,	(೬)	ಮುದ್ರಂಗರಾವ, ಕುಲಕರ್ಣಿ.
(೩)	ಎಚ್. ವೆಂಕಟರಾವ, ವಕೀಲ.	(೭)	ಬಸಲಿಂಗಯ್ಯ.
(೪)	ಕುಪ್ಪೇರಾವ, ವಕೀಲ.	(೮)	ಲಿಂಗನಗೌಡಾ.

ಪ್ರತಿ ಶುಕ್ರವಾರ ಸದರೀ ದೇವಾಲಯದಲ್ಲಿ ಒಂದು ಕಮಿಟಿಯು ಕೂಡುವದು. ಅದರಲ್ಲಿ ಚಿಕ್ಕಬಾಲಕರ ನೈತಿಕ ಧಾರ್ಮಿಕ ಉಪನ್ಯಾಸಗಳಾಗುವವು. ಅಧ್ಯಕ್ಷರಾದವರು ಕಡೆಗೆ ಬಾಲಕರಿಗೆ ಸರಳ ಭಾಷೆಯಿಂದ ಉಪದೇಶಮಾಡುವರು, ಅಲ್ಲದೆ ಏನಾದರೂ ವ್ಯವಸ್ಥೆಯ ಕೆಲಸಗಳಿದ್ದರೆ ಮೆಂಬರರ ಅಭಿಪ್ರಾಯದೊಂದಿಗೆ ಇದೇ ಕಮೀಟಿಗಳಲ್ಲಿಯೇ ಮಾಡಲ್ಪಡುತ್ತವೆ. ಅಂಥಾ ಅವಶ್ಯವಿದ್ದಲ್ಲಿ ಶುಕ್ರವಾರದ ಹೊರ್ತಾಗಿ ಮಧ್ಯದಲ್ಲಿಯೂ ಸಭೆ ಕೂಡುವದು.

ಈ ಸಂಘದ ಆಧಿಪತ್ಯದೊಳಗೆ ಇಲ್ಲಿ ಒಂದು ಅಂತ್ಯಜರ ಶಾಲೆಯು ಸ್ಥಾಪಿಸಲ್ಪಟ್ಟಿರುವದು. ಸುಮಾರು ೩೦ ಹುಡುಗರು ಅಭ್ಯಾಸಮಾಡುವರು. ಅವರಿಗೆ ದೇಶಭಾಷಾ, ನೈತಿಕ ಅಭ್ಯಾಸವು ಕೊಡಲ್ಪಡುವದು. ಅಧ್ಯಾಪಕನು ಬಾವಾಸಾಬನೆಂಬ ಮುಸಲ್ಮಾನ ಬಾಂಧವನಿರುವನು. ಪ್ರತಿ ತಿಂಗಳಿಗೊಮ್ಮೆ ಮೇಲೆ ತೋರಿಸಿದ ಮೆಂಬರರು ಹುಡುಗರ ಪರೀಕ್ಷೆ ತೆಗೆದುಕೊಂಡು ಮಾಡಬೇಕಾದ ಹೆಚ್ಚುಕಡಿಮೆಯನ್ನು ಮಾಡಿ, ಮುಂದೆ ಅದರಂತೆ ಕೆಲಸ ನಡೆಸುವ ಬಗ್ಗೆ ಮಾಸ್ತರನಿಗೆ ಹೇಳುವರು. ಇದಕ್ಕೆ ಸರಕಾರಿ ಸಂಬಳವು ಇರುವದು. ಈ ಎಲ್ಲ ಕಾರ್ಯಗಳ ದೆಶೆಯಿಂದ ಆರ್ಥಿಕ ಸಹಾಯದ ಅತ್ಯವಶ್ಯಕತೆ ಅದೆ. ಕಾರಣ ಯಾವತ್ತೂ ಭಾಷಾಭಿಮಾನಿಗಳೂ, ದೇಶಾಭಿಮಾನಿಗಳೂ ಇದಕ್ಕೆ ಸಹಾಯ ಮಾಡಬೇಕೆಂದು ಕೋರುವ

ಸಜ್ಜನ ವಿಧೇಯ,

ಹನಮಂತರಾವ. ಸೆಕ್ರೆಟರಿ.

ಬಾಲಮಿತ್ರ ಸಮಾಜ, ಲಿಂಗಸುಗೂರ.

❧

೬೦

ಪರಸ್ಪರ ಪ್ರೇಮವೇ ಪರಮಾತ್ಮ ಭಕ್ತಿಯು.

([illegible])

[illegible]

! [illegible] !

[illegible]

[illegible]

ರಿಂದಲೇ ''ಸಂತೋಷಂ ಜನಯೇತ್ ಪ್ರಾಜ್ಞಸ್ತದೇವೇಶ್ವರ ಪೂಜನಮ್'' ಎಂದು ಹೇಳುವ ಮಾತಿನ ಅನುಭವವು ಸಿದ್ಧವಾಯಿತು.

ಇಂಥ ಬಂಧುಬಾಂಧವರ ಪ್ರೀತಿಯನ್ನು ಸಂಪಾದಿಸಲಿಕ್ಕೆ ಮುಖ್ಯವಾಗಿ ಮನುಷ್ಯನಲ್ಲಿ ಅಹಂಕಾರವು ತೊಲಗಿ ಸರಳತನ, ವಿನಯ, ನಿಷ್ಕಾಪಟ್ಯಗಳು ನೆಲೆಗೊಳಿಸಲ್ಪಡಬೇಕು. ಇಲ್ಲವೇ ಸಾರ್ವಜನಿಕ ಪ್ರೀತಿಯನ್ನು ಸಂಪಾದಿಸುವದು ಅಶಕ್ಯವು. ಯಾವನು ತನ್ನ ತನು-ಮನ-ಧನಗಳನ್ನು ಸಮಾಜಕ್ಕೆ ಅರ್ಪಿಸಿ ಸಮಾಜ ಸೇವೆಯನ್ನು ಮಾಡಿ ಲೋಕೋದ್ಧಾರದ ಕೆಲಸಗಳಲ್ಲಿ ಟೊಂಕ ಕಟ್ಟಿಕೊಂಡು ನಿಂತಿರುವನೋ, ಅಂಥವನನ್ನು ಸನ್ಮಾನಿಸುವದೂ ಅವನ ಪ್ರತಿಯೊಂದು ಕಾರ್ಯಭಾಗದಲ್ಲಿ ಸಹಾಯ ಮಾಡುವದೂ, ಅವನ ಹೇಳಿಕೆಯಂತೆ ವರ್ತಿಸುವದೂ ಪ್ರತಿ ಒಬ್ಬ ಮನುಷ್ಯನ ಕರ್ತವ್ಯವಾಗಿರುತ್ತದೆ. ಪರಸ್ಪರರಲ್ಲಿ ಪ್ರೇಮವೂ, ಶಾಂತಿಯೂ ಬೆಳೆಯಬೇಕಾದರೆ ಪ್ರೇಮವೇ ಅದಕ್ಕೆ ಮೂಲಕಾರಣವಾಗಿರುವದು ಯಾವದಾದರೊಂದು ರಾಷ್ಟ್ರವು ಅಥವಾ ಸಮಾಜವು ಅಥವಾ ಒಂದು ಕುಟುಂಬವು ಊರ್ಜಿತಸ್ಥಿತಿಗೆ ಬರಬೇಕಾದರೆ ಅದರಲ್ಲಿ ಐಕಮತ್ಯವು, ಸತತ ಉದ್ಯೋಗವು, ಸುಖಶಾಂತಿಯು, ಕ್ಷಮಾಗುಣವು ಧಾರಾಳವಾಗಿ ಬೇಕಾಗುವವು. ಯಾವಪ್ರಕಾರ ಮನುಷ್ಯನು ಸುಖಶಾಂತಿಯಿಂದ ಕಾಲಕಳೆಯಬೇಕಾದರೆ ಅವನ ಸರ್ವ ಇಂದ್ರಿಯಗಳ ವ್ಯಾಪಾರವು ಸುಲಲಿತವಾಗಿ ನಡೆಯಬೇಕಾಗಿರುವದೋ, ಅದರಂತೆ ಮೇಲೆ ಹೇಳಿದ ಒಕ್ಕಟ್ಟು, ಶಾಂತಿ, ಸುಖ ಸಮಾಧಾನಗಳು ಬೇಕೇ ಬೇಕಾಗುವವು. ಸಮಾಜದ ಯಾವತ್ತು ಜನರಿಗೆ ತನ್ನ ಬಂಧು ಬಾಂಧವರೆಂತಲೂ, ತಮ್ಮ ಹಿತಚಿಂತಕರೆಂತಲೂ ತಿಳಿಯುವದು ಅವಶ್ಯವಾಗಿರುವದು. ಇದೇ ಕಾರಣ ಅನೇಕ ಧಾರ್ಮಿಕ ಶಿರೋಮಣಿಗಳು ಅಲ್ಲಲ್ಲಿ ಧರ್ಮಾರ್ಥ ದವಾಖಾನೆ, ಅನಾಥಬಾಲಿಕಾ ಗೃಹ, ಪಾಠಶಾಲೆ, ಅನ್ನಛತ್ರಗಳನ್ನು ಸ್ಥಾಪಿಸಿರುವರು. ಈಗಿನ ಸುಧಾರಣೆಯ ಕಾಲದಲ್ಲಂತೂ ಪ್ರೇಮವೇ ಮುಖ್ಯ ಮೂಲಾಧಾರವಾಗಿದೆ. ಒಂದು ವೇಳೆ ತಮಗೆ ಯಾರಾದರೂ ಅಹಿತವಮಾಡಿದರೆ, ಅಥವಾ ನಿರಾಕರಿಸಿದರೆ, ಅವರ ಮಾತಿನ ಕಡೆಗೆ ಲಕ್ಷ್ಯಕೊಡದೆ ಸ್ವಪ್ನದಲ್ಲಿ ಸಹ ಕಳಕಳಿಯನ್ನು ತರಲಾಗದು. ನಮ್ಮ ಸಮಾಜದಲ್ಲಿ ಜಾತಿಗಳು ಬಹಳ. ''ಜಾತಿಜಾತಿಗೆ ವೈರ'' ವೆಂಬ ಸರ್ವಜ್ಞ ಕವಿಯ ವಚನಕ್ಕೆ ಎಂದು ಅರೆದಾಳವನ್ನು ಹಚ್ಚುವ ಪ್ರಸಂಗ ಒದಗುವದೋ, ಅದೇ ಸುದಿನವೆಂದು ಹೇಳಬಹುದು. ಒಂದೊಂದು ಮತದವರು ತಾವು ಶ್ರೇಷ್ಠರೆಂತಲೂ, ತಮ್ಮ ಪ್ರತಿಷ್ಠೆಯೇ ಬೆಳೆಯಬೇಕೆಂತಲೂ ಬಯಸಿ, ತಮ್ಮ ಪಂಥವನ್ನು ಮುಂದೆ ತರುವ ಎತ್ತುಗಡೆ ಮಾಡುವಾಗ ಬೇರೆ ಮತದವರನ್ನು ಕಾಲಕೆಳಗೆ ಹಾಕಿ ತುಳಿಯು

ರಿಕ್ಕೆ ಹಿಂದೆಮುಂದೆ ನೋಡುವದಿಲ್ಲ. ಜಗತ್ತಿನ ಐಕ್ಯದ ಬಗ್ಗೆ ದೀರ್ಘಪ್ರಯತ್ನಗಳು ನಡೆದಿರಲು ನಮ್ಮ ಒಂದು ರಾಷ್ಟ್ರದಲ್ಲಿ ಜಾತಿಜಾತಿಗಳ ದ್ವೇಷಭಾವವು ಇನ್ನೂ ಅಳಿಯದೆ ಇರುವದು ವಿಷಾದದ ಸಂಗತಿಯಾಗಿರುತ್ತದೆ. ಜಾತಿಮತ್ಸರವು ಪ್ರೇಮ ಮಾರ್ಗಕ್ಕೆ ಪ್ರತಿಬಂಧಕವಾಗಿರುವದರಿಂದ ಪರಮಾತ್ಮನನ್ನು ಕುರಿತು ನಾವೆಲ್ಲರೂ, ಪ್ರಾರ್ಥಿಸತಕ್ಕದ್ದು ಅವಶ್ಯವಿದೆ. ಇಂಥ ಪ್ರೇಮಪೂರ್ಣ ಹೊಂದಿದ ಸುದಿನವು ಉದಯವಾಗುವದೆಂದು ತಿಳಿಯತಕ್ಕದ್ದು. ಇಂದು ಇಲ್ಲದಿದ್ದರೂ ಮುಂದೆಯಾದರೂ ಬರತಕ್ಕದ್ದೆಂದು ಖಚಿತವಾಗಿ ನೆನಪಿನಲ್ಲಿಡತಕ್ಕದ್ದು. ಸಂಸಾರದ ಯಾವತ್ತು ವ್ಯವಹಾರಗಳಲ್ಲಿ ಪ್ರೇಮವನ್ನೇ ಮುಂದಿಟ್ಟುಕೊಂಡು ಸರ್ವದಾ ಪರಮಾತ್ಮನ ಸಮಾಗಮದಲ್ಲಿ ಇರಬೇಕಾಗುವದು. ಅಂದರೆ "[illegible] ಜಗತ್ತಿನ ಯಾವತ್ತು ಜನರು ತನ್ನ ಅಣ್ಣತಂಗಿಯರಂತೆ ತೋರುವಂತೆ" [illegible] ತೋರಬಹುದು.

ಪ್ರೇಮದ ಅವಶ್ಯಕತೆಯು ಬಹಳ ಸ್ಪಷ್ಟವಾಗಿ ಇರುವದು. ಇದರ ಹೊರ್ತು ಜಗತ್ತಿನ ವ್ಯವಹಾರಗಳು ನಡೆಯುವದೇ ಇಲ್ಲ. ಸಂಸಾರದಲ್ಲಿ ನಮಗೆ ಒಬ್ಬರ [illegible] ಮೇಲಿಂದಮೇಲೆ ಬರುತ್ತದೆ. [illegible] ಜಗಳವು ಉತ್ಪನ್ನವಾಗಿ [illegible] ನಾವು ನಮ್ಮ ಅಧಿಕಾರ [illegible] ಕುರಿತು [illegible]

ಅಹಿಂಸಾ ಹಿಂಸೆಗಳ ಮೀಮಾಂಸ.

ಅಹಿಂಸಾ ಸಿದ್ಧಾಂತವು ಅತಿಪ್ರಾಚೀನವಾದದ್ದು. ಸರ್ವಧರ್ಮಗಳಲ್ಲಿ ಇದರ ಸಿದ್ಧಾಂತದ ಉಲ್ಲೇಖವು ಬಹಳವಾಗಿರುವದು. ಅಹಿಂಸೆಯ ವರ್ಣನವು ಚತುರ್ಮುಖನಾದ ಬ್ರಹ್ಮನು ಮಾಡಿದರೂ ಸಾಧ್ಯವಾಗುವದಿಲ್ಲೆಂದು ಹೇಳಿದರೂ ಅತಿಶಯೋಕ್ತಿಯಾಗುವದಿಲ್ಲ. (ಅಹಿಂಸಾ ಮಹತ್ವ) ಭಾರತ ಅನುಶಾಸನ ಪರ್ವದಲ್ಲಿ—

ಶ್ಲೋ॥ ಅಹಿಂಸಾ ಪರಮೋಧರ್ಮಸ್ತಥಾಹಿಂಸಾ ಪರೋದಮಃ ।
ಅಹಿಂಸಾ ಪರಮಂದಾನಮಹಿಂಸಾ ಪರಮಂತಪಃ ।
ಅಹಿಂಸಾ ಪರಮೋಯಜ್ಞಸ್ತಥಾಹಿಂಸಾ ಪರಂಫಲಂ ।
ಅಹಿಂಸಾ ಪರಮಂ ಮಿತ್ರಮಹಿಂಸಾಪರಮಂ ಸುಖಂ ॥
ಸರ್ವಯಜ್ಞೇಷುವಾದಾನಂ । ಸರ್ವತೀರ್ಥೇಷು ವಾಕುಲಂ ।
ಸರ್ವದಾನಫಲಂ ವಾಪಿನ್ನೈತತ್ತುಲ್ಯಮಹಿಂಸಯಾ ।
ಅಹಿಂಸ್ರಸ್ಯತಪೋಽಕ್ಷಯ್ಯಮಹಿಂಸ್ರೋಯಜತೇಸದಾ ।
ಅಹಿಂಸ್ರಃ ಸರ್ವಭೂತಾನಾಂ ಯಥಾಮಾತಾ ತಥಾಪಿತಾ ।
ಏತತ್ಫಲಮಹಿಂಸಾಯಾಭಯಶ್ಚ ಕುರುಪುಂಗವ ।
ನಹಿಶಕ್ಯಾಗುಣವಕ್ತುಮಪಿವರ್ಷಶತೈರಪಿ ॥

ತಾ॥ ಅಹಿಂಸೆಯೇ ಪರಮಧರ್ಮವಾಗಿರುವದು, ಅಹಿಂಸೆಯೇ ಪರಮದಾನವಾಗಿರುವದು, ಅಹಿಂಸೆಯೇ ಪರಮ ತಪಸ್ಸಾಗಿರುವದು, ಅಹಿಂಸೆಯೇ ಪರಮ ಯಜ್ಞವಾಗಿರುವದು, ಅಹಿಂಸೆಯೇ ಪರಮಫಲವಾಗಿರುವದು. ಅಹಿಂಸೆಯೇ ಪರಮ ಮಿತ್ರನಾಗಿರುವದು. ಅಹಿಂಸೆಯೇ ಪರಮ ಸುಖವಾಗಿರುವದು, ಸರ್ವ ಯಜ್ಞಗಳಿಂದಲೂ, ಸಮಸ್ತ ತೀರ್ಥಸ್ನಾನಗಳಿಂದಲೂ, ಸಕಲ ದಾನಗಳಿಂದಲೂ, ಪ್ರಾಪ್ತನಾದ ಪುಣ್ಯವು ಈ ಅಹಿಂಸೆಗೆ ಸಮಾನವಾಗಲಾರದು. ಯಾವನು ಜೀವಹಿಂಸೆಯನ್ನು ಮಾಡುವದಿಲ್ಲವೋ ಅವನ ಅಹಿಂಸೆಯ ತಪಸ್ಸು ಅಕ್ಷಯವಾದದ್ದು. ಪ್ರಾಣಿಗಳ ಕೊಲ್ಲದಿರುವ ಪುರುಷನು ಸಮಸ್ತ ಜೀವಜಂತುಗಳಿಗೆ ತಂದೆತಾಯಿಗಳ ಸ್ವರೂಪವಾಗಿರುವನು. ಈ ಫಲವು ಅಹಿಂಸಾ ಮತ್ತು ಅಭಯದಾನ ಇವುಗಳಿಂದುಂಟಾದದ್ದಿರುತ್ತದೆ. ನೂರು ವರ್ಷಗಳವರೆಗೆ ಅಹಿಂಸೆಯ ವರ್ಣನಮಾಡಿದರೂ ಸಾಧ್ಯವಾಗಲಾರದು. ಆ ಪ್ರಯುಕ್ತ ಅಹಿಂಸಾಧರ್ಮವೇ ಪರಮ ಪವಿತ್ರವಾಗಿರುವದು. ಹೀಗಿದ್ದು ಈ ಕಾಲದಲ್ಲಿ ಆಗುವ ಪ್ರಾಣಿಹಿಂಸೆಯನ್ನು ಕಂಡರೆ ಪರಮ ವಿಷಾದವಾಗುತ್ತದೆ. ಆಹಾ! ಶಾಂತಂ ಪಾಪಂ,

ಶಾಂತಂ ಪಾಪಂ ಕೇಳಿದ ಮಾತ್ರದಿಂದ ಶರೀರಕ್ಕೆ ನಡಗುಬರುತ್ತಿರುವದು. ಯಾವನು ಜೀವಹಿಂಸೆಯನ್ನು ಮಾಡುವನೋ ಅವನು ಘಾತಕಿಯಲ್ಲವೇ?

ಶ್ಲೋ॥ ಅನುಮಂತಾ ವಿಶಸಿತಾ ನಿಹಂತಾ ಕ್ರಯ ವಿಕ್ರಯೀ ।
ಸಂಸ್ಕರ್ತಾ ಚೋಪಹರ್ತಾ ಚ ಖಾದಕಶ್ಚೇತಿ ಘಾತಕಾಃ ॥ ೧ ॥

ತಾ॥ ಕೊಲ್ಲಲು ಸಮ್ಮತಿಯನ್ನು ಕೊಡುವವನು, ಮೃತಪಟ್ಟ ಪ್ರಾಣಿಯ ಅಂಗವನ್ನು ಬೇರೆಬೇರೆಯಾಗಿ ಮಾಡುವವನು, ಕೊಲ್ಲುವವನು, ಮಾರುವವನು, ತೆಗೆದುಕೊಳ್ಳುವವನು, ಸಂಸ್ಕರಿಸುವವನು, ಪಾಕವನ್ನು ಮಾಡುವವನು, ತಿನ್ನುವವನು-ಸಾರಾಂಶ ಈ ೮ ಜನರು ಘಾತಕರುಗಳೆಂದೇ ತಿಳಿಯಬೇಕು.

ಶ್ಲೋ॥ [illegible] ।
[illegible] ॥ ೧ ॥ [illegible]

[illegible] ಪುಣ್ಯಾಪೇಕ್ಷೆಯನ್ನು ಮಾಡುವನೋ, ಅವನು [illegible] ದ ಮುಖದಿಂದ ಅಮೃತದ ಮಳೆಯನ್ನು [illegible]

ಶ್ಲೋ॥ [illegible] ।
[illegible] ॥ ೧ ॥

ತಾ॥ [illegible]

ದಲ್ಲಿ ಪ್ರವರ್ತಿಸಿದರೂ ನನ್ನ ಮನಸ್ಸು ಸ್ಥಿರವಾಗಲೊಲ್ಲದು ಇದರ ಕಾರಣವೇನೆಂದು ಕೇಳಲು ನಾರದರು ತನ್ನ ಯೋಗಬಲದಿಂದ ಅವನ ವರ್ತನವನ್ನು ತಿಳಿದು-ಮಹಾರಾಜಾ ನೀನು ಅನಂತ ಯಜ್ಞಗಳಲ್ಲಿ ಪಶುವಧೆಯನ್ನು ಮಾಡಿದಕಾರಣ ನಿನ್ನ ಚಿತ್ತವು ಚಂಚಲತ್ವದಲ್ಲಿರುವದು ಎಂಬದಾಗಿ ಹೇಳಿದುದಲ್ಲದೆ, ತನ್ನ ಯೋಗ ಸಾಮರ್ಥ್ಯದಿಂದ ಆ ರಾಜನಿಗೆ ಮೃತಪಟ್ಟ ಪ್ರಾಣಿಗಳ ದೃಷ್ಟಿಯನ್ನು ಆಕಾಶದಲ್ಲಿ ತೋರಿಸಿದನು. ಹಾಗು ಯಾವ ಯಜ್ಞಗಳಲ್ಲಿ ನೀನು ನಿಷ್ಕರುಣದಿಂದ ಪಶುವಧೆಯನ್ನು ಮಾಡಿರುವಿಯೋ, ಆ ಪಶುಗಳೇ ಕೋಪಗೊಂಡು ಈ ರಾಜನು ಮೃತಪಟ್ಟು ಎಂದು ಬರುವನೋ ಎಂದು ನೋಡುತ್ತಿರುವವು; ಅಲ್ಲದೆ ನಿನ್ನ ದೇಹವನ್ನು ಭಿನ್ನಭಿನ್ನವಾಗಿ ಮಾಡಿ ಕಡಿಸೇಡು ತೀರಿಸಿಕೊಳ್ಳುವವು ಎಂಬದಾಗಿ ಹೇಳಿದನು. ರಾಜನು ನಾರದರ ವಾಕ್ಯವನ್ನು ಕೇಳಿ ಭಯಗೊಂಡು ಅವರ ಪಾದಕ್ಕೆ ನಮಸ್ಕರಿಸಿ-ನಾನು ಇನ್ನುಮೇಲೆ ಹಿಂಸೆಯನ್ನು ಮಾಡುವದಿಲ್ಲವು, ನನ್ನನ್ನು ಉದ್ಧರಿಸಬೇಕೆಂದು ಬೇಡಿಕೊಂಡನು. ಆಗ ಆ ರಾಜನನ್ನು ತನ್ನ ಉಪದೇಶ ಸಾಮರ್ಥ್ಯದಿಂದ ಉದ್ಧರಿಸಿದನು. ಇದರಿಂದ ಯಜ್ಞದಲ್ಲಿ ಪಶುವಧೆಯನ್ನು ಮಾಡಬಾರದೆಂದು ಸಿದ್ಧವಾಗಲಿಲ್ಲವೇ? ಮತ್ತು

ಶ್ಲೋ॥ ತಸ್ಯತೇ ನಾನುಭಾವೇನ ಮೃಗಹಿಂಸಾತ್ಮನಸ್ತಥಾ ।
ತಪೋಮಹತ್ಸಮುಚ್ಛಿನ್ನಂತಸ್ಮಾದ್ಧಿಂಸಾನಯಜ್ಞಿಯಾ ॥ ೧ ॥

ತಾ॥ ಸ್ವರ್ಗಾಪೇಕ್ಷೆಯಿಂದ ಒಬ್ಬ ಮುನಿಯು ಮೃಗಹಿಂಸೆಯನ್ನು ಮಾಡಿದನು. ಜನ್ಮದಿಂದ ಮಾಡಲ್ಪಟ್ಟ ಅವನ ತಪಸ್ಸಿನ ಫಲವು ಆ ಹಿಂಸೆಯಿಂದ ನಾಶವಾಯಿತು. ಆದ್ದರಿಂದ ಯಜ್ಞದಿಂದ ಹಿತವಾಗುವದಿಲ್ಲ.

ಶ್ಲೋ॥ ನೈಷಧರ್ಮಃಸತಾಂ ದೇವಾ ಯತ್ರವಧ್ಯಂತವೈಪಶುಃ ।
ಇದಂಕೃತಯುಗಂಶ್ರೇಷ್ಠಂ ಕಥವಧ್ಯೇತವೈಪಶುಃ॥

ತಾ॥ ಯಾವ ಯಜ್ಞದಲ್ಲಿ ಪಶುವಧೆಯಾಗುವದೋ, ಅದು ಸತ್ಪುರುಷರ ಧರ್ಮವಲ್ಲವು. ಕೃತಯುಗವು ಸರ್ವಯುಗಗಳಲ್ಲಿ ಶ್ರೇಷ್ಠವಾದದ್ದು. ಇಂತಹ ಯುಗದಲ್ಲಿ ಪಶುವಧೆಯು ಹೇಗೆ ಯೋಗ್ಯವು ಎಂಬದಾಗಿ ಅದೇ ಭಾರತದಲ್ಲಿ ಉಕ್ತವಾಗಿರುವದು.

ಶ್ಲೋ॥ ಜರಾಯುಜಾಂಡಜೋದ್ಭಿಜ್ಜಸ್ವೇದಜಾನಿ ಕಥಂಚನ ।
ಯೇನಹಿಂಸ್ಯಂತಿಭೂತಾನಿ ಶುದ್ಧಾತ್ಮಾನೋದಯಾಪರಾಃ ॥ ೧ ॥

ತಾ॥ ಯಾವಮನುಷ್ಯನು ನರ-ಮೃಗ-ಖಗ-ಕ್ರಿಮಿಕೀಟಾದಿಗಳನ್ನು ಹಿಂಸಿಸುವದಿಲ್ಲವೋ

ಅವರೇ ಶುದ್ಧಾತ್ಮರು, ಅವರೇ ದಯಾಪರರೆಂಬದಾಗಿ ವಾರಾಹ ಪುರಾಣದಲ್ಲಿ ಕಥಿತವಾಗಿದೆ. (ಮಹಾಭಾರತ)

ಶ್ಲೋ॥ ಯಾವಂತಿ ಪಶುರೋಮಾಣಿ ಪಶುಗಾತ್ರೇಷು ಭಾರತ।
ತಾವದ್ವರ್ಷ ಸಹಸ್ರಾಣಿ ಪಚ್ಯಂತೆ ಪಶುಘಾತಕಾಃ ॥೧॥

ತಾ॥ ಹೇ! ಭಾರತ, ಪಶುಗಳನ್ನು ಕೊಂದವರು ಆ ಪಶುವಿನ ಅಂಗದಲ್ಲಿ ಕೂದಲುಗಳೆಷ್ಟಿರುವವೋ, ಅಷ್ಟು ಸಹಸ್ರವರ್ಷ ನರಕದಲ್ಲಿ ಪ್ರವೇಶಿಸಿ ದುಃಖವನ್ನು ಹೊಂದುತ್ತಾರೆ. ಮತ್ತು ಅನೇಕ ನೀಚಯೋನಿಗಳಲ್ಲಿ ಜನಿಸಿ ಬಾರಿಬಾರಿಗೂ ನರಕವನ್ನೇ ಭೋಗಿಸಿ ಮಹಾಪಾತಕಿಗಳೆಂದೆನಿಸಿಕೊಂಡು ಕುಂಭಿಪಾಕ ನರಕದಲ್ಲಿ ಬೇಯಿಸಲ್ಪಡುವವಲ್ಲದೆ, ಯಮದೂತರು ಈ ಹಿಂಸಕರ ಶಿರಚ್ಛೇದನವನ್ನು ಮಾಡಿ ನರಕದಲ್ಲಿ ತುಳಿಯುತ್ತಾರೆಂದು ಪ್ರಮಾಣವುಂಟು. ಈ ಪ್ರಾಮಾಣಿಕ ವಾಕ್ಯವನ್ನು ನೋಡಿದರೆ ಗಡಗಡನೆ ನಡುಗುವಂತಾಗುತ್ತದೆ. ಆದರೆ ಈಗಿನ ಕೊಲೆಗಡುಕರನ್ನು ಮನಸ್ಸಿನಲ್ಲಿ ಕಂಡರೆ ಎಷ್ಟು ಭಯವಾಗುವದು! ಹಿಂಸಾ ಮಾಡಬಾರದೆಂದು ಅನೇಕ ಪ್ರಮಾಣಗಳಿದ್ದರೂ [illegible] ಬಹು ವಿಷಾದವಾಗುತ್ತದೆ. [illegible]

ದೇವಪೂಜಾ ಮುಂತಾದವುಗಳಲ್ಲಿ ಹಿಂಸಾ ಮಾಡಬಾರದೆಂದು ಹೇಳಿರುವದು. ಅಹಿಂಸೆಯ ಮಹಿಮೆಯು ಅವರ್ಣನೀಯವಾಗಿದೆ. ಶ್ರೇಷ್ಠಪುರುಷನು ಅಹಿಂಸಾ ಧರ್ಮದ ದೃಢವಾದ ಗೋಡೆಯಮೇಲೆ ಸಂಸಾರದ ಸುಖಶಾಂತಿಗಳನ್ನು ಸ್ಥಾಪಿಸಿ ರಾಗದ್ವೇಷ ಮತ್ತು ಮಲಿನಕಾರ್ಯಗಳನ್ನು ಕಿತ್ತುಹಾಕಿ ಸ್ತ್ರೀಪುರುಷರಲ್ಲಿ, ಪಶುಪಕ್ಷಿಗಳಲ್ಲಿ, ಕ್ರಿಮಿಕೀಟಾತಿಗಳಲ್ಲಿ ಯಾವಾತನು ಕರುಣಿ ಉಳ್ಳವನಾಗುವನೊ ಅವನೇ ಮಹಾತ್ಮನು. ಆ ಶ್ರೇಷ್ಠಪುರುಷನೇ ಈಶ್ವರನ ಪ್ರೀತಿಗೆ ಪಾತ್ರನಾಗಿ ಆತನ ಪದವಿಯನ್ನು ಹೊಂದುವನು

ಕವಿಕಾಳಿದಾಸನ ಕಲ್ಪನೆಯು.

[ಲೇಖಕ-ಹೈದರಾಬಾದ್ ಚಿದಿರೆ ಮಠೀಯ ವೀರಭದ್ರಶರ್ಮಾ]
ಜಗದ್ಗುರುಮಠ, ಶ್ರೀ ಕ್ಷೇತ್ರ ಕಾಶೀ.

ಕವಿಕುಲ ತಿಲಕನೆನಿಸಿದ ಕಾಳಿದಾಸ ಕೃತ ರಘುವಂಶೇಕ್ಷುರಸವನ್ನು ಮನಃಪೂರ್ತಿಯಾಗಿ ಸಹೃದಯ ಶಿರೋಮಣಿಗಳು ಆಸ್ವಾದಿಸುತ್ತಲಿರುವದು ಸಹಜವೇ ಸರಿ. ಏತನ್ಮಹಾಕವಿಯು ರಘುವಂಶದಾರನೆಯ ಸರ್ಗದಲ್ಲಿ ಚಿತ್ರಿಸಿದ ಭಾವಪ್ರಪಂಚದ ಚಮತ್ಕಾರವನ್ನು ಕನ್ನಡಿಗರ ಕೈತಲ್ಪಿಸುವದೇ ಈ ನನ್ನ ಚಿಕ್ಕ ಲೇಖನಾಭಿಪ್ರಾಯವಾಗಿದೆ. ಅದೇನೆನೆ-ಮೇಲೆ ತೋರಿಸಿರುವ ಸರ್ಗದ ಇಪ್ಪತ್ತೊಂದನೆಯದಾರಭ್ಯ ಸರ್ಗಾಂತದವರೆವಿಗೂ ಇರುವ ಶ್ಲೋಕಗಳಲ್ಲಿ ಇಂದುಮತೀದೇವಿಯ ಸ್ವಯಂವರ ಸಂದರ್ಭವಿದ್ದು, ಅದರಲ್ಲಿ ಸಮಸ್ತ ರಾಜರನ್ನೂ ಅಂದರೆ-ಪರಂತಪ, ಅಂಗನಾಥ, ಅವಂತಿನಾಥ, ಪ್ರತೀಪ, ಸುಷೇಣ, ಹೇಮಾಂಗದ, ಪಾಂಡ್ಯ, ಅಜರೆಂಬ ಎಂಟು ಮಂದಿ ರಾಜರನ್ನು ರಸಭರಿತವಾಗಿ ವರ್ಣಿಸಿದರೂ, ಇಂದುಮತೀದೇವಿಯು ಇವರೆಲ್ಲರನ್ನು ಬಿಟ್ಟು, ಅಜರಾಜನನ್ನು ವರಿಸಿದ ಚಿತ್ರವೇ ಕವಿಶಿಖಾಮಣಿಯ ಕಲ್ಪನಾಶಕ್ತಿಯಾಗಿದೆ. ಅದು ಹೇಗಂದರೆ—ಸ್ವಯಂವರಕ್ಕಾಗಿ ರಾಜರೆಲ್ಲರೂ ಬಂದು ಪಂಕ್ತಿಯಾಗಿ ಕುಳಿತಿರುವಾಗ ಸ್ವತಃ ವರಿಸುವ ಇಂದುಮತಿಯು ಪುಷ್ಪಮಾಲಿಕಾಯುತಳಾಗಿ ಬರುವಳು. ಆಗ ಕುಳಿತಿರುವ ಸಮಸ್ತ ರಾಜರ ಯೋಗ್ಯತೆಯನ್ನರಿತ ಸುನಂದನೆ ಎಂಬ ದಾಸಿಯು ಒಬ್ಬೊಬ್ಬ ರಾಜನನ್ನು ವರ್ಣಿಸುತ್ತ ಚಮತ್ಕಾರವಾಗಿ 'ಶಚ್ಯಾಶ್ಚಿರಂ ಪಾಂಡುಕಪೋಲಲಂಬಾನ್ ಮಂದಾರ ಶೂನ್ಯಾನಲಕಾಂಶ್ಚಕಾರ, ನಾಸೌನಕಾಮ್ಯೋ

ನಚವೇದಸಮ್ಯಗ್ದ್ರಷ್ಟುಂ ನಸಾಳನ್ನರುಟಿರ್ಹಿರ್ಲೋಕೇ, ನಿಶ್ಚೈಲವಲಕ್ಷ್ಮೀಃ ಪ್ರತಿಕೂಲದೈವಾತ್' ಎಂಬಿವೆ ಮೊದಲಾದ ಗೂಢವಾಕ್ಯಗಳಿಂದ ತನ್ನ ಅಭಿಪ್ರಾಯವನ್ನೂ, ಆ ರಾಜನ ದೋಷವನ್ನೂ ತೋರಿಸುತ್ತ ಕಡೆಗೆಂಟನೆಯವನಾದ ಅಜಮಹಾರಾಜನನ್ನೇ ವರಿಸಿದ ಕವಿಯ ಸಾಮರ್ಥ್ಯವನ್ನು ಕಿಂಚಿದ್ವಿಸ್ತಾರವಾಗಿ ಬರೆಯುವೆನು –

(೧) ಪ್ರಥಮತಃ ಮಗಧರಾಜನನ್ನು ವರ್ಣಿಸುವದು ಹೇಗಂದರೆ—'ಈತನು ಮೇಲಿಂದಮೇಲೆ ಯಜ್ಞಗಳನ್ನಾಚರಿಸಿ, ಇಂದ್ರನನ್ನು ಕರೆದುಕೊಂಡು ಶಚೀದೇವಿಗೆ ಚಿರಕಾಲ ದುಃಖವನ್ನುಂಟುಮಾಡಿರುವನು' ಎಂದು ಹೇಳಿದ ದಾಸಿಯ ವಾಕ್ಯಗಳಲ್ಲಿ— [illegible]

[illegible]

[illegible]

[illegible]

ಹಿಂದಕ್ಕೆ ಜನ್ಮಿಸಿದ ಕಾರ್ತ್ತ್ಯವೀರ್ಯಾರ್ಜುನನನ್ನು ವರ್ಣಿಸಿ-'ಈತನು ಶಾಸ್ತ್ರಗಳನ್ನೂ, ವೃದ್ಧರನ್ನೂ ಅನುಸರಿಸುವನು' ಎಂಬುವದನ್ನಿಂದುಮತಿಯು ಇವನ ವಂಶದಲ್ಲೊಬ್ಬ ಕಾರ್ತ್ತ್ಯವೀರ್ಯಾರ್ಜುನನೇ ಬಲವಂತನು; ಈತನು ಸಾಧಾರಣ ಲಕ್ಷಣವುಳ್ಳವನಾದುದರಿಂದ ತ್ಯಜಿಸುವದಕ್ಕೆ ಯೋಗ್ಯನೆಂದು ಅಲ್ಲಿಂದಲೂ ಹೊರಟಳು.

(೫) ಬಳಿಕ ದಾಸಿಯು ಸುಷೇಣರಾಜನಲ್ಲಿಗೆ ಕರೆದು—'ಈತನು ತನ್ನ ಮನೆಯಲ್ಲಿ ತಂಪಾದ ಕಾಂತಿಗಳನ್ನೂ, ವೈರಿಗಳ ಗೃಹಗಳಲ್ಲಿ ತೀಕ್ಷ್ಣಕಾಂತಿಗಳನ್ನೂ ಚೆಲ್ಲುವನು ಮತ್ತು ಪ್ರಿಯಸಖಿಯರಿಂದ ಜಲಕ್ರೀಡೆಗೈಯುವಾಗ ಅವರ ಸ್ತನಗಳಲ್ಲಿರುವ ಚಂದನದಿಂದ ಕಪ್ಪಾದ ಕಾಳಿಂದೀ ನದಿಯು ಗಂಗಾನದಿಯನ್ನು ಹೊಂದದ ಮುಂಚೆಯೇ ಗಂಗಾನದಿಯಂತೇ ಕಾಣಿಸುತ್ತದೆ' ಅಂದರೆ—ಕಾಳಿಂದೀ ನದಿಯನ್ನು ಸ್ತನಚಂದನದಿಂದ ಬಿಳುಪಾಗಿ ಮಾಡುವಷ್ಟು ಸಖಿಯರಿದ್ದಾರೆ; ಇವನ ಪರಿಣಯದಿಂದ ನಿಶ್ಚಲಾನುರಾಗವಿರುವದಿಲ್ಲವೆಂದು ಇಂದುಮತಿಯು ಮನಗಂಡಳು.

(೬) ತರುವಾಯ ಹೇಮಾಂಗದನೆಂಬ ಕಳಿಂಗರಾಜನನ್ನು ತೋರಿಸಿ-"ಈತನು ಮಹೇಂದ್ರ ಪರ್ವತಕ್ಕೂ ಸಮುದ್ರಕ್ಕೂ ರಾಜನು. ಅತಿಶಯವಾದ ಗಜಬಲವುಳ್ಳವನು ಸಮುದ್ರವೇ ಈತನನ್ನು ಎಚ್ಚರಗೊಳಿಸುವದು, ಧನಸ್ಸುಗಳನ್ನು ನಿರಂತರ ವಹಿಸುವದರಿಂದ ಭುಜಗಳು ಕಾಯಕಾದಿರುವವು" ಎಂದು ಸುನಂದನೆಯು ಸೂಚಿಸಿದುದರಲ್ಲಿ ಪರ್ವತ ಸಮುದ್ರಗಳಿಗೊಡೆಯನಾಗಿರುವದರಿಂದ ಈತನಿಗನ್ಯವಾವ ಭೂಮ್ಯಾದಿ ಸುಕರಗಳಿಲ್ಲವೆಂತಲೂ, ಯಾವಾಗಲೂ ಹೆರರನ್ನು ಬಾಧಿಸಿ ಭೋಜನ ಸಾಮಗ್ರಿಗಳನ್ನು ಸಂಗ್ರಹಿಸುವನೆಂತಲೂ ಕಲಹ ಪ್ರಿಯನಾದ ಹೇಮಾಂಗದನನ್ನು ತ್ಯಜಿಸಬೇಕೆಂಬುವ ರಹಸ್ಯಾಭಿಪ್ರಾಯವನ್ನು ತಿಳಿದಳು.

(೭) ತದನಂತರ ಸುನಂದನೆಯು ಪಾಂಡ್ಯರಾಜನಲ್ಲಿ ನಿಂತು—"ಹೇ ಇಂದುಮತಿಯೇ, ಈ ರಾಜನು ಕರಿಕಮಲದಂತೊಪ್ಪುವ ಮೈಕಾಂತಿಯುಳ್ಳವನು; ನೀನು ಶುಭ್ರಗಾತ್ರವುಳ್ಳವಳು. ನೀವಿಬ್ಬರು ಕೂಡಿದರೆ ತಟಿತ್ತೋಯದಗಳಂತೆ (ಮಿಂಚಿನಿಂದ ಕೂಡಿದ ಮೋಡದಂತೆ) ವಿರಾಜಿಸುವಿರಿ" ಎಂದು ವರ್ಣಿಸಿದಾಗ ಈತನು ಶುಭ್ರವರ್ಣಿಯಾದರೆ ವಿವಾಹಾರ್ಹನಾಗುತ್ತಿದ್ದನೆಂತಲೂ, ನಾವಿಬ್ಬರು ಪರಿಣಯವಾದರೆ ವಿದ್ಯುನ್ಮೇಘಗಳಿಗೋಪಾದಿಯಲ್ಲಿ ಅನುರಾಗವು ಕ್ಷಣಮಾತ್ರವಾದುದೇ ಹೊರತು ಚಿರಕಾಲವಾದುದಲ್ಲವೆಂತಲೂ, ಅಂತರಭಿಪ್ರಾಯವನ್ನು ಗೋಚರವಾಡಿಕೊಂಡು ಇಂದುಮತಿಯು ಸಮಾಧಾನಿಸಲಿಲ್ಲ.

(೮) ಆಗ ಸುನಂದನೆಯು ಎಂಟನೆಯವನಾದ ಅಜಮಹಾರಾಜನನ್ನು ವರ್ಣಿಸುತ್ತ ಆತನ ವಂಶದ ಪೂರ್ವಜರಾದ ಕಾಕುತ್ಸ್ಥನನ್ನು, ಪಿತಾಮಹನಾದ ದಿಲೀಪನನ್ನೂ, ತಂದೆಯಾದ ರಘುರಾಜನನ್ನೂ ಪ್ರಶಂಸಿಸಿ "ಕುಲೇನ ಕಾಂತ್ಯಾವಯಸಾನವೇನ ಗುಣೈಶ್ಚ ತೈಸ್ತೈರ್ವಿನಯ ಪ್ರಧಾನೈಃ। ತ್ವಮಾತ್ಮನಸ್ತುಲ್ಯಮಮುಂ ವೃಣೀಷ್ವ ರತ್ನಂ ಸಮಾಗಚ್ಛತು ಕಾಂಚನೇನ" ಎಂಬಿತ್ಯಾದಿ ಶ್ಲೋಕಗಳಿಂದ ಕುಲ-ರೂಪ-ವಯಸ್ಸು-ಗುಣ್ಯಾದಿಗಳಿಂದ ಈತನೇ ನಿನಗೆ ಯೋಗ್ಯನು, ನೀನೀತನನ್ನು ವರಿಸಿದರೆ ಬಂಗಾರವನ್ನಾಶ್ರಯಿಸಿದ ರತ್ನದಂತೆ ಪ್ರಕಾಶಿಸುವಿ; ಈತನು ಚಿಕ್ಕವನಾಗಿಯೂ ರಾಜ್ಯಭಾರವನ್ನು ವಹಿಸುತ್ತಿದ್ದು ಶಾಂತನಾಗಿರುವನು ಎಂದು ಅಜಮಹಾರಾಜನನ್ನು ಹೊಗಳಿದುದರಲ್ಲಿ ರತ್ನಕ್ಕೆ ಬಂಗಾರದ ಹೊರತು ಇತರ ಲೋಹಗಳಲ್ಲಿ ಹೇಗೆ ಸ್ವಾಭಾವಿಕವಾಗುವದಕ್ಕೆ ಬರುವದಿಲ್ಲವೋ, ಹಾಗೆ ನಿನಗೂ ಇನ್ನೊಬ್ಬರ ಸಂಗವು ಸರಿಹೊಂದುವದಿಲ್ಲ. ರತ್ನಕ್ಕೂ ಬಂಗಾರಕ್ಕೂ ಇರುವ ಪರಸ್ಪರ ಸಂಬಂಧದಂತೆ ನಿಮ್ಮ ರೀತಿಗೂ ಅನ್ಯೋನ್ಯವಾದ ಬಹಳ ಯೋಗ್ಯತೆಯಿಂದ ಸಂಬಂಧವಿರುವದೆಂಬ [illegible] ಕಳುಹಿಸಿದಳು.

[illegible]

ವಿವಿಧಮತ ಮಹಾಸಭೆ.

(ಮೈಸೂರಿನ 'ಮೈಸೂರು ಸ್ಟಾರ್' ನಿಂದ **ಉದ್ಧರಿಸಲ್ಪಟ್ಟುದು**)

ಈ ಸಭೆಯ ಮೂರನೇ ಅಧಿವೇಶನವು ಮದ್ರಾಸಿನಲ್ಲಿ ಕಳೆದ ಡಿಸೆಂಬರ್ ತಾ|| ೨೧ ರಿಂದ ೩ ದಿವಸಗಳವರೆಗೆ ಶರ್ವಾನಂದಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ನಾನಾಭಾಗದಿಂದ ಅನೇಕ ವಿದ್ವಾಂಸರುಗಳು ಬಂದಿದ್ದರು. ಸಭಾಧ್ಯಕ್ಷರು ಆರಂಭೋಪನ್ಯಾಸದಲ್ಲಿ—'ಮನುಷ್ಯನು ತನ್ನ ಅಲ್ಪತ್ವವನ್ನು ಗ್ರಹಿಸಿ ಘನತ್ವವನ್ನು ಹೊಂದಲು ಮಾಡುವ ಪ್ರಯತ್ನವೇ ಮತವು. ಎಲ್ಲ ಮತಗಳೂ ಮೋಕ್ಷವನ್ನೇ ಪ್ರಾಪ್ಯಸ್ಥಾನವನ್ನಾಗಿ ನಿರೂಪಿಸುವುವು. ಪ್ರತಿಯೊಂದು ಮತಸ್ಥಾಪಕನು ಭಗವಂತನನ್ನು ದರ್ಶಿಸಿ ಅಪರೋಕ್ಷಜ್ಞಾನವನ್ನು ಪಡದೇ ತನ್ನ ಸಿದ್ಧಾಂತವನ್ನು ಒಂದು ಮತರೂಪವಾಗಿ ಲೋಕಕ್ಕೆ ಬೋಧಿಸುವನು. ಈ ಸಭೆಯಲ್ಲಿ ವಿವಿಧಮತಗಳ ಮುಖ್ಯಾಂಶವನ್ನು ಕುರಿತು ಆಯಾ ಮತದ ಪ್ರತಿನಿಧಿಗಳು ಉಪನ್ಯಾಸ ಮಾಡುವರು. ಅವನ್ನು ಭಕ್ತಿಶ್ರದ್ಧೆಯಿಂದ ಕೇಳುವುದೇ ಈ ಸಭೋದ್ದೇಶವು. ಮತಖಂಡನಕ್ಕೆ ಇಲ್ಲಿ ಆಸ್ಪದವಿಲ್ಲ. ಉಪನ್ಯಾಸವನ್ನು ಕೇಳಿದಮೇಲೆ ಯಾರಿಗಾದರು ಸುಬೋಧೆಯಿಂದ ಯಾವುದಾದರು ಅನುಮಾನಹುಟ್ಟೆ ಅದನ್ನು ಪರಿಹರಿಸಿಕೊಳ್ಳಬೇಕೆಂಬ ಸದುದ್ದೇಶದಿಂದ ಕೇಳಿ ತಿಳಿದುಕೊಳ್ಳಬೇಕಲ್ಲದೆ ಮತಖಂಡನೋದ್ದೇಶದಿಂದ ಯಾರೂ ಪ್ರಶ್ನೆ ಮಾಡಕೂಡದು." ಎಂದು ಅಧ್ಯಕ್ಷರು ಹೇಳಿದಮೇಲೆ ಉಪನ್ಯಾಸಗಳಿಗೆ ಆರಂಭವಾಯಿತು.

ಅದ್ವೈತಮತವು.

(ಜಗಪಟ್ಟಣದ ಬ್ರಹ್ಮಶ್ರೀ ಕೆ. ರಾಮಸ್ವಾಮಿಶಾಸ್ತ್ರಿ ಬಿ. ಎ. ಬಿ. ಎಲ್., ರವರು ಉಪನ್ಯಾಸಿಸಿದರು.)

ಅದ್ವೈತಮತವನ್ನು ಶ್ರೀಶಂಕರಾಚಾರ್ಯರು ವಿಶೇಷವಾಗಿ ಪ್ರಚುರಪಡಿಸಿದರಲ್ಲದೆ ಹೊಸದಾಗಿ ಕಲ್ಪಿಸಲಿಲ್ಲವು. ಈ ಮತವು ಅನಾದಿಯಾಗಿದೆ. ಹೆಲ್ಲಿ, ಟೆನಿಸನ್ನು ಮೊದಲಾಗಿ ಅನೇಕ ಮಂದಿ ಪಾಶ್ಚಾತ್ಯರು ಕೂಡ ಅದ್ವೈತಮತ ಸಿದ್ಧಾಂತವನ್ನೇ ಪ್ರಚಾರಗೊಳಿಸಿರುವರು. ಅದ್ವೈತಮತಕ್ಕೆ ಭಾರತದೇಶವೇ ಜನ್ಮಭೂಮಿಯೆಂದು ಸ್ವಾಮಿ ವಿವೇಕಾನಂದರವರು ಹೇಳಿರುವರು. ಭಾರತೀಯರು ಅಂತಸ್ಸೌಂದರ್ಯ ಪ್ರಿಯರಲ್ಲದೆ ಬಾಹ್ಯಸೌಂದರ್ಯ ಪ್ರಿಯರಲ್ಲವೆಂದು ಚೇಂಬರ್ಲೇನರವರು ಅಂದಿರುತ್ತಾರೆ. ಯೋಗವಾಸಿಷ್ಠವೆಂಬ ಗ್ರಂಥದಲ್ಲಿ ವಸಿಷ್ಠಮಹರ್ಷಿಯು ಅದ್ವೈತಮತ

ವನ್ನು ಸಾಕಲ್ಯವಾಗಿ ವಿವರಿಸಿರುವರು. ಆಚಾರ್ಯಪರಂಪರೆಯಲ್ಲಿ ವಸಿಷ್ಠ, ಶಕ್ತಿ, ಪರಾಶರ, ವ್ಯಾಸ, ಶುಕ, ಗೌಡಪಾದ, ಗೋವಿಂದಭಟ್ಟ, ಶ್ರೀಶಂಕರಾಚಾರ್ಯ, ವಿದ್ಯಾರಣ್ಯ, ಮಧುಸೂದ ಮೊದಲಾದ ಪ್ರಾಚೀನರೂ, ನವೀನರಲ್ಲಿ ಅಪ್ಪಯ್ಯದೀಕ್ಷಿತರೂ ಬಹಳ ಹೆಚ್ಚಾಗಿ ಪ್ರಶಂಸಿಸಿರುವರು. ದ್ರಾವಿಡಭಾಷೆಯಲ್ಲಿರುವ ತಿರುವಾಚಕಂ ತಾಯುಮಾನವರು ಎಂಬ ಗ್ರಂಥದಲ್ಲಿ ಅದ್ವೈತವಿಚಾರವು ಬಹು ಸವಿಸ್ತಾರವಾಗಿ ಬರೆಯಲ್ಪಟ್ಟಿದೆ. ಶ್ರೀಭಗವದ್ಗೀತೆಯ ೫, ೧೦, ೧೩ನೆ ಅಧ್ಯಾಯಗಳಲ್ಲಿ ಅದ್ವೈತ ಸಿದ್ಧಾಂತಶ್ಲೋಕಗಳು ಬಹಳವಾಗಿವೆ. [illegible], ಸ್ವಾಮಿ ವಿವೇಕಾನಂದರು ಮತ್ತು ರವೀಂದ್ರನಾಥ ಟಾಗೋರ್‌ರವರು ಅದ್ವೈತವನ್ನು ಪಾಶ್ಚಾತ್ಯದೇಶಗಳಲ್ಲಿ ಪ್ರಚಾರಗೊಳಿಸಿದರು. ಪ್ರಪಂಚದಲ್ಲಿರುವ ಎಲ್ಲ ಜಾತಿಗಳಿಗೂ, ಮತಗಳಿಗೂ ಐಕ್ಯಮತ್ಯವನ್ನುಂಟುಮಾಡತಕ್ಕ ಉತ್ತಮ ಸಿದ್ಧಾಂತವಾಗಿರುವುದು ಅದ್ವೈತ ಸಿದ್ಧಾಂತವೇ. ಈ ಸಿದ್ಧಾಂತವು ಸಂಪೂರ್ಣವಾಗಿ [illegible] ಚೆನ್ನಾಗಿ ವಿವರಿಸಲ್ಪಟ್ಟಿದೆ. ಮುಕ್ತಿಯಲ್ಲಿ [illegible], ವಿದೇಹಮುಕ್ತಿಯೆಂದು ಎರಡು ವಿಧವುಂಟು. ಈ ಭೌತಿಕ [illegible] ಸಚ್ಚಿದಾನಂದಾತ್ಮಕವಾದ ಸ್ವಸ್ವರೂಪವನ್ನು [illegible] ಅಥವಾ ಸದ್ಯೋಮುಕ್ತಿ; ಭೌತಿಕದೇಹವನ್ನು [illegible] ವಿದೇಹಮುಕ್ತಿ; [illegible]

ಬೌದ್ಧಮತವು

([illegible])

[illegible]

ಸತ್ಯವನ್ನು ಸರಿಯಾಗಿ ಗ್ರಹಿಸಿರಲಿಲ್ಲವು. ಹಿಂಸಾದೌರ್ಜನ್ಯಗಳು ಬಹಳ ಹೆಚ್ಚಾಗಿದ್ದುವು. ಭಗವದ್ಭಕ್ತರೆಂದೆನ್ನುತ್ತಿದ್ದವರು ಕೂಡ ದಯಾವಿರಹಿತರಾಗಿಯೇ ಇದ್ದರು. ಪರೋಪಕಾರ ಚಿಂತೆಯುಳ್ಳವರು ಸಾಕಷ್ಟಿರಲಿಲ್ಲವು. ನರಬಲಿಯೂ, ಪಶುವಧೆಯೂ ಬಹಳ ಪ್ರಬಲವಾಗಿಯೇ ಇದ್ದುವು. ಸ್ವಾರ್ಥಪರರು ದುರ್ಬಲರನ್ನು ಬಹಳ ಕಷ್ಟಕ್ಕೆ ಗುರಿಮಾಡುತ್ತಿದ್ದರು. ಜನ್ಮವು ದುಃಖಭಾಜನವಾಗಿ ಪರಿಣಮಿಸಿದ್ದಿತು. ದೇವರಿದ್ದಾನೆಂದು ತಿಳಿಯದೇ ದೇವರನ್ನು ಕಷ್ಟಪಟ್ಟು ತಡಕತಕ್ಕ ಪುರೋಹಿತರು ಕೂಡ ಏರ್ಪಟ್ಟರು. ನಿತ್ಯನೈಮಿತ್ತಿಕ ಕರ್ಮಗಳು ಬಂದು ಸುತ್ತಿಕೊಂಡುವು. ದೈವಭಕ್ತಿಯಿರುವವರೂ, ಇಲ್ಲದವರೂ ಕಷ್ಟವನ್ನು ಅನುಭವಿಸುತ್ತಿದ್ದರು. ಆದಾಗ್ಗೂ ಕಷ್ಟಗಳಿಗೆ ಮುಖ್ಯಕಾರಣವೇನೆಂದು ಅವರು ಗ್ರಹಿಸಲಿಲ್ಲವು. ಶ್ರೀ ಬುದ್ಧಮೂರ್ತಿಯು ಇದನ್ನು ತಿಳಿದು ಜಗತ್ತಿನಲ್ಲಿ ಅವತರಿಸಿದನು. ದುಃಖಕ್ಕೆ ಮುಖ್ಯಕಾರಣವು ತೃಷ್ಣೆಯು. ಜಂತುಗಳೂ, ಮಾನವರೂ ಆಶಾಬದ್ಧರಾಗಿರುವರು. ಸೃಷ್ಟಿಯಲ್ಲಿ ಆಶೆಯಿಲ್ಲದ ಪ್ರಾಣಿಯೇ ಇಲ್ಲವು. ಆದ್ದರಿಂದ ತೃಷೆಯನ್ನು ನಿರ್ಮೂಲಗೊಳಿಸಿದಲ್ಲಿ ಎಲ್ಲ ಬಾಧೆಯೂ ತಗ್ಗುವುದು. ಪ್ರವೃತ್ತಿಮಾರ್ಗ, ನಿವೃತ್ತಿಮಾರ್ಗವೆಂದು ಎರಡುವಿಧ ಮಾರ್ಗಗಳುಂಟು. ಪ್ರವೃತ್ತಿಮಾರ್ಗವೆಂದರೆ ಸಂಸಾರಲಂಪಟದಲ್ಲಿ ಸಿಕ್ಕಿಕೊಂಡಿರುವುದು. ನಿವೃತ್ತಿಮಾರ್ಗವೆಂದರೆ ವೈರಾಗ್ಯವು. ಅಹಿಂಸೆಯಿಂದಲೇ ನಿವೃತ್ತಿಮಾರ್ಗವುಂಟಾಗುವುದು. ಯಾವ ಪ್ರಾಣಿಗೂ ಕೇಡನ್ನು ಹಾರೈಸಬಾರದು, ಕಠಿನವಾಗಿ ಮಾತನಾಡಬಾರದು, ಹಾನಿಮಾಡಕೂಡದು; ಇದೇ ಅಹಿಂಸೆಯು. ಪ್ರಪಂಚದಲ್ಲಿ ಮಾನವರು ಸದ್ವರ್ತನಬದ್ಧರಾಗಿದ್ದರೆ ಮಹಾತ್ಮರಾಗುವರು. ಅವರು ಯಾವಾಗಲೂ ಪ್ರಪಂಚಕ್ಕೆ ಶ್ರೇಯಸ್ಸನ್ನೇ ಕೋರುವರು. ಅಂತಹವರು ಯಾವಕಾಲದಲ್ಲೂ ಇದ್ದೇ ಇರುವರು. ಧರ್ಮಕ್ಕೆ ಆದ್ಯಂತವಿಲ್ಲವು. ಋಷಿಗಳು ಯಾವಾಗಲೂ ಪ್ರಜೆಗಳನ್ನು ಉದ್ಧರಿಸಲು ಪ್ರಯತ್ನಿಸುತ್ತಿರುವರು. ಅಹಿಂಸೆ, ಆಸ್ತೆ, ಬ್ರಹ್ಮಚರ್ಯ, ಪ್ರಿಯವಾದ ಸತ್ಯವನ್ನು ಬಿಡದಿರುವುದು, ಮದ್ಯನಿರಸನ ಇವು ಐದೂ ಪಂಚಶೀಲಗಳು. ಜೀವವು ಅಸ್ಥಿರನೆಂದು ತಿಳಿಯಬೇಕು. ಸತ್ಯಬಿಡಕೂಡದು; ವಿನಮ್ರನಾಗಿರಬೇಕು; ನ್ಯಾಯಮಾರ್ಗದಲ್ಲಿ ಧನವನ್ನಾರ್ಜಿಸಬೇಕು; ಪರೋಪಕಾರವನ್ನು ಮಾಡುತ್ತಿರಬೇಕು; ಸದ್ವರ್ತನಶೀಲನಾಗಿರಬೇಕು.

ಸನ್ಯಾಸಕ್ಕೆ ಅವಸರವಿಲ್ಲವು; ನಾಲ್ಕು ಆಶ್ರಮಗಳು ಕೂಡ ಬೇಕಾಗಿಲ್ಲವು. ಈ ರೀತಿಯಾಗಿ ನಡೆದುಕೊಂಡಲ್ಲಿ ಚಿತ್ತಶಾಂತಿಯುಂಟಾಗುವುದು. ಆದರಿಂದ

ಜೀವನಿಗೆ ತನ್ನ ಸ್ವರೂಪವು ಸರಿಯಾಗಿ ತಿಳಿಯುವುದು; ಅದೇ ನಿರ್ವಾಣವು ಜಾತಿವಿವರ್ಣ ವಿವಿಕ್ತವಿಲ್ಲವು. ಸ್ವಸ್ವರೂಪವು ಗೋಚರಿಸಿದ ಹೊರತು ಭಗವಂತನನ್ನು ತಿಳಿಯಲು ಅರ್ಹತೆಯುಂಟಾಗುವುದಿಲ್ಲವು. ಅದಕ್ಕೆ ಪೂರ್ವವೇ ಭಗವಂತನನ್ನು ಕುರಿತು ಆಲೋಚಿಸುವುದು ಆವಶ್ಯಕವು. ಸ್ವಸ್ವರೂಪ ಸಂದರ್ಶನವಾದನಂತರ ಎಲ್ಲ ಸಂಶಯವೂ ತೊಲಗಿ ಹೋಗುವುದು. ಪರೋಪಕಾರಬುದ್ಧಿಯಲ್ಲಿ ಕಲಹವುಂಟಾಗದೆ ಏಕಮತ್ಯವುಂಟಾಗುವುದು. ಸಂಪೂರ್ಣ ವೈರಾಗ್ಯ, ಪ್ರೇಮ, ವಿನಯಗಳಿಂದ ಕೂಡಿರಬೇಕು. ಇದಕ್ಕೆ ಕೆಲ ನಿಯಮಗಳಿವೆ. ಅವು ಹೇಗೆ ಬಂದವುಗಳಾಗಿದ್ದರೂ ಚರ್ಚಿಸಲ್ಪಡಬೇಕಾದುದಿಲ್ಲವು. ನಿಯಮಗಳನ್ನು ಭಂಗಪಡಿಸುವುದರಿಂದಲೇ ಪಾಪಸಂಘಟಿಸುವುದು, ಪಾಪದಿಂದ ದುಃಖವುಂಟಾಗುವುದು, ಪವಿತ್ರತೆಯುಂಟಾದರೂ ಮನುಷ್ಯರು ಅಲ್ಪಶಕ್ತಿಯಿಂದ ಮಹಾಶಕ್ತನಾದ ಪರಮೇಶ್ವರನನ್ನು ಹೊಂದಲಾರರು. ನಿರ್ವಾಣದಿಂದ ಜೀವನು [illegible] ಕೂಡ [illegible] ಎಂದು [illegible]

[illegible]

([illegible])

''[illegible]

ಗಳನ್ನು ಆತನು ಚಕ್ಕಳದಮೇಲೆ ಬರೆದಿಟ್ಟನು. ಜರಮಯ್ಯನು ಕೂಡ ಅವರಂತೆಯೇ ಒಂದು ಗ್ರಂಥವನ್ನು ಬರೆದನು ಅದು ಅದ್ವ್ಯಾರ ಗ್ರಂಥಾಲಯದಲ್ಲಿದೆ. ೫೦ ಸಾಧನಗಳಿರುತ್ತವೆ. ಮನುಷ್ಯನ ಸ್ವಭಾವವು ಪಾಪವನ್ನೇ ಕೋರುವುದು. ಮಹಾಭಕ್ತನಾದ ಅಬ್ರಹಂ ಅಗ್ನಿಪ್ರವೇಶಮಾಡಲೆತ್ನಿಸಿದಾಗ ದೇವರು ಆತನನ್ನು ರಕ್ಷಿಸಿದನು. ನಮ್ಮ ಮತದ ಅನೇಕ ಜನರಿಗೆ ಭಗವದ್ದರ್ಶನವಾಗಿರುತ್ತದೆ. ಮತದ ನಿಯಮಗಳು ಬಹಳ ಕಠಿಣವಾಗಿರುತ್ತವೆ. ಉಡುಪನ್ನು ಧರಿಸುವ ಪದ್ಧತಿಯು ಬೇರೆ. ಹಿಂದುಗಳಲ್ಲಿ ದ್ವಿಜರು ಯಜ್ಞೋಪವೀತವನ್ನು ಧರಿಸುವಂತೆ ನಾವು ಪುಷ್ಪಹಾರವನ್ನು ಧರಿಸಬೇಕು. ನಮಗೂ ಮಂತ್ರವಿರುತ್ತದೆ. ಆಹಾರ, ನಿಯಮ, ಇಂದ್ರಿಯನಿಗ್ರಹ, ವಿಧೇಯತೆ, ಆತ್ಮಶುದ್ಧಿ, ಬಾಹ್ಯಶುದ್ಧಿಯು ಸಹ ಇದ್ದೇ ಇರಬೇಕು. ೧೦ ಪ್ರಧಾನನಿಬಂಧನಗಳು ಬೈಬಲ್‌ನಲ್ಲಿವೆ. ನಮಗೂ ಅವೇ ನಿಬಂಧನಗಳಲ್ಲದೆ ೬೧೩ ಉಪನಿಬಂಧನಗಳೂ ಸೇರಿವೆ. ಭಗವಂತನನ್ನು ಸಂಪೂರ್ಣವಾಗಿ ಪ್ರೀತಿಸಬೇಕು. ಮನುಷ್ಯರೆಲ್ಲರನ್ನೂ ಪ್ರೀತಿಸಬೇಕು. ಪ್ರಾರ್ಥನ, ಪಶ್ಚಾತ್ತಾಪ, ಇಂದ್ರಿಯನಿಗ್ರಹ ಮೊದಲಾದವುಗಳು ಅತ್ಯಾವಶ್ಯಕವು. ದಿನದಲ್ಲಿ ಮೂರುವೇಳೆ ಪ್ರಾರ್ಥನೆಯನ್ನು ಮಾಡಬೇಕು. ಇವೇ ಮುಖ್ಯನಿಯಮಗಳು.'' ಎಂದು ಸಲೇಂರವರು ಹೇಳಿದರು.

ಸಿಕ್‌ಮತವು.

(ಪ್ರೊಫೆಸರ್ ಎಚ್. ಸಿ. ಕುಮಾರರವರ ಉಪನ್ಯಾಸ.)

''ಈ ಮತಕ್ಕೆ ಗುರುನಾನಕನು ಸ್ಥಾಪಕನು. ನಾನಕಾನ ಎಂಬಲ್ಲಿ ನಾನಕನು ಜನ್ಮಿಸಿದನು. ಅಲ್ಲಿಯೇ ಈಚೆಗೆ ಘೋರವಾದ ದಾರುಣಹತ್ಯವು ನಡೆದಿರುವುದು. ನಾನಕನಿಂದಲೇ ಆದಕ್ಕೆ 'ನಾನಕಾನಾ' ಎಂದು ಹೆಸರು. ಶ್ರೀ ರಾಮಾನುಜಾಚಾರ್ಯರು ಬೋಧಿಸಿದ ಭಕ್ತಿಯೇ ಮಹಾರಾಷ್ಟ್ರದಲ್ಲೂ ವ್ಯಾಪಿಸಿತು. ಅಲ್ಲಿ ತುಕಾರಾಂ ಭಕ್ತನು ಅದನ್ನು ಪ್ರಜ್ವಲಿಸಿದನು. ರಾಮಾನಂದನು ಸಂಯುಕ್ತರಾಷ್ಟ್ರದಲ್ಲಿ ಆ ಮತವನ್ನು ಪ್ರಕಾಶಪಡಿಸಿದನು. ಅಲ್ಲೇ ತುಲಸೀದಾಸನೂ, ಕಬೀರದಾಸನೂ ಇದ್ದರು. ಪಾಂಚಾಲದಲ್ಲಿ ಅದನ್ನು ಗುರು ನಾನಕನು ಬೋಧಿಸಿದನು. ವಂಗರಾಷ್ಟ್ರದಲ್ಲಿ ಅದನ್ನು ಶ್ರೀ ಚೈತನ್ಯಸ್ವಾಮಿಯು ಬೋಧಿಸಿದನು. ಕಬೀರನ ಮತ್ತು ನಾನಕನ ಬೋಧೆಯು ಒಂದೇ ವಿಧವಾಗಿದ್ದಿತು. ನಾನಕನಿಗೆ ೫೦೦ ವರ್ಷಗಳ ಹಿಂದೆಯೇ ಮಹಮ್ಮದೀಯರು ಉತ್ತರದೇಶದಲ್ಲಿ ನೆಲಸಿದ್ದರಲ್ಲದೆ ಆಗ ಮಹಮ್ಮದೀಯ ವಿಜ್ಞಾನಕ್ಕೆ ಬಹಳ ಸಂಘರ್ಷಣವುಂಟಾಗಿದ್ದಿತು. ಅನೆರಡನ್ನೂ ಸಂಮಿಳಿತ

ಮಾಡಲು ಕಬೀರನೂ ಗುರುನಾನಕನೂ ಬಹಳ ಪ್ರಯತ್ನಿಸಿದರು ಯಾರ ಮಾತಕ್ಕೂ
ಆಗ್ರಹವಾಗದ ರೀತಿಯಲ್ಲಿ ಜನಸಾಮಾನ್ಯಕ್ಕೆ ಬೋಧಿಸುತ್ತಿದ್ದರು. ಜನಸಾಮಾ
ನ್ಯಕ್ಕೆ ಸಂಸ್ಕೃತವು ಗೊತ್ತಾಗುತ್ತಿರಲಿಲ್ಲವಾದುದರಿಂದ ಗುರುನಾನಕನು ಪಂಜಾಬಿ
ಭಾಷೆಯಲ್ಲಿ ಬೋಧಿಸುತ್ತಿದ್ದನು. ಆ ಬೋಧನೆಗಳೇ ಗುರುಗ್ರಂಥಾಸಾಹೇಬ ಎಂಬ
ಹೆಸರನ್ನು ತಂದವು. ಇತರ ದೇಶಗಳಲ್ಲಿ ಆಯಾ ಭಾಷೆಗಳಲ್ಲಿ ಕೂಡ ನಾನಕನು
ಬೋಧಿಸಿದನು. ಗುರುನಾನಕನು ಭಾರತದೇಶದ ಕಾಶ್ಮೀರ, ಸಿಂಹಳ, ಆಸಾಂ, ಸಿಂಧು
ಮೊದಲಾದ ಭಾಗಗಳಿಗೇ ಅಲ್ಲದೆ ಪಾರಶೀಕ, ಅರೇಬಿಯಾ, ತುರ್ಕಿ, ಚೈನಾ ಮೊದ
ಲಾದ ವಿದೇಶಗಳಿಗೂ ಕೂಡ ೧೫ನೆಯ ಶತಾಬ್ದದಲ್ಲಿ ಹೋಗಿದ್ದನು. ಬಾಗ್ದಾದಿನಲ್ಲಿ
ಈಗಲೂ ದೇವಾಲಯವಿದೆ. ಆತನು ಕಾನ್ಸ್ಟಾಂಟಿನೋಪಲಿಗೂ ಹೋಗಿದ್ದನು.
ಆತನು ಹೊಸದಾಗಿ ಯಾವ ಸಿದ್ಧಾಂತವನ್ನೂ ಕಂಡುಹಿಡಿಯಲಿಲ್ಲವು. ಆವರೆಗೆ
ವಾಡಿಕೆಯಲ್ಲಿದ್ದ ಸಿದ್ಧಾಂತವನ್ನೂ ಸತ್ಯವೆಂದೇ ಸ್ಪಷ್ಟವಾಗಿ ತೋರಿಸಿಕೊಡುತ್ತಿದ್ದನು
ಆಗ ಹಿಂದೂಗಳಿಗೂ ಮಹಮ್ಮದೀಯರಿಗೂ ವಿರೋಧವು ಬಹಳ ಹೆಚ್ಚಾಗಿದ್ದಿತು.
[illegible] ಅದನ್ನು ಹೋಗಲಾಡಿಸಿ ಐಕಮತ್ಯವನ್ನುಂಟುಮಾಡಲು ಗುರುನಾನಕನು
ಪ್ರಯತ್ನಿಸಿದನು. [illegible] ಹೋಗಲಾಡಿಸುವುದರಲ್ಲಿ ಯಾರ ಮನಸ್ಸಿಗೂ
ನೋವನ್ನುಂಟುಮಾಡುತ್ತಿರಲಿಲ್ಲ. ಪುಣ್ಯಕ್ಷೇತ್ರದರ್ಶನ, ಪುಣ್ಯನದೀ ಸ್ನಾನ, ಪೂಜೆ,
[illegible] ಮೊದಲಾದುವುಗಳು ಮುಕ್ತಿಗೆ ಮುಖ್ಯಸಾಧನವು. ನರಕಕ್ಕೂ ಮರಣಕ್ಕೂ
[illegible] [illegible]. [illegible] [illegible] [illegible] ಸಮಸ್ತ ಚರಾಚರ ಜಂತು
[illegible]. [illegible]. [illegible] [illegible] ದೇವತೆಗಳೂ ಭಯಕ್ಕೆ ವಶರಾದ
[illegible]. [illegible] [illegible] ಮುಕ್ತಿ [illegible]ರಾಗುವರು — ಎಂದು
[illegible] [illegible]. [illegible] [illegible], ಶ್ಲೋಕಗಳೂ
[illegible]. [illegible] [illegible] [illegible] [illegible]. ಗ್ರಂಥಸಾಹೇಬದಲ್ಲಿ ಕಬೀರ
[illegible] [illegible] [illegible]. [illegible] [illegible] [illegible] ಇರುತ್ತವೆ.
[illegible] [illegible] [illegible] ಮುಕ್ತಿ. ಭಗವಂತನ ಇಚ್ಛೆಯನ್ನು
[illegible] [illegible]. [illegible] [illegible]. ಸತ್ಕರ್ಮ, ಸದ್ಗುರು,
[illegible] [illegible] [illegible] [illegible]. [illegible] ಸತ್ಯವಂತ
[illegible]. [illegible] [illegible] ನಾನಕನು ಬೋಧಿ
ಸಿದನು. [illegible] [illegible] [illegible]. [illegible]. ಮಹಮ್ಮ
[illegible] [illegible]. [illegible] [illegible] ಎಲ್ಲ ಮತಗಳೂ

ಬೋಧಿಸುವುವು- ಭಗವಂತನು ಪತಿಯೆಂದೂ, ಭಕ್ತನು ಪತ್ನಿಯೆಂದೂ ನಾನಕನು
ಭಾವಿಸಿ ಆರೀತಿಯಾಗಿ ಅನುಸಂಧಾನಮಾಡಿ ಭಗವಂತನನ್ನು ಪ್ರಾರ್ಥಿಸುತ್ತಿದ್ದನಲ್ಲದೆ
ಪ್ರಾರ್ಥನೆಯೇ ಮುಕ್ತಿಗೆ ಮುಖ್ಯ ಸಾಧನವೆಂದು ನಾನಕನು ಬೋಧಿಸಿದನು. ಶ್ರೀ
ವೈಷ್ಣವಮತದಲ್ಲಿಯ ಭಕ್ತಿ ಪ್ರಪತ್ತಿಗಳನ್ನೇ ನಾನಕನು ಬೋಧಿಸುತ್ತಿದ್ದನು. ಭಗ
ವಂತನು ಸರ್ವಶಕ್ತನು, ಸರ್ವಾಂತರ್ಯಾಮಿ ಸರ್ವನಿಯಾಮಕ ಎಂದು ನಾನಕನು
ಸಿದ್ಧಿಯನ್ನು ಹೊಂದಿದಮೇಲೆ ನಾಂಧಾರಿಗಳೂ, ಉದಾಸೀನರುಗಳೂ ಏರ್ಪಟ್ಟರು.
೧೦ನೇ ಗುರುವಾದ ಗುರುಗೋವಿಂದನಿಂದ ಆಕಾಲೀಗಳು ಏರ್ಪಟ್ಟರು. ನಾನಕನು
ತನ್ನ ಮಕ್ಕಳಿಗೆ ಮಠಾಧಿಕಾರವನ್ನು ಕೊಡದೆ ಶಿಷ್ಯರಿಂಗೆ ಕೊಟ್ಟುದರಿಂದ, ನಾನಕನ
ಮಕ್ಕಳು ಉದಾಸೀನಮತವನ್ನೇರ್ಪಡಿಸಿದರು. ಆಕಾಲಿಗಳಿಗೆ ೫ ಲಕ್ಷಣಗಳುಂಟು.
ಅವರು ಸಂಸ್ಕರ್ತ್ತರು; ನಾಂಧಾರಿಗಳು; ಗೃಹಸ್ಥರು, ಉದಾಸೀನರು, ವಿರಾಗಿಗಳು,
ಆಕಾಲಿಗಳು ಶಾಖಾಹಾರಿಗಳಾದುದರಿಂದ ಗ್ರಂಥಸಾಹೇಬು ಹಿಂಸೆಯನ್ನು ಪೂರ್ತಿ
ಯಾಗಿ ನಿರೋಧಿಸಿದನು. ಸ್ವರ್ಣ ದೇವಾಲಯದಲ್ಲಿ ೨೪ ಗಂಟೆಯಲ್ಲೂ ಸಂಕೀರ್ತನ
ವಾಗುತ್ತಲೇ ಇರುತ್ತದೆ. ಗೃಹಸ್ಥರು ಪ್ರಾತಃಕಾಲದಲ್ಲೂ, ಸಾಯಂಕಾಲದಲ್ಲೂ,
ಮಲಗುವಾಗಲೂ ದೇವರಪ್ರಾರ್ಥನೆಯನ್ನು ಮಾಡಬೇಕು; ದೇವಾಲಯಕ್ಕೆ ಹೋಗ
ಬೇಕು. ವಿವಾಹವಿಧಿಯಲ್ಲಿ ಗಂಡಹೆಂಡಿರು ಗ್ರಂಥಸಾಹೇಬಿಗೆ ಪ್ರದಕ್ಷಿಣೆಮಾಡು
ವುದೇ ವಿವಾಹವು. ಪೂಜಾರಿಗಳು ಗ್ರಂಥಿಗಳೆಂದು ಕರೆಯಲ್ಪಡುವರು. ಸತ್ತವರು
ದಹನಮಾಡಲ್ಪಡುವರು. ಯಜ್ಞೋಪವೀತವಿಲ್ಲವು. ಹೋಮವಿಲ್ಲವು.

ಮಹಮ್ಮದೀಯಮತವು.

(ಎಸ್. ಎಂ. ಫಾಸಿಲಯವರುಪನ್ಯಾಸ.)

ಮಹಮ್ಮದೀಯಮತವು ಪ್ರಪಂಚಕ್ಕೆ ಆದಿಮತವು. ಇದನ್ನು ಮಹಮ್ಮದನು ಸರ್ವತ್ರ ಪ್ರಸಾರಗೊಳಿಸಿದನೆಂದು ನನ್ನ ನಂಬಿಕೆಯು. ಮಹಮ್ಮದನು ಜನಿಸಿದ ವೇಳೆಯಲ್ಲಿ ಅರೇಬಿಯಾದೇಶದ ಜನರಾದ ಅರಬಿಯನರು ಬಹಳ ಘೋರಕೃತ್ಯವನ್ನು ಮಾಡುತ್ತಿದ್ದರು. ನೀತಿಯು ತಪ್ಪಿ ಅರಾಜಕತ್ವವು ಪ್ರಬಲಿಸಿದ್ದಿತು. ಆಗ ಮಹಮ್ಮದನು ಪ್ರಯತ್ನಪಟ್ಟು ಆ ದುಸ್ಥಿತಿಯನ್ನು ಸಂಪೂರ್ಣವಾಗಿ ಹೋಗಲಾಡಿಸಿದನು. ಬಾಲ್ಯದಲ್ಲೇ ಆತನ ತಂದೆತಾಯಿಗಳು ಮೃತರಾದರು. ಮಹಮ್ಮದನು ಸರ್ವಜನರಂಜಕನಾಗಿದ್ದನು. ಒಬ್ಬ ಐಶ್ವರ್ಯವಂತನ ಮಗಳು ಆತನನ್ನು ವಿವಾಹಮಾಡಿಕೊಂಡಳು. ಆತನು ಮನುಷ್ಯರ ಸ್ವಭಾವವನ್ನು ಚೆನ್ನಾಗಿ ಅರಿತುಕೊಂಡು ತನ-

ಮತವನ್ನು ಪ್ರಸಾರಮಾಡಿದನು. ಭಗವಂತನ ಆಜ್ಞಾಪ್ರಕಾರ ದೇವರೊಬ್ಬನೇ ಎಂದು ನಂಬಿ ಸತ್ಕಾರ್ಯವನ್ನು ಮಾಡಬೇಕೆಂದು ಮಹಮ್ಮದನು ಜನರಿಗೆ ಬೋಧಿಸಿದನು. ಪ್ರಜೆಗಳು ಬಾಧಿಸಲು ಆತನು ಮೆಕ್ಕಾದಿಂದ ಮದೀನಾಕ್ಕೆ ಹೋದನು. ಆತನು ೫೩ ವರ್ಷ ವಯಸ್ಸಿನವನಾಗಿದ್ದು ಅಲ್ಪಸ್ವಲ್ಪ ಕಾಲದಲ್ಲಿ ಪ್ರಜೆಗಳನ್ನು ಬಹಳ ಮಟ್ಟಿಗೆ ನೀತಿವಂತರನ್ನಾಗಿಯೂ, ಸದ್ಗುಣಸಂಪನ್ನರನ್ನಾಗಿಯೂ ಮಾಡಿದನು. ಪ್ರಜಾಪ್ರಭುತ್ವವನ್ನೇರ್ಪಡಿಸಿ ಸ್ತ್ರೀಯರ ಸ್ಥಿತಿಯನ್ನು ಉತ್ತಮಗೊಳಿಸಿದನು. ಎಲ್ಲ ಕಲೆಗಳನ್ನೂ ಬೆಳೆಸಿದನು. ಮತಸಂಸ್ಕರ್ತರೊಳಗೆಲ್ಲಾ ಮಹಮ್ಮದನು ಅಗ್ರಗಣ್ಯನೆಂದು ಬ್ರಿಟಾನಿಕಾದಲ್ಲಿ ಬರೆಯಲ್ಪಟ್ಟಿದೆ. ಮಹಮ್ಮದೀಯರು ಇತರ ಮತಕರ್ತರನ್ನು ಗೌರವಿಸಬೇಕೆಂದು ಮಹಮ್ಮದನು ಬೋಧಿಸಿದನು. ಆತನು ಮತಬೋಧಕನಾಗಿದ್ದುದಲ್ಲದೆ ದೊಡ್ಡ ರಾಜನಾಗಿಯೂ ಇದ್ದನು. ತಾನು ದೇವರಲ್ಲದಿದ್ದಾಗ್ಯೂ ಭಗವಂತನ ಸಂದೇಶವನ್ನು ತಿಳಿಸುವ ಮನುಷ್ಯನೆಂದು ಮಹಮ್ಮದನು ಹೇಳುತ್ತಿದ್ದನು. ಮಹಮ್ಮದನು ಸಕಲ ಭೋಗವನ್ನು ತ್ಯಜಿಸಿ ವಿರಾಗಿಯಾಗಿ ಒಂದು ಕುಟೀರದಲ್ಲಿ ವಾಸಮಾಡುತ್ತ ಬಟ್ಟೆಯನ್ನು ಜುಬ್ಬನ್ನು, ಟೋಪಿಯನ್ನು ಹೊಲಿಸಿಕೊಂಡು ತಪಸ್ವಿಯಾಗಿದ್ದನು.

ಸಲಾಂ ಅಂದರೆ ಶಾಂತಿ. ಇಸ್ಲಾಂ ಅಂದರೆ ಭಗವಂತನಲ್ಲೂ, ಮಾನವನಲ್ಲೂ [illegible] ಮಹಮ್ಮದೀಯರಲ್ಲಿಲ್ಲವು. ದೇವರು ತಂದೆ; [illegible] ಕೂಡಿದವನು [illegible] ಮಹಮ್ಮದನು ಭಗವಂತನ ಆಜ್ಞಾಧಾರಕನು. ಅವನಿಗೆ [illegible] ಎಂಬವು [illegible] ಅಂದರೆ ಸೃಷ್ಟಿಕರ್ತ. [illegible] ಅಂದರೆ ಆಸಾ [illegible] ಧರ್ಮಾಧಿಕಾರಿ [illegible] ಆತನು [illegible] ಮತದವರು [illegible] ಅಂದರೆ [illegible]

ವುದು. ಮೂರನೆಯದು ಉಪವಾಸ. ಇದು ಭಗವಂತನ ಕೋಪವನ್ನು ತಗ್ಗಿಸುವದಕ್ಕೂ, ಶರೀರವನ್ನು ಕೃಶಗೊಳಿಸುವುದಕ್ಕೂ ಮಾಡತಕ್ಕದಾಗಿರದೆ, ಆತ್ಮಶುದ್ಧಿಗಾಗಿಯೇ ಮಾಡತಕ್ಕದಾಗಿದೆ. ಧನವಂತರು ಉಪವಾಸವನ್ನು ಮಾಡಿ ಬಡಬಗ್ಗರಿಗೆ ಅನ್ನವಸ್ತ್ರಗಳನ್ನು ಕೊಡುವರು. ಧನಿಕನ ಧನವು ಬಡವರುಪಯೋಗಕ್ಕಾಗಿಯೇ ಇರುವುದು. ಧನಿಕನು ಭಗವಂತನ ಕೋಶಾಧಿಕಾರಿ. ಐದನೆಯದು ಹಾಜೀ ಅಂದರೆ ವಿಶ್ವಮಹಾಸಭಾ. ಇದೇ ನಾನಾದೇಶ ಸಂಘವು. ಯಾವ ಭೇದವೂ ಇಲ್ಲದೆ ಪ್ರಪಂಚವಾಸಿಗಳೆಲ್ಲರೂ ಏಕೀಭವಿಸುವರು. ಮಹಮ್ಮದೀಯ ಮತದಲ್ಲಿ ಸನ್ಯಾಸವಿಲ್ಲವು. ಸಂಸಾರವನ್ನು ತ್ಯಜಿಸಿ ಹೋಗಕೂಡದು. ಸಂಸಾರದಲ್ಲಿದ್ದುಕೊಂಡೇ ವಿಧಿಯನ್ನು ನೆರವೇರಿಸತಕ್ಕದಾಗಿದೆ. ಅತಿವ್ಯಾಪ್ತಿಕೂಡದು. ಮಿತಾಹಾರ, ಮಿತಭೋಗ ಮಾಡಬೇಕು. ಇದೇ ಮಹಮ್ಮದೀಯ ಮತವೇದಾಂತ— ಎಂದು ಫಾಸಲಿಯವರು ಬಹಳ ಚಮತ್ಕಾರವಾಗಿ ಹೇಳಿದರು.

ಖುರಾನನ್ನು ದೇವರು ಮಹಮ್ಮದನು ಸಮಾಧಿಯಲ್ಲಿರುವಾಗ್ಗೆ ಮಹಮ್ಮದನಿಗೆ ಬೋಧಿಸಿದನು. ಮಹಮ್ಮದನಿಗೆ ಓದುಬರಹ ಬರುತ್ತಿರಲಿಲ್ಲ. ಮಹಮ್ಮದನ ಮುಖದಿಂದ ಬಂದುದನ್ನು ಶಿಷ್ಯರು ಬರೆದುಕೊಂಡರು.

ತಿನ್ನತಕ್ಕ ವಸ್ತುಗಳೂ, ತಿನ್ನಬಾರದ ವಸ್ತುಗಳೂ ಇವೆ. ಗೊರಸೆಯುರತಕ್ಕ ಸಜೀವಜಂತುಗಳ ಮಾಂಸವನ್ನು ತಿನ್ನಬಹುದು; ಗೋವೂ ಆ ವರ್ಗಕ್ಕೇ ಸೇರಿದುದು; ಗೋವನ್ನು ತಿನ್ನದೆ ಇರಕೂಡದೆಂದು ಖುರಾನಿನಲ್ಲಿ ಹೇಳಿಲ್ಲವು. ಆದರೆ ನೆರೆಹೊರೆಯವರಿಗೆ ತೊಂದರೆಯಾಗಿದ್ದ ಪಕ್ಷದಲ್ಲಿ ಆ ಕೆಲಸವನ್ನು ಮಾಡಕೂಡದೆಂದು ಖುರಾನಿನಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಖುರಾನಿನಲ್ಲಿ ಮೊಹರಂ ವಿಚಾರವಿಲ್ಲವು. ಮಹಮ್ಮದೀಯ ಮತವು ಕತ್ತಿಯ ಬಲದಿಂದ ಪ್ರಸಾರಗೊಳಿಸಲ್ಪಟ್ಟಿತೆಂಬುದು ಅಸತ್ಯವು. ನಮ್ಮ ಮತದವರು ಇತರರನ್ನು ಬಲವಂತದಿಂದ ಮತಕ್ಕೆ ತೆಗೆದುಕೊಳ್ಳುವುದೂ, ಮದ್ಯಪಾನಮಾಡುವುದೂ ಖುರಾನಿನಲ್ಲಿ ಹೇಳಲ್ಪಟ್ಟಿದೆಯೆಂದು ತಿಳಿಯಕೂಡದು. ಬಲವಂತದಿಂದ ಇತರರನ್ನು ಸೇರಿಸಿಕೊಳ್ಳಕೂಡದೆಂದು ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಮತವಿಷಯವನ್ನು ಇತರರಿಗೆ ಬೋಧಿಸಬೇಕು. ಅವರು ಮನಃಪೂರ್ವಕವಾಗಿ ಅಂಗೀಕರಿಸಿದಲ್ಲಿ ಸೇರಿಸಕೊಳ್ಳಲ್ಪಡಬಹುದು. ಹಾಗಲ್ಲದೆ ಬಲವಂತದಿಂದ ಖಂಡಿತವಾಗಿ ಸೇರಿಸಿಕೊಳ್ಳಲಾಗದೆಂದು ಖುರಾನಿನಲ್ಲಿ ಸ್ಪಷ್ಟವಾಗಿದೆ. ಇತರ ಮತದವರು ಈ ಮತಕ್ಕೆ ಸೇರಲಿಷ್ಟಪಟ್ಟರೆ ಸೇರಿಸಿಕೊಳ್ಳಲ್ಪಡಲು ಯಾವ ಅಭ್ಯಂತರವೂ

ಇಲ್ಲವು. ಬಹುಭಾರ್ಯತ್ವವನ್ನು ಕ್ರಿಸ್ತನೂ, ಇತರ ಮತದವರೂ ಅಂಗೀಕರಿಸಿರುವರು. ನಾಲ್ವರಿಗಿಂತ ಹೆಚ್ಚಾಗಿ ಲಗ್ನಮಾಡಿಕೊಳ್ಳಲಾಗದು. ಆ ನಾಲ್ವರನ್ನೂ ಸಮಾನವಾಗಿ ಕಾಣಬೇಕೆಂದು ಖುರಾನಿನಲ್ಲಿ ಹೇಳಿದೆ. ಸ್ವರ್ಗವೂ ನರಕವೂ ಇವೆ. ಪಾಪಪುಣ್ಯಗಳಿವೆ. ಭೂಲೋಕವು ಸಾಧನಾಕ್ಷೇತ್ರವು. ಮೋಕ್ಷವು ಶಾಶ್ವತಸ್ಥಾನವು. ಮಹಮ್ಮದನು ತಂದೆತಾಯಿಯೂ ತಿಂಡಿಯೂ ಇಲ್ಲದ ಅನಾಥಬಾಲನಾಗಿದ್ದು ಕ್ರಮಕ್ರಮವಾಗಿ ದೊಡ್ಡ ಗುರುವಾಗಿಯೂ, ರಾಜನಾಗಿಯೂ, ಸೇನಾನಾಯಕನಾಗಿಯೂ ಆದನು—ಎಂದು ಉಪನ್ಯಾಸಕರು ಹೇಳಿದರು.

ದ್ವೈತಮತವು.

([illegible] ಬಿ. ಎ., ಬಿ. ಎಲ್., ಇವರ ಉಪನ್ಯಾಸ)

ಮುಕ್ತಿಯಿಂದ ಕೂಡ ಜೀವನು ಭಿನ್ನನಾಗಿರುತ್ತಾನೆ. ದ್ವೈತಕ್ಕೆ ವೇದವೂ ಉಪನಿಷತ್ತೂ ಆಧಾರವು. ಬ್ರಹ್ಮಸೂತ್ರವೂ ಭಗವದ್ಗೀತೆಯೂ ಆಧಾರಗಳಾಗಿವೆ. ದ್ವೈತವು [illegible] ವೇದವೇ ಪರಮಪ್ರಾಣವು; ಉಪ[illegible] ಅನ್ಯ (ದ್ವೈತವು), ಅನನ್ಯ (ಅದ್ವೈತವು) ಎಂದು ಎರಡುವಿಧ[illegible] ಅನ್ಯರು; ಭೇದವಿಲ್ಲ[illegible] ಭಿನ್ನರು ಎಂಬುದಕ್ಕೆ [illegible] ಬಹಳ ಪ್ರಮಾಣಗಳಿವೆ. [illegible] ಮೋಕ್ಷಲೋಕವರ್ಣನವು ಅಂದರೆ ವಿಷ್ಣುಲೋಕ[illegible] ಇವೆ. ವಿಷ್ಣುಲೋಕವಲ್ಲದೆ ಉಳಿದ [illegible] ಮಹಾವಿಷ್ಣುವು ಸರ್ವವ್ಯಾಪಿ, [illegible] ಫಲಭೋಕ್ತ, [illegible]ದಲ್ಲಿರುತ್ತದೆ. [illegible] ಆದ [illegible] ಮೋಕ್ಷವೂ [illegible] ಹೋಗಿ ಪುಣ್ಯಾ[illegible] ವಿಧಗಳಾದ [illegible] ಹೋಗುವರು.

ಮೋಕ್ಷದಿಂದ ಕೂಡ ಜೀವನು ಬೇರೆಬೇರೆಯಾಗಿದ್ದು ಸತ್ ಚಿತ್ ಆನಂದಮಯವಾದ ಸ್ವಸ್ವರೂಪವನ್ನೂ, ಅನಂತಾನಂತ ಕಲ್ಯಾಣಗುಣಪರಿಪೂರ್ಣವಾದ ಭಗವತ್ಸ್ವರೂಪವನ್ನೂ ಅನುಭವಿಸುವರು; ಅವರು ಸ್ವೇಚ್ಛೆಯಾಗಿ ಸಕಲಲೋಕದಲ್ಲೂ ಸಂಚರಿಸುವರು.

ಸಂಕಲ್ಪಮಾತ್ರದಿಂದ ಸರ್ವಾಭೀಷ್ಟವೂ ಅವರಿಗೆ ಸಿದ್ಧಿಸುವುದು. ಒಂದಾವೃತ್ತಿಗೇ ಹೆಚ್ಚು ಸೌಖ್ಯವನ್ನು ಕೂಡ ಅನುಭವಿಸುವ ಶಕ್ತಿಯು ಮುಕ್ತಿಗೆ ಉಂಟಾಗುತ್ತದೆ. ಮುಕ್ತನು ಬಹುರೂಪದಿಂದ ಬಹು ಸೌಖ್ಯವನ್ನು ಅನೇಕ ಕಾಲದವರೆಗೆ ಅನುಭವಿಸುವನು. ಮುಕ್ತಿಯಲ್ಲು ಕೂಡ ಆನಂದದ ತಾರತಮ್ಯವಿದೆ; ಭಗವಂತನಾದ ವಿಷ್ಣುವೇ ಸರ್ವಸ್ವವೆಂದು ಪ್ರೇಮಿಸುವುದೇ ಮುಕ್ತಿಗೆ ಪ್ರಧಾನಸಾಧನವು. ಉಳಿದುದೆಲ್ಲವೂ ಭಗವದ್ಭಕ್ತರೆಂದೂ, ಭಗವತ್ಸೇವಾಸಾಧಕರೆಂದೂ ಸ್ವೀಕರಿಸತಕ್ಕದು.

ಬಂಧವಿಮೋಚನೆಯನ್ನೇ ಸರ್ವಜೀವರೂ ಕೋರುವರು. ವಿಷ್ಣುಲೋಕಕ್ಕೆ ಹೋದಾಗ್ಲೂ ಜನನಮರಣರೂಪಕವಾದ ಬಂಧವು ತಪ್ಪುವುದಿಲ್ಲ. ಶ್ರವಣಮನನನಿಧಿಧ್ಯಾಸಾದಿಗಳಿಂದಲೂ, ಧ್ಯಾನದಿಂದಲೂ, ಸ್ವವರ್ಣೋಚಿತ ಕರ್ಮವನ್ನೂ, ಕೋರಿಕೆಯನ್ನೂ, ಕರ್ತೃತ್ವವನ್ನೂ, ಪ್ರೇಮಕಾರವಿಲ್ಲದ ಭಗವತ್ಪ್ರೇರಣೆಯಿಂದ ಭಗವತ್ಪ್ರೀತಿಗಾಗಿ ಮಾಡುತ್ತೇನೆಂದೂ ಭಗವದರ್ಪಣ ಬುದ್ಧಿಯಿಂದ ಮಾಡಿದಲ್ಲಿ, ಭಗವಂತನಾದ ವಿಷ್ಣುವೇ ಸರ್ವೋತ್ತಮನೆಂದು ಭಾವಿಸಿದಲ್ಲಿ ಮುಕ್ತಿಯನ್ನು ಹೊಂದಬಹುದು. ಮುಕ್ತಿಯನ್ನು ಕುರಿತೇ ಉಪನ್ಯಾಸಮಾಡಬೇಕೆಂದು ಸಂಘದವರು ನನಗೆ ಬರೆದಿದ್ದುದರಿಂದ ಇತರ ವಿಷಯಗಳನ್ನು ಪ್ರಸ್ತಾಪಿಸಲು ನನಗೆ ಅವಕಾಶವಿಲ್ಲವಾಯಿತೆಂದು ಮ|| ನರಸಿಂಗರಾಯರು ಹೇಳಿದರು.

ಪಾರ್ಶೀಮತವು.

ಒಳ್ಳೇ ಆಲೋಚನೆ, ಒಳ್ಳೇ ಮಾತು, ಒಳ್ಳೇ ಕೆಲಸ ಮಾಡುವವರು ಆದರ್ಶಪ್ರಾಯರಾದ ಮನುಷ್ಯರು. ಅವರೇ ಮಹಾತ್ಮರು ಮತ್ತು ಅವರೇ ಸಕಲ ಜನರನ್ನು ಆಶೀರ್ವದಿಸುವವರು.

ಆನಂದವು—ಭಗವಂತನಲ್ಲಿ ತನ್ನ ಆತ್ಮವನ್ನು ಲೀನವಮಾಡಿ ಮಹಾತ್ಮನು ಯಾವಾಗಲೂ ಆನಂದದಲ್ಲಿರುತ್ತಾನೆ. ಜೀವನಿಗೂ ಶರೀರಕ್ಕೂ ಸಂಬಂಧವಿಲ್ಲವೆಂದು ಗ್ರಹಿಸಿ ಶರೀರಸಂಬಂಧದಲ್ಲಿ ವ್ಯತ್ಯಾಸವನ್ನು ಲೆಕ್ಕಿಸದೆ ಮಹಾತ್ಮನು ತಾನು ನಿರಂತರವೂ ಆನಂದಮಯನಾಗಿಯೇ ಇದ್ದು, ಇತರರನ್ನು ಕೂಡ ಆನಂದಮಯ

ರನ್ನಾಗಿ ಮಾಡುವನು. ಪ್ರಪಂಚವಾಸಿಗಳೆಲ್ಲರನ್ನೂ ಮಹಾತ್ಮನು ಆಶೀರ್ವದಿಸುವನು; ಎಲ್ಲರಿಗೂ ಕ್ಷೇಮವನ್ನು ಕೋರುವನು. ಅದರಂತೆಯೇ ನಾವು ಕೂಡ ಕೋರಬೇಕು. ನಮಗೆ ಪ್ರಾಪ್ತವಾದ ಆನಂದವನ್ನೂ, ಜ್ಞಾನವನ್ನೂ, ಧನವನ್ನೂ ನಾವು ಇತರರಿಗೆ ಉಂಟುಮಾಡಿಕೊಡಬೇಕು. ಆನಂದವಾಹಿನಿಯು ಅಖಂಡಗೌತಮಿಯಂತೆ ನಿರಂತರವಲ್ಲೂ ಪ್ರವಹಿಸುತ್ತಿರಬೇಕು.

ಪವಿತ್ರಭಾವವು - [illegible] ಮುಖ್ಯವಾಗಿರಬೇಕು. ದ್ವೇಷ, ಈರ್ಷ್ಯ, ಅಸೂಯೆ ಮೊದಲಾದುವಿರಕೂಡದು. ಪ್ರೇಮವು ನಿರಂತರವೂ ಪ್ರವಹಿಸುತ್ತಿರಬೇಕು. ಅವಕ್ಕೆ ಮನಸ್ಸು ನಿರ್ಮಲವಾಗಿರಬೇಕು. ನಿಷ್ಕಲಭಾವದಿಂದಿರಬೇಕು. ಎಲ್ಲ ಜೀವಿಗಳಲ್ಲೂ ಭಗವಂತನನ್ನು ನೋಡಬೇಕು. ಜಾತಿ-ಮತ-ವರ್ಣಭೇದವೂ, ಸ್ತ್ರೀಪುರುಷರ ಭೇದವೂ ಕಲ್ಪಿತಗಳು; ಎಲ್ಲರೂ ಸಮಾನರೆಂದು ಗ್ರಹಿಸಬೇಕು.

ಸತ್ಯ—ಸತ್ಯವನ್ನೇ ಯಾವಾಗಲೂ ಆಶ್ರಯಿಸಬೇಕು. ಸತ್ಯವೇ ಶಕ್ತಿಯನ್ನು ಕೊಟ್ಟು ಕಾಪಾಡುವುದು. ಅಸತ್ಯವನ್ನು ಸಂಪೂರ್ಣವಾಗಿ ಬಿಡಬೇಕು. ಮನೋವಾಕ್ಕಾಯಕರ್ಮಗಳಲ್ಲೆಲ್ಲಾ ಸತ್ಯವನ್ನೇ ಆಶ್ರಯಿಸಬೇಕು. ಇತರರಿಗೆ ಸೌಖ್ಯವನ್ನು ಉಂಟುಮಾಡಿದರೆ ನಮಗೆ ಭಗವಂತನು ಆನಂದವನ್ನುಂಟುಮಾಡುವನು. ಇದೇ [illegible] ಕೀರ್ತನವಾಗಿದೆ. ಭಗವಂತನನ್ನು [illegible] ಪಂಚಭೂತವು [illegible] ಧ್ಯಾನಿಸು [illegible]

ದರು. ಮತಕರ್ತನು ಬರೆದ ಗ್ರಂಥದಲ್ಲಿ ಕೂಡ ಬಹಳ ನಾಶವಾಗಿ ಕೊಂಚ ಉಳಿದಿರುತ್ತೆ. ಪುನರ್ಜನ್ಮವನ್ನು ಕುರಿತು ಅಲ್ಲಲ್ಲಿ ಪ್ರಮಾಣವಿರುತ್ತದೆ. ಜೀವವು ಸ್ಥಿರವಾಗಿರುವುದಲ್ಲದೆ ನಾಶವಾಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಸ್ಮಶಾನವು ಸಾಂಕೇತಿಕವು.

ಒಳ್ಳೇ ಪೂಜಾಂಗವು—ನಡುಕಟ್ಟು ಪ್ರಜಾಸೇವಾದೀಕ್ಷೆಯ ಸೂಚಕವು. ಅಗ್ನಿ ಆಲಯದಲ್ಲಿ ಯಾವಾಗಲೂ ದೀಪಧೂಪಗಳು ಜರುಗುತ್ತಿರಬೇಕು. ಅದು ಜೀವಪರಮಾತ್ಮಸಂಬಂಧ ಸೂಚನೆಯು. ಅಹಿಂಸೆಯು ಪ್ರಧಾನವಾಗಿ ವಿಧಿಸಲ್ಪಟ್ಟಿದ್ದರೂ ಶಾಕಾಹಾರಗಳನ್ನು ತೆಗೆದುಕೊಳ್ಳುವವರು ಕೆಲ ಜನರು ಮಾತ್ರವೇ ಇರುತ್ತಾರೆ. ಎಲ್ಲ ಮತಗಳಲ್ಲೂ ಈಗ ಅದರಂತೆಯೇ ಕಾಣಬರುತ್ತದೆ. ಮತಕರ್ತನು ರೊಟ್ಟಿಯನ್ನು ಮಾತ್ರ ಸೇವಿಸುತ್ತಿದ್ದನು. ನೆಲದಮೇಲೆ ಮಲಗುವುದು, ಹಾಲು-ರೊಟ್ಟಿ-ಹಣ್ಣುಗಳನ್ನು ಮಾತ್ರ ಸೇವಿಸುವುದು, ಜನರ ವಾಸಸ್ಥಳದಿಂದ ಎರಡು ಮೈಲಿಗಳ ದೂರದಲ್ಲಿದ್ದುಕೊಂಡಿರುವುದು ಮೊದಲಾದುವನ್ನು ಪೂರ್ವಿಕರು ಮಾಡುತ್ತಿದ್ದರು. ಆದರೆ ಈಗ ಅವರನ್ನು ಅನುಸರಿಸುವವರು ಎಲ್ಲೋ ಕೆಲ ಜನರಿರುತ್ತಾರೆ. ವಿವಾಹವು ಪರಮಪವಿತ್ರವು. ಗಾರ್ಹಸ್ಥ್ಯವು ಉತ್ತಮಧರ್ಮವೆಂದು ವಿಧಿಸಲ್ಪಟ್ಟಿರುತ್ತದೆ. ಸ್ತ್ರೀಯರಿಗೆ ಉನ್ನತಸ್ಥಾನವು ಕೊಡಲ್ಪಟ್ಟಿದೆ. ವಿವಾಹಸಂಬಂಧವು ಜೀವಸಂಬಂಧವಲ್ಲದೆ ಶರೀರಸಂಬಂಧವಲ್ಲವು. ಭಾರ್ಯಾಭರ್ತರಿಬ್ಬರೂ ಒಂದೇ ಜೀವವಾಗಿ ಭಾವಿಸಲ್ಪಡುವರು. ಅವರಲ್ಲೊಬ್ಬರು ಸತ್ತಲ್ಲಿ ಇಬ್ಬರನ್ನೂ ಒಟ್ಟುಗೂಡಿಸಿ ಉತ್ತರಕ್ರಿಯೆ ಮಾಡಲ್ಪಡುವುದು. ಪ್ರತಿಜೀವಿಯನ್ನೂ ಭಗವತ್ಸ್ವರೂಪವೆಂದು ನಾವು ನಂಬಿರುವೆವು. ದೇವರಲ್ಲಿ ಅವತಾರವಿಲ್ಲವು. ಮತಾಂತರ ವಿವಾಹವು ನಿಷಿದ್ಧವು. ಆರೀತಿ ವಿವಾಹಮಾಡಿಕೊಂಡವರು ಬಹಿಷ್ಕೃತರಾಗುವರು.

(ಸಶೀ.ಕ.)

ವಾಕ್ಯ ರತ್ನಾವಳಿ.

೧. **ಶ್ರೀಮಂತತನ ಮತ್ತು ಬಡತನ:**—" ಯಾವನ ಆದಾಯವು ವೆಚ್ಚಕ್ಕಿಂತ ಹೆಚ್ಚಿರುವದೋ ಅವನು ಶ್ರೀಮಂತನು. ಯಾವನ ವೆಚ್ಚವು ಆದಾಯಕ್ಕಿಂತ ಹೆಚ್ಚಿರುವದೋ ಅವನು ದರಿದ್ರನು."—ಫುಲರ.

೨. **ಮನುಷ್ಯತ್ವ:**—" ಪರಮೇಶ್ವರನು ನೋಡದೆ ಇದ್ದರೂ ಮತ್ತು ಮನುಷ್ಯರ ಕಡೆಯಿಂದ ಶಿಕ್ಷೆಯ ಭಯವು ಇಲ್ಲದಿದ್ದರೂ ನಾನು ಪಾಪಕರ್ಮವನ್ನು ಮಾಡುವದಿಲ್ಲ."—ಸೆನಿಕಾ, ರೋಮದ ತತ್ವಜ್ಞಾನಿ.

೩. **[illegible]**—" ಮನುಷ್ಯನು ಹುಟ್ಟಿದಾಗ ಕಾವುಮಾಡಿದ ಅರಗಿನಂತೆ [illegible]. ಅವನು [illegible] ಯಾವಪ್ರಕಾರದ ಸಂಗತಿಯಲ್ಲಿ [illegible]."—[illegible].

೪. **[illegible]**—" [illegible] ಒಳ್ಳೇ ಸನ್ಮಾನವಾಗಿರುವದು. ಯಾಕಂದರೆ [illegible] ದೋಷಗಳು ತಿಳಿಯುವವು. ತನ್ನ ದೋಷಗಳು [illegible] ತಿಳಿಯುವದಿಲ್ಲ."—[illegible], ಗ್ರೀಕ ತ.

೫. **ವಿದ್ಯೆಯ ಮಹಿಮೆ:**—ವಿದ್ವಾಂಸ ಜನರು ಶ್ರೀಮಂತರ ಮನೆಮನೆಗೆ [illegible]. ಆದರೆ ಶ್ರೀಮಂತರು ವಿದ್ವಾಂಸರ ಮನೆಗೆ ತಿರುಗಾಡುವದಿಲ್ಲ. ಇದರ [illegible] ವಿದ್ವಾಂಸರಿಗೆ ತಿಳಿಯುವದು, ಆದರೆ ವಿದ್ಯೆಯ [illegible] ಶ್ರೀಮಂತರಿಗೆ [illegible] ಹೀಗಾಗುವದು. ಸಾದಿ.

೬. **[illegible]**—" ಮನುಷ್ಯನು ಹತ್ತಿರ ಇರುವಾಗ ಅವ[illegible] ವರ್ತಿಸಿರಿ! [illegible]. ಹಿಂದೆ ನಿಂದೆಯನ್ನೂ [illegible]."—[illegible].

೭. **[illegible]**—[illegible], ತನ್ನೊಳಗಿನ [illegible] ಹೇಳುವವನು.

—[illegible].

ಶಿವಾನುಭವ.

ಇದು ವೀರಶೈವ ತತ್ವ ಮತ್ತು ಕನ್ನಡ ವಾಙ್ಮಯಗಳ ವಿಚಾರಕ್ರಾಂತಿಯನ್ನು ಹುಟ್ಟಿಸಿ ಎಚ್ಚರಗೊಳಿಸುವ ನೂತನವಾದ ಕನ್ನಡ ತ್ರೈಮಾಸಿಕವು. ಮೊದಲನೇ ಸಂಚಿಕೆಯು ಹಸ್ತಗತವಾಗಿ ಸಾದ್ಯಂತವಾಗಿ ನೋಡಲ್ಪಟ್ಟಿತು. ಪುಸ್ತಕವು ಆಕಾರದಿಂದ ದೊಡ್ಡದಾಗಿದ್ದು ಮುದ್ದಾದ ಮುದ್ರಣದೊಡನೆ ಕೂಡಿರುವದಲ್ಲದೆ ಪ್ರತಿಯೊಂದು ವಿಷಯವೂ ಮನಸ್ಸಿನಲ್ಲಿ ಸ್ಫೂರ್ತಿಯನ್ನುಂಟುಮಾಡತಕ್ಕದಾಗಿರುತ್ತದೆ. ಬಸವೇಶ್ವರನ ಆಣಿಮುತ್ತಿನಂತಹ ವಚನಗಳು ತುಂಬಿ ತುಳಕುತ್ತವೆ. ರಾವಸಾಹೇಬ ಫ. ಗು. ಹಳಕಟ್ಟಿ ವಕೀಲರು ಇದರ ಲೇಖಕರು. ಆದ್ದರಿಂದ ವೀರಶೈವರಿಗಂತೂ ಅತ್ಯುಪಯುಕ್ತವಾದದ್ದಾಗಿದೆ. ಕನ್ನಡ ವಾಚಕರು ಸ್ವೀಕಾರಮಾಡತಕ್ಕದ್ದು.

ಪೋಷಕರಿಗೆ ರು ೧೦-೦-೦ ಆಶ್ರಯದಾತರಿಗೆ ರು೫-೦-೦ ವರ್ಗಣಿದಾರರಿಗೆ ರು ೩-೦-೦

ವಿಳಾಸ—

ಸಿ. ಎಸ್. ಮ್ಯಾನೇಜರ್, ಶಿವಾನುಭವ, ಬಿಜಾಪುರ

ಬಸವಭಾಷೆ

ಬಸವೇಶನು ಸಿದ್ಧಸಾಧಕರಾದ ವೀರಶೈವರಿಗೂ, ಇನ್ನುಳಿದ ಮುಮುಕ್ಷುಗಳಿಗೂ ಅನುಕೂಲವಾಗುವಂತೆ ಭಾಷಾಪ್ರಬಂಧವ (ಪ್ರವಚನಗಳ)ನ್ನು ರಚಿಸಿ ಜಗತ್ತಿಗೆ ಪರಮೋಪಕಾರವನ್ನು ಮಾಡಿರುವನು. ಅವುಗಳಲ್ಲಿ ಮೂವತ್ತುನಾಲ್ಕು ಭಾಷೆಗಳಷ್ಟನ್ನೇ ತೆಗೆದುಕೊಂಡು ಭೀಮಕವಿಗಳು ಬಸವಪುರಾಣದ ಆರನೆಯ ಸಂಧಿಯಲ್ಲಿ ಬರೆದಿರುವರು. ವೀರಶೈವ ಮುಮುಕ್ಷುಗಳು ಆತ್ಮೋನ್ನತಿಯನ್ನು ಮಾಡಿಕೊಳ್ಳುವ ಶಿವಯೋಗ ಮುಂತಾದ ಕೆಲವು ಉಪಾಯಗಳನ್ನು ಹೇಳುವದೇ ಆ ಭಾಷೆ (ಪ್ರತಿಜ್ಞೆಗಳ ತಾತ್ಪರ್ಯವು. ಭೀಮಕವಿಗಳು ಬರೆದ ಈ ಪ್ರತಿಜ್ಞೆಗಳು ವಾಚಕರಿಗೆ ಚನ್ನಾಗಿ ಅರಿಕೆಯಾಗಬೇಕೆಂಬ ಉದ್ದೇಶದಿಂದ ಪ್ರತಿಪದದ ಟೀಕೆಯನ್ನೂ ಮತ್ತು ಆ ಪ್ರತಿಜ್ಞೆಗಳ ತಾತ್ಪರ್ಯವನ್ನೂ ಬರೆದು ಬಸವನ ಭಾಷೆಯೆಂಬ ಹೆಸರನ್ನಿಟ್ಟಿದೆ. ಶಿವಯೋಗಮಂದಿರದ ಮಹಾಸ್ವಾಮಿಗಳಿಂದ ಪರಿಶೋಧಿಸಲ್ಪಟ್ಟಿದೆ. **ಬೆಲೆ ೪ ಆಣೆ.**

ದೊರೆಯುವಸ್ಥಳ—

ಶಿವಬಸಪ್ಪಾ ಆದಪ್ಪಾ ವಾಗಿ,

ಶಿವಯೋಗಮಂದಿರ ಪೋ|| ತಾ|| ಬದಾಮಿ, ಜಿಲ್ಲಾ ವಿಜಾಪುರ.

ಕರ್ನಾಟಕ ವಿದ್ಯಾವರ್ಧಕ ಸಂ

ಶೋಚನೀಯವಾದ ಮೃತ್ಯು

ಕೆಲವು ತಿಂಗಳ [illegible] ಗ್ರಾಮದಲ್ಲಿ ಪ್ರಸಿದ್ಧ ವೀರಶೈವ ಮನೆತನದಲ್ಲಿ ಜನಿಸಿದವರೂ [illegible] ಶಕರೂ. ವ್ಯಾಪಾರದಲ್ಲಿ ಅಗ್ರೇಸರತ್ವವನ್ನು ಹೊಂದಿದವರೂ [illegible] ನವರು ಶಿವಾಧೀನರಾದರೆಂಬುದನ್ನು [illegible] ವಿಷಾದವಾಗುತ್ತದೆ. ಇವರಿಗೆ ಮರಣಸಮಯದಲ್ಲಿ ೫೮ ವರ್ಷ ವಯಸ್ಸಾಗಿತ್ತು. ಇವರು ಯಾವಾಗಲೂ ವೀರಶೈವ ಮತದ ಅನೇಕ ಧಾರ್ಮಿಕ ಕಾರ್ಯಗಳನ್ನು ಸಾವಿರಾರು ರೂ. ಗಳನ್ನು ಖರ್ಚುಮಾಡಿ ಮಾಡುತ್ತಿದ್ದರು. ಪ್ರತಿವರ್ಷ [illegible] ದಲ್ಲಿ ೫೦೦ ಜನರಿಗೆ ಒಂದು ತಿಂಗಳವರೆಗೆ [illegible] ೩೦-೪೦ ವರ್ಷಗಳಿಂದ ಮಾಡಿಕೊಳ್ಳುತ್ತ ಬಂದಿದ್ದರಲ್ಲದೆ [illegible] ದಿಂದ ಮಾಡಿಸಿದ್ದರು. ಅದರೆ ಇವರಿಗೆ [illegible] ಇವರ ೩-೪ ಲಕ್ಷ ರೂ.ಗಳ ಆಸ್ತಿಯನ್ನು [illegible] ನೀಲಮ್ಮ (ಇಲ್ಲಿಯ ಪ್ರಸಿದ್ಧ ಹೈಕೋರ್ಟು ವಕೀಲರನ್ನು [illegible] ಕಳಕಳಿಯುಳ್ಳವರೂ ಆದ ಎನ್. [illegible] ಹೈಕೋರ್ಟು ವಕೀಲರು [illegible]) ಇವರ ಹೆಸರಿಗೆ ಮೃತ್ಯುಪತ್ರವನ್ನು [illegible] — ನಿಜಾಂ ಇಲಾಖೆಯ [illegible] ರೂ. ಗಳನ್ನೂ, ತನ್ನ ಅಣ್ಣಂದಿ [illegible] ರೂ. ಗಳನ್ನು, ಮತ್ತು ಹತ್ತೆಂಟು ಸಾವಿರ ರೂ. [illegible] ಧರ್ಮಕಾರ್ಯಕ್ಕೆ ಕಟ್ಟಿಸುತ್ತಿರುವ [illegible] ನಡೆಯಬೇಕೆಂತಲೂ, [illegible] ರುದ್ರಪ್ಪ, ಹೈಕೋರ್ಟು ವಕೀಲರು [illegible] ಮಾಡಿಸಿರುತ್ತಾರೆ. [illegible] ಧಾರ್ಮಿಕ ಕಾರ್ಯವನ್ನು [illegible] ಉತ್ಕಟ ಅಪೇಕ್ಷೆಯು [illegible] ಮುಂದೆಯಾದರೂ [illegible] ಕಡೆಗೆ [illegible] ಎಲ್ಲ ವಿಷ್ಯಗ [illegible] ಸುವ

ಪತ್ರಿಕೆ

ಕರ್ನಾಟಕ ಯುವಕರ ಪತ್ರಿಕೆ

ವಿದ್ಯಾವರ್ಧಕ
ಸಪ್ಟೆಂಬರ್
೧೯೫೬

ಕ
ಬ್ಬಳಿ.

ಾಟಕದ
5
ಕೇಂದ್ರಗಳಲ್ಲಿ
-56 ರಿಂದ
ಪ್ರಾರಂಭ
◆
ಕ್ಕಾರವರ
ಸಂಕಲ್ಪ
ಕನ್ನಡ]
ಸಾಮಾಜಿಕ ಚಿತ್ರ
ತ್ರ ವರ್ಗ :
ಕುಮಾರಿ,
ಜಾ, ನಿರಂಜನ,
ಾವ, ಬಾಲಕೃಷ್ಣ
ಇತ್ಯಾದಿ
ರ್ದೇಶನ :
ಬಿ. ಗಣೇಶ
ಪಿಕ್ಚರ್ಸ್
ಬಾದ (ಲಿಮಿಟೆಡ್)
Kadkol



THIKA
nada Monthly
HUBLI

ಬೆಳ್ಳಿ ಆನೆ

ಕಟ್ಟಿಗೆ ಕೊರೆಯುವದು

ಒಂದು ಶಾಸ್ತ್ರ

ಕಟ್ಟಿಗೆ ತುಟ್ಟಿಯಾಗಿರುವ ಈ ಕಾಲದಲ್ಲಿ [illegible]

[illegible]

[illegible]

ಮಹೇಶ ಸಾ ಮಿಲ್

[illegible]

[illegible]

ಮಹಾಭಾರತದೊಳಗಿನ ಒಂದು ಸುವರ್ಣಪುಟ

ಜೀವಂತವಾಗಿ ತೆರೆಗೆ ಬರುತ್ತದೆ !

ಪುಷ್ಪಾ ಪಿಕ್ಚರ್ಸದವರ ವೈಭವಶಾಲಿ ಪೌರಾಣಿಕ ಚಿತ್ರಪಟ

ಅಯೋಧ್ಯಾಪತಿ

[ಹಿಂದಿ]

★ ಗಣ:— ಉಷಾಕಿರಣ, ಅಭಿಭಟ್ಟಾಚಾರ್ಯ, ಅನಂತಕುಮಾರ,
ಸಪ್ರು, ರಾಜಕುಮಾರಿ ಮತ್ತು ದುರ್ಗಾಖೋಟಿ

ಸಂಗೀತ : ರವಿ

ನಿರ್ದೇಶನ : ಎಸ್ ಫತ್ತೇಲಾಲ

ನಿರ್ಮಾತೃ: ನದಿಯಾದವಾಲಾ

ಪ್ರೆಸಿಡೆಂಟ ಫಿಲ್ಮ್ಸ (ಹುಬ್ಬಳ್ಳಿ) ರಿಲೀಜ

ಭೂ:– ದಲಜಿತ, ಶಕೀಲಾ ವಗೈರೆ
ಪಾತ್ರವಹಿಸಿದ ನಮ್ಮ ಮುಂದಿನ ಚಿತ್ರ

ಪಾಸಿಂಗ ಶೋ

ದೈವದಾಟವು ಯಾರಿಗೂ ತಿಳಿಯದು ದೈವವು ಮುಖ ತಿರುವಿತೆಂದರೆ,
ಸಮ್ರಾಟ ಭಿಕಾರಿಯಾಗುತ್ತಾನೆ; ಭಿಕಾರಿ ಸಮ್ರಾಟನಾಗುತ್ತಾನೆ.
ದೈವದಾಟದ ವೈಭವದ ಚಿತ್ರಣವೇ.....

ಸ್ಟಾರಲ್ಯಾಂಡ ಪ್ರೊಡಕ್ಷನ್ಸದವರ ಹಿಂದಿ ಚಿತ್ರಪಟ

ಕಿಸ್ಮತ್

★ ಗಣ:– ರಂಜನ್, ಪೀಸ್ ಕಂವಲ್,
ತಿವಾರಿ, ಹೆಲೆನ್, ಕಾಂಚನಮಾಲಾ,
ಗೋಪ್ ಇತ್ಯಾದಿ

ದಿಗ್ದರ್ಶನ : ನಾನಾಭಾಯಿ ಭಟ್ಟ

ಸಂಗೀತ : ಚಿತ್ರಗುಪ್ತ

ಕಥೆ : ಕೆ. ಬಿ. ಪಾಠಕ

“ ಒಳ್ಳೆಯ ಮನರಂಜನೆಯನ್ನು ಒದಗಿಸುವ ಚಿತ್ರ ”

ಹುಬ್ಬಳ್ಳಿ ಚಂದ್ರಕಲಾ ಟಾಕೀಜದಲ್ಲಿ ಬೇಗನೆ ಬರಲಿದೆ

For Booking —

Vrinda Films [Opp: Laxmi Talkies] Dharwar.

ಮನುಷ್ಯ ಬಟ್ಟೆಗಳನ್ನು ಮಾಡುತ್ತಾನೆ: ಇದು ಅಖಂಡ ಸತ್ಯ ಆದರೆ....

ಬಟ್ಟೆಗಳೂ ಮನುಷ್ಯನನ್ನು ಮಾಡುತ್ತವೆ

ಜೀವನದಲ್ಲಿ ಮನುಷ್ಯ ಮನುಷ್ಯನಾಗಬೇಕಾದರೆ [illegible]

[illegible]

[illegible]

ಬಿ. ಬಾಬು & ಕಂ., ಹುಬ್ಬಳ್ಳಿ

ಪಥಿಕ-ಪಥದ ಕಥಾನಕ

ಬದುಕಿನ ವೈವಿಧ್ಯ ವಿಸ್ತಾರವನ್ನು ನಡೆಯುವ ಪಥದಲ್ಲಿ ಸ್ವಾತಂತ್ರ್ಯದಿನದಂದು ಮೊದಲ ಹೆಜ್ಜೆ ಇಟ್ಟು ಬಂದ "ಪಥಿಕ" ಕನ್ನಡಿಗರ ಅಭಿಮಾನಕ್ಕೆ ಪಾತ್ರವಾದುದು ನಮ್ಮನ್ನು ಪುಲಕಿತರನ್ನಾಗಿಸಿದೆ. ನಡೆಯುವ ಕಾಲಿಗೆ ಶಕ್ತಿ ನೀಡುವಂತೆ ನಮ್ಮ ಅಭಿಮಾನಿಗಳಿಂದ ಪತ್ರಗಳು ನಿತ್ಯವೂ ಬರುತ್ತಿವೆ.

"ಪಥಿಕ"ವು ಜನ್ಮವೆತ್ತ ಹುಬ್ಬಳ್ಳಿ ನಗರವು ತಮ್ಮ ಈ ಕಿರಿ ಮಗುವನ್ನು ಪ್ರೀತಿಯಿಂದ ಎತ್ತಿಕೊಂಡಿದೆ. ಕಳೆದ ಸಲ ನಾವು ಮುದ್ರಿಸಿದ ಹೆಚ್ಚಿನ ಪ್ರತಿಗಳನ್ನು ಈ ಒಂದೇ ನಗರವು ಕೊಂಡಿದೆ. ಹೀಗಾಗಿ ಉಳಿದ ಊರುಗಳಿಗೆ ಬೇಡಿದಷ್ಟು ಪ್ರತಿ ನಾವು ಕಳಿಸಲಿಕ್ಕಾಗದೆ ಈಸಲ ಪ್ರತಿಗಳ ಸಂಖ್ಯೆಯನ್ನು ಇಮ್ಮಡಿಸಿದೆವು.

ಆದರೆ ಎರಡನೆಯ ಈ ಸಂಚಿಕೆಗೂ ಹುಬ್ಬಳ್ಳಿಯ ಬೇಡಿಕೆಗಳೇ ಹೆಚ್ಚಾಗಿವೆ. ನಾವು ಮುದ್ರಿಸಿರುವ ಪ್ರತಿಗಳಲ್ಲಿ ಅರ್ಧಕ್ಕಿಂತ ಹೆಚ್ಚು ಪ್ರತಿಗಳನ್ನು ಹುಬ್ಬಳ್ಳಿಯ ಬಂಧುಗಳೇ ಕೇಳಿದ್ದಾರೆ. ಹುಬ್ಬಳ್ಳಿಯಲ್ಲಿ "ಪಥಿಕ"ದ ಪ್ರಸರಣ ಯಾವುದೇ ದಿನ, ವಾರ ಇಲ್ಲವೆ ಮಾಸಪತ್ರಿಕೆಗಿಂತ ಹೆಚ್ಚಿಗಿದೆಯೆಂದು ನಾವು ಹೇಳಿಕೊಂಡರೆ ತಪ್ಪಿಲ್ಲವಷ್ಟೆ?

ಕನ್ನಡದ ಪತ್ರಿಕೆಗಳಲ್ಲಿ "ಪಥಿಕ"ದ ಬಗ್ಗೆ ಒಳ್ಳೆಯ ಅಭಿಪ್ರಾಯ ಬರುತ್ತಿರುವುದು ನಮ್ಮ ಹುಮ್ಮಸ್ಸನ್ನು ಹೆಚ್ಚಿಸಿದೆ. ನಮ್ಮ ವೃತ್ತಿ ಬಂಧುಗಳಲ್ಲಿ ಕೆಲವರು ನಮ್ಮ ಸಾಹಸವನ್ನು ಸ್ವಾಗತಿಸಿ ನಮ್ಮ ಬೆನ್ನು ಚಪ್ಪರಿಸಿದ್ದಾರೆ. ಒಬ್ಬಿಬ್ಬ ಸಂಪಾದಕರು "ಏನು ಪತ್ರಿಕೆ. ಮೂರು ತಿಂಗಳಲ್ಲಿ ಮುಗ್ಗರಿಸುತ್ತದೆ. ಇದನ್ನೆಲ್ಲ ವಿಮರ್ಶಿಸಬೇಕೆ" ಎಂದು ಸಿಕ್ಕವರೆದುರು ಅಹಂಭಾವವಾಡಿದ್ದಾರೆ.

ಬೆನ್ನು ಚಪ್ಪರಿಸಿದ ಬಂಧುಗಳು ಹುರುಪನ್ನು ಹೆಚ್ಚಿಸಿದ್ದರೆ, ಕರಿ ಮೂಗು ಮುರಿದವರು ಪತ್ರಿಕೆಯನ್ನು ನಡೆಸುವ ನಮ್ಮ ಛಲವನ್ನು ಕೆಣಕಿ ಹೆಡೆದೆರೆಸಿದ್ದಾರೆ. ಇದರಿಂದ ಬಂದ ಹುರುಪಿಗೆ ಹುಮ್ಮಸ್ಸೂ ಸೇರಿಕೊಂಡು ಪಥಿಕ-ಪಥ ಸುಗಮವಾಗುತ್ತಿದೆ. ಅದಕ್ಕಾಗಿ ಎರಡೂ ವರ್ಗಗಳ ಬಂಧುಗಳಿಗೂ ನಾವು ಋಣಿ.

ತಮ್ಮ ನಡುವೆ ಹೊಸದಾಗಿ ಬಂದು ನಿಂತ "ಪಥಿಕ"ವನ್ನು ಸೋದರ ಪತ್ರಿಕೆಗಳು ಇಂತು ಸ್ವಾಗತಿಸಿವೆ:

ಕರ್ಮವೀರ, ಹುಬ್ಬಳ್ಳಿ

[ಸಂಯುಕ್ತ ಕರ್ನಾಟಕ ಸಹಿತ]

"...ಅಗ್ಗದರದಲ್ಲಿ ಹೆಚ್ಚು ಸಾಹಿತ್ಯ ಒದಗಿಸುವ ಪ್ರಯತ್ನ ಇದರಲ್ಲಿ ನಡೆದಿರುವುದು...ಅಗ್ಗದರದಲ್ಲಿ ಸತ್ವಯುತವಾದ ಸಾಹಿತ್ಯವನ್ನು ಜನಸಾಮಾನ್ಯರಿಗೆ ಒದಗಿಸಬೇಕೆಂಬ ಉದಾತ್ತ ಆಶೆಯಿಂದ ಹೊರಟ ಈ ಮಾಸಪತ್ರಿಕೆ ತನ್ನ ಗುರಿ ಸಾಧನೆಯಲ್ಲಿ ಯಶಸ್ವಿಯಾಗಲೆಂದು ಹಾರೈಸುತ್ತೇವೆ."

ವಿಶಾಲ ಕರ್ನಾಟಕ, ಹುಬ್ಬಳ್ಳಿ

['ನವಯುಗ' ದಿನಪತ್ರಿಕೆ ಸಹಿತ]

"...ಯುವಕರ ಅಂತಃಶಕ್ತಿಯನ್ನು ಕೆರಳಿಸುವ ಸಾಹಿತ್ಯವನ್ನು ಕೊಡುವುದಾಗಿ... ಹೊರಟಿರುವ ಈ ಪತ್ರಿಕೆಯು ತನ್ನ ಮೊದಲ ಸಂಚಿಕೆಯಲ್ಲೇ ತನ್ನ ಉದ್ದೇಶದ ಪಥವನ್ನು ಸರಿಯಾಗಿ ಹಿಡಿಯಲು ಪ್ರಯತ್ನಿಸಿದೆ... ಈ ಪತ್ರಿಕೆ ಯುವಕರಿಗಾಗಿಯೇ ಹೊರಟಂತೆನಿಸುತ್ತದೆ. ಯುವಕರಿಗೆ ಪತ್ರಿಕೆ ಆಕರ್ಷಕವಾಗಿಯೇ ಇದೆ. "ಬರಿಯ ನಾಲ್ಕಾಣೆಗಳಲ್ಲಿ ೧೦೮ ಪುಟಗಳುಳ್ಳ ಸಾಹಸ ಸಣ್ಣದಲ್ಲ. ಕನ್ನಡಿಗರು ಈ ಸಾಹಸವನ್ನು ಆದರಿಸಿ ಆಶೀರ್ವದಿಸಬೇಕು.."

ಓದುಗರ ಗಮನಕ್ಕೆ

ಮುಂದಿನ ಸಂಚಿಕೆ ಈ ಸಲದಂತೆ ನೂರು ಪುಟಗಳನ್ನು ಒಳಗೊಂಡು ಅಕ್ಟೋಬರದ ಪ್ರಾರಂಭಕ್ಕೇ ನಿಮ್ಮ ಕೈಸೇರುವುದು. ಈ ಸಲಕ್ಕಿಂತ ಹೆಚ್ಚು ವಿಷಯ, ಹೆಚ್ಚು ಚಿತ್ರ ಹಾಗೂ ಹೆಚ್ಚು ಆಕರ್ಷಣೆಯೊಂದಿಗೆ ಬಂದರೂ ಬೆಲೆ ನಾಲ್ಕೇ ಆಣೆ!

ಏಕೀಕರಣ ವಿಶೇಷಾಂಕ

ನವೆಂಬರ ಸಂಚಿಕೆಯು ಏಕೀಕರಣದ ವಿಶೇಷಾಂಕವಾಗಿ ಪ್ರಮುಖರ ಲೇಖನಗಳು ಹಾಗೂ ಅನೇಕ ಚಿತ್ರಗಳಿಂದ ಮೈತುಂಬಿ ತ್ರಿವರ್ಣ ಮುಖಪತ್ರದೊಂದಿಗೆ ೨೦೦ ಪುಟಗಳ ಹೆಚ್ಚೊತ್ತಿಗೆಯಾಗಿ ಪ್ರಕಟವಾಗುವುದು. ಬೆಲೆ ಮಾತ್ರ ಕರ್ನಾಟಕದಲ್ಲಿ ಈ ವರೆಗೆ ಯಾರೂ ಇಡದಷ್ಟು ಕಡಿಮೆ. ಹೆಚ್ಚಿಗೆ ಪತ್ರಿ ಬೇಕಿದ್ದರೆ ಇದೇ ತಿಂಗಳ ಅಂತ್ಯದೊಳಗಾಗಿ ತಿಳಿಸಬೇಕು.

ಹಿಂದಿನ ಸಂಚಿಕೆಗಳು

"ಪಥಿಕ"ದ ಆಗಸ್ಟ ಅಥವಾ ಸಪ್ಟಂಬರ ಸಂಚಿಕೆಗಳಿಗಾಗಿ ದಯವಿಟ್ಟು ಯಾರೂ ಕೇಳಬಾರದು. ಅದಕ್ಕಾಗಿ ಹಣವನ್ನು ಕಳಿಸಬಾರದು. ಈ ಮೊದಲು ಕಳಿಸಿದವರಿಗೆ ಈ ತಿಂಗಳ ಪ್ರತಿಗಳನ್ನಷ್ಟೇ ಕಳಿಸಿದ್ದೇವೆ, ಕ್ಷಮಿಸಬೇಕು.

ಮುಖಚಿತ್ರ :
[illegible]
— ಚಿತ್ರಿಸಿದವರು —
ಶ್ರೀ ಕೆ. ಪಿ. [illegible]

ಪ್ರಜಾವಾಣಿ, ಬೆಂಗಳೂರು

"[illegible]"

ಚಿತ್ರಗುಪ್ತ, ಬೆಂಗಳೂರು

"[illegible]"

[illegible]

"[illegible]"

[illegible] ... ಬೆಲೆಯನ್ನು ಕೇವಲ ನಾಲ್ಕು ಆಣೆ ಇಡುವುದೂ ಕೇವಲ ಸಾಹಸ—೧೦೮ ಪುಟಗಳುಳ್ಳ [illegible] ವಿಷಯ ವೈವಿಧ್ಯದ ಮೂಲಕ [illegible] 'ಶುಭಾಸ್ತೇ ಪಂಥಾನಃ' ಎಂದು ಆಶೀರ್ವದಿಸುತ್ತೇವೆ."

[illegible] ಈ ಆಶೀರ್ವಾದವು [illegible] ಇದರಂತೆ ಮುಂಬಯಿಯ [illegible] ಶ್ರೀ ಎಚ್. ಜಿ. [illegible] ಪಥಿಕ [illegible] ಸಂಚಿಕೆಯನ್ನು [illegible] ಹೊಗಳಿ [illegible] ನಡೆಯಲು ಆಶೀರ್ವದಿಸಿದ್ದಾರೆ.

[illegible] ಕರ್ನಾಟಕದ [illegible]

[illegible]

[illegible]

[illegible]

ವರ್ಷ : ೧
ಸಂಚಿಕೆ : ೨
ಸಪ್ಟಂಬರ, ೧೯೫೬

ಪಥಿಕ

ಕನ್ನಡ ವಾಚನ ಸಂಚಿಕೆ

ಸಂಪಾದಕ :
ಎಸ್. ಆರ್.
ಗೋಪೀನಾಥ

ಒಳ್ಳೆಯದನ್ನೇ ಓದುವ ಒಲವುಳ್ಳವರಿಗೆ ಒಳ್ಳೊಳ್ಳೆಯ ಓದು

ಕನ್ನಡ ಯುವಕರು ಕರ್ತವ್ಯದ ಕರೆಗೆ ಓ ಕೊಡಲಿ

ಪಥಿಕ

ತ್ಯಾಗದಿಂ ಪಾವಿತ್ರ್ಯ
ಪಾವಿತ್ರ್ಯದಿಂ ದಿವ್ಯ
ದಿವ್ಯದಿಂ ಗೌರವವು
ಗೌರವದ ಫಲ ಸತ್ಯ

ಸತ್ಯಸಾಧನ ಪಥದೆ
ನಿತ್ಯ ನೂತನ ರಥದೆ
ಸುಳ್ಳನೆಲ್ಲವು ಗೆಲುವ
ಒಳ್ಳಿತನೆ ನುಡಿಗಲಿವ

ಪಥಿಕನಿದೊ ಸಾಗುತಿಹ
ಪಥವನಿದೊ ತೋರಿಸಿಹ

— ಯಜುರ್ವೇದದ
ಸಾಲೊಂದರ ಆಧಾರ

ಈ ತಿಂಗಳಲ್ಲಿ ದೇವ ದೇವನ ಪ್ರೀತಿಯ ಪುತ್ರನಾದ ವಿಘ್ನೇಶ್ವರನನ್ನು ಕನ್ನಡಿಗರು ಉತ್ಸಾಹದಿಂದ ಆರಾಧಿಸುತ್ತಾರೆ. ತಿಂಗಳೊಪ್ಪತ್ತಿನಲ್ಲಿ ಏಕೀಕರಣದ ತಪಸ್ಸಿದ್ಧಿಯನ್ನು ಮಾಡಿಕೊಳ್ಳುತ್ತಿರುವ ಕನ್ನಡಿಗರು ತಮ್ಮ ಹೊಸ ರಾಜ್ಯವು ಸಕಲ ವಿಘ್ನಗಳಿಂದ ದೂರವಿರುವಂತೆ ಕರುಣಿಸೆಂದು ಆ ವಿಘ್ನಹರನನ್ನು ಅನನ್ಯನಾಗಿ ಪ್ರಾರ್ಥಿಸುತ್ತಾರೆ.

ಏಕೀಕರಣವು ಸನ್ನಿಹಿತವಾಗುತ್ತಿರುವಂತೆ ಎರಡು ಕೋಟಿ ಜನ ಕನ್ನಡಿಗರನ್ನು ಆಳಲು ನಾ ಮುಂದೆ ನೀ ಮುಂದೆ ಎನ್ನುವ ಸ್ಪರ್ಧೆ ನಡೆದುದು ಕೆಲವರಲ್ಲಿ ಒಡೆದು ಕಾಣುತ್ತದೆ. ಜಾತೀಯ ಜಾಲವನ್ನೊಡ್ಡಿ ಜನರನ್ನು ಮೀನಗಳಂತೆ ಹಿಡಿಯಲೆಸಳುವವರು ಆಡಳಿತೆಯು ತಮ್ಮ ಕೈಯಲ್ಲೇ ಉಳಿಯಬೇಕೆಂದು ವಿಚಿತ್ರ ಸಾಹಸ ನಡೆಸಿದ್ದಾರೆ.

ಮೈಸೂರಿನಲ್ಲಿ, ಉತ್ತರ ಕರ್ನಾಟಕದಲ್ಲಿ, ಹೈದರಾಬಾದ ಕರ್ನಾಟಕದಲ್ಲಿ, ಇತರೆಡೆಗಳಲ್ಲಿ ಜಾತೀಯ ಜಟ್ಟಿಗಳು ತೆರೆಮರೆಯಲ್ಲಿ ನಡೆಸಿರುವ ತಾಲೀಮು ರಾಜಕೀಯ ಕಣಕ್ಕಾಗಿ ಮಾತ್ರವಿರದೆ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ಪ್ರಾಯಶಃ ಬೌದ್ಧಿಕ ಕ್ಷೇತ್ರಗಳಲ್ಲೂ ಕುಸ್ತಿ ನಡೆಸಲು ಇದ್ದಂತಿದೆ.

ಈ ಸಂಕ್ರಮಣ ಕಾಲದಲ್ಲಿ ಎಲ್ಲ ವಿಷಭಾವನೆಗಳಿಂದ, ಎಲ್ಲ ಸಂಕುಚಿತ ಪ್ರವೃತ್ತಿಗಳಿಂದ ದೂರವಿರಬಯಸುವ ಯುವಕರಲ್ಲೂ ವಿಷವನ್ನು ಬೀರಲು ಹಲವು ಪ್ರಯತ್ನಗಳು ನಡೆದಿವೆ. ಸ್ವತಂತ್ರ ಹಕ್ಕಿಗಳಾಗಿ ಪವಿತ್ರತೆಯ ಕರ್ಮಕ್ಷೇತ್ರದಲ್ಲಿ ಉದ್ಯಾನಗೈಯ್ಯಲೆಳಸುವ ಯುವಕ ಶಕ್ತಿಯ ರೆಕ್ಕೆ ಮುರಿಯಲು ಹವಣಿಕೆ ನಡೆದಿದೆ.

ಹಿತನುಡಿಯು ಸಂಚಿಯುದಿಂದ....

ಅಮೃತವನ್ನು ಬಯಸಿ ಸಮುದ್ರ ಮಂಥನದಲ್ಲಿ ನಿರತರಾದ ದೇವತೆಗಳು ಕೌಸ್ತುಭದಂಥ ಬೆಲೆಯುಳ್ಳ ರತ್ನಗಳನ್ನು ನೋಡಿ ಬಾಯಿ ತೆರೆಯಲಿಲ್ಲ; ಭಯಂಕರ ಹಾಲಾಹಲವನ್ನು ಕಂಡು ಭಯಪಡಲಿಲ್ಲ; ಅಮೃತವನ್ನು ಪಡೆಯುವವರೆಗೂ ಅವಿಶ್ರಾಂತವಾಗಿ ಶ್ರಮಪಟ್ಟರು. ಧ್ಯೇಯ ಪರಿಪೂರ್ಣವಾಗುವವರೆಗೆ ಅಚಲ ಶ್ರದ್ಧೆಯಿಂದ ಕಾರ್ಯತತ್ಪರರಾಗುವುದು ದೊಡ್ಡವರ ವೈಶಿಷ್ಟ್ಯ.

—**ಭರ್ತೃಹರಿ**

[illegible]

[illegible]

[illegible]

[illegible]

ಚುರುಕು-ಚುರುಕು

ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ

ಮುಖಂಡರನ್ನು ಹುಡುಕುವವರಿಗಿಂತ ಮುಖಂಡತ್ವವನ್ನೇ ಹುಡುಕುವವರು ಹೆಚ್ಚಾದ್ದರಿಂದ ಬೆಳೆದಿರುವ...

ನನ್ನ ಎದೆ-ಭಾರ

ಶ್ರೀ "ಅಲಿ"

ಪ್ರಗಾಢವಾದ ಅಂಧಕಾರದಲ್ಲಿ ಮಿಣುಕು ದೀಪವೊಂದು ಮಿನುಗಿದರೆ ಏನು ಪ್ರಯೋಜನ ಎನ್ನುವ ನಿರಾಶಾವಾದಿ ನಾನಾಗಲಾರೆ. ಲೋಕವನ್ನೇ ನುಂಗೇನೆನ್ನುವ ಕತ್ತಲನ್ನು ಸೆಣಸಿ ನಿಂತು ತನ್ನ ಚಿಕ್ಕವಲಯದಲ್ಲಾದರೂ ಬೆಳಕನ್ನಿತ್ತಿರುವ ದೀಪದಂತಾದರೂ ನಾನಾಗಬೇಕು ಎನ್ನುವ ಆಶಾವಾದಿ....

ಈ ಮಾತನ್ನು ನಾನು ಬಹಳ ದಿನಗಳ ಹಿಂದೆ ಓದಿದ್ದೆ. ಅವನ್ನು ಹೇಳಿದವರಾರೆಂಬುದು ದುರ್ದೈವದಿಂದ ಮರೆತು ಹೋಗಿದೆ. ಆದರೂ ಅವು ನನ್ನ ಹೃದಯದಲ್ಲಿ ಅಚ್ಚೊತ್ತಿ ಜೀವನದ ದೃಷ್ಟಿಯನ್ನೇ ಬದಲಿಸಿದವೆಂಬುದನ್ನು ಮಾತ್ರ ಹೇಳದಿರಲಾರೆ. ಆಗಿನಿಂದ ಮಿಣುಕು ದೀಪವಾಗಲೆತ್ನಿಸುವ ಎಲ್ಲರನ್ನೂ ನಾನು ಆದರಿಸುತ್ತೇನೆ.

ಕೈಬರಹದ 'ಸಂಗಮ'

ಹುಬ್ಬಳ್ಳಿಯಲ್ಲಿ ಕೆಲ ಜನ ಎಳೆಯ ಗೆಳೆಯರು "ಸಂಗಮ"ವೆಂಬ ಕೈ ಬರಹದ ಮಾಸಪತ್ರಿಕೆಯನ್ನು ಕಳೆದ ಹನ್ನೊಂದು ತಿಂಗಳುಗಳಿಂದ ಪ್ರಕಟಿಸುತ್ತಿದ್ದಾರೆ. ಒಳ್ಳೆಯ ಬರಹ, ಒಳ್ಳೆಯ ಚಿತ್ರ ಹಾಗೂ ಒಳ್ಳೆಯ ವಿಚಾರಗಳನ್ನು ತುಂಬಿ ಅವರು ಈ ಪುಟ್ಟ ಪತ್ರಿಕೆಯನ್ನು ಸ್ಥಳೀಯ ವಾಚನಾಲಯವೊಂದರಲ್ಲಿ ಇಡುತ್ತ ಬಂದಿದ್ದಾರೆ. ಇನ್ನು ಮುಂದೆಯೂ ಇಡುತ್ತಾರೆ.

ಎಳೆಯರ, ಯುವಕರ, ನೈಜ ಸೇವಾಕಾಂಕ್ಷೆಯುಳ್ಳ ನಿರಾಡಂಬರ ನಿಷ್ಕಾಮ ನಿಷ್ಠಾವಂತ ಜನಸೇವಕ ಯುವಕರ ಇಂಥ ಎಷ್ಟೋ ಕೈ ಬರಹದ ವಿಚಾರ ಜ್ಯೋತಿಗಳು ಕನ್ನಡ ನಾಡಿನಲ್ಲಿ ಅನೇಕ ಕಡೆ ಮಿನುಗುತ್ತಿವೆ. ವಿಧಾಯಕ ಕ್ರಿಯೆಗಳಲ್ಲಿ ತೊಡಗಿರುವ ಈ ಯುವಕರು ಪ್ರಚಾರದ ಬಾಜಾರ ಬುಣುಗಿಲ್ಲದೆ ಸೇವಾಪಥದಲ್ಲಿ ನಡೆದಿದ್ದಾರೆ.

ಚಕ್ರಸುಳಿಯಲ್ಲಿ ಸುತ್ತಾಟ

ಇಂಥವರನ್ನೆಲ್ಲ ನಾನು ಶಿರಸಾ ವಂದಿಸುತ್ತೇನೆ. ಅವರ ಪ್ರಯತ್ನದಲ್ಲಿ ಜಯಶೀಲರಾಗಲಿ ಎಂದು ಹಾಡಿ ಹರಸುತ್ತೇನೆ. "ದೇವರೇ, ನಮ್ಮ ನಾಡಿನ ಎಲ್ಲ ಯುವಕರಿಗೂ ಇದೇ ಸದ್ಬುದ್ಧಿಯನ್ನೇ ಕೊಡು" ಎಂದು ಅನನ್ಯವಾಗಿ ಪ್ರಾರ್ಥಿಸುತ್ತೇನೆ. ನಮ್ಮ ನಾಡಿನ ಯುವಕ-ಯುವತಿಯರು ಕೃತಿಮಲ್ಲರಾಗಿ ಕೃತಾರ್ಥರಾಗಲಿ ಎಂದು ಬೇಡುತ್ತೇನೆ

ಆದರೆ ಬೇಡಿದ್ದೆಲ್ಲ ಕೂಡಿ ಬಂದರೆ ನನಗೆ ಎದೆ-ಭಾರವೆಲ್ಲಿ ಬಂತು? ಸೇವಾಯೋಗದಿಂದ ಮುಖಂಡತ್ವ ಪಡೆಯುವ

ಬಳಸು ದಾರಿಗಿಂತ ಮುಖಂಡತ್ವದ ಪೀಠಗಳನ್ನು ಹೇಗಾದರೂ ತೆರವು ಮಾಡಿ ಅಲ್ಲಿ ತೂರಿಕೊಳ್ಳುವ ಅಡ್ಡದಾರಿಯೇ ನಮ್ಮ ನಾಡಿನ ಅನೇಕ ಯುವಕರಿಗೆ ಆಕರ್ಷಕವಾಗಿ ಕಾಣತೊಡಗಿದೆ. ಆ ಚಕ್ರಸುಳಿಯಲ್ಲಿ ಅವರು ತಿರುಗುತ್ತಿದ್ದಾರೆ.

ಅರಿವಿಲ್ಲದ ಅವಿವೇಕ

[illegible]

[illegible]

[illegible] ವೆಂದು, ತನ್ನ ಪತ್ರಿಕೆಗೆ ಸರಕಾರದ ಜಾಹಿರಾತು ಕೊಡಿಸಲಿಲ್ಲವೆಂದು, ತನ್ನ ಆಶ್ರಯದಾತರಿಗೆ ಆತ ಬೇಕಾಗಿರಲಿಲ್ಲವೆಂದು, ಆತನ ವಿರುದ್ಧ ನಾಯಿ ನರಿಗಳ ಕೂಗನ್ನೇ ಎಬ್ಬಿಸಿದ್ದ ಪತ್ರಿಕೆಯೊಂದರ ಸಂಪಾದಕ, ಹನುಮಂತಯ್ಯನವರ ರಾಜೀನಾಮೆ ಸ್ವೀಕೃತವಾದ ಸುದ್ದಿ ಕೇಳಿ ತನ್ನ ಸ್ನೇಹಿತರ ಬಾಯುಗಳನ್ನೆಲ್ಲ ಸಿಹಿಮಾಡಿದನಂತೆ!

ಜನತೆಗೆ ಸಂಸ್ಕೃತಿ, ಸಭ್ಯತೆ, ನಾಗರಿಕತೆ, ನೀತಿ, ನಡೆನಳಕೆ, ಮನುಷ್ಯತ್ವ ಇವೇ ಮುಂತಾದ ಜೀವನದ ಮೌಲ್ಯಾಂಶಗಳನ್ನು ತೋರಿಸಿಕೊಟ್ಟು ಜನ ಜೀವನವನ್ನು ಹಸನಾಗಿಸುವ ಹೊಣೆಹೊತ್ತ ಪತ್ರಿಕಾಕರ್ತರೇ ತಾವು ಹೇಳುತ್ತಿರುವುದರ [illegible] ನಿಂತರೆ [illegible] ಹಾಲು ಕುಡಿ [illegible] ಈ ಬಾವು [illegible]

[illegible]

[illegible] ಜನಜೀವನ [illegible] ಏಕೀಕೃತ

ಇದೇ ತಿಂಗಳಲ್ಲಿ ಹೊರಬರುವದು
[illegible]
[illegible]
[illegible]
[illegible]
ಬೆಲೆ [illegible]
[illegible] M.O.
[illegible]
[illegible]

ಕನ್ನಡ ನಾಡಿನಲ್ಲಿ ಬರಿಯ ರಾಜಕೀಯ ಏಕೀಕರಣವನ್ನು ಮಾತ್ರವೇ ಅಲ್ಲದೆ ಹಾರ್ದಿಕ ಮಾನಸಿಕ ಬೌದ್ಧಿಕ ವೈಚಾರಿಕ ಐಕ್ಯವನ್ನೂ ಸಾಧಿಸಬೇಕಾಗಿದೆ. ಅದಕ್ಕಾಗಿ ಸ್ವಂತದ ಲಾಭದಾಸೆಯಿಂದ ಜನಮನವನ್ನು ಕಲ್ಮಷಗೊಳಿಸುವ ಧೂರ್ತ ಲಫಂಗರ ಬಗ್ಗೆ ಎಚ್ಚರಿರಬೇಕಾಗಿದೆ.

ಕನ್ನಡಿಗರಾದ ನಾವು ನೂತನ ಮನ್ವಂತರವೊಂದದಲ್ಲಿ ಕಾಲಿಕ್ಕುತ್ತಿರುವ ಈ ಕಾಲದಲ್ಲಿ ಹೊಸ ಮುಖಂಡತ್ವವನ್ನು ರೂಪಿಸಿಕೊಳ್ಳಬೇಕಾಗಿದೆ. ನಡೆದ ಜನರ ಮುಂಭಾಗದಲ್ಲಿ ಜಿಗಿದು ನನ್ನನ್ನು ಹಿಂಬಾಲಿಸರಿ ಎಂದು ಹೇಳುವ ಆಷಾಡಭೂತಿಗಳು ಮುಖಂಡರಾಗಿರುವ ಕಾಲ ಇನ್ನು ತೀರಬೇಕಾಗಿದೆ. ನನ್ನಂಥ ಜನಸಾಮಾನ್ಯರಲ್ಲಿ ನಿಂತು, ನಮ್ಮ ಸರ್ವ ಸುಖ ದುಃಖಗಳಲ್ಲಿ ಪಾಲುಗಾರರಾಗಿ ನಮ್ಮನ್ನು ಮುನ್ನಡೆಸುವ ಧೀಮಂತ ಮುಖಂಡರು ನಮಗಿಂದು ಬೇಕಾಗಿದೆ.

ಧುರೀಣತ್ವದ ದಾರಿ-ದೀಪ

“ನಿನ್ನ ದೇಶಬಾಂಧವರಿಗೆ ಮಾರ್ಗದರ್ಶನ ಮಾಡಲು ಪ್ರಯತ್ನಿಸಬೇಡ; ಬದಲು ಅವರ ಸೇವೆ ಮಾಡು. ಮುಖಂಡತ್ವದ ಪಾಶವೀ ಹುಚ್ಚು ಅನೇಕ ದೊಡ್ಡ ದೊಡ್ಡ ಹಡಗುಗಳನ್ನು ಜೀವನದ ಜಲದಲ್ಲಿ ಮುಳುಗಿಸಿದೆ” ಎಂದು ಸ್ವಾಮಿ ವಿವೇಕಾನಂದರು ಹೊತ್ತಿಸಿಟ್ಟ ನುಡಿ ದೀಪವು ನಿಜವಾದ ಮುಖಂಡರನ್ನು ತೋರಿಸಿಕೊಡಬಲ್ಲದು. ಜೀವನ ಜಲದಲ್ಲಿ ಪಯಣ ಹೊರಟಿರುವ ಕನ್ನಡ ಯುವಕರಿಗೆ ಆ ಸಿಂಹ ಸನ್ಯಾಸಿಯ ನುಡಿ ದೀಪವೇ ತಮ್ಮ ಹಡಗಿನ ಕಪ್ತಾನನನ್ನು ಅರಸಲು ಕೈದೀಪವಾಗಲಿ. ●

ವರಗಳ ಬರ ಬಿದ್ದಾಗ!

ಶ್ರೀ. ಎಸ್. ಎ. ಕಡಿ

ಅವನ ಹೆಸರು ಸುಂದರ. ಹೆಸರಿಗೆ ತಕ್ಕಂತೆ ಸುಂದರನಾಗಿಯೇ ಇದ್ದ. ಸಂಪತ್ತಿಯ ಜೊತೆಗೆ ಪದವೀಧರನೂ ಆಗಿದ್ದ. ಇವೆಲ್ಲಕ್ಕೂ ಕಳಸವಿಟ್ಟಂತೆ ಅವನು ಅವಿವಾಹಿತ. ಅಂದ ಮೇಲೆ ಕೇಳುವದೇನು? ಅವನ ಮನೆಯ ಬಾಗಿಲವು ಕನ್ಯಾಪಿತರ ಯಾತ್ರಸ್ಥಳವಾಗಿತ್ತು.

ಸುಂದರನ ತಂದೆ ತುಂಬಾ ಲೆಕ್ಕಾಚಾರದವರು. ಕೈತುಂಬ ವರದಕ್ಷಿಣೆಯು ಸಿಕ್ಕಬೇಕು, ಇಲ್ಲದಿದ್ದರೆ ಸಾಧ್ಯವೇ ಇಲ್ಲ ಎನ್ನುವ ಪ್ರವೃತ್ತಿಯವರು. ವರದಕ್ಷಿಣೆ ಬಂದರೆ ಬೇಡವೆನ್ನುವದಿಲ್ಲ; ಆದರೆ ಕನ್ಯೆಯೂ ಸುಂದರಿಯಾಗಿರಬೇಕು. ವಿದ್ಯಾವಂತೆಯಾಗಿರಬೇಕು, ಆಧುನಿಕ ವಿಚಾರದವಳಿರಬೇಕು ಎಂಬುದು ಸುಂದರನ ವಾದ.

ತಂದೆ-ಮಗನ ಇತ್ತಂಡದಲ್ಲಿ ಕನ್ಯಾಪಿತರು ಜಜ್ಜಿ ಹೋಗುತ್ತಿದ್ದರು. ಕನ್ಯೆಯು ವರನ ಮನಸ್ಸಿಗೆ ಬಂದರೆ, ವರದಕ್ಷಿಣೆಯ ಅಂಕಿಯು ವರನ ಪಿತನ ಮನಸ್ಸಿಗೆ ಬರುತ್ತಿದ್ದಿಲ್ಲ. ಹೆಸರು ತಿಲೋತ್ತಮೆ, ಸಮೀಪಕ್ಕೆ ಹೋದರೆ ತಿಲವೇ ಉತ್ತಮ” ಇದ್ದ ಬಣ್ಣದ ಕನ್ಯಾಪಿತರು ವರದಕ್ಷಿಣೆಯ ಮೊತ್ತವನ್ನು ಏರಿಸಿದರೂ ಅದು ಸುಂದರನ ಮನಸ್ಸಿಗೆ ಬರುತ್ತಿರಲಿಲ್ಲ. ‘ಹಗ್ಗ ಹರಿಯಲಿಲ್ಲ; ಕೋಲು ಮುರಿಯಲಿಲ್ಲ’ ಎಂಬ ಪರಿಸ್ಥಿತಿಯಲ್ಲಿಯೇ

ದಿನಗಳುರುಳಿದವು. ಆದರೆ ಮದುವೆ ಮಾತ್ರ ಆಗಲಿಲ್ಲ.

ಸುಂದರನಿಗೂ ಬೇಜಾರು ಬಂದಿತು. ಎಂಥದಾದರೂ ಸರಿಯೆ ಮದುವೆಯಾದರಾಯಿತು ಎಂಬ ನಿರ್ಧಾರಕ್ಕೆ ಬಂದ. ಅದನ್ನು ತಂದೆಗೂ ತಿಳಿಸಿದ. ಆಗ ತಂದೆಯು ಮನದಲ್ಲಿ [illegible] ಯಾರನ್ನಾದರೂ ಮಾತನಾಡಿಸಬೇಕೆಂಬ ಇಚ್ಛೆಯಾಯಿತು. ಆದರೆ ಅವರ ಅಭಿಮಾನ ತಡೆಗಟ್ಟಿತು. [illegible]

[illegible]

[illegible]

ವರೆಗೆ ವರದಕ್ಷಿಣೆ ಕೊಡಲು ಸಿದ್ಧನಾಗಿರುವದಾಗಿಯೂ ನಿವೇದಿಸಿಕೊಂಡಿದ್ದ.

ಅದೇ ವಿಳಾಸಕ್ಕೆ ಪತ್ರವ್ಯವಹಾರವನ್ನು ಮಾಡಿಯೂ ಆಯಿತು. ಮೂರು ನಾಲ್ಕು ದಿನಗಳಲ್ಲಿ ವರದಕ್ಷಿಣೆಯ 'ಚೆಕ್' ಕೂಡಾ ಬಂದಿತು. ಜೊತೆಗೆ ಶೀಘ್ರದಲ್ಲಿ ಮದುವೆಯಾಗಬೇಕೆಂದು ತಿಳಿಸಲಾಗಿತ್ತು. ಇತ್ತ ಸುಂದರನಿಗೂ ಮದುವೆಯ ಅವಸರವಿದ್ದಿತು. ಹೆಚ್ಚಿನ ಕನ್ಯಾ ಪರೀಕ್ಷೆಯ ಗೊಂದಲಕ್ಕೆ ಬೀಳದೆ ಅದೇ ತಿಂಗಳಲ್ಲಿ ಮದುವೆಯೂ ಜರುಗಿತು.

ಆದರೆ ಹಣದ ಆಸೆಗೆ ಬಲಿ ಬಿದ್ದು ಮಾತನಾಡಲು ಬಾರದಂಥ ಮೂಕಿಯನ್ನು ಮದುವೆಯಾಗಿದ್ದೇನೆಂದು ಸುಂದರನಿಗೆ ತಿಳಿದು ಬಂದಾಗ ಸಮಯವು ಮಿಂಚಿ ಹೋಗಿತ್ತು. ಆಗ ಮಾತ್ರ 'ವರಗಳ ಅಭಾವವಿದ್ದ ಇಂಥ ಸಮಯದಲ್ಲಿಯೂ [illegible] ದಕ್ಷಿ ಸಿಗಲಿಲ್ಲ [illegible]' ಎಂದು ಹೇಳುವವರಿಲ್ಲ.

●

[illegible]

● [illegible]
● [illegible]
● [illegible]

[illegible]

ರಾಯಲ್ ಕೆಫೆ

[illegible]

ಒಂದು ಉರ್ದೂ ಕತೆ

ನನ್ನ ನಚ್ಚಿನ ಪುಟ

— ಶ್ರೀ. ಕೃಷ್ಣಚಂದ್ರ

ಬೆಳಿಗ್ಗೆ ಹಾಸುಗೆಯಿಂದೇಳುತ್ತಲೆ ಕೆಲವರು ಮೈಮುರಿದು ಆಕಳಿಸುತ್ತಾರೆ; ಕೆಲವರು ಹಾಸುಗೆಯಲ್ಲಿ ಕುಳಿತುಕೊಂಡೇ ಚಹ ಕುಡಿಯುತ್ತಾರೆ, ಮತ್ತೆ ಕೆಲವರು ಹಾಸುಗೆಯಿಂದೇಳುತ್ತಲೆ ವ್ಯಾಯಾಮನ್ನು ಪ್ರಾರಂಭಿಸುತ್ತಾರೆ. ಆದರೆ ನಾನು ಮಾತ್ರ ಹಾಸುಗೆಯಲ್ಲಿ ಬಿದ್ದುಕೊಂಡೇ ಪತ್ರಿಕೆಯನ್ನು ಓದುತ್ತೇನೆ. ಪೂರ್ಣ ಓದಿದ ನಂತರ ದೈನಂದಿನ ಕಾರ್ಯಗಳಲ್ಲಿ ನಿರತನಾಗುತ್ತೇನೆ.

ಪತ್ರಿಕೆಗಳನ್ನು ಬಹಳಷ್ಟು ಜನ ತಮ-ತಮಗೆ ಬೇಕಾಗುವ ವಿಷಯಗಳಿಗಾಗಿ ಪ್ರತಿನಿತ್ಯವೂ ಓದುತ್ತಾರೆ. ಕೆಲವರಿಗೆ ಬಂಗಾರ ಬೆಳ್ಳಿಯ ಧಾರಣಿ ಬೇಕಾಗಿರುತ್ತದೆ. ಇನ್ನೊಬ್ಬರಿಗೆ ನ್ಯೂಯಾರ್ಕಿನ ಅರಳೆ ಧಾರಣೆ ಬೇಕಾಗಿರುತ್ತದೆ (ಈ ಧಾರಣಿಯನ್ನು ಮಾತ್ರ ಇಂದು ಎಲ್ಲರೂ-ಕೂಲಿಗಳು, ಟಾಂಗಾವಾಲಾ, ಬೀಡಿ ಅಂಗಡಿಯವರು-ನೋಡುತ್ತಾರೆ. ಅಷ್ಟೊಂದು ಮಹತ್ವವಿರುತ್ತದೆ.) ಅವರಿಗೆ ಅದನ್ನು ನೋಡದ ಹೊರ್ತು ಅವರಿಗೆ ಸಮಾಧಾನವೇ ಇರುವದಿಲ್ಲ.

ಇನ್ನು ಕೆಲವರು ಮುಖಪುಟದಲ್ಲಿ ದಪ್ಪ ಅಕ್ಷರಗಳಲ್ಲಿ ಅಚ್ಚಾದ ಸುದ್ದಿಗಳನ್ನು ಅತಿ ಪ್ರೀತಿಯಿಂದ ಓದುತ್ತಾರೆ. ಕೊಲೆಯ ಸುದ್ದಿಗಳನ್ನು, ಕೋರ್ಟಿನಲ್ಲಿ ನಡೆದ ಮೊಕದ್ದಮೆಯ ವಿವರಗಳನ್ನು ಆಸ್ಥೆಯಿಂದ ಓದುವ ಮಹಾನುಭಾವರೂ ಇದ್ದಾರೆ.

ನಾನು ಕೂಡ ಮೊದಲು ಇವೆಲ್ಲ ಸುದ್ದಿಗಳನ್ನೂ ಓದುತ್ತಿದ್ದೆ. ಇಷ್ಟೆ ಅಲ್ಲ, ಮುಖಪುಟದ ಮೊದಲನೆಯ ಸಾಲಿನಿಂದ ಕೊನೆಯ ಪುಟದ ಕೊನೆಯ ಸಾಲಿನ ವರೆಗೂ ಓದಿ ಮುಗಿಸುತ್ತಿದ್ದೆ. ಆದರೆ ಈಗೀಗ ಅವುಗಳನ್ನೆಲ್ಲ ಬಿಟ್ಟು ಒಂದೇ ಒಂದು 'ಕಾಲಂ' ಓದತೊಡಗಿದ್ದೇನೆ. ಅದು ನನ್ನ ನಚ್ಚಿನ ಕಾಲಂ, ನನ್ನಂತೆ ಇನ್ನುಳಿದವರ ನಚ್ಚಿನ ಕಾಲಮ್ಮೂ ಇರಬಹುದು.

ನನ್ನ ಕಾಲಂ ಹುಡುಕಲು ಬಹಳ ಶ್ರಮ ಬೇಕಾಗುವದಿಲ್ಲ. ಮುಖಪುಟವನ್ನು ಹೊರಳಿಸಿದೊಡನೆಯೇ, ಎರಡನೆಯ ಪುಟದಲ್ಲಿ ನನ್ನ ನಚ್ಚಿನ ಕಾಲಂ ಇರುತ್ತದೆ. ಅದರಲ್ಲಿ ಕೇವಲ ಜಾಹಿರಾತುಗಳೇ ಇರುತ್ತವೆ. ಇಡಿಯ ಪತ್ರಿಕೆಯಲ್ಲಿ ಒಳ್ಳೆಯ ಹಾಗು ಸತ್ಯ ಸಂಗತಿಗಳೆಂದರೆ

ಜಾಹಿರಾತುಗಳು ಮಾತ್ರ, ಎಂದು ನನ್ನ ಅಭಿಪ್ರಾಯ. ಅಲ್ಲದೆ ಅವು ಮನರಂಜಕಗಳೂ ಆಗಿರುತ್ತವೆ.

ಕೊಡ-ಕೊಳ್ಳುವ, ವಿನಿಮಯದ, ವ್ಯಾಪಾರದ, ನಿರುದ್ಯೋಗಿಗಳೇ ಮುಂತಾದ ಜನೋಪಯುಕ್ತದ ವಿಷಯಗಳು ಆ ಕಾಲಂನಲ್ಲಿ ಸಿಗುತ್ತವೆ. [illegible]

[illegible]

ವವರು, ಹಾಗು ೫೦ ರೂಪಾಯಿಗಳಲ್ಲಿ ಟ್ಯೂಶನ್ ಹೇಳುವವರೇ ಮೊದಲಾದ ಎಲ್ಲರೂ ಆ ಪುಟದಲ್ಲಿ ಸಿಕ್ಕುತ್ತಾರೆ. ಅಂದ ಮೇಲೆ ಇವೆಲ್ಲ ಜನೋಪಯೋಗದ ವಸ್ತುಗಳಲ್ಲದೆ ಮತ್ತೇನು? ಅವುಗಳ ಬಗೆಗೆ ಒಂದೆರಡು ಉದಾಹರಣೆಗಳನ್ನು ಕೊಟ್ಟರೂ ತಪ್ಪಾಗಲಿಕ್ಕಿಲ್ಲ.

"ಇದೀಗ ಸುಂದರ ವ್ಯಾನಿಟಿ ಬ್ಯಾಗು[illegible] ಸ್ಟಾಕು ಬಂದಿದೆ; ತ್ವರೆ ಮಾಡಿರಿ" ಎಂಬ ಜಾಹಿರಾತು ಬಂದಾಗ ಇದೇನು ಜನೋಪಯೋಗದ ವಸ್ತುಗಳೇ? ಎಂದು ನೀವು ಕೇಳಬಹುದು. ಆದರೆ ಒಂದು ಕಾಲದಲ್ಲಿ ಬೆಲೆ ಬಾಳುವಂಥ ಮುತ್ತಿನ ಸರಗಳಿಗೆ [illegible] ಹೋಗುತ್ತಿದ್ದ ಸ್ತ್ರೀಯರು ಈಗ ವ್ಯಾನಿಟಿ ಬ್ಯಾಗುಗಳ ವ್ಯಾಮೋಹಕ್ಕೆ ಬಲಿಯಾಗಿದ್ದಾರೆಂಬುದು ನಿಮ[illegible]

ಅದೇ ರೀತಿ "ಮನೆಗಳು ಬಾಡಿಗೆಗೆ [illegible]" ಎಂಬ ಶೀರ್ಷಿಕೆ ಕಂಡು ಬರುತ್ತದೆ. [illegible] ನಗರದಲ್ಲಿ ಹುಡುಕಾಡಿದರೂ ಸಿಗುವದಿಲ್ಲ. ಈ ರೀತಿ ಸಹಜವಾಗಿಯೇ ಮನೆ ಸಿಗುತ್ತದೆಂದರೆ ಯಾರು ಸುಮ್ಮನಿರುತ್ತಾರೆ?

ಆ ಶೀರ್ಷಿಕೆಯ ಕೆಳಗೆ ಬರೆದ—

"ಹೊಸ ಮನೆ; ಎಂಟು ರೂಮುಗಳು, ಎರಡು ಅಡುಗೆಯ ಮನೆ, ಐದ್ಹ ಸ್ನಾನಗೃಹಗಳು, ಗ್ಯಾರೇಜೂ ಇದೆ. ಮೇಲ್ಮಾಳಿಗೆಯನ್ನು ಮಾತ್ರ ಇನ್ನೂ ಹಾಕಿಸಿಲ್ಲ. ಇನ್ನೊಂದು ತಿಂಗಳೊಪ್ಪತಿನಲ್ಲಿ ಸಿದ್ಧವಾಗುವದು. ಬಾಡಿಗೆದಾರರು ತ್ವರೆ ಮಾಡಿರಿ. ಬಾಡಿಗೆಯೂ ಬಹಳ ಕಡಿಮೆ. ಆದರೂ ಒಂದು ವರ್ಷದ ಮುಂಗಡ ಬಾಡಿಗೆಯನ್ನು ಮಾತ್ರ ಕೊಡಬೇಕು, ಕೇವಲ ಹದಿನೆಂಟು ಸಾವಿರ ರೂಪಾಯಿ" ಎಂಬುದನ್ನು ನೋಡಿದಾಗ ಓದಿದವನ ಗತಿಯೇನಾಗಬೇಕು?

ಮೊದಲು ಮನೆಯನ್ನು ನೋಡಿಯಾದರೂ ಬರಬೇಕು ಎಂದು ನಿರ್ಧರಿಸಿದವನು ಹೊಗೆಯೇ ಕುಳಿತು ಮುಂದಿನ ಜಾಹಿರಾತಿನ ಕಡೆಗೆ ದೃಷ್ಟಿ ಹಾಯಿಸುತ್ತಾನೆ. ಆದರಲ್ಲಿ 'ರುಚಿಕರವಾದ ಊಟ, ಸ್ವಚ್ಛ ಹವೆಯಾಡುವ ಕೋಣೆಗಳು, ಫರ್ನಿಚರುಗಳ ವ್ಯವಸ್ಥೆಯೂ ಇದ್ದು, ವಿದ್ಯುದೀಪ ಹಾಗು ನೀರು ಮಾತ್ರ ಪುಕ್ಕಟೆ. ತಿಂಗಳಿಗೆ ಕೇವಲ ಮುನ್ನೂರು ರೂಪಾಯಿ" ಎಂದಿರುತ್ತದೆ. ಎಂಥವನ ಬಾಯಲ್ಲೂ ನೀರೂರಿ ಆ ಜಾಗೆ ಎಲ್ಲಿದೆಯೆಂಬ ವಿಚಾರದಲ್ಲಿಯೇ ಕೆಳಗಿನ—"ದಿಲ್ ಖುಷ ಹೋಟೆಲ್ ದಾರ್ಜಿಲಿಂಗ" ಎಂಬ ವಿಳಾಸವನ್ನು ನೋಡಿ ಥಣ್ಣಗಾಗುತ್ತಾನೆ. ಮುಂಬಯಿಯಲ್ಲಿ ನೌಕರಿ ಮಾಡುವಂಥವನು ಊಟ-ವಸತಿಗಾಗಿ ದಾರ್ಜಿಲಿಂಗಕ್ಕೆ ಹೋಗಬೇಕು.

ಅನಂತರ "ಬೇಕಾಗಿದ್ದಾರೆ" ಕಾಲಂ ಬರುತ್ತದೆ. ಅವುಗಳಂತೂ ಇನ್ನೂ ಮೋಜಿನವುಗಳಾಗಿರುತ್ತವೆ. 'ಓರ್ವ ಸುಂದರ ಸುಶಿಕ್ಷಿತ ಟೈಪಿಸ್ಟ ಹುಡುಗಿ ಬೇಕಾಗಿದ್ದಾಳೆ; ಕನ್ನಡ, ತೆಲಗು, ತಮಿಳು, ಮಲೆಯಾಳಿ ಹಾಗು ಇಂಗ್ಲೀಷು ಬಲ್ಲ ಓರ್ವ ದಕ್ಷಿಣದ ಅಕೌಂಟಂಟ ಬೇಕಾಗಿದ್ದಾನೆ; ಕನಿಷ್ಟ ಪಕ್ಷ ಎಂ.ಬಿ.ಬಿ.ಎಸ್. ಪಾಸಾದ ಓರ್ವ ಕಂಪೌಂಡರನ ಅವಶ್ಯಕತೆಯಿದೆ; ಹಾಗು ಅವರು ವಿದೇಶದ ಎಲ್. ಆರ್. ಸಿ. ಪಿ. ಮತ್ತು ಎಫ್.ಆರ್.ಸಿ.ಎಸ್. ಆಗಿದ್ದರೆ ಅಂಥವರಿಗೆ ವರ್ಷಕ್ಕೆ ೫ರೂ.ಗಳಂತೆ ಬಡಿಯನ್ನು ಕೊಡಲಾಗುವದು.

"ಓರ್ವ ಸಭ್ಯಗ್ರಹಸ್ಥರಿಗೆ ಭಾಷಣಗಳನ್ನು ಬರೆದುಕೊಡಲು ಓರ್ವ ಸೆಕ್ರೆಟರಿ ಬೇಕಾಗಿದ್ದಾರೆ; ೪೦ರೂ. ಸಂಬಳದ ಓರ್ವ ಚಪರಾಸಿ ಬೇಕಾಗಿದ್ದಾನೆ; ಒಂದು ಉರ್ದು ಪತ್ರಿಕೆಗೆ ಸಂಪಾದಕನು ಬೇಕಾಗಿದ್ದಾನೆ, ಮೂವತ್ತು ರೂ. ಸಂಬಳ ಕೊಡಲಾಗುವದು; ದೊಡ್ಡ ರಂಧ್ರಗಳಲ್ಲಿ ಚಿಕ್ಕ ಮೊಳೆಗಳನ್ನು ಹೊಡೆಯಬಲ್ಲ ಫಿಟರ್ ಬೇಕಾಗಿದ್ದಾನೆ; ಒಂದು ಸಣ್ಣ ಮೊಳೆಯನ್ನು ಹೊಡೆಯಲೋಸುಗ ದೊಡ್ಡ ರಂಧ್ರವನ್ನು ತೆಗೆಯಬಲ್ಲ ಎಂಜಿನಿಯರರು ಬೇಕಾಗಿದ್ದಾರೆ; ಬಟ್ಟೆಗಳು ಹರಿದರೂ ಚಿಂತೆಯಿಲ್ಲ, ಬರಡೆಗಳನ್ನು ಸುರಕ್ಷಿತವಾಗಿರಿಸಬಲ್ಲ ಅಗಸನು ಬೇಕಾಗಿದ್ದಾನೆ; ಮಾಂಸವಿಲ್ಲದೆ "ಕಬಾಬ"ಗಳನ್ನು (ಮಾಂಸದಿಂದ ತಯಾರಿಸುವ ಒಂದು ಪದಾರ್ಥ)

[illegible] ಹೋಟೆಲ್
[illegible] ಇಂದೇ ಬನ್ನಿರಿ
[illegible]

ತಯಾರಿಸಬಲ್ಲ ಓರ್ವ ಅಡುಗೆಯವನು ಬೇಕಾಗಿದ್ದಾನೆ" ಇತ್ಯಾದಿ.

ಅವುಗಳ ನಂತರ ಕೇವಲ ಒಂದೂವರೆ ನೂರು ರೂಪಾಯಿಗಳಲ್ಲಿ ಒಂದು ಒಳ್ಳೆಯ "ಜಾತಿಯ ನಾಯಿ ಮಾರಾಟಕ್ಕಿದೆ' ಎಂದು ಬರೆದ ಜಾಹಿರಾತಿನ ಕೆಳಗೆ "ವಿಶ್ವವಿಖ್ಯಾತ ನಾಟಕಕಾರ ಶೇಕ್ಸಪಿಯರನ ನಾಟಕಗಳ ಅಪೂರ್ವ ಸಂಗ್ರಹ. ಚಿತ್ರಗಳೂ ಇವೆ. ಬೆಲೆ ಕೇವಲ ಹತ್ತು ರೂಪಾಯಿ "ಎಂದು ಇರುತ್ತದೆ [illegible]

[illegible]

[illegible] ಣಿಯೂ, ಸದೃಢನೂ ಆದ ವರನು ಬೇಕಾಗಿದ್ದಾನೆ; ಗೌರವಸ್ಥ ಮನೆತನದ ತರುಣಿಗೆ ವರಬೇಕಾಗಿದೆ. ವಧುವಿನ ತಂದೆಯು ಗಿರಣಿಯೊಂದರ ಒಡೆಯನಿದ್ದಾನೆ. ವರನು ಒಳ್ಳೆಯ ಗುಣವಂತನಿದ್ದರಾಯಿತು. ಕುಲ ಗೋತ್ರದ ಕಡೆಗೆ ಮಹತ್ವವನ್ನೀಯುವದಿಲ್ಲ ಇತ್ಯಾದಿ.

ನಾನೂ ಕುಲ—ಗೋತ್ರಗಳ ಕಡೆಗೆ ಹೆಚ್ಚು ಗಮನವೀಯುವದಿಲ್ಲ. ಅಂದ ಮೇಲೆ ಆ ತರುಣಿಯ ತಂದೆಗೆ ನಾನೂ ಒಂದು ಪತ್ರವನ್ನೇಕೆ ಬರೆಯಬಾರದು? ಎಂಬ ವಿಚಾರದಲ್ಲಿರುವಾಗಲೇ ನನ್ನ ಪತ್ನಿಯು ಬಂದು-"ಏನು ಓದುತ್ತಿರುವಿರಿ?" ಎಂದು ಕೇಳಿದಾಗ ಮಾತ್ರ ನಾನು ಏನೊಂದೂ ಉತ್ತರವೀಯದೆ ಕೊಂಚ ನಕ್ಕು ಪತ್ರಿಕೆಯನ್ನು ಮುಚ್ಚಿ ದಿನದ ಕೆಲಸದಲ್ಲಿ ತೊಡಗುತ್ತೇನೆ.

ಅನು:- **[illegible] R.**
ಹೊಸಳ್ಳಿ ಅವರಗೋಳ

★ ಮೋಟರ ಎಂಜಿನ್ ರಿಪೇರಿ
● ಎಂಜಿನ್ ರಿ ಬೋರಿಂಗ್
● ಎಂಜಿನ್ ಸ್ಲೀವ್ ಕೂಡಿಸುವುದು
● [illegible]
● [illegible]
● [illegible]
● [illegible]

[illegible]

[illegible] ಗ್ಯಾರೇಜ
[illegible] **ಹುಬ್ಬಳ್ಳಿ**

★ ಹಿಂದೂ, ಮುಸ್ಲಿಮರನ್ನು ಒಂದಾಗಿಸಲು
ಕಬೀರ ಜೀವನವನ್ನೇ ಸವೆಸಿದರು;
ಇಂಗ್ಲೀಷರು ಇಬ್ಬರ ನಡುವೆ ಕಟ್ಟಿದರು...

ಒಂದು ದುರಂತದ ಗೋಡೆ

— ಶ್ರೀಮನ್ನಾರಾಯಣ

ಆಗ ನಾನು ಗೋರಖಪುರದ ಆರೋಗ್ಯ ಧಾಮದಲ್ಲಿದ್ದೆ. ಗೋರಖಪುರದ ಸುತ್ತಮುತ್ತ ಬುದ್ಧದೇವನ ಜೀವನಕ್ಕೆ ಸಂಬಂಧಿಸಿದ ಹಲವಾರು ಪವಿತ್ರ ಸ್ಥಳಗಳಿರುವುದು ನನಗೆ ಗೊತ್ತಿತ್ತು. ಆದರೆ ಮಹಾತ್ಮಾ ಕಬೀರರ ಜನ್ಮಸ್ಥಳ ಮಗಹಾರವು ಹದಿನೈದೇ ಮೈಲುಗಳ ದೂರದಲ್ಲಿದೆಯೆಂದು ಕೇಳಿ ನನಗೆ ಹರ್ಷಭರಿತ ಆಶ್ಚರ್ಯವಾಯಿತು.

ಮಗಹಾರವು ಔಂದ-ತೀರ್ಥ ರೇಲ್ವೆ ಮಾರ್ಗದಲ್ಲಿ ಒಂದು ಚಿಕ್ಕ ಗ್ರಾಮ. ಕಬೀರರ ಸಮಾಧಿಯು ನಿಲ್ದಾಣದಿಂದ ಅರ್ಧಮೈಲು ದೂರದಲ್ಲಿದೆ. ಸಮಾಧಿಯ ಸುತ್ತಲಿನ ಬಿಳಿಯ ಪುಟ್ಟ ಗೋಪುರಗಳನ್ನು ಗಾಡಿಯಲ್ಲಿಕುಳಿತೇ ಕಾಣಬಹುದು. ಮಗಹಾರವು ಪುರಾತನ ಗ್ರಾಮವಾಗಿದ್ದು ಅಲ್ಲಿ ಹೆಚ್ಚಾಗಿ ನೇಕಾರರೇ ವಾಸ ಮಾಡುತ್ತಿದ್ದಾರೆ.

ಕಬೀರರ ಮೇಲೆ ನನಗೆ ಚಿಕ್ಕಂದಿನಿಂದಲೂ ಭಕ್ತಿಯಿದೆ. ಅವರ ಸರಳ ಆದರೆ ಉದ್ಬೋಧಕ ಕವನಗಳನ್ನು ನಾನು ಮೆಚ್ಚಿಕೊಂಡಿದ್ದೇನೆ. ಹಿಂದೂ ಮುಸ್ಲಿಮರಲ್ಲಿ ಸ್ನೇಹ ಸಂವರ್ಧನೆ ಮಾಡಿ ಅವರನ್ನು ಮೂಢನಂಬಿಕೆ ಹಾಗೂ ಜಾತಿ ವಿಕಾರಗಳ ಕೇಡುಗಳಿಂದ ಉಳಿಸಿದ ದೃಷ್ಟಾರ- ಮಹಾತ್ಮಾ ಕಬೀರ.

ಕಬೀರರ ಸಮಾಧಿ ಹತ್ತಿರದಲ್ಲಿರುವುದನ್ನು ಕೇಳಿ ಸ್ವಾಭಾವಿಕವಾಗಿ ನಾನು ಆಕರ್ಷಿತನಾದೆ. ಆ ಮಹಾತ್ಮನ ಸಮಾಧಿ ದರ್ಶನ ಪಡೆದು ವಂದನಾರ್ಪಣೆ ಮಾಡಿ ಬರಬೇಕೆಂದು ಅಲ್ಲಿಗೆ ಒಂದು ದಿನ ಹೋದೆ. ಅಲ್ಲಿ ಒಂದು ದುರಂತ ಕಥೆಯೇ ನನಗಾಗಿ ಕಾಯ್ದುಕುಳಿತಿತ್ತು.

ಕಬೀರರು ಕಾಲವಶರಾದಾಗ ಅವರ ಅಂತ್ಯಕ್ರಿಯೆ ಯಾರಿಂದ ನಡೆಯಬೇಕೆಂಬ ಬಗ್ಗೆ ಹಿಂದುಗಳು ಮತ್ತು ಮುಸ್ಲಿಮರಲ್ಲಿ ಜಗಳವಾಯಿತಂತೆ. ಕಬೀರರ ಕಳೇಬರ-

ಅಖಿಲ ಭಾರತ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀಮನ್ನಾರಾಯಣರು ಕಬೀರರ ಜನ್ಮಸ್ಥಳವಾದ ಮಗಹಾರಕ್ಕೆ ಹೋದಾಗಿನ ತಮ್ಮ ಅನುಭವ ಕಥನವನ್ನು ಬಹು ಮಾರ್ಮಿಕವಾಗಿ ಮಾಡಿದ್ದಾರೆ. ಈ ಲೇಖನದಲ್ಲಿ ತಿಳಿದುಕೊಳ್ಳಬಲ್ಲವರಿಗೆ ಬಹು ದೊಡ್ಡ ಗೂಢಾರ್ಥವಿದ್ದು ಜಾತೀಯ ಜಾಲದಲ್ಲಿ ತೊಳಲುತ್ತಿರುವವರು ಇದನ್ನು ಅವಶ್ಯವಾಗಿ ಓದಬೇಕು. ಮೂಲತಃ 'ಹರಿಜನ'ದಲ್ಲಿ ಪ್ರಕಟವಾಗಿದ್ದ ಈ ಲೇಖನವನ್ನು ಗೋ. ಜ. ಬಿ. [illegible] ಅನುವಾದಿಸಿದ್ದಾರೆ.

ಸಮಾಧಿ ಮಾಡಬೇಕೆಂದು ಮುಸ್ಲಿಮರೂ ದಹನ ಕ್ರಿಯೆ ನಡೆಯಬೇಕೆಂದು ಹಿಂದೂಗಳೂ ಹಟ ಹಿಡಿದರಂತೆ. ಪರಸ್ಪರರ ತಿಕ್ಕಾಟದಲ್ಲಿ ಶವದ ಮೇಲಿನ ಬಟ್ಟೆಯನ್ನು ಎಳೆದಾಗ ಕಬೀರರ ದೇಹದ ಬದಲು ಎರಡೇ ಎರಡು ಹೂಗಳು ಅಲ್ಲಿದ್ದುವಂತೆ.

[illegible] ಹಿಂದುಗಳೂ, ಇನ್ನೊಂದನ್ನು ಮುಸ್ಲಿಮರೂ ತೆಗೆದುಕೊಂಡರು. ಇಬ್ಬರೂ ತಮ್ಮ ತಮ್ಮ ಧರ್ಮ ಪದ್ಧತಿಯಂತೆ ಆ ಮಹಾತ್ಮನಿಗಾಗಿ ಸ್ಮಾರಕ ನಿರ್ಮಿಸಿದರು. ಆ ಸ್ಮಾರಕಗಳೇ—ಒಂದು ಗುಡಿ, ಇನ್ನೊಂದು ಮಸೀದೆ [illegible]

ಮೊದಲು ನಾನು ಗುಡಿಗೆ ಹೋದೆ. ಅಲ್ಲಿ ಕಬೀರ ಪಂಥದ ಇಬ್ಬರು ಧಾರ್ಮಿಕ ಚರ್ಚೆಯಲ್ಲಿ ನಿರತರಾಗಿದ್ದರು. ಪ್ರತಿ ಸಂಜೆಯೂ ಗುಡಿಯಲ್ಲಿ ಕಬೀರನ ಗೀತೆಗಳನ್ನು ಹಾಡುತ್ತಿರುವರೆಂದು ನನಗೆ ತಿಳಿದು ಬಂದಿತು. ಪ್ರತಿವರ್ಷ ಅಗ್ರಹಾಯ ಪೌರ್ಣಿಮೆಯ ದಿನ ಬನಾರಸದ ಮಹಂತರೊಬ್ಬರು ಅಲ್ಲಿಗೆ ಬರುವರೆಂದೂ ಭಂಡಾರಾ ಎಂಬ ಮಹೋತ್ಸವ ನಡೆಯುವದೆಂದೂ ಗೊತ್ತಾಯಿತು. ಕೆಲಹೊತ್ತು ಗುಡಿಯಲ್ಲಿ ಕುಳಿತು ಮಸೀದೆಗೆ ಹೋಗುವ ಇಚ್ಛೆಯನ್ನು ವ್ಯಕ್ತಪಡಿಸಿದೆ.

"ಇಲ್ಲಿಂದ ಮಸೀದೆಗೆ ದಾರಿಯಿ ಬಾಬೂಜೀ"

"ಏಕೆ? ಹೇಗದು?" ಎಂದು ನಾನು ಅಚ್ಚರಿಯಿಂದ ಕೇಳಿದೆ;

"ಎರಡರ ನಡುವೆ ಒಂದು ಗೋಡೆಯಿದೆ"

ಒಬ್ಬನೇ ಮಹಾತ್ಮನ ಸ್ಮಾರಕಗಳಾದ ಇಂಥ ಎರಡು ಸ್ಥಳಗಳ ನಡುವೆ ಗೋಡೆ ಏಕೆ?"

''ಅದನ್ನು ಕೇಳಬೇಡಿರಿ ಬಾಬೂಜಿ. ಆ ಗೋಡೆ ಬಹಳ ದಿನಗಳಿಂದಲೂ ಇದೆ"

"ಇಲ್ಲಿಂದ ಅಲ್ಲಿಗೆ ಹೋಗಲು ಒಬ್ಬರೇ ಹಾಯುವಂಥ ಒಂದು ಸಣ್ಣ ಬಾಗಿಲಾದರೂ ಇಲ್ಲವೇ?''

''ಇಲ್ಲ ಬಾಬೂಜಿ. ಬಾಗಿಲು ಇದ್ದರಾದರೂ ಏನು ಉಪಯೋಗ? ನಾವು ಯಾರೂ ಅಲ್ಲಿಗೆ ಹೋಗುವುದೇ ಇಲ್ಲ.''

ಇದನ್ನು ಕೇಳಿ ನನಗೆ ಬಹಳ ದುಃಖವಾಯಿತು. ಕಬೀರರ ಅನುಯಾಯಿಗಳಲ್ಲಿ ಹಿಂದುಗಳೂ ಇದ್ದಾರೆ ಮುಸಲ್ಮಾನರೂ ಇದ್ದಾರೆ. ಈ ಎರಡೂ ಜಾತಿಗಳಲ್ಲಿ ಐಕ್ಯವನ್ನುಂಟು ಮಾಡಲು ಆ ಮಹಾತ್ಮನು ಅವಿಶ್ರಾಂತವಾಗಿ ದುಡಿದಿದ್ದನು. ಆತನ ಆ ಪ್ರಯತ್ನವೆಲ್ಲ ವ್ಯರ್ಥವಾಗಿದೆ. ಇಬ್ಬರ ನಡುವೆ ಇಲ್ಲಿ ಕರಾಳವಾದ ಅಡ್ಡಗೋಡೆಯೊಂದು ನಿಂತಿದೆ.

ಗುಡಿಯಿಂದ ಹೊರಗೆ ಬಂದು ಬಳಸು ದಾರಿಯಿಂದ ಮಸೀದೆಗೆ ಹೋದೆ. ಅಲ್ಲಿದ್ದ ಒಬ್ಬ ಕಬೀರ ಪಂಥದ ಮುಸ್ಲಿಂ ಅನುಯಾಯಿಯೊಬ್ಬನ ಸಂಗಡ ಮಾತನಾಡುತ್ತ ಅಲ್ಲಿಯೂ ವರ್ಷಕ್ಕೊಮ್ಮೆ ದೊಡ್ಡ ಭಂಡಾರಾ ಉತ್ಸವ ನಡೆಯುವ ಸುದ್ದಿಯನ್ನು ತಿಳಿದೆ.

"ಆ ಮಹೋತ್ಸವದಂದು ನೀವು ಹಿಂದೂ ಮುಸ್ಲಿಮರೆಲ್ಲರೂ ಸಹಭೋಜನವನ್ನು ಮಾಡುತ್ತಿರಬೇಕು" ಎಂದು ನಾನು ಅನ್ಯಮನಸ್ಕನಾಗಿ ಕೇಳಿದೆ.

"ಇಲ್ಲ ಬಾಬೂಜಿ" ಎಂದು ಉತ್ತರ ಬಂದಿತು; ''ನಾವು ಗುಡಿಗೆ ಹಿಟ್ಟು, ಬೇಳೆ, ಅಕ್ಕಿ, ಸಕ್ಕರೆ ಇವೆಲ್ಲವುಗಳ ಸೀದಾ ಕಳಿಸುತ್ತೇವೆ. ಅಡಿಗೆಯನ್ನೆಲ್ಲ ಅವರೇ ಮಾಡುತ್ತಾರೆ.''

"ಹಾಗಾದರೆ ನಿಮ್ಮ ಉತ್ಸವದ ಕಾಲಕ್ಕೆ ಹಿಂದುಗಳೂ ನಿಮಗೆ ಸೀದಾ ಕಳಿಸುತ್ತಿರಬೇಕು.''

''ಇಲ್ಲ. ಅವರು ಮಾಡಿದ ಅಡುಗೆಯನ್ನೇ ಕಳಿಸುತ್ತಾರೆ.''

"ಇದು ಹೇಗೆ? ನೀವು ಮಾಡಿದ ಅಡುಗೆಯನ್ನು ಹಿಂದುಗಳು ಏಕೆ ಊಟ ಮಾಡುವುದಿಲ್ಲ? ನೀವಿಬ್ಬರೂ ಕಬೀರ ಪಂಥದವರೇ ಅಲ್ಲವೇ?"

"ಅದು ಸರಿ ಬಾಬೂಜಿ. ನಾವಿಬ್ಬರೂ ಕಬೀರ ಪಂಥದವರೇ, ನಮ್ಮಲ್ಲಿ ಯಾರೂ ಮೀನ, ಮಾಂಸ ಒಂದನ್ನೂ ಮುಟ್ಟುವುದಿಲ್ಲ. ಆದರೂ ಹಿಂದುಗಳು ನಾವು ಮಾಡಿದ ಅಡುಗೆಯನ್ನು ಉಣ್ಣುವುದಿಲ್ಲ. ಆದರೆ ಅವರು ಅಟ್ಟಿದ್ದನ್ನು ಊಟಮಾಡಲು ನಮ್ಮ ಆಕ್ಷೇಪವೇನೂ ಇಲ್ಲ."

ಸರಿ; ಕಬೀರ ಪಂಥದವರಲ್ಲೂ ನೀ-ನನ್ನ-ಮುಟ್ಟಬೇಡ ಪದ್ಧತಿಯುಂಟು! ಇದನ್ನು ಕೇಳಿ ನನಗೆ ಬಹಳ ದುಃಖವಾಯಿತು, ಎರಡೂ ಜಾತಿಗಳನ್ನು ಅಗಲಿಸುವ ನೀ-ನನ್ನ-ಮುಟ್ಟಬೇಡ ರೋಗವು ನಮ್ಮ ದೇಶವನ್ನೇ ಹೋಳು ಹೋಳಾಗಿಸಿದೆ.

ವಿಜಯ ಸ್ವೀಟ ಮಾರ್ಟ
ದುರ್ಗದಬೈಲ, ಹುಬ್ಬಳ್ಳಿ.
Best VIJAY SWEET MEAT
विजय स्वीट मार्ट
दुर्गदबैल, हुबळी

ಇಬ್ಬರ ನಡುವೆ ಈ ಗೋಡೆ ಎದ್ದದ್ದು ಸಹಜವಿದೆ ಎನ್ನಿಸಿತು.

"ಈ ಗೋಡೆ ಯಾವಾಗಲೂ ಇದ್ದಿತೇ?" ಎಂದು ನಾನು ಕುತೂಹಲದಿಂದ ಕೇಳಿದೆ.

'ಇಲ್ಲ, ಮೊದಲು ಈ ಗೋಡೆಯೇ ಇರಲಿಲ್ಲ. ಆದರೆ ಹಿಂದೂ ಮುಸ್ಲಿಮರಲ್ಲಿ ಆಗಾಗ್ಗೆ ಜಗಳಗಳಾಗುತ್ತಿದ್ದವು. ಅದ್ದರಿಂದ ಸುಮಾರು ಎಂಭತ್ತು ವರ್ಷಗಳ ಹಿಂದೆ ಇಂಗ್ಲಿಷ ಅಧಿಕಾರಿಯೊಬ್ಬರು ಎರಡೂ [illegible] ನಡುವೆ ಗೋಡೆ ಕಟ್ಟಿಸಿದರು."

[illegible]

[illegible]

ಮರ ನಡುವೆ ಗೋಡೆ ಕಟ್ಟಿಸಿದವನು ಒಬ್ಬ ಇಂಗ್ಲಿಷ ಅಧಿಕಾರಿ....

ಎಂಭತ್ತು ವರ್ಷಗಳ ನಂತರ ಭಾರತವನ್ನು ಇಬ್ಭಾಗ ಮಾಡಲು ಇಡಿಯ ದೇಶದ ಹಿಂದು ಮುಸ್ಲಿಮರ ನಡುವೆ ರಾಜಕೀಯ ಗೋಡೆಯನ್ನು ಕಟ್ಟಿದವನೂ ಒಬ್ಬ ಇಂಗ್ಲಿಷ ಗವರ್ನರ ಜನರಲ್.

ಇಲ್ಲಿ ಕೂಡ ಇಬ್ಬರ ನಡುವೆ ಒಂದು ಬಾಗಿಲು ಕಾಣದಾಗಿದೆ.

ಮಗಹಾರದಲ್ಲಿ ಎಂಭತ್ತು ವರ್ಷಗಳ ಹಿಂದೆ ಏಳೆದ್ದ ಆ ಗೋಡೆಯು ಭಾವಿ ಪಾಕಿಸ್ತಾನದ ಅಸ್ತಿವಾರ ಹಾಕಲಿಲ್ಲವೇ! [illegible] ಹಾಗೆನಿಸಿತು.

ಅಯ್ಯೋ! ಇವೆಲ್ಲದರ ದುರಂತವೇ!

○

20
ವರ್ಷಗಳ
ಅನುಭವ

ಎಲ್ಲ ತರಹದ [illegible] ಮೋಟರ ಮತ್ತು
[illegible]

● ರಿಪೇರಿ
● ವೆಲ್ಡಿಂಗ
● ಬೋರಿಂಗ

[illegible]

ಹಸ್ಸಿಕೇರಿ ಬಂಧುಗಳು
[illegible]

★ ಆತ್ಮವಲ್ಲದ್ದನ್ನೇ ಆತ್ಮವೆಂದು
★ ಭ್ರಮಿಸಿ ಬೆನ್ನು ಹತ್ತದೆ, ನೈಜ
★ ಸತ್ಯವನ್ನು ಕಂಡಾಗ ಸಿಕ್ಕೀತು...

ಮುಕ್ತಿ

★ ★ ★ ★ ★

ಜಗದ್ಗುರು ಶಂಕರಾಚಾರ್ಯರು

ಯಾವುದು ವಿಶ್ವವೆಲ್ಲವನ್ನು ತುಂಬಿಕೊಂಡಿದೆಯೋ, ಯಾವುದನ್ನು ಬೇರಿನ್ನಾವುದೂ ತುಂಬಿಲ್ಲವೋ ಅದೇ ಆತ್ಮ. ಯಾವುದು ಎಲ್ಲ ವಸ್ತುಗಳು ಪ್ರಕಾಶಮಾನವಾಗುವಂತೆ ಮಾಡುತ್ತಿದೆಯೋ, ಯಾವುದನ್ನು ಇನ್ನಾವ ವಸ್ತುವೂ ಪ್ರಕಾಶಮಾನವಾಗಿಸಲಾರದೋ ಅದೇ ಆತ್ಮ.

ಸ್ವಂತದ ಸ್ಪಷ್ಟವಾದ ಆತ್ಮಜ್ಞಾನದಿಂದಲೇ ಸತ್ಯ ಎಂದರೇನೆಂಬುವನ್ನು ಕಂಡುಕೊಳ್ಳಬೇಕು; ಪಂಡಿತರನ್ನು ಕೇಳಿ ತಿಳಿದರೆ ಅದು ಗೊತ್ತಾಗುವದಿಲ್ಲ. ಉದಾರಿಸಲು ಚಂದ್ರನ ಆಕಾರವನ್ನು ಸ್ವಂತದ ಕಣ್ಣುಗಳಿಂದ ನೋಡಿದಾಗಲೇ ತಿಳಿಯುವುದು. ಉಳಿದವರ ಮುಖಾಂತರ ಅದನ್ನು ಹೇಗೆ ತಿಳಿಯಲು ಸಾಧ್ಯ?

ವ್ಯಕ್ತಿಗತವಾದ ಅಂತರಾತ್ಮ ಹಾಗೂ ವಿಶ್ವದ ಆತ್ಮಗಳೆರಡೂ ಒಂದೇ ಎಂಬ ತಿಳವಳಿಕೆಯಿಂದಲೇ ವಿನಾ ಮುಕ್ತಿ ದೊರೆಯಲಾರದು. ಯೋಗದಿಂದಾಗಲೀ, ಸಾಂಖ್ಯದಿಂದಾಗಲೀ, ಧಾರ್ಮಿಕ ವಿಧಿವಿಧಾನಗಳನ್ನು ಆಚರಿಸುವುದರಿಂದಾಗಲೀ, ಅಥವಾ ಬರಿಯ ಜ್ಞಾನಾರ್ಜನೆ ಮಾಡುವುದರಿಂದಾಗಲೀ ಮುಕ್ತಿಯನ್ನು ಪಡೆಯುವುದು ಸಾಧ್ಯವಿಲ್ಲ.

ಔಷಧದ ಹೆಸರನ್ನು ಉಚ್ಚರಿಸಿದ ಮಾತ್ರಕ್ಕೆ ಯಾವ ರೋಗವೂ ಗುಣಹೊಂದಲಾರದು. ಅದೇ ರೀತಿ ಮುಕ್ತಿಯು " ಬ್ರಹ್ಮ " ಎನ್ನುವ ಶಬ್ದೋಚ್ಚಾರಣೆಯಿಂದ ಲಭಿಸದೆ ನೇರವಾದ ಬ್ರಹ್ಮಾನುಭವದಿಂದ ಲಭಿಸುವುದು.

ಬ್ರಹ್ಮನಲ್ಲಿ ಜಾತಿ ಪಂಥ ವಂಶ ಗೋತ್ರಗಳೊಂದೂ ಇಲ್ಲ. ಬ್ರಹ್ಮಕ್ಕೆ ಹೆಸರಿಲ್ಲ; ರೂಪವಿಲ್ಲ; ಗುಣಾವಗುಣಗಳಿಗೆ ಅದು ಅತೀತವಾಗಿದೆ; ಅದಕ್ಕೆ ಕಾಲಬಂಧನವಿಲ್ಲ, ದಿಗ್ಬಂಧನಗಳಿಲ್ಲ; ಸ್ವಾನುಭವಗಳ ಸರ್ವೋದ್ದೇಶಗಳನ್ನು ಅದು ಮೀರಿ ನಿಂತಿದೆ.

ಬ್ರಹ್ಮವು ಇಂತಿದ್ದು ನೀನೂ ಇಂತಿರುವೆ. ನಿನ್ನ ಅಂತಃಕರಣದಲ್ಲಿ ಈ ಸತ್ಯವನ್ನು ಧ್ಯಾನಮಾಡು.

ಬ್ರಹ್ಮವು ಶಬ್ದ ಶಕ್ತಿಗೆ ಅಗಮ್ಯವಾಗಿದ್ದರೂ ಪವಿತ್ರ ಪ್ರಕಾಶವಾದ ಕಣ್ಣಿಗೆ ಗೋಚರವಾಗಬಲ್ಲದು.

ಬ್ರಹ್ಮವು ಒಂದೇ ಆಗಿದ್ದರೂ ಅನೇಕಕ್ಕೆ ಕಾರಣೀಭೂತವಾಗಿದೆ. ಅದನ್ನುಳಿದು ಇನ್ನೊಂದು ಕಾರಣವೇ ಇಲ್ಲ. ಹೀಗಿದ್ದರೂ ಕೂಡ ಬ್ರಹ್ಮವು ಕರ್ಮಬಂಧನಗಳಿಗೆ ಸಿಲುಕದೆ ಸ್ವತಂತ್ರವಾಗಿದೆ.

ದೇಹ, ಮಮಕಾರ, ಭಾವನೆಗಳು, ಅಥವಾ ಆತ್ಮವಲ್ಲದ ಇನ್ನಾವುದೇ, ನಾವು ಎಂದು ತಿಳಿದುಕೊಳ್ಳುವುದು ಅಜ್ಞಾನವಾಗಿದೆ. ಈ ಅಜ್ಞಾನವನ್ನು ನೀಗಿ ಯಾವನು ಆತ್ಮದರ್ಶಕನಾಗುವನೋ ಅವನೇ ಜ್ಞಾನಿ.

ಜಗದ ಜಾಡನ್ನು, ಅಥವಾ [illegible] ದಾರಿಯನ್ನು, ಅಥವಾ [illegible] ಪಥವನ್ನು ಹಿಡಿದು ಯಾವನು ಹೊರಡುತ್ತಾನೆಯೋ ಅವನಲ್ಲಿ ಸತ್ಯದ ಜ್ಞಾನವು ಉದ್ಭವಿಸಲಾರದು.

ಈ ಮುಮುಕ್ಷುದ ಮಾರ್ಗಗಳು, ಜಗದ ಬಂಧನದಿಂದ ಪಾರಾಗಬೇಕೆನ್ನುವ ಆಕಾಂಕ್ಷೆಯುಳ್ಳವನ ಕಾಲುಗಳನ್ನು ಬಿಗಿದ ಕಬ್ಬಿಣದ ಸರಪಳಿಗಳೆಂದು ಜ್ಞಾನಿಗಳು ಹೇಳುತ್ತಾರೆ.

ಈ ಸರಪಳಿಯಿಂದ ಯಾರು ಪಾರಾಗುತ್ತಾರೆಯೋ ಅವರು ಮುಕ್ತಿಯನ್ನು ಪಡೆಯುತ್ತಾರೆ.

●

॥ ಶ್ರೀ [illegible] ॥
ಮನೆಮನೆಯಲಿ ಮಂಗಳಲಕ್ಷ್ಮಿ ಪ್ರಸನ್ನಳಾಗಲಿ

[illegible]
ನಿಮ್ಮ [illegible]!

- [illegible]
- [illegible]
- [illegible]

[illegible]

[illegible]
[illegible]

★ ತಾಜಮಹಲನ್ನು ಕಟ್ಟುವ ೧೭ ವರ್ಷ
★ ತಡೆದ ಶಹಾಜಹಾನನು, ಮುಗಿದಾಗ
★ ಅದನ್ನು ನೋಡಲು ಕಾತುರನಾಗಿದ್ದ

ಒಂದು ದಿನದ ಕೌತುಕ!

ಶ್ರೀ. "ಗುರುನಾಥ" ಬಿ. ಎ.

ತಾಜ ಮಹಲನ್ನು ನಿರ್ಮಿಸಲು ಶಹಾಜಹಾನನು ಹುಕುಂ ಮಾಡಿ ಆಗಲೇ ಹದಿನೇಳು ಸಂವತ್ಸರಗಳುರುಳಿದ್ದವು. ದೇಶ ವಿದೇಶಗಳಿಂದ ತಜ್ಞರು ಬಂದಿದ್ದರು. ಹಾಗೂ ಅಮೌಲ್ಯ ವಸ್ತುಗಳನ್ನು ತರಿಸಿ ಕಟ್ಟಡದ ಕೆಲಸವು ಪ್ರಾರಂಭವಾಗಿ ಎಷ್ಟೋ ವರ್ಷಗಳಾಗಿದ್ದವು. ತಾಜಮಹಲನ್ನು ನೋಡಲು ಬಾದಶಹನು ಆತುರನಾಗಿದ್ದನು. ಮುಖ್ಯ ಶಿಲ್ಪಿಯನ್ನು ಕರೆಯಿಸಿ "ತಾಜಮಹಲದ ಕೆಲಸ ಮುಗಿದಿರಬಹುದು. ಅಂದ ಮೇಲೆ ನಾನದನ್ನು ನೋಡಬಹುದಲ್ಲವೆ?" ಎಂದು ಕೇಳಿದನು.

" ತಾಜಮಹಲದ ಕೆಲಸವೇನೋ ಮುಗಿದಿದೆ. ಆದರೆ…." ಶಿಲ್ಪಿ ಉತ್ತರಿಸಿದ.

ತಾಜಮಹಲು ತಯಾರಾದ ಸುದ್ದಿ ತಿಳಿದೊಡನೆ ಶಹಾಜಹಾನನು ಆನಂದದಿಂದ ಕುಣಿದಾಡಿದನು. "ನಾಳಿನ ದಿನವೇ ತಾಜಮಹಲನ್ನು ನೋಡಲು ಬರುವೆನು. ಎಲ್ಲ ತಯಾರಿ ಮಾಡಿರಿ" ಎಂದು ಆಜ್ಞೆ ಮಾಡಿದನು.

ಶಿಲ್ಪಿಯ "ಆದರೆ" ಅಲ್ಲೇ ಉಳಿಯಿತು. ತಾಜಮಹಲನ್ನು ನೋಡಲು ಬಂದ ಬಾದಶಹನಿಗೆ ಏನು ತೋರಿಸಬೇಕೆಂಬುದು ತಿಳಿಯದೇ "ಹುಜೂರ, ತಾಜಮಹಲ ತಯಾರಾದ ಸಂಗತಿ ನಿಜ. ಆದರೆ ಅದನ್ನು ನಿರ್ಮಿಸುವಾಗ ಉಪಯೋಗಿಸಿದ ಕಟ್ಟಿಗೆಗಳನ್ನು ತೆಗೆದೊಗೆಯಲು ನೂರಾರು ಆಳುಗಳನ್ನು ಹಚ್ಚಿದರೂ ಒಂದು ತಿಂಗಳಾದರೂ ಸಮಯ ಬೇಕಾಗುವದು" ಎಂದು ಭಯದಿಂದ ಶಿಲ್ಪಜ್ಞನೆಂದನು.

" ಆ ಕಟ್ಟಿಗೆಗಳನ್ನು ತೆಗೆಯದೆ ಅದರ ಸೌಂದರ್ಯವನ್ನು ನೀವು ಸವಿಯಲಾರಿರಿ" ಎಂದು ಆ ಶಿಲ್ಪಿ ಹೇಳಿದೊಡನೆ ಬಾದಶಹನ ಕಣ್ಣುಗಳು ಕ್ರೋಧದಿಂದ ಕೆಂಪಾ

> ಅರಿಯದ ಕಥೆಗಳ ನಿಂತರೂ ಅರಿಯದ ಕಥೆಗಳ ತಡೆಯದಿರುವುದು ಮನುಷ್ಯ ಸ್ವಭಾವ. ಕುತೂಹಲಿಯಾಗಿ ಸಿಗುವಾಗ ಸಿಕ್ಕಷ್ಟನ್ನೇ ತೆಗೆದುಕೊಂಡು ಬರುವುದೂ ಮಾನವನ ಸ್ವಭಾವವೇ. ಮಾನವನ ಈ ಸ್ವಭಾವ ಮಂಥನದಲ್ಲಿ ಉದ್ಭವಿಸಿ ಬಂದಿದೆ ಈ 'ಒಂದು ದಿನದ ಕೌತುಕ'. ಧಾರವಾಡದ ಯುವಕ ಶ್ರೀ 'ಗುರುನಾಥ' ಅದನ್ನು 'ಪಥಿಕ'ಕ್ಕಾಗಿ ಕಳಿಸಿದ್ದು ಶ್ರೀ. ದ. ಕಂ. ಪರಾಂಜಪೆಯವರ ಮರಾಠಿ ಲೇಖನವೊಂದು ತಮ್ಮ ಈ ಲೇಖನಕ್ಕೆ ಮೂಲವೆಂದು ತಿಳಿಸಿದ್ದಾರೆ.

ದವು: ಆವನು ಆ ಶಿಲ್ಪಿಗೆ ದೇಹಾಂತ ಶಿಕ್ಷೆಯನ್ನೇ ವಿಧಿಸಿದನು.

ಕೆಲ ಸಮಯದ ನಂತರ [illegible] ಶಾಂತನಾದ [illegible] ಆ ಶಿಲ್ಪಿಗೆ ದೇಹಾಂತ ಶಿಕ್ಷೆ ವಿಧಿಸಿದ ಮಾತ್ರಕ್ಕೆ ತಾಜಮಹಲಿನ ಸೌಂದರ್ಯ [illegible]

[illegible]

ನಾಗಿ ತಾಜಮಹಲನ್ನು ನೋಡಲು ಹೋದನು. ಮುಳುಗುತ್ತಲಿದ್ದ ಕಮಲಮಿತ್ರನ ಮಂದ ಪ್ರಕಾಶದಲ್ಲಿ ತಾಜ ಮಹಲದ ಸೌಂದರ್ಯವನ್ನು ಸವಿದು ಶಹಾಜಹಾನನು ಸಂತೋಷಪಟ್ಟನು.

ಸಾವಿರಾರು ಜನರಿಂದ ಆಗದ ಕೆಲಸವನ್ನು ಕೇವಲ ೨೪ ತಾಸುಗಳಲ್ಲಿ ಒಂದು ಪೈಸ್ಸೆ ಸಹ ಖರ್ಚಾಗದಂತೆ ಮಾಡಿಸಿದ ಆ [illegible] ಮಾನವರ ಮನೋವಿಕಾರದ ಕಲ್ಪನೆ ಪೂರ್ಣವಿದ್ದಿತೆಂದು ಬೇರೆ ಹೇಳಬೇಕಾಗಿಲ್ಲ.

GOOD EYES SAVE LIVES
ಒಳ್ಳೇ ಕಣ್ಣುಗಳಿಂದ ಪ್ರಾಣರಕ್ಷಣೆ



[illegible]

ಹುಬಳಿ ಅಪ್ಟೀಶಿಯನ್ಸ

[illegible] ಹುಬ್ಬಳ್ಳಿ

ಒಳಗಣ್ಣಿಗೆ ಬೆಳಕು

ಹೊಸವೆಲ್ಲವನ್ನು ಹಳಿಯುವ
ಜನ ಬಹಳ; ಆದರೆ ನ್ಯಾಯಕ್ಕಾಗಿ
ಆಗ್ರಹ ತೊಟ್ಟಾಗ ಲಭಿಸಬಲ್ಲದು...

ಅಮರ ಕೀರ್ತಿ

★ ★ ★

— ಎಲ್ಬರ್ಟ್ ಹಬಾರ್ಡ್

ಅನು : ಶ್ರೀ. ಹರಿಭಟ್ಟ ಆದ್ಯಪಾಡಿ

ಒಳ್ಳೆಯದಾದ ಪ್ರತಿಯೊಂದೂ ಅದರ ಕಾಲದಲ್ಲಿ ಆ ತಲೆಮಾರಿನವರಿಂದ ಖಂಡಿಸಲ್ಪಟ್ಟಿದೆ. ನವೀನವಾದ ಪ್ರತಿಯೊಂದೂ ತನ್ನ ಬದುಕಿಗಾಗಿ ಹೋರಾಡಲೇಬೇಕಾಗುತ್ತದೆ.

ತಪ್ಪು ಒಮ್ಮೆ ಚಲಿಸತೊಡಗಿತೆಂದರೆ, ಅದಕ್ಕಿಂತ ಪ್ರಬಲವಾದ ಇನ್ನೊಂದು ಶಕ್ತಿಯು ಅದನ್ನು ತಡೆದು ನಿಲ್ಲಿಸುವವರೆಗೂ, ನಿರಂತರವಾಗಿ ನಡೆಯುತ್ತದೆ.

ಆಚಾರ—ವಿಚಾರಗಳ ಗತಕಾಲದ ಪರಂಪರೆಗಳು, ಯಾರಾದರೊಬ್ಬರು ನವೀನವಾದ ಮಾರ್ಗವೊಂದನ್ನು ಶೋಧಿಸಿ ಅದಕ್ಕಾಗಿಯೇ ಬದುಕಿ ಪ್ರಾಣಾರ್ಪಣೆಮಾಡುವವರೆಗೂ ಉಳಿದೇ ಉಳಿಯುತ್ತವೆ.

ಜನರು ಪ್ರಗತಿಯನ್ನು ವಿರೋಧಿಸುವದರ ಕಾರಣವು ಅವರು ಪ್ರಗತಿಯನ್ನು ದ್ವೇಷ ಮಾಡುತ್ತಿರುವುದಾಗಿರದೆ, ಸ್ಥಾಯಿಯಾದುದನ್ನು ಅವರು ಪ್ರೀತಿಸುವುದಾಗಿದೆ.

ಜಾನ್ ರಸ್ಕಿನ್‌ರಂಥ ದೊಡ್ಡ ಮನುಷ್ಯರೂ ಕೂಡ ರೈಲ್ವೆಗಳಿಂದ ಇಂಗ್ಲಂಡವು ಹಾಳಾಗುವದೆಂದೂ, ಕುದುರೆ ಗಾಡಿಗಳು ಕೆಲಸವಿಲ್ಲದವಾಗಿ ಕುದುರೆಗಳಿಗೆ ಬೇಡಿಕೆಯೇ ಇಲ್ಲವಾಗಿ ಒಕ್ಕಲಿಗರಿಗೆ ಪೆಟ್ಟು ಬೀಳುವದೆಂದೂ ಹೇಳಿದ್ದರು.

ಥಾಮಸ್ ಜೆಫರ್ಸನ್ನರು ತಮ್ಮ ಆತ್ಮಚರಿತ್ರೆಯಲ್ಲಿ ತಮ್ಮ ನೆರೆಯವನೊಬ್ಬನ ಬಗ್ಗೆ ಹೇಳಿದ್ದಾರೆ: "ಈ ನೆರೆಯಾತ ಸರಕಾರೀ ಶಾಲೆಗಳೇ ಅಪಚಾರವೆಂಬ ವಾದದವನು; ಎಲ್ಲರೂ ಓದಲಿಕ್ಕೆ ಬರೆಯಲಿಕ್ಕೆ ಕಲಿತರೆ ಯಾರೂ ಕೆಲಸಮಾಡುವದಿಲ್ಲ" ಎಂದು ಆತನ ನಂಬಿಕೆ.

"ಮುದ್ರಣ ಯಂತ್ರಗಳೆಂದರೆ ಸುಳ್ಳಿನ ಕಾರಖಾನೆಗಳು; ಜನರನ್ನು ಮೋಸಗೊಳಿಸುವದೇ ಅವುಗಳ ಕೆಲಸ. ಅದಕ್ಕಾಗಿ ದೇವರೇ, ನಮ್ಮ ವರ್ಜೀನಿಯಾ ರಾಜ್ಯದಲ್ಲಿ ಒಂದು ಮುದ್ರಣ ಯಂತ್ರವಿಲ್ಲ

ಪಶ್ಚಿಮ ರಾಷ್ಟ್ರಗಳಲ್ಲಿ ಇತ್ತೀಚೆಗೆ ಯಶಸ್ಸಾಸ್ತ್ರವೆಂಬ ಹೊಸ ಶಾಸ್ತ್ರವೇ ಪ್ರಚಲಿತವಾಗಿದ್ದು ಇದರಿಂದ ಬಹುಜನರು ಜೀವನದಲ್ಲಿ ಏನಾದರೂ ಸಾಧಿಸಲು ಸಹಾಯವಾಗುತ್ತಿದೆ. ಪ್ರಸ್ತುತ ಲೇಖನದಲ್ಲಿ ಬ್ರಿಟನ್ನಿನ ವಿಖ್ಯಾತ ಮನಃಶಾಸ್ತ್ರ ತಜ್ಞರಾದ ಡಾ॥ ಎಲ್ಬರ್ಟ್ ಹಬಾರ್ಡರು ಶಾಶ್ವತ ಕೀರ್ತಿಯನ್ನು ಪಡೆಯುವುದರ ದುರ್ಲಭ ಗುಟ್ಟನ್ನು ಹೊರಗೆಡಹಿದ್ದಾರೆ. ಶ್ರೀ ಹರಿಭಟ್ಟರು ಸೈಕಾಲಜಿ ಪತ್ರಿಕೆಯಿಂದ ಈ ಲೇಖನವನ್ನೆತ್ತಿ "ಪಥಿಕ" ವಾಚಕರಿಗಾಗಿ ಕನ್ನಡದಲ್ಲಿ ಬರೆದಿದ್ದಾರೆ.

ದಂತೆ ಕೃಪೆಗೈದ ನಿನ್ನ ದಯೆ ಬಹಳ ದೊಡ್ಡದು'' ಎಂದು ಪಾದ್ರಿ ಬರ್ಕ್ಲೆ ದೇವರನ್ನು ಸ್ತುತಿಸುತ್ತಿದ್ದ.

ಸಂಗೀತ ಪ್ರಚಂಡ ಮೋರ್ಝಾರ್ಟನ ಕಾಲಕ್ಕೆ ಸಂಗೀತಗಾರರನ್ನು ಕುದುರೆಯ ಕಾಸಾರರು, ಅಡಿಗೆಯವರು, ಕಸ-ಮುಸುರೆಯವರು ಮತ್ತು ವಿದೂಷಕರ ಮಾಲಿಕೆಯಲ್ಲಿ ಗಣಿಸಲಾಗುತ್ತಿತ್ತು.

ಆಗ ಸಂಗೀತಗಾರರು [illegible] ಊಟ ಮಾಡುತ್ತ [illegible] ಹಾಗೂ ಅವರ ಅತಿಥಿಗಳ ಮನರಂಜನೆಗಾಗಿ ಮಾತ್ರ [illegible] ಹಾಡುತ್ತಿದ್ದರು.

[illegible]

[illegible]

ಎಂದು ಆಮಂತ್ರಣ ವಿತ್ತಂತೆ" ಎಂದು ಹೇಳದವರೂ ಅನೇಕ.

ಕೆಲವೇ ಕೆಲವು ದಶಮಾನಗಳ ಹಿಂದೆ ಜಾಹಿರಾತು ಕೊಡುವವರನ್ನು ಜನ ಸಂಶಯದಿಂದ ನೋಡುತ್ತಿದ್ದರು. ಈಗಲೂ ಕೂಡ ಕೆಲ ವೃತ್ತಿಗಳ ಜನರು ಜಾಹಿರಾತು ಮಾಡುವುದನ್ನು ನಿಷೇಧಿಸಿದ್ದಾರೆ.

ಇತಿಹಾಸದಲ್ಲಿ ಹಣಿಕಿಕ್ಕಿ ನೋಡಿದರೆ ಹೊಸದಾದ ಎಲ್ಲವೂ ಒಮ್ಮೆಲ್ಲೊಮ್ಮೆ ವಿರೋಧಿಸಲ್ಪಡುವುದು, ಕಡೆಗೇನು ಖಂಡಿಸಲ್ಪಟ್ಟಿದ್ದು, ನಮಗೆ ಕಾಣದಿರದು.

[illegible] ಇಷ್ಟೇ ಎಂದು ತೋರುತ್ತದೆ. ನಿಮಗೆ ಅದು ಸರಿಯೆಂದೆನಿಸಿದರೆ ಅವರು ಏನು ಹೇಳುತ್ತಾರೋ ಕೇಳದೆಯೇ ಅದಕ್ಕೆ ಅಂಟಿಕೊಳ್ಳಿರಿ.

[illegible] ನಿಮಗೆ ನ್ಯಾಯವೆಂದು ಕಂಡಿದ್ದು, ಬಹುಜನರಿಗೆ ಬೇಕಾದದ್ದನ್ನು ಎತ್ತಿಕೊಳ್ಳಿರಿ; ನಂತರ ಅದಕ್ಕಾಗಿ ದುಡಿಯಿರಿ, ಅದಕ್ಕಾಗಿ ಬದುಕಿರಿ, ಅದಕ್ಕಾಗಿಯೇ ಮರಣವನ್ನು ಅಪ್ಪಿರಿ.

[illegible]

[illegible] ಹೋಟೆಲ್

[illegible]

ಉಡುಪಿ ಹೋಟೆಲ್

[illegible]

ಭಾರತ ರಾಷ್ಟ್ರಧ್ವಜದ ನಿರ್ಮಾಪಕಿ ....

ಶ್ರೀಮತಿ ಕಾಮಾ

— ವಿಜಯಲಕ್ಷ್ಮಿ ನೆಸ್ವಿ

ಭಾರತದ ಸ್ವಾತಂತ್ರ್ಯ ಸಮರದಲ್ಲಿ ಕ್ರಾಂತಿಕಾರಿಗಳ ಕತೆಯನ್ನು ಅರಿತವರೇ ಕಡಿಮೆ. ಮಹಾತ್ಮಾ ಗಾಂಧೀಜೀಯವರು ಅಹಿಂಸೆಯನ್ನೇ ಆ ಸಮರದ ಅಡಿಗಲ್ಲಾಗಿ ಮಾಡಿದಂದಿನಿಂದ ಕ್ರಾಂತಿಕಾರಿಗಳ ವೀರಕಥೆಗಳೆಲ್ಲ ಅರಿತವರ ನೆನಪಿನಿಂದಲೂ ಮರೆತು ಹೋಗಿದ್ದರೆ ಆಶ್ಚರ್ಯವಿಲ್ಲ. ವೀರ ಸಾವರಕರ, ಲಾಲಾ ಹರದಯಾಲ, ಶ್ಯಾಮಜಿ ಕೃಷ್ಣವರ್ಮಾ, ವೀರೇಂಪ್ರನಾಥಚಟ್ಟೋಪಾಧ್ಯಾಯ.ಎಂ ಪಿ. ಟಿ. ಆಚಾರ್ಯ, ಚಂಪಕರಮಣ ಪಿಳ್ಳೆ, ಎಂ. ಎನ್. ರಾಯ, ರಾಸಬಿಹಾರಿಬೋಸ, ಸುಭಾಸಚಂದ್ರ ಬೋಸ, ಡಾ ಎಸ್. ಎಸ್. ಹರ್ಡಿಕರ ಈ ಮೊದಲಾದ ಕ್ರಾಂತಿಕಾರಿಗಳ ರೋಮಾಂಚಕಾರಕ ಕತೆಗಳನ್ನೆಲ್ಲ ಇತಿಹಾಸವೂ ಕೂಡ ವಿಸ್ಮೃತಿಯಿಂದ ತೆರೆದು ತೋರದೆ ಹೋಗಬಹುದು. ಆದರೆ ಈ ಕ್ರಾಂತಿಕಾರಿಗಳ ವೀರಗಾಥವನ್ನು ಹೇಳುವವರಿದ್ದರೆ ಕೇಳುವವರ ಮೈಯ್ಯಲ್ಲಿ ಮಿಂಚಿನ ಹೊಳೆ ತುಳುಕಾಡದಿರದು. 'ಕಲಿ ಕೆಚ್ಚಾಗುವನು, ಕವಿ ಹುಚ್ಚಾಗುವನು' ಎಂಬ ಕವಿ ಕಲ್ಪನೆಯ ವಾಕ್ಯ ಸವಿ ಸತ್ಯವಾಗಿ ಪರಿಣಮಿಸದಿರದು.

ದಬ್ಬಾಳಿಕೆಯ ಪ್ರತಿಭಟನೆಯೇ ದೈವದ ಕಡೆಗಿರುವ ತಮ್ಮ ವಿಧೇಯತೆಯೆಂದು ಹೊರಟ ಶ್ರೀಮತಿ ಭಿಕಾಜೀ ಕಾಮಾ ಅವರು ಈ ಕ್ರಾಂತಿವೀರರ ಹಿರಿಯ ಸೋದರಿ. ಜವಾಹರಲಾಲ ನೆಹರೂರು ಇನ್ನೂ ಕಾಲೇಜ ಶಿಕ್ಷಣ ಮುಗಿಸುತ್ತಿದ್ದರು. ಗಾಂಧೀಜೀಯವರು ಆಗ ವಕಾಲತ್ತು ಪ್ರಾರಂಭಿಸಿದ್ದರು. ಆದರೆ ಆಗಲೇ ಭಾರತೀಯ ಸ್ವಾತಂತ್ರ್ಯ ಸಮರದ ಧೀರ ಸಿಂಹಿಣಿ ಶ್ರೀಮತಿ ಕಾಮಾರವರ ಹೆಸರು ವಿಶ್ವವಿಖ್ಯಾತವಾಗಿತ್ತು ಆಸ್ತಿ ಬದುಕುಗಳನ್ನು ತೊರೆದು, ಕಷ್ಟನಷ್ಟಗಳನ್ನು ಸಹಿಸಿ, ವನವಾಸ-ಉಪವಾಸ-ಅಜ್ಞಾತವಾಸಗಳನ್ನು ಅನುಭವಿಸಿ, ಸೆರೆಮನೆಯ ಕರಕನ್ನವನ್ನು ಉಂಡು ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಸಿಂಹಹೃದಯಿಗಳನ್ನು ಬಡಿದೆಬ್ಬಿಸಿ ಕ್ರಾಂತಿಕಾರರನ್ನಾಗಿ ಶ್ರೀಮತಿ ಭಿಕಾಜೀ ಕಾಮಾ ಅವರಲ್ಲೆ ಮಾಡಿದರು.

ಘನತೆ ಗೌರವಗಳ ಹೆಸರು ಹೊತ್ತ ಮುಂಬೈ ಪಾರಸೀ ಮನೆತನವೊಂದರಲ್ಲಿ ಆಗರ್ಭ ಶ್ರೀಮಂತೆಯಾಗಿ ಶ್ರೀಮತಿ ಭಿಕಾಜೀಯವರು ೧೮೬೧ ನೇ ಸಪ್ಟೆಂಬರ ೨೪ ರಂದು ಜನಿಸಿದರು. ತಂದೆ ಸೇಟ ಸೋರಾಬಜೀ ಪಟೇಲರು ಮಗಳನ್ನು ಮಮತೆಯ ಮುಗುಳಾಗಿ ಬೆಳೆಸಿ ಅರಳಿಸಿದರು. ಆಗಿನ ಕಾಲದ ಮೇಲ್ಪಟ್ಟವರ

ದೆಂಬ ಶಿಕ್ಷಣವಿತ್ತು, ಶ್ರೀಮಂತಿಕೆಯಿತ್ತು; ಆದರೆ ಶ್ರೀಮತಿ ಭಿಕಾಜೀಯವರನ್ನು ಆವರಿಸಿದ ಅವ್ಯಕ್ತ ಚೈತನ್ಯ ಅವರನ್ನು ಬಡಬಗ್ಗರ ಸೇವೆಗಾಗಿ, ಬ್ರಿಟಿಷ್ ಆಡಳಿತದ ವಿರುದ್ಧ ಬಡಿದಾಡುವುದಕ್ಕಾಗಿ ಕರೆದೊಯ್ಯುತ್ತಿದ್ದು, ಆ ಶಿಕ್ಷಣ ಸಂದರ್ಭಗಳು [illegible] ಶ್ರೀಮತಿ ಭಿಕಾಜಿಯವರ [illegible] ಇದೊಂದು ಪ್ರಕರಣ.

ಶ್ರೀಮತಿ ಕಾಮಾರವರ [illegible]

[illegible]

ಪ್ರದರ್ಶಿಸದೆ ಇದ್ದಿರಲಾರದು) ವಿಖ್ಯಾತ ರಾಜಕಾರಣಿ [illegible]ಂಗ್‌ರ ಅಧ್ಯಕ್ಷತೆಯಲ್ಲಿ ಸೇರಿದ ೧೦೦೦ ಕ್ಕೂ ಮೇಲ್ಪಟ್ಟು ಪ್ರತಿನಿಧಿಗಳೆದುರು (ಅವರಲ್ಲಿ ಇಂಗ್ಲೀಷರೇ ಹೆಚ್ಚಾಗಿದ್ದರು) ಅವರು ಭಾರತದ ಸಂಪೂರ್ಣ ಸ್ವಾತಂತ್ರ್ಯ ಗೊತ್ತುವಳಿ ಮಂಡಿಸಿದರು ಅಂದಿನ ಇಂಗ್ಲೆಂಡಿನ ಹೆಸರಾಂತ ರಾಜಕಾರಣಿ ಶ್ರೀ ಹೈಂಡಮನ್‌ರು ಅದಕ್ಕೆ ಬೆಂಬಲ ಕೊಟ್ಟಿದ್ದು ಗಮನಾರ್ಹ!

ಮುಂದೆ "ವಂದೇ ಮಾತರಂ" ಎಂಬ ಪತ್ರಿಕೆಯನ್ನು ಪ್ರಾರಂಭಿಸಿ ಭಾರತದಿಂದ ಬ್ರಿಟಿಷರು ತೊಲಗಬೇಕೆಂದು ಉಗ್ರವಾಗಿ ಆಂದೋಲನ ನಡೆಸಿದರು. ೧೯೧೪ ರಲ್ಲಿ ಪ್ರಥಮ ಜಾಗತಿಕ ಮಹಾಯುದ್ಧ ಆರಂಭವಾದಾಗ ಆವೇಶದ ಬರಸಡಿಲ [illegible]ಗಳನ್ನು ಬರೆದು ಭಾರತೀಯ ಸೈನಿಕರು ಶಸ್ತ್ರ ಕೆಳಗಿಡಬೇಕೆಂದರು. ಭಾರತಕ್ಕೂ ಮಹಾಯುದ್ಧಕ್ಕೂ ಸಂಬಂಧವಿಲ್ಲೆಂದು ಸಾರಿದರು. ಸೈನಿಕರ ಮೇಲೆ ಅದರ ಪ್ರಭಾವವಾಯಿತು. ಪರಿಣಾಮವಾಗಿ ಶ್ರೀಮತಿ ಕಾಮಾರ ಬಂಧನವಾಯಿತು. ಅವರನ್ನು ಬ್ರಿಟಿಷರ ವಶಕ್ಕೊಪ್ಪಿಸಲು ಫ್ರೆಂಚರು ಒಪ್ಪದ್ದರಿಂದ ಬದುಕಿ ಉಳಿದರು. ಯುದ್ಧ ಮುಗಿಯುವುದರೊಳಗೆ ಶ್ರೀಮತಿ ಕಾಮಾರವರ ಬಿಡುಗಡೆಯಾಯಿತು.

ಶ್ರೀಮತಿ ಭಿಕಾಜಿ ಕಾಮಾರ ಪ್ರಭಾವ [illegible] ಕ್ರಾಂತಿ ಸಾಧಿಸಿದ ರಶಿಯಾದ [illegible] ಬಹಳವಾಗಿತ್ತೆನ್ನಲು ಸ್ವತಃ ಲೆನಿ[illegible] ಅವರನ್ನು ಅನೇಕಸಲ ರಶಿಯಾಕ್ಕೆ ಆಮಂತ್ರಿಸಿದ್ದು ಉದಾಹರಣೆ. ಇವರೇನೋ ಹೋಗಲಿಲ್ಲ. ಈ ಕ್ರಾಂತಿಕಾರಿಗಳ ಸಿಂಹಿಣಿಯು ಭಾರತಕ್ಕೆ ಮರಳಲು ಬ್ರಿಟಿಷರು ಬಿಡಲಿಲ್ಲ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕುದಿಕುದಿದು ನವೆದ ಮೇಲೆ ೭೫ನೆಯ ವಯಸ್ಸಿನಲ್ಲಿ ಭಾರತಕ್ಕೆ ಬಂದರು. ಮುಂದೆ ಒಂದು ವರ್ಷದೊಳಗೆ ಬೇನೆಯಿಂದ ಕೊರಗಿ ಸೊರಗಿ ಮುಂಬೈ ಆಸ್ಪತ್ರೆಯಲ್ಲಿ ಕೊನೆಯುಸಿರು ಬಿಟ್ಟರು.

ಶ್ರೀಮತಿ ಭಿಕಾಜೀ ಕಾಮಾರವರು ಭಾರತೀಯ ಕ್ರಾಂತಿವೀರರ ಬಾಂದಳದಲ್ಲಿ ಮಿಂಚಿದ ಕೋಲ್ಮಿಂಚು; ಬ್ರಿಟಿಷ ಆಳರಸರ ಮೇಲೆರಗಿದ ಬರಸಿಡಿಲು; ಮತ್ತು ಭಾರತೀಯ ಸ್ವಾತಂತ್ರ್ಯದ ನಸುಕಿನಲ್ಲಿ ಸಾರಿದ ಉಷಾಘೋಷ.

●

ವ್ಯಾಪಾರಸ್ಥರಿಗೆ ಸುಸಂಧಿ

[illegible] ಬೆಳಗಾಂವ, [illegible] ಮುಂಬೈ, [illegible] ಬಾಗಲಕೋಟೆ, [illegible]

ಸಾಯಿಬಾಬಾ
ಟ್ರಾನ್ಸ್‌ಪೋರ್ಟ ಏಜನ್ಸಿ
[illegible] ಹುಬ್ಬಳ್ಳಿ
[illegible]

ಅರವತ್ತು ತುಂಬಿದಾಗ

ಅರವತ್ತು ವರ್ಷಗಳು
ತುಂಬಿದವು ಈ ಕವಿಗೆ
ಅರವಿಂದ ಶಿಷ್ಯರಲಿ ಮುಂದಾರಗೆ॥
ಮಲಗಿದ್ದ ಕನ್ನಡದ
ಜನಮನವ ಜಾಗರಿಸಿ
‹ಕುಣಿಯೋಣಬಾ›ಎಂದು
ಹಾಡಿದವಗೆ

ಜಾನಪದ ಧಾಟಿಯಲಿ
ಸಾಹಿತ್ಯ ಮೋಡಿಯಲಿ
ಅನುಭಾವದಾ ತತ್ವ ಸಾರಿದವಗೆ
‹ನಾದಲೀಲೆಯ› ಬರೆದು
ನಾದಲೋಕಕೆ ಒಯ್ದು
ನಾದಮೂಲದ ಅರಿವು
ಮಾಡಿದವಗೆ

‹‹ ಅಂಬಿಕಾತನಯ ದತ್ತ ››

ಕಹಿಗೀತದಹಾದಿ
ಜಾಣನಾ ಕತೆಯನ್ನು
ಕಾವ್ಯನದಿಯೊಂದಿಗೆ ಹರಿಸಿದವಗೆ
ಜೀವಿಸಲಿ ಬಹುಕಾಲ
ಬೇಂದ್ರೆ ಕವಿವರ್ಯರು
ಕನ್ನಡ ಸರಸತಿಯ ಪ್ರಿಯ
ಅನುಗರು

ನಾವೆಲ್ಲ ಒಟ್ಟಾಗಿ
ದೇವರಲಿ ಬೇಡುವಾ
ದೀರ್ಘಾಯು ಈ ಕವಿಯು
ಆಗಲೆಂದು

— ಬಿ. ಟಿ. ಮೊಖಾಶಿ,
ಹುಬ್ಬಳ್ಳಿ,

ನಾವೆಲ್ಲ ಪ್ರಕೃತಿ ದೇವಿಯ ಪ್ರಜೆಗಳು

(ಒಂದು ವಿಚಾರ ಮಂಥನ)

ನಾವೆಲ್ಲ ಪ್ರಕೃತಿ ದೇವಿಯ ರಾಜ್ಯದ ಪ್ರಜೆಗಳು.

[illegible]

ರ್ಯಗಳು, ಕೆಲವು ಚಿರ ಸೌಂದರ್ಯಗಳು, ಕೆಲವು ಹೊರಗಿನವು, ಕೆಲವು ಒಳಗಿನವು; ಕೆಲವು ಅಲ್ಪದವು; ಕೆಲವು ಮಹತ್ತಾದವು ಕೆಲವು ಮುಗಿಲ ಮೇಲಕ್ಕೇರಿಸುವವು, ಕೆಲವು ಕಡಲ ತಳಕ್ಕಿಳಿಸುವವು.

ಇವೆಲ್ಲವೂ ಜೀವಸೃಷ್ಟಿಯಿಂದ ಸತ್ಯಗಳೇ. [illegible] ತೆಗೆದು ಕೊಳ್ಳುವುದು ಭ್ರಾಂತಿ; ಆದರೆ ಅವನ್ನು [illegible] ಹಾಕಿಕೊಂಡ ಮೇಲೆ [illegible], ನೋಡಿದವರು [illegible].

[illegible] ಕಂಡ ಸಿರಿಯೂ [illegible] ಆದರೆ ಅವನು ಗರ್ವ [illegible] ಒಡೆದ ಮಡಕೆ [illegible] ಒದಗಿದ ಉಪಮಾ [illegible] ಬಾಳಿಗೆ [illegible] ಈ [illegible] ಅರ್ಥದಲ್ಲಿ ಪ್ರಕೃತಿಯ [illegible] ಕಾರ್ಯಗಳು [illegible].

●

ಶುಚಿ ರುಚಿಯಾದ
ತಿಂಡಿ ತಿನಿಸುಗಳಿಗಾಗಿ
ಇವಕ್ಕೆ ಸಂದರ್ಶಿಸಿರಿ
ಜನತಾ
ಹೋಟೆಲ್
[illegible]
[illegible]

ನಿಸರ್ಗ

ನಿಸರ್ಗವೆಂದರೆ ಜೀವಂತವಾದ, ಕಣ್ಣಿಗೆ ಕಾಣಿಸುವ ದೇವರ ಉಡುಪು!

ನಿಸರ್ಗದಲ್ಲಿ ಕ್ಷುಲ್ಲಕವಾದುದು ಏನೂ ಇಲ್ಲ

ನಿಸರ್ಗವು ಸತ್ಯವಾಗಿದೆ, ಗಂಭೀರವಾಗಿದೆ, ಉಗ್ರವಾಗಿದೆ; ಅದು ಸದಾ ಸತ್ಯದ ಪಥದಲ್ಲೇ ಇರುತ್ತದೆ. ತಪ್ಪು--ತಡೆಗಳು ಮಾತ್ರ ನಮ್ಮ ಪಾಲಿಗೆ ಬರುತ್ತವೆ.

ನಿಸರ್ಗವು ಅಸಾಮರ್ಥ್ಯವನ್ನು ಪ್ರತಿಭಟಿಸುತ್ತದೆ; ಆದರೆ ಸಾಮರ್ಥ್ಯಕ್ಕೆ, ಸತ್ಯಕ್ಕೆ ಹಾಗೂ ಪಾವಿತ್ರ್ಯಕ್ಕೆ ತನ್ನ ಅಂತರಂಗವನ್ನೇ ಬಿಚ್ಚಿ ತೋರಿಸುತ್ತದೆ.

ಪ್ರಗತಿ ಮತ್ತು ಅಭಿವೃದ್ಧಿಯ ಪಥದಲ್ಲಿ ನಿಸರ್ಗವು ವಿಲಂಬವೆಂಬುದನ್ನು ಅರಿಯದು; ಎಲ್ಲ ವಿಧದ ನಿಷ್ಕ್ರಿಯೆಯ ಮೇಲೂ ಅದರ ಶಾಪವಿದೆ.

— ಗಯಟೆ

ಕಾಳಿದಾಸನಿಂದ ತರುಣಿಯ ವರ್ಣನೆ

ತರುಣೀ ವರ್ಣನೆಯುಂದಲೇ ಕಾವ್ಯಗಳು ಜನಪ್ರಿಯವಾಗುತ್ತಿದ್ದುವೆಂಬುದಕ್ಕೆ ಕಾಳಿದಾಸನೇ ದೃಷ್ಟಾಂತವಾಗಿರುವನು. ತನ್ನ ವಾಕ್ಯದ ಶಕ್ತಿಯೆಲ್ಲವನ್ನು ಉಪಯೋಗಿಸಿ ಅವನು ಕೆಲವೇ ಮಾತುಗಳಲ್ಲಿ ಮುಂದಿನ ತರುಣಿಯ ಶಿಲ್ಪವನ್ನು ಕಡೆಯುವನು.

[illegible]

★ ಎಲ್ಲರಿಗೂ ಸಮಸ್ಯೆಯೊಡ್ಡಿದ,
ಯಾರೂ ಮರೆಯಬಾರದಾಗಿರುವ,
ಆದರೂ ಹಾಲಿನಂಥ ಗುಣವುಳ್ಳ...

ಮಕ್ಕಳ ಕೆಲವು ದುಶ್ಚಟಗಳು

— ಜೆ. ಮಲ್ಹಾರಿಭಟ್ಟ

ಪ್ರಪಂಚದಲ್ಲಿ ಮಸ್ಸಾಧ್ಯವಾದ ಕೆಲಸಗಳಲ್ಲಿ ಮಕ್ಕಳನ್ನು ದಾರಿಗೆ ತರುವುದೂ ಒಂದು. ಆದರೆ ಕೆಲವರು ಕೋಪದಿಂದಲೂ, ಹೊಡೆತಗಳಿಂದಲೂ. ಮುದ್ದಿಸುವುದರಿಂದಲೂ ಮಕ್ಕಳನ್ನು ದಾರಿಗೆ ತರುವೆವು ಎಂದು ಹೇಳುವುದಾವರೂ ಶಾಶ್ವತವಾಗಿ ಉತ್ತಮದಾರಿಗೆ ಎಳೆಯಲು ಅಂತಹ ಉಪಾಯಗಳು ಅನಾವಶ್ಯಕವಾಗಿವೆ.

ಮಕ್ಕಳ ಗುಣವು ಹಾಲು ಇದ್ದ ಹಾಗೆ. ಅದಕ್ಕೆ ಉಪ್ಪು ಸೇರಿಸಿವರೆ ಉಪ್ಪಾಗಿಯೂ ಸಕ್ಕರೆ ಸೇರಿಸಿದರೆ ಸಿಹಿಯಾಗಿಯೂ, ಹಾಗೆಯೇ ಬಿಟ್ಟರೆ ಕೆಟ್ಟು ಹೋಗುವಂತೆಯೂ ಆಗುತ್ತದೆ. ಆದುದರಿಂದ ತಮ್ಮ ಸೊತ್ತಾದ ಮಕ್ಕಳನ್ನು ದಾರಿಗೆ ತರಬೇಕಾದರೆ ಮೊದಲು ತಮ್ಮ ದುರ್ಚಟಗಳನ್ನು ತ್ಯಜಿಸಬೇಕಾಗುತ್ತದೆ. ಒಬ್ಬ ತಂದೆಯು ಒಂದು ಸಿಗರೇಟನ್ನು ಸೇದುವನು. ಅದನ್ನು ಕಂಡು ಮಗನೂ ತಾನೂ ಅದರಂತೆ ಮಾಡಿದರೆ ತಪ್ಪೇನು ? ಹಾಗೆ ತಪ್ಪಾದುದಲ್ಲಿ ನಮ್ಮ ತಂದೆಯವರುಸೇದುತ್ತಾರಲ್ಲ, ಆದಕಾರಣ ಸೇದುವೆನೆಂದು ಮರೆಯಲ್ಲಿ ನಿಂತು ದುರಭ್ಯಾಸವನ್ನು ಕಲಿಯುವನು.

ಇನ್ನು ಮನೆಯಲ್ಲಿ ಹಿರಿಯರಾದವರು ಅವಾಚ್ಯ ಮಾತುಗಳನ್ನು ಆಡುವರು. ಅದನ್ನು ಕೇಳಿದ ಮಕ್ಕಳುಗಳಿಗೆ ಬೇರೆ ಮಾತುಗಳನ್ನು ಕಲಿಯುವ ಅವಶ್ಯವಿಲ್ಲ. ಎಲ್ಲರೊಡನೆಯೂ ದುರ್ನುಡಿಗಳನ್ನಾಡುವರು. ಇನ್ನೂ ಕೆಲವರು ಅಕ್ಕ ಪಕ್ಕದ ಮನೆಗಳಲ್ಲಿ ಕಡವಾಗಿ ಕೆಲವು ಸಾಮಾನುಗಳನ್ನು ತೆಗೆದುಕೊಳ್ಳುವರು, ಕೊನೆಗೆ ಹಿಂದಿರುಗಿಸುವುದೇ ಇಲ್ಲ. ಒಂದು ವೇಳೆ ಕೊಟ್ಟಿದ್ದರೂ ಕೇಳಿದಲ್ಲಿ ಹಿಂತಿರುಗಿಸಿದ್ದೇವೆ ಎಂದು ಹುಸಿಯಾಡುವರು. ಇಂತಹ ಘಟನೆಯನ್ನೀಕ್ಷಿಸಿದ ಮಕ್ಕಳು ಅದೇ ಪಥದಲ್ಲಿ ನಡೆಯುವರು. ಮಹಾವಾದಿಗಳಾಗುವರು. ಮುಂದೆ ತಾಯಿ ತಂದೆಗಳು ಅವರಿಗೆ ಬೇಡವಾಗುವರು.

ಇನ್ನು ಕೆಲವು ಕುಟುಂಬಗಳಲ್ಲಿ ಮಕ್ಕಳನ್ನು ಅತಿ ಮುದ್ದಿಸುವರು. ಅವರು

ಹೊಸಪೇಟೆಯ ತರುಣ ಲೇಖಕರಾದ ಶ್ರೀ ಜೆ. ಮಲ್ಹಾರಿಭಟ್ಟರು "ಬಾಲಕ್ಕ ಶಿರೋಮಣಿ''ಗಳು. ವಿಚಾರಶೀಲ ಓದುಗರಿರುವಂತೆ ವಿಚಾರಶೀಲ ಉದಯೋನ್ಮುಖ ಲೇಖಕರೂ ಹೌದು. ಪ್ರಸ್ತುತ ಲೇಖನದಲ್ಲಿ ಅವರು ಮಕ್ಕಳ ಮನಸ್ಸನ್ನು ಒಳಹೊಕ್ಕು ನೋಡಿದ್ದಾರೆ.

ಕೇಳಿದ್ದನ್ನೆಲ್ಲಾ ಕೊಡಿಸುವರು. ಒಂದೊಂದು ವೇಳೆ ಆ ಮಕ್ಕಳು ಬಹಳ ಹಟಮಾಡಿದರೆ ದಂ, ದಂ ಗುದ್ದಿ ಹೊಡೆಯುವರು. ಮೊದಲಿನಿಂದಲೂ ಪ್ರೀತಿಯಿಂದ ಸಾಕಲ್ಪಟ್ಟ ಮಕ್ಕಳಿಗೆ ಹೊಡೆತ ಕೊಂಡ ಮೇಲೆ ಬುದ್ಧಿಯು [illegible] ತಂದೆಯಾಗುತ್ತದೆ. [illegible] ಎತ್ತಲೋ [illegible] ತಮ್ಮ [illegible]

[illegible]

[illegible]

[illegible] ತೊಂದರೆಗಳೂ, ತಾರಾತಮ್ಯಗಳೂ ಬಂದರೆ ಮಕ್ಕಳು ಕಲಿಯುವ ಬಗೆಯಾದರೂ ಏನು?

ಎಲ್ಲಿ ಉತ್ತಮ ಗಿಡಗಳು ಬೆಳೆಯುವುದಕ್ಕೆ ಆಸ್ಪದವಿಲ್ಲವೋ ಅಲ್ಲಿ ಹುಲ್ಲು ತಾನಾಗಿಯೇ ಬೆಳೆಯುತ್ತದೆ. ಅದರಂತೆಯೇ ಮನೆಯಲ್ಲಿ ಉತ್ತಮ ಚಾರಿತ್ರ್ಯ ಮತ್ತು ನೈತಿಕ, ಪೌರಾಣಿಕ, ಧಾರ್ಮಿಕ ನಡತೆಗಳು ಇಲ್ಲದಿದ್ದರೆ, ಸಮಾಜದಲ್ಲಿ ಬಾಲಕರು ದುಷ್ಕೃತಿಗೆ ಇಳಿಯುವರು.

ತಾಯಿ ತಂದೆಗಳು ಮಕ್ಕಳಿಗೆ ಸ್ವಾತಂತ್ರ್ಯವನ್ನು ಕೊಡಬೇಕು. ಹಾಗಲ್ಲದೆ ತಮ್ಮ ಮಕ್ಕಳು ತಮ್ಮ ಮುಂದಿರಲೆಂದು [illegible] ಗಂಡುಗಳನ್ನು ಮನೆ [illegible] ಅವರಿಗೆ ಹೊರಗಿನಾಸ್ಪದವಿಲ್ಲದಿದ್ದರೆ ಪ್ರಯೋಜನವಿಲ್ಲ.

ಮಕ್ಕಳಿಗೆ ಹೊರಗಿನವರ ಸಂಪರ್ಕ, [illegible] ಜೀವಿಸ [illegible] ಅವರಿಗೆ ನಂಬಿ[illegible] ತಮ್ಮ [illegible] ಸಾಧ್ಯವಿ[illegible]

●

[illegible]

ಸ್ವಾಮಿ ವಿವೇಕಾನಂದರು ಎತ್ತಿ ಹಿಡಿದ...

ಧರ್ಮ ದೀಪ್ತಿ

ಜಗತ್ತು ಮೂಢನಂಬಿಕೆಗಳ ಸಂಕೋಲೆಗಳಲ್ಲಿದೆ: ತುಳಿಯಲ್ಪಟ್ಟವರಿಗಾಗಿ ಕನಿಕರ ಪಡುತ್ತೇನೆ. ತುಳಿಯುವವರಿಗಾಗಿಯಂತೂ ಇನ್ನಷ್ಟು ಕನಿಕರವೆನಿಸುತ್ತದೆ.

* * *

ಜಗತ್ತಿನ ಧರ್ಮಗಳು ನಿರ್ಜೀವ ಅಣಕಗಳಾಗಿವೆ. ಜಗತ್ತಿಗೆ ಬೇಕಾಗಿರುವದು ನೀತಿಮತ್ತೆ. ಧಗಧಗಿಸುತ್ತಿರುವ ಪ್ರೀತಿಯಾವ, ನಿಸ್ವಾರ್ಥತೆಯೇ ಆದ ಬದುಕನ್ನು ಬಾಳುವವರು ಜಗತ್ತಿಗೆ ಬೇಕಾಗಿದ್ದಾರೆ.

* * *

ದೇವರಲ್ಲಿ ನಂಬಿಕೆಯಿಲ್ಲದವರು ನಾಸ್ತಿಕರು ಎಂದು ಹಳೆಯ ಧರ್ಮ ಹೇಳುತ್ತದೆ ಆದರೆ ಆತ್ಮ ವಿಶ್ವಾಸವಿಲ್ಲದವನು ನಾಸ್ತಿಕ ಎಂದು ಹೊಸಧರ್ಮವು ಹೇಳುತ್ತದೆ.

* * *

ಮೊದಲು ರೊಟ್ಟಿ, ನಂತರ ಧರ್ಮ.

* * *

ನನ್ನ ದೇಶದಲ್ಲಿ ಒಂದು ನಾಯಿ ಕೂಡ ಉಪವಾಸ ಬೀಳುವಂತಾಗುವುದು ತಪ್ಪುವತನಕ ಅದಕ್ಕೆ ಅನ್ನವನ್ನು ಒದಗಿಸುವುದೇ ನನ್ನ ಇಡಿಯ ಧರ್ಮವಾಗಿದೆ.

ಜಗತ್ತಿನ ನಾಗರಿಕತೆಯ ಒಟ್ಟಿನ ಸಂಗ್ರಹಕ್ಕೆ ಕೊಡಮಾಡಲು ಭಾರತಕ್ಕೆ ತನ್ನದೇ ಆದ ಸ್ವಲ್ಪ ಇನ್ನೂ ಇದೆಯೆಂದೇ ಅದು ಬದುಕಿದೆ ಎಂಬುದು ತಿಳಿದಿರಲಿ.

* * *

ಒಂದು ಧರ್ಮದ ದೇವರು ಉಳಿದ ಧರ್ಮಗಳ ದೇವರೂ ಹೌದು

* * *

ಒಂದು ಧರ್ಮವು ಸತ್ಯವಾದರೆ ಉಳಿದ ಧರ್ಮಗಳೂ ಸತ್ಯವೇ. ಆದ್ದರಿಂದ ಹಿಂದೂ ಧರ್ಮವು ನನ್ನದಿರುವಂತೆ ನಿಮ್ಮದೂ ಹೌದು.

* * *

ಪ್ರತಿಯೊಂದು ಆತ್ಮವೂ ಅಜ್ಞಾನವೆಂಬ ಮೋಡಗಳಿಂದ ಆವೃತವಾದ ಸೂರ್ಯ; ಆತ್ಮ ಆತ್ಮಗಳ ನಡುವಿನ ಭಿನ್ನತೆಗೆ ಕಾರಣವೆಂದರೆ ಈ ಮೋಡಗಳ ದಟ್ಟಣೆಯಲ್ಲಿರುವ ಅಂತರ.

* * *

ಮೊದಲು ನಾವು ದೇವರಾಗೋಣ; ನಂತರ ಉಳಿದವರನ್ನು ದೇವರಾಗಿಸಲು ಪ್ರಯತ್ನಿಸೋಣ.

ಭಾರತೀಯರನ್ನು ಬಡಿದೆಬ್ಬಿಸಲು ಸಿಡಿಲಿನ ಶಿಕ್ಷಣೆಯನ್ನೇ ನೀಡಿದ್ದ ಸ್ವಾಮಿ ವಿವೇಕಾನಂದರ ಈ ಶಬ್ದಗಳು ಮಾನವತೆಯ ಬಗ್ಗೆ ಎಂಥ [illegible] ಉದಾತ್ತ ಭಾವನೆಗಳನ್ನು ಉಂಟು ಮಾಡದಿರವು.

★ ಮಾನವನು ಶಾಶ್ವತ ಶಾಂತಿಯನ್ನು
ಬಯಸಿ ಅದನ್ನು ಸಾಧಿಸಲೆಂದು
ನಿರ್ಮಿಸಿ ಬೆಳೆಸಿರುವ ಮಹಾಸಂಸ್ಥೆ..

ಯು. ರಾ. ಸಂ.

—ಕೆ. ಎಸ್. ಎಸ್. ರಾವ

ಈ [illegible]

[illegible]

[illegible]

[illegible]

ತ್ರದ. ವರುಷಕ್ಕೊಮ್ಮೆ ಸಾಮಾನ್ಯವಾ ಸಭೆ ಸೇರುವ ಇದು ಭಾರತದ ಸಂಸ ತ್ತಿನ ಹಾಗಿದೆ. ಸಂಸತ್ತಿನಲ್ಲಿ ಲೋ (ಜನರ) ಪ್ರತಿಸ್ಥಾನಗಳಿರುವಂತೆ ಯು ರಾಷ್ಟ್ರ ಪ್ರಧಾನ ಸಭೆಯಲ್ಲಿ ಲೋಕ (ಜ ತ್ತಿನ) ಪ್ರತಿನಿಧಿಮಂಡಲಗಳಿದ್ದು ಜಗತ್ತಿ ಜನಾಂಗಗಳ ನಡುವಿನ ಹಿರಿಯ ಸಮ ಗಳನ್ನು ಅವು ಚರ್ಚಿಸುತ್ತವೆ.

ರಕ್ಷಣಾ ಮಂಡಲವು ಒಟ್ಟ [illegible] ಸದಸ್ಯರ ಕೂಟವಾಗಿದ್ದು ಜನಾಂಗಗಳ ನಡುವಿನ ಶಾಂತಿಗಾಗಿ ಸದಾ ಶ್ರಮಿಸುತ್ತದೆ. ಅಮೇರಿಕ, ಬ್ರಿಟನ ಫ್ರಾನ್ಸ್, ರಶಿಯ ಮತ್ತು ಚೀನಾ ದೇ ಗಳು ಇದರ ಶಾಶ್ವತ ಸದಸ್ಯ ರಾಷ್ಟ್ರಗಳು ಉಳಿದ ಆರು ಸದಸ್ಯ ರಾಷ್ಟ್ರಗಳು ಸಾಮ

[illegible]



ಯು.
ರಾ.
ಸಂ.

★

ಅಧ್ಯಕ್ಷರು:
ಚಾರ್ಲಸ್
ಮ್ಯುನಿರ್ಝ್

ಪ್ರಧಾನ ಕಾರ್ಯದರ್ಶಿ :
ಡ್ಯಾಗ
ಹ್ಯಾಮರ್‌ಶುಲ್ಡ



ನ್ಯವಾಗಿ ಆಯ್ಕೆ ಹೊಂದಿರುತ್ತವೆ. ವರ್ಷವಿಡೀ ಕಾರ್ಯ ನಿರತವಾಗಿರುವ ಭದ್ರತಾ ಮಂಡಲವು ಯುಕ್ತರಾಷ್ಟ್ರ ಸಂಸ್ಥೆಯ ಮಂತ್ರಿಮಂಡಲವಿದ್ದ ಹಾಗೆನ್ನಬಹುದು. ಒಂದೊಂದು ರಾಷ್ಟ್ರಗಳು ವರ್ಷದ ಒಂದೊಂದು ತಿಂಗಳು ಅಧ್ಯಕ್ಷತೆ ವಹಿಸುವವು.

ಸ್ವಂತ ಆಡಳಿತವು ವ್ಯವಸ್ಥೆಯುಳ್ಳದ ಹಿರಿಯ ರಾಷ್ಟ್ರಗಳ ರಕ್ಷಣೆಯಲ್ಲಿರುವ ಪ್ರದೇಶಗಳ ಬಗ್ಗೆ ಅವುಗಳ ಯೋಗಕ್ಷೇಮ ನೋಡಿಕೊಳ್ಳುವ ವಿಶ್ವಸ್ತ ಮಂಡಲವು ಹಿರಿಯ ರಾಷ್ಟ್ರಗಳು ಆ ಪ್ರದೇಶಗಳನ್ನು ಸ್ವಾತಂತ್ರ್ಯ, ಸ್ವಾವಲಂಬನೆಗೆ ಸಿದ್ಧಗೊಳಿಸುವಂತೆ ಪ್ರೇರೇಪಿಸುತ್ತದೆ.

ಅಂತರ್ರಾಷ್ಟ್ರೀಯ ನ್ಯಾಯವೇದಿಕೆಯು [illegible] ರುವ ತರಾಳೆಗಳನ್ನು ಬಗೆಹರಿಸುತ್ತದೆ. ಆದರ ಕಕ್ಷೆಯು ಮುಖ್ಯವಾಗಿ ಕಾಯ್ದೆ ಮತ್ತು ನ್ಯಾಯಗಳಿಗೆ ಸಂಬಂಧಿಸಿರುತ್ತದೆ. ಅಂತರ್ರಾಷ್ಟ್ರೀಯ ಒಪ್ಪಂದ, ಒಡಂಬಡಿಕೆ, ಕಾಯ್ದೆ, ವ್ಯವಸ್ಥೆ ಮತ್ತು ಚಳವಳಿಯೇ ಮೊದಲಾದವುಗಳ ತುಲನೆಯಾಗದ ದೂರುಬಂದಲ್ಲಿ ಈ ನ್ಯಾಯವೇದಿಕೆಯು ವ್ಯವಹರಿಸುತ್ತದೆ.

ಸಾಮಾಜಿಕ ಆರ್ಥಿಕ ಮಂಡಲವು ತನ್ನ ವಿವಿಧ ವಿಶಿಷ್ಟ ಸಂಘಟನೆಗಳ ಮೂಲಕ ಪ್ರಧಾನವಾಗಿ ಮಾನವ ಕಲ್ಯಾಣವನ್ನು ಸಾಧಿಸಲು ಯತ್ನಿಸುತ್ತದೆ. ಅನೇಕ ಪ್ರಾದೇಶಿಕ ಅಭಿವೃದ್ಧಿ ಮಂಡಲಗಳನ್ನು ತನ್ನ ಅಂಗ ಸಂಸ್ಥೆಗಳನ್ನಾಗಿ [illegible] ಈ ಸಂಸ್ಥೆಯು ಸಾಕಷ್ಟು ಕಾರ್ಯ ಮಾಡಿದೆ.

●

ಮಹಾರಾಷ್ಟ್ರ ಸೋಪ್ ಫ್ಯಾಕ್ಟರಿ, ಬೆಳಗಾಂವ

ಇವರು ತಯಾರಿಸಿದ

○ [illegible]
○ [illegible]
○ [illegible]
[illegible]

ಈ ಛಾಪುಗಳುಳ್ಳ

○ [illegible]
○ [illegible]
○ [illegible]

ಸಾಬೂನುಗಳು

[illegible]

ಮಹಾರಾಷ್ಟ್ರ ಸೋಪ್ ಫ್ಯಾಕ್ಟರಿ ಲಿಮಿಟೆಡ್

[illegible] [illegible]

★ ಅಗಣಿತ ಸಂಪತ್ತನ್ನು ಬಚ್ಚಿಟ್ಟುಕೊಂಡು
ಕನ್ನಡಿಗರಿಗೆ ಅದನ್ನು ಒದಗಿಸಲು
ನಿಂತಿರುವ ಕರ್ನಾಟಕದ ಕಾಶ್ಮೀರ..

ಉತ್ತರ ಕನ್ನಡ ಜಿಲ್ಲೆಯ ವಿಹಂಗಮ ನೋಟ

— ನಾಗೇಶ ಗೋಕರ್ಣ

ಅಖಂಡ ಕರ್ನಾಟಕದ ರವಿ ಮೂಡಿ ಬರುತ್ತಿರುವ ಈ ಶುಭ ಸಮಯದಲ್ಲಿ, ಮುಂಬಯಿ ಪ್ರಾಂತದ ತುತ್ತ ತುದಿಗಿರುವ, ಅಚ್ಚಗನ್ನಡ . ಜಿಲ್ಲೆಯಾದ ಉತ್ತರ ಕನ್ನಡದ ಪಕ್ಷಿ ನೋಟವು ಈ ರೀತಿಯಾಗಿದೆ.

೧೯ನೇ ಶತಮಾನದ ಪೂರ್ವದಲ್ಲಿ ಉತ್ತರ ಕನ್ನಡ ಜಿಲ್ಲೆ ಮದ್ರಾಸ ಪ್ರಾಂತದ ಆಡಳಿತೆಗೊಳಪಟ್ಟಿತ್ತು. ಅರ್ಧ ಶತಮಾನ ಕಳೆದ ನಂತರ ಮುಂಬಯಿ ವ್ಯಾಪಾರಸ್ಥರು ಅದನ್ನು ಮುಂಬಯಿ ಪ್ರಾಂತಕ್ಕೆ ಸೇರಿಸಿಕೊಂಡರು. ಉತ್ತರ ಕನ್ನಡ ಜಿಲ್ಲೆಯ ನೈಸರ್ಗಿಕ ಬಂದರುಗಳು ಅಭಿವೃದ್ಧಿಗೊಂಡರೆ, ಮುಂಬೈ ಬಂದರದ ಮಹತ್ವ ಕಡಿಮೆಯಾಗುವದೆಂದು ಭೀತಿಗೊಂಡ ವ್ಯಾಪಾರಿಗಳು, ಕಾರವಾರದ ಬಂದರವು ಮಹತ್ವದ ಬಂದರವಾಗಿ ತಲೆಯೆತ್ತಬಾರದೆಂದು ಮಾಡಬೇಕಾದ ಎಲ್ಲ ಪ್ರಯತ್ನವನ್ನೂ ಮಾಡಿ ಯಶಸ್ವಿಯಾದರು. ಅಂದಿನಿಂದ ಇಂದಿನ ವರೆಗೆ ಮುಂಬಯಿಯ ವ್ಯಾಪಾರಿಗಳ ಕಪಿಮುಷ್ಟಿಯಲ್ಲಿ ಹಿಂಡಿ ಹಿಪ್ಪೆಯಾಗಿರುವ ನಯನ ಮನೋಹರ ಉತ್ತರ ಕನ್ನಡ ಜಿಲ್ಲೆಯು ಮತ್ತೆ ಚೇತರಿಸಿಕೊಂಡು ತನ್ನ ತಾಯ್ನಾಡಿಗೆ ಮರಳುತ್ತಿರುವ ಈ ದಿನದಲ್ಲಿ ಯಾವ ಕನ್ನಡಿಗನಿಗೆ ಆನಂದವಾಗಲಿಕ್ಕಿಲ್ಲ?

ಕರ್ನಾಟಕದ ಕಾಶ್ಮೀರನಂತಿರುವ ಈ ಜಿಲ್ಲೆಯು ೩೯೬೧ ಚೌರಸ ಮೈಲು ಕ್ಷೇತ್ರವನ್ನು ಒಳಗೊಂಡಿದ್ದು ಅದರ ಜನಸಂಖ್ಯೆಯು ೫೭೭೬೮೦ ಇರುತ್ತದೆ. ಇದರಲ್ಲಿ ೧೦೫೫೬೦ ಜನರು ಪಟ್ಟಣವಾಸಿಗಳಾಗಿದ್ದಾರೆ. ಅವರೆಲ್ಲರೂ ಬಹುಶಃ ಪೂರ್ವಕ್ಕಿರುವ ಸಹ್ಯಾದ್ರಿ ಪರ್ವತ ಶ್ರೇಣಿಯಿಂದ ಪಶ್ಚಿಮಕ್ಕಿರುವ ಅರಬೀ ಸಮುದ್ರದ ವರೆಗೆ ಹಬ್ಬಿದ್ದು, ಕಾಳಿ, ಗಂಗಾವಳಿ, ಅಘನಾಶಿನಿ, ಶರಾವತಿ ಮತ್ತು ವೆಂಕಟಾಪುರ ನದಿಗಳ ದಂಡೆಗುಂಟ ವಾಸಿಸುತ್ತಾರೆ. ಇಲ್ಲಿಯ ಶೇಕಡಾ ೬

ಉತ್ತರ ಕನ್ನಡ ಜಿಲ್ಲೆಯವರಾದ ತರುಣ ಸಮಾಜ ಕಾರ್ಯಕರ್ತ ಶ್ರೀ ನಾಗೇಶ ಗೋಕರ್ಣರು ತಮ್ಮ ಜಿಲ್ಲೆಯ ಸ್ಥೂಲ ಪರಿಚಯವನ್ನು ಈ ಲೇಖನದಲ್ಲಿ ಮಾಡಿ ಕೊಟ್ಟಿದ್ದಾರೆ; ಪಶ್ಚಿಮ ಘಟ್ಟಗಳ ಮೇಲೆ ಕೆಳಗೆ ಕನ್ನಡದ ಭಾಗ್ಯವಾಗಿ ಹಬ್ಬಿರುವ ಕಾರವಾರ ಜಿಲ್ಲೆಯಿಂದ ಕನ್ನಡಿಗರು ಬಹು ಲಾಭ ಪಡೆಯಬೇಕಾಗಿದ್ದು ಆ ದಿಟ್ಟಿನಲ್ಲಿ ಈ ಲೇಖವು ಜಿಲ್ಲೆಯ ಯೋಗ್ಯ ಪರಿಚಯ ಮಾಡಿಕೊಡುತ್ತಿದೆ.